ಬೆಂಗಳೂರು
ಬುಧವಾರ, 11 ಮಾರ್ಚ್ 2026
ಸಂಪುಟ 33, ಸಂಚಿಕೆ 130, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕದನವಿರಾಮ ಬಯಸಲ್ಲ: ಇರಾನ್ | ೦೫

ಜಲಸಂಧಿ ವಶ: ಟ್ರಂಪ್ ಎಚ್ಚರಿಕೆ | ೦೫

ಅರ್ಹ ಮತದಾರರನ್ನು ಹೊರಗಿಡಲ್ಲ : ಸಿಇಸಿ | ೦೫

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಜ್ಯೇಷ್ಠ

ದಿನದ ಮಾತು

ಸುಖಾಭಿಲಾಷಿಗೆ ವಿದ್ಯೆ ಇಲ್ಲ. ವಿದ್ಯಾರ್ಥಿಗೆ ಸುಖವಿಲ್ಲ. ವಿದ್ಯಾಕಾಂಕ್ಷಿ ಸುಖವನ್ನು ಬಿಡಬೇಕು.

▲ಸುಭಾಷಿತ

ಕಿರುಸುದ್ದಿ

ಕೆಪಿಸಿಸಿ ಅಧ್ಯಕ್ಷ ಡಿಕೆಶಿಗೆ ಶುಭ ಹಾರೈಸಿದ ಸಿಎಂ



ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಯಶಸ್ವಿಯಾಗಿ ಆರು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಭಾಶಯ ಕೋರಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು. ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿಯಾಗಿದ್ದಾರೆ ಎಂದಿದ್ದಾರೆ. ➡ಪುಟ ೭

ವೈದ್ಯರ ಮುಷ್ಕರ ವಾಪಸ್

ಬೆಂಗಳೂರು: ವಿವಿಧ ಬೇಡಿಕೆಗೆ ಆಗ್ರಹಿಸಿ ಮಾ.11ರಿಂದ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳು, ಸಿಬ್ಬಂದಿ ಕರೆ ನೀಡಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ವೈದ್ಯಾಧಿಕಾರಿಗಳ ಸಂಘ ಮಂಗಳವಾರ ವಾಪಸ್ ಪಡೆದಿದೆ. ಒಪಿಡಿ ಎಂದಿನಂತೆ ಕಾರ್ಯನಿರ್ವಹಿಸಲಿದೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜತೆಗಿನ ಸಂಧಾನ ಸಭೆ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸಂಘ ಮಂಗಳವಾರ ಮುಷ್ಕರವನ್ನು ಕೈಬಿಟ್ಟಿರುವುದರಿಂದ ಹೊರ ರೋಗಿಗಳ ಚಿಕಿತ್ಸೆ ವಿಭಾಗ ಎಂದಿನಂತೆ ಕಾರ್ಯನಿರ್ವಹಿಸಲಿವೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಇಟ್ಟಿರುವ 14 ಬೇಡಿಕೆಗಳ ಪೈಕಿ 13 ಬೇಡಿಕೆ ಈಡೇರಿಸುವುದಾಗಿ ಸರ್ಕಾರ ಭರವಸೆ ನೀಡಿದೆ. ➡ಪುಟ ೭

ಎಐಗೆ ತುಳು ಪಾಠ

ಬೆಂಗಳೂರು: ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದರೂ, ಡೇಟಾ ಕಡಿಮೆ ಇರುವ ಭಾಷೆಗಳು ತಂತ್ರಜ್ಞಾನದಿಂದ ಹಿಂದೆ ಬೀಳುತ್ತಿರುವುದು ದೊಡ್ಡ ಸವಾಲಾಗಿ ಉಳಿದಿದೆ. ಆದರೆ, ಇದನ್ನೇ ಸವಾಲಾಗಿ ತೆಗೆದುಕೊಂಡು ಕರ್ನಾಟಕದ ತುಳು ಭಾಷೆಯಲ್ಲಿ ಎಐ ಸಂಭಾಷಣೆ ನಡೆಸುವಂತೆ ಮಾಡುವ ಹೊಸ ವಿಧಾನವನ್ನು ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

◆ಪುಟ ೭

ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಕೇಂದ್ರ ಕ್ರಮ | ನೈಸರ್ಗಿಕ ಅನಿಲ ಹಂಚಿಕೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ
ಮನೆ ಬಳಕೆ, ಸಾರಿಗೆ ಕ್ಷೇತ್ರಗಳಿಗೆ ಅನಿಲ ನಿರಂತರ ಪೂರೈಕೆ | ಎಲ್‌ಪಿಜಿ, ಸಿಎನ್‌ಜಿ, ಪಿಎನ್‌ಜಿ ಗ್ಯಾಸ್‌ಗೆ ಒತ್ತು

ಗೃಹ ಬಳಕೆ ಅನಿಲಕ್ಕೆ ಆದ್ಯತೆ

ಹೊಸದಿಲ್ಲಿ: ನೈಸರ್ಗಿಕ ಅನಿಲ ಹಂಚಿಕೆ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಂಗಳವಾರ ಮಹತ್ವದ ಬದಲಾವಣೆ ಮಾಡಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಭಾರತಕ್ಕೆ ಬರುವ ಅನಿಲ ಸರಬರಾಜಿನಲ್ಲಿ ವ್ಯತ್ಯಯ ಉಂಟಾದ ಹಿನ್ನೆಲೆಯಲ್ಲಿ ಮನೆ ಬಳಕೆ ಹಾಗೂ ಸಾರಿಗೆ ಕ್ಷೇತ್ರಗಳಿಗೆ ನಿರಂತರ ಸರಬರಾಜು ಖಚಿತಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಹೊಸ ನಿಯಮಾವಳಿಯ ಪ್ರಕಾರ, ಎಲ್‌ಪಿಜಿ ಉತ್ಪಾದನೆ, ಸಿಎನ್‌ಜಿ ಮತ್ತು ಪೈಪ್ ಮೂಲಕ ಮನೆಗಳಿಗೆ ಒದಗಿಸುವ ಪಿಎನ್‌ಜಿ ಗ್ಯಾಸ್‌ಗೆ ಮೊದಲ ಆದ್ಯತೆ ನೀಡಲಾಗಿದೆ. ಭಾರತವು ದಿನಕ್ಕೆ ಸುಮಾರು 191 ಮಿಲಿಯನ್ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್ (ಎಂಎಂಎಸ್‌ಸಿಎಂಡಿ) ಅನಿಲವನ್ನು ಬಳಸುತ್ತದೆ. ಇದರ ಅರ್ಧದಷ್ಟು ಭಾಗವನ್ನು ಆಮದು ಮೂಲಕ ಪೂರೈಸಲಾಗುತ್ತದೆ. ಆದರೆ ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮವಾಗಿ ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ಎಲ್‌ಎನ್‌ಜಿ ಟ್ಯಾಂಕರ್‌ಗಳ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಇದರ ಪರಿಣಾಮವಾಗಿ ಸುಮಾರು 60 ಎಂಎಂಎಸ್‌ಸಿಎಂಡಿ ಅನಿಲ ಸರಬರಾಜು ವ್ಯತ್ಯಯಗೊಂಡಿದೆ. ➡ಪುಟ ೭



ವಿಮಾನಯಾನ ದರ ಏರಿಕೆ ಬಿಸಿ

ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಸಂಘರ್ಷದಿಂದಾಗಿ ಜೆಟ್ ಇಂಧನದ ಬೆಲೆ ತೀವ್ರವಾಗಿ ಏರಿಕೆಯಾಗಿರುವ ಕಾರಣ, ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಟಿಕೆಟ್‌ಗಳಿಗೆ ಹೆಚ್ಚುವರಿ ಇಂಧನ ಶುಲ್ಕ ವಿಧಿಸಲು ನಿರ್ಧರಿಸಿವೆ. ಮಾ.12ರಿಂದ ದೇಶೀಯ ವಿಮಾನ ಟಿಕೆಟ್‌ಗಳಿಗೆ ಪ್ರತಿ ಪ್ರಯಾಣಿಕನಿಗೂ 399 ರೂ. ಇಂಧನ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಸಾರ್ಕ್ ದೇಶಗಳ ಮಾರ್ಗಗಳಿಗೂ ಇದು ಅನ್ವಯವಾಗುತ್ತದೆ. ➡ಪುಟ ೭



ಪಾಕ್ ಸೇರಿ ರಾಷ್ಟ್ರಗಳಿಗೆ ಇಂಧನ ಕೊರತೆಯ ಬಿಸಿ

ಮಧ್ಯಪ್ರಾಚ್ಯ ಯುದ್ಧವು ಜಾಗತಿಕ ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿದ್ದರಿಂದ ತೈಲ ಕೊರತೆಯ ಬಿಸಿ ನೆರೆಯ ಪಾಕಿಸ್ತಾನ ಸೇರಿದಂತೆ ಹಲವು ದೇಶಗಳಿಗೆ ಮುಟ್ಟಿದೆ. ಚೀನಾ ಹಲವು ಪೂರೈಕೆದಾರರನ್ನು ಹೊಂದಿದ್ದರೂ, ಚೀನಾದಲ್ಲಿ ತೈಲ ಬೆಲೆ ಏರಿಕೆಯಾಗಿದೆ. ➡ಪುಟ ೭

ಹೋಟೆಲ್ ಉದ್ಯಮಕ್ಕೆ ಭಾರೀ ಸಂಕಷ್ಟ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಹೆಚ್ಚಾಗುತ್ತಿದ್ದು, ಇದರಿಂದ ಬೆಂಗಳೂರಿನಲ್ಲಿನ ಕೆಲವು ಹೋಟೆಲ್‌ಗಳಲ್ಲಿ ಕೇವಲ ಟೀ ಕಾಫಿ ಸೇರಿದಂತೆ ಕೆಲ ತಿಂಡಿ ತಿನಿಸುಗಳನ್ನು ಮಾತ್ರ ನೀಡುತ್ತಿದ್ದು, ಇನ್ನು ಕೆಲವು ಹೋಟೆಲ್‌ಗಳು ಸಂಪೂರ್ಣ ಬಂದ್ ಮಾಡಲು ಹೋಟೆಲ್ ಮಾಲೀಕರು ಮುಂದಾಗುತ್ತಿದ್ದಾರೆ. ಸೋಮವಾರ ಈ ಸಂಬಂಧ ಹೋಟೆಲ್ ಸಂಘವು ಹೋಟೆಲ್‌ಗಳಲ್ಲಿ ಸಿಲಿಂಡರ್ ಖಾಲಿ ಆದ ಹಾಗೇ ಬಂದ್ ಮಾಡಲಾಗುವುದು ಎಂದು ತಿಳಿಸಿತ್ತು. ಅದರಂತೆ ಮಂಗಳವಾರ ಕೆಲ ಹೋಟೆಲ್‌ಗಳಲ್ಲಿ ಕೇವಲ ಟೀ, ಕಾಫಿ ಮಾತ್ರ ನೀಡುತ್ತಿದ್ದರು, ಇನ್ನು ಕೆಲವೆಡೆ ಅಧಿಕ ಅನಿಲ ಖರ್ಚಾಗುವ ತಿನಿಸುಗಳನ್ನು ಹೊರತುಪಡಿಸಿ ಇತರ ತಿನಿಸುಗಳನ್ನು ನೀಡಲಾಗುತ್ತಿತ್ತು.



ಕೇಂದ್ರ ಸಚಿವರಿಗೆ ಸಿಎಂ ಮನವಿ

ಈ ಬಗ್ಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದು ಬೆಂಗಳೂರಿನ ಹಲವು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಹಲವಾರು ಹೋಟೆಲ್‌ಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಪರಿಸ್ಥಿತಿ ಎದುರಾಗಬಹುದಾಗಿದೆ. ಆ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ತತ್ವಾರದ ಸಮಯದಲ್ಲಿ ತತ್ವಾದರ್ಶ ಪಾಲಿಸೋಣ

ಇಸ್ರೇಲ್- ಅಮೆರಿಕ- ಇರಾನ್ ಯುದ್ಧ ನಡೆಯುತ್ತಿದೆ. ಅದು ಮಧ್ಯಪ್ರಾಚ್ಯ ದೇಶಗಳ ಮೇಲೆಲ್ಲ ಪರಿಣಾಮ ಬೀರಿದೆ. ಈಗಾಗಲೇ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ವಿಪರೀತ ಸಮಸ್ಯೆ ಎದುರಿಸುತ್ತಿವೆ. ಪಾಕಿಸ್ತಾನದಲ್ಲಿ ಪೆಟ್ರೋಲ್ ಲೀಟರ್‌ಗೆ 55 ರುಪಾಯಿ ಹೆಚ್ಚಿಸಿರುವುದರ ಜತೆಗೆ ಶಾಲೆ- ಕಾಲೇಜಿಗೆ ರಜೆ ಕೊಟ್ಟು, ವಾರದಲ್ಲಿ ನಾಲ್ಕೇ ದಿನ ಕೆಲಸ ಎಂಬ ನಿಯಮವನ್ನೂ ಮಾಡಲಾಗಿದೆ. ಬಾಂಗ್ಲಾದೇಶದಲ್ಲಿ ಕೂಡ ಇಂಧನ ಸಮಸ್ಯೆ ಕಾಣಿಸಿಕೊಂಡಿದೆ. ಭಾರತ ತಕ್ಷಣಕ್ಕೆ ಬಾಂಗ್ಲಾದೇಶಕ್ಕೆ ಡೀಸೆಲ್ ಕಳಿಸಿಕೊಟ್ಟಿದೆ.

ನಮ್ಮ ದೇಶದಲ್ಲೂ ಗ್ಯಾಸ್ ಟ್ರಬಲ್ ಆರಂಭವಾಗಿದೆ. ಈಗ ಸದ್ಯಕ್ಕೆ ವಾಣಿಜ್ಯ ಬಳಕೆ ಸಿಲಿಂಡರ್ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಹಾಗಾಗಿ ಗೃಹಬಳಕೆ ಗ್ಯಾಸ್ ಸಿಲಿಂಡರ್ ಕೂಡ ಕೊರತೆಯಾಗಬಹುದು ಎಂಬ ನಿರೀಕ್ಷೆಯಿದೆ. ಸಹಜವಾಗಿ ಯಾವುದೇ ವಸ್ತುವಿನ ಕೊರತೆ ಆರಂಭವಾದಾಗ ನಾವು ಆತಂಕಕ್ಕೆ ಒಳಗಾಗುತ್ತೇವೆ. ಅದರಿಂದ ಬಚಾವಾಗಲು ಆ ವಸ್ತುವನ್ನು ಹೆಚ್ಚು ಶೇಖರಿಸಲು ಹವಣಿಸುತ್ತೇವೆ. ಈಗ ಗ್ಯಾಸ್ ವಿಷಯದಲ್ಲೂ ಹಾಗೇ ಆಗುತ್ತಿದೆ. ಗ್ಯಾಸ್ ಕೊರತೆ ಆಗಬಹುದು ಎಂದೆನಿಸುತ್ತಿದ್ದಂತೆ ಕೆಲವರು ದಿಢೀರನೆ ಗ್ಯಾಸ್ ಬುಕ್ ಮಾಡಲಾರಂಭಿಸಿದ್ದಾರೆ. ಸಿಕ್ಕರೆ ಖರೀದಿಸಿ ಇಟ್ಟುಕೊಳ್ಳೋಣ ಎಂಬ ಯೋಚನೆ ಸಹಜ. ಅದರ ಬದಲಾಗಿ ನಾವು ಕಡಿಮೆ ಗ್ಯಾಸ್ ಬಳಸುವ ಮಾರ್ಗ ಅನುಸರಿಸಬಹುದೆ? ಹೇಗೂ ಈಗ ಬೇಸಿಗೆ. ತಣ್ಣಗಿನ ಆಹಾರಗಳನ್ನು ಅಥವಾ ಬೆಂಕಿಯ ಅಗತ್ಯವಿಲ್ಲದ ಆಹಾರವನ್ನು ನಮ್ಮ ದಿನನಿತ್ಯದ ಬಳಕೆಯಲ್ಲಿ ಹೆಚ್ಚಿಸಬಹುದೆ? ಶಾಲೆ- ಕಾಲೇಜುಗಳಲ್ಲಿ ಬೆಂಕಿ ಇಲ್ಲದ ಅಡುಗೆಯ ಸ್ಪರ್ಧೆ ಇರುತ್ತದಲ್ಲ. ಅಂತಹ ಕೌಶಲ್ಯಗಳನ್ನು ನಾವು ಈ ಸಮಯದಲ್ಲಿ ಹೆಚ್ಚು ಬಳಸಬಹುದೆ ಎಂದು ಯೋಚಿಸಬಹುದು. ನಾವೀನ್ಯಕ್ಕೆ ಹೆಸರಾದ ಭಾರತೀಯರಿಗೆ ಇದು ಅಸಾಧ್ಯವಾದ ಸಂಗತಿಯಂತೂ ಖಂಡಿತ ಅಲ್ಲ. ➡ಪುಟ ೬

ಸರ್ಕಾರದ ವಿರುದ್ಧ ಪ್ರತಿಪಕ್ಷ ನಾಯಕ ಕಿಡಿ

ಬಜೆಟ್‌ನಲ್ಲಿ ಜನರಿಗೆ ಅನ್ಯಾಯ: ಅಶೋಕ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ರಾಜ್ಯದ ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದೆ. ಹಿಂದುಳಿದ ವರ್ಗ, ಪರಿಶಿಷ್ಟ ವರ್ಗ ಹಾಗೂ ಎಲ್ಲ ವರ್ಗದ ಜನರಿಗೆ ಈ ಬಜೆಟ್ ತೀವ್ರ ಅನ್ಯಾಯ ಮಾಡಿದೆ. ವಿತ್ತೀಯ ಕೊರತೆ ಹಾಗೂ ಸಾಲದ ಪ್ರಮಾಣ ಮಿತಿಮೀರಿ ಹೋಗಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆರೋಪಿಸಿದರು. ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಳೇ ಸಾಲ ತೀರಿಸಲು ಹೊಸ ಸಾಲ ಮಾಡಿದ್ದಾರೆ. ➡ಪುಟ ೭



ಸಾಲದ ಹೊರೆ ಹೆಚ್ಚಳ

ಮೂರು ವರ್ಷದಲ್ಲಿ ಒಟ್ಟು ವಿತ್ತೀಯ ಕೊರತೆ 54,660 ಕೋಟಿ ರೂ. ಆಗಿದೆ. ಈ ಮೂಲಕ ರಾಜ್ಯದ ಆರ್ಥಿಕ ಹೊಣೆ ದಯನೀಯ ಸ್ಥಿತಿಗೆ ಬಂದಿದೆ. ಸಿದ್ದರಾಮಯ್ಯ ಮಾತ್ರ 4,36,803 ಕೋಟಿ ರೂ. ಸಾಲ ಮಾಡಿದ್ದು, ಒಟ್ಟು ಸಾಲದಲ್ಲಿ ಅವರ ಸಾಲದ ಪ್ರಮಾಣ 52.33% ಆಗಿದೆ. ಸಿದ್ದರಾಮಯ್ಯನವರು ಸಾಲದ ರಾಮಯ್ಯ ಆಗಿದ್ದಾರೆ ಎಂದು ಅಶೋಕ ಆರೊಪಿಸಿದರು.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,90,000(2,85,000) ಅಪರಂಜಿ ಚಿನ್ನ: 1,62,380(1,64,510) ಆಭರಣ ಚಿನ್ನ: 1,50,800(1,48,800) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ.(ಆವರಣದಲ್ಲಿ ಹಿಂದಿನ ದಿನದ ದರ) | ಷೇರು ಸೂಚ್ಯಂಕ ಬಿಎಸ್‌ಇ 78,205(1,122↓) ಎನ್‌ಎಸ್‌ಇ 24,280(108↓) | $1=₹91.96

ಕಾಂಗ್ರೆಸ್ ಕಚೇರಿಗೆ ಭೂಮಿ ಮೇಲ್ಮನೆಯಲ್ಲಿ ಗದ್ದಲ

• **ವಿಧಾನ ಪರಿಷತ್:** ರಾಜ್ಯದಲ್ಲಿ ಹಲವು ಕಡೆಗಳಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಭೂಮಿ ಕೊಟ್ಟಿರುವ ವಿಚಾರ ಸಂಬಂಧ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಮಧ್ಯೆ ಮೇಲ್ಮನೆಯಲ್ಲಿ ಕೆಲ ಕಾಲ ವಾಗ್ವಾದ ಉಂಟಾಯಿತು.

ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಭೂಮಿ ನೀಡಿದ ವಿಚಾರ

ಮಂಗಳವಾರ ಪ್ರಶ್ನೋತ್ತರ ಸಮಯದಲ್ಲಿ ಬಿಜೆಪಿಯ ಡಿ.ಎಸ್.ಅರುಣ್ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕಾಗಿ ಸುಮಾರು 40 ಕೋಟಿ ರೂ. ಮೌಲ್ಯದ ಸರ್ಕಾರಿ ಜಾಗವನ್ನು ಕೇವಲ 2 ಕೋಟಿ ರೂ. ಗಳ ರಿಯಾಯಿತಿ ದರದಲ್ಲಿ ಮಂಜೂರು ಮಾಡಲಾಗಿದೆ. ಆದೇಶದಲ್ಲಿ ಎಕರೆಗಳ ಅಂಕಿಗಳಲ್ಲಿ ವ್ಯತ್ಯಾಸವಿದ್ದು, ಇನ್ನೊಂದರಲ್ಲಿ ಒಂದೊಂದು ಎಕರೆ ಜಾಗದಲ್ಲಿ ಕಾಂಗ್ರೆಸ್ ಭವನ ನಿರ್ಮಾಣ ಮಾಡುವುದಕ್ಕೆ ರಾಜ್ಯ ಸರ್ಕಾರ ಮುಂದಾಗಿರುವುದು ಇದೊಂದು ರೀತಿ ಹಗಲು ದರೋಡೆಯಾಗಿದೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ಸಚಿವ ಬೈರತಿ ಸುರೇಶ್, ಸಚಿವ ಸಂಪುಟದ ತೀರ್ಮಾನದಂತೆ ಕಾಂಗ್ರೆಸ್ ಕಚೇರಿ ನಿರ್ಮಿಸಲು ನಿವೇಶನ ಮಂಜೂರು ಮಾಡಲಾಗಿದೆ. ಕಂದಾಯ ಇಲಾಖೆಯಿಂದ ಯಾವುದೇ ತಕರಾರುಗಳು ಸ್ವೀಕೃತವಾಗಿಲ್ಲ. ಈ ಹಿಂದೆ ಡಿ.ಎಸ್.ಅರುಣ್ ಅವರೂ ಸಾರ್ವಜನಿಕರ ಸದುಪಯೋಗಕ್ಕೆ 2 ನಿವೇಶನವನ್ನು ರಿಯಾಯಿತಿ ದರದಲ್ಲಿ ನೀಡಲಾಗಿದೆ. ಬಿಜೆಪಿ ಕಚೇರಿಗಳಿಗೂ ನಿವೇಶನ ಕೊಡಲಾಗಿದೆ ಎಂದು ತಿಳಿಸಿದರು.

ಮಧ್ಯೆ ಪ್ರವೇಶಿಸಿದ ಛಲವಾದಿ ನಾರಾಯಣಸ್ವಾಮಿ ಅವರು, ಸರ್ಕಾರ 100 ಕಾಂಗ್ರೆಸ್ ಭವನ ಮಾಡಲು ನಿರ್ಧರಿಸಿದ್ದರು. ರಾಜಕೀಯ ಪಕ್ಷಕ್ಕೆ ನೂರಾರು ನಿವೇಶನಗಳು ಕೊಡುವುದಕ್ಕೆ ಅವಕಾಶ ಇಲ್ಲ. ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ ಕೂಡಲೇ ಕಾನೂನು ಬಾಹಿರ ಇರುವುದು ಸರಿಯಾಗುತ್ತಾ, ಏನು ಬೇಕಾದರೂ ತೀರ್ಮಾನ ಕೈಗೊಳ್ಳಬಹುದೇ ಎಂದು ಪ್ರಶ್ನಿಸಿದರು.

ಉಪಾಹಾರ ಕೂಟ



ಮಂಗಳವಾರ ರಾಷ್ಟ್ರಪತಿ ಭವನದಲ್ಲಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಕೇರಳದ ಸಂಸದರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಪಾಹಾರ ಕೂಟ ಆಯೋಜಿಸಿದ್ದರು. ಈ ವೇಳೆ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್, ಜೆ.ಪಿ. ನಡ್ಡಾ, ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ರಾಜ್ಯದ ಸಂಸದರು ಉಪಸ್ಥಿತರಿದ್ದರು.

ಬಾಕಿ ಹಣ ವಾರದೊಳಗೆ ನೀಡಲು ಕ್ರಮ: ಖಂಡ್ರೆ

• **ವಿಧಾನ ಪರಿಷತ್:** ಇತ್ತೀಚೆಗೆ ಮಡಿಕೇರಿಯಲ್ಲಿ ಆನೆ ದಾಳಿಯಿಂದ 2 ಪ್ರಕರಣಗಳಲ್ಲಿ ಮೃತಪಟ್ಟ ಇಬ್ಬರೂ ಕುಟುಂಬಸ್ಥರಿಗೆ ಈಗಾಗಲೇ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗಿದ್ದು, 15 ಲಕ್ಷ ರೂ. ಬಾಕಿ ಮೊತ್ತವನ್ನು ವಾರದೊಳಗೆ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ ನೀಡಿದರು.



ಆನೆ ದಾಳಿಯಿಂದ ಮೃತಪಟ್ಟ ಕುಟುಂಬಸ್ಥರಿಗೆ ತಲಾ 5 ಲಕ್ಷ ಪರಿಹಾರ

ಶೂನ್ಯವೇಳೆಯಲ್ಲಿ ಸುಜಾ ಕುಶಾಲಪ್ಪ ಅವರ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫೆ.28 ರಂದು ಕಾಡಿನಂಚಿನ ನಿವಾಸಿ 17 ವರ್ಷದ ಬಾಲಕಿ ಆನೆ ದಾಳಿಯಿಂದ ಮೃತಪಟ್ಟಿದ್ದರೆ, ಮಾ.9 ರಂದು ಕಾಡಿನೊಳಗೆ ವಾಸಿಸುತ್ತಿದ್ದ 55 ವರ್ಷದ ಬುಡಕಟ್ಟು ಮಹಿಳೆ ಸಾವಿಗೀಡಾಗಿದ್ದಾರೆ ಇದು ಅತ್ಯಂತ ನೋವಿನ ಸಂಗತಿ ಎಂದರು. ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅರಣ್ಯ ಇಲಾಖೆ ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆನೆನಿಗ್ರಹಕಂದಕ, ಸೌರವಿದ್ಯುತ್ ಬೇಲಿ ನಿರ್ವಹಣೆ ಮಾಡಲಾಗುತ್ತಿದೆ. 2 ಆನೆ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ. ಈಗ 2 ಪುಂಡಾನೆಗಳ ಸೆರೆಗೆ ಮುಖ್ಯ ವನ್ಯಜೀವಿ ಪರಿಪಾಲಕರು ಆದೇಶ ನೀಡಿದ್ದಾರೆ ಎಂದು ತಿಳಿಸಿದರು.

ಆನೆ-ಮಾನವ ಸಂಘರ್ಷ ನಿಯಂತ್ರಿಸಲು ಶಾಶ್ವತ ಪರಿಹಾರ ಕ್ರಮಗಳ ಬಗ್ಗೆಯೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು. ಆನೆ-ಮಾನವ ಸಂಘರ್ಷ ನಿಯಂತ್ರಿಸಲು 2025-26ನೇ ಸಾಲಿನಲ್ಲಿ ಮಡಿಕೇರಿ ವಿಭಾಗಕ್ಕೆ 7ಕಿ.ಮೀ. ಮತ್ತು ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲು ಹಳಿ ತಡೆಗೋಡೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದು ವಿವರಿಸಿದರು.

ಕಿರುಸುದ್ದಿ

ಸಾವಯುವ ಕೃಷಿಗೆ ಪ್ರೋತ್ಸಾಹ

• **ವಿಧಾನ ಪರಿಷತ್:** ತೆಂಗಿನ ತೋಟ ಸೇರಿದಂತೆ ತೋಟಗಾರಿಕೆ ಬೆಳೆಗಳನ್ನು ಪುನಶ್ಚೇತನಗೊಳಿಸಲು ವೈಜ್ಞಾನಿಕವಾಗಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು. ಸದಸ್ಯ ರಮೇಶ್ ಬಾಬು ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ತೆಂಗಿನ ತೋಟಗಳಲ್ಲಿ ವೈಜ್ಞಾನಿಕವಾಗಿ ಸಾವಯವ ಕೃಷಿಯನ್ನು ಅಳವಡಿಸಲು ಮೊದಲನೇ ಹಂತದಲ್ಲಿ ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಎರಡು ಗುಚ್ಛಗಳನ್ನು ಗುರುತಿಸಲಾಗಿದೆ.



ಎರಡನೇ ಹಂತದಲ್ಲಿ ತುಮಕೂರು, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಗಳಲ್ಲಿ 10 ಗುಚ್ಛಗಳನ್ನು ಗುರುತಿಸಲಾಗುವುದು ಎಂದರು. ತೋಟಗಾರಿಕೆಯಲ್ಲಿ ಸಾವಯವ ಕೃಷಿಯನ್ನು ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಗುಚ್ಛ ಮಾದರಿಯಲ್ಲಿ 640 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 2 ಗ್ರಾಮ ಪಂಚಾಯಿತಿಯಲ್ಲಿ ಪರಂಪರಾಗತ ಕೃಷಿ ವಿಕಾಸ ಯೋಜನೆ ಅಡಿ ಅಳವಡಿಸಿಕೊಳ್ಳಲಾಗಿದೆ ಎಂದರು.

900 ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕ: ಸಚಿವ

• **ವಿಧಾನಸಭೆ:** ಕಳೆದ ಒಂದೂವರೆ ವರ್ಷದಲ್ಲಿ 900 ಜನ ಸಬ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿದ್ದೇವೆ. ಮೊದಲ ಹಂತದಲ್ಲಿ 545 ಜನ ಒಂದು ಅಥವಾ ಎರಡು ವಾರಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ನಾಲ್ಕೈದು ವರ್ಷಗಳಿಂದ ನೇಮಕಾತಿ ನಡೆದಿಲ್ಲ. ಕಳೆದ ಒಂದೂವರೆ ವರ್ಷದಲ್ಲಿ 900 ಜನ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕ ಮಾಡಿದ್ದೇವೆ. ಮೊದಲ ಹಂತದಲ್ಲಿ 545 ಜನ ಎರಡು ವಾರಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ. ಇನ್ನೂ 400 ಜನರಿಗೆ ತರಬೇತಿ ನಡೆಯುತ್ತಿದೆ. ಇನ್ನೂ ಎರಡು ತಿಂಗಳಲ್ಲಿ ತರಬೇತಿ ಪೂರ್ಣಗೊಳ್ಳಲಿದೆ ಎಂದರು. ಪ್ರಸಕ್ತ 8,000 ಜನ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಅನುಮತಿ ಸಿಕ್ಕಿದೆ. ಶೀಘ್ರದಲ್ಲೇ ಅವರ ನೇಮಕಕ್ಕೆ ಅಧಿಸೂಚನೆ ಹೊರಡಿಸಲಿದ್ದೇವೆ. ಒಳ ಮೀಸಲಾತಿ ವಿಷಯದಿಂದ ನೇಮಕಾತಿ ವಿಳಂಬವಾಗಿದೆ. ಈಗಾಗಲೇ ಸರ್ಕಾರ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದೆ. ಅದರಲ್ಲಿ ಈ ಹುದ್ದೆಗಳೂ ಸೇರಿವೆ. ನೇಮಕಾತಿ ಆದ ತಕ್ಷಣ ಯಾವ ಠಾಣೆಯಲ್ಲಿ ತೀವ್ರ ಕೊರತೆ ಇದೆ, ಅಂತಹ ಕಡೆ ನಾವು ನಿಯುಕ್ತಿ ಮಾಡುತ್ತೇವೆ ಎಂದು ತಿಳಿಸಿದರು.

ಮಹಾಮಸ್ತಕಾಭಿಷೇಕ ಪೂರ್ವ ಸಿದ್ಧತೆಗಾಗಿ ಸಮಿತಿ

• **ವಿಧಾನಸಭೆ:** ಮುಂದಿನ ವರ್ಷದ ಫೆಬ್ರವರಿಯಲ್ಲಿ ಜರುಗಲಿರುವ ಕಾರ್ಕಳದ ಬಾಹುಬಲಿ ಮಹಾಮಸ್ತಕಾಭಿಷೇಕ ಧಾರ್ಮಿಕ ಕಾರ್ಯಕ್ರಮಕ್ಕೆ ಸುಮಾರು 7 ಕೋಟಿ ರೂ. ಅನುದಾನ ಬೇಕಾಗಲಿದ್ದು, ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸಮಿತಿ ರಚಿಸಲಿದ್ದು, ಮುಖ್ಯಮಂತ್ರಿಗಳ ಜತೆ ಸಭೆ ನಡೆಸಿ ತೀರ್ಮಾನಿಸಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಮಹಾಮಸ್ತಕಾಭಿಷೇಕ ಪೂರ್ವ ಸಿದ್ಧತೆ ಬಗ್ಗೆ ಗಮನ ಸೆಳೆದ ಬಿಜೆಪಿ ಶಾಸಕ ಸುನೀಲ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹನ್ನೆರಡು ವರ್ಷಗಳಿಗೆ ಒಮ್ಮೆ ಜರುಗುವ ಈ ಧಾರ್ಮಿಕ ಆಚರಣೆಯನ್ನು ನಡೆಸಲು ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಳ್ಳಲಿದೆ ಎಂದರು.

ಆಯಕಟ್ಟಿನ ಜಾಗದಲ್ಲಿ ವಿಮಾನ ನಿಲ್ದಾಣ ನಿರ್ಮಾಣ: ಎಂಬಿಪಾ

ಸಿಎಂ ಜತೆ ಚರ್ಚಿಸಿ ಕ್ರಮ

• **ವಿಧಾನ ಪರಿಷತ್:** ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಜನರಿಗೆ ಅನುಕೂಲವಾಗುವಂತೆ ಆಯಕಟ್ಟಿನ ಜಾಗದಲ್ಲಿ ಹೊಸದಾಗಿ ವಿಮಾನ ನಿಲ್ದಾಣ ನಿರ್ಮಿಸುವಸಂಬಂಧಮೂರೂಜಿಲ್ಲೆಗಳಜನಪ್ರತಿನಿಧಿಗಳು ಜತೆಗೂಡಿ ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ ನಡೆಸಿದ ನಂತರ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ವೈ.ಎಂ.ಸತೀಶ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, 2010 ರಲ್ಲಿ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕಾಗಿ 900 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಯೋಜನೆಯ ಜವಾಬ್ದಾರಿ ಹೊತ್ತಿದ್ದ ಚೆನ್ನೈ ಮೂಲದ ಮೆ.ಮಾರ್ಗ್ ಶ್ರೀ ಕೃಷ್ಣದೇವರಾಯ ಏರ್ಪೋರ್ಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಎರಡು ವರ್ಷ ಕಳೆದರೂ ಕಾಮಗಾರಿ ಆರಂಭಿಸದ ಕಾರಣ ಅದರೊಂದಿಗಿನ ಒಪ್ಪಂದವನ್ನು ರದ್ದುಗೊಳಿಸಲಾಗಿದೆ. ಪ್ರಸ್ತುತ ಹೊಸದಾಗಿ ಡಿಪಿಆರ್ ಸಿದ್ಧಪಡಿಸಲು ಸಲಹೆಗಾರರ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಈ ನಡುವೆ ವಿಜಯನಗರ ಮತ್ತು ಕೊಪ್ಪಳ ಭಾಗದವರೂ ವಿಮಾನ ನಿಲ್ದಾಣ ಬೇಕೆನ್ನುತ್ತಿದ್ದಾರೆ. ಹೀಗಾಗಿ ಜಿಲ್ಲೆಗೊಂದು ವಿಮಾನನಿಲ್ದಾಣಮಾಡುವುದುಕಾರ್ಯಸಾಧುವಲ್ಲವೆಂದು ಈ ರೀತಿಯ ಚಿಂತನೆ ಮಾಡಲಾಗುತ್ತಿದೆ. ಆದರೆ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕೆಂದು ಸ್ವಾಧೀನ ಪಡಿಸಿಕೊಂಡಿರುವ ಜಮೀನನ್ನು ವಾಪಸ್ ಕೊಡಲು ಬರುವುದಿಲ್ಲ ಎಂದು ಹೇಳಿದರು.



- ಡಿಪಿಆರ್ ಸಿದ್ಧಪಡಿಸಲು ಸಲಹೆಗಾರರ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ
- ಜಿಲ್ಲೆಗೊಂದು ವಿಮಾನ ನಿಲ್ದಾಣ ಮಾಡುವುದು ಕಾರ್ಯ ಸಾಧುವಲ್ಲ

ಜಿಲ್ಲೆಗೊಂದು ನಿಲ್ದಾಣ ಅಪ್ರಾಯೋಗಿಕ

ಪ್ರತಿ ಜಿಲ್ಲೆಗೂ ಪ್ರತ್ಯೇಕ ವಿಮಾನ ನಿಲ್ದಾಣ ನಿರ್ಮಿಸುವುದು ಸಮಂಜಸವಲ್ಲ. ಉಡಾನ್ ಯೋಜನೆಯಡಿ ಆರಂಭವಾದ ಬೀದರ್ ಮತ್ತು ಕಲಬುರಗಿ ನಿಲ್ದಾಣಗಳು ಆರಂಭದಲ್ಲಿ ಉತ್ತಮವಾಗಿದ್ದರೂ ನಂತರ ವಿಮಾನ ಸೇವೆ ಸ್ಥಗಿತಗೊಂಡ ಉದಾಹರಣೆಗಳು ನಮ್ಮ ಎದುರಿದೆ. ಬಳ್ಳಾರಿ ವಿಮಾನ ನಿಲ್ದಾಣಕ್ಕೂ ಅಂತಹ ಸ್ಥಿತಿ ಬರಬಾರದು. ಹೀಗಾಗಿ ಮೂರು ಜಿಲ್ಲೆಗಳಿಗೂ ಹತ್ತಿರವಾಗುವ ಸೂಕ್ತ ಸ್ಥಳದ ಬಗ್ಗೆ ಚಿಂತನೆ ನಡೆದಿದೆ. ಆದರೆ ಬಳ್ಳಾರಿಯಲ್ಲಿ ಈಗಾಗಲೇ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ವಾಪಸ್ ನೀಡಲು ಸಾಧ್ಯವಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಹೊಸ ಕೈಗಾರಿಕಾ ನೀತಿ ಜಾರಿಗೆ ಚಿಂತನೆ: ಸಚಿವ

• **ವಿಧಾನ ಪರಿಷತ್:** ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ ಸ್ಥಾಪನೆಗೆ ಬಂಡವಾಳ ಹೂಡಿಕೆ ಆಕರ್ಷಿಸಲು ನಮ್ಮ ಸರ್ಕಾರ, ಹೊಸ ಕೈಗಾರಿಕಾ ನೀತಿಗಳನ್ನು ಜಾರಿಗೆ ತರುತ್ತಿದೆ. ಬಾಗಲಕೋಟೆ ಮತ್ತು ವಿಜಯಪುರದಲ್ಲಿ 8 ರಿಂದ 9 ಕಂಪನಿಗಳು ಬಂಡವಾಳ ಹೂಡಿಕೆ ಮಾಡುತ್ತಿವೆ ಎಂದು ಸಚಿವ ಎಂ.ಬಿ. ಪಾಟೀಲ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಪಿ.ಎಚ್.ಪೂಜಾರ್ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆಯ ನಿರಾಶ್ರಿತರಿಗೆ ಉದ್ಯೋಗ ನೀಡಬೇಕು. ಇದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಬಿಜೆಪಿಯವರು ಕೇಂದ್ರ ಸರ್ಕಾರವನ್ನು ಒಪ್ಪಿಸುವ ಮೂಲಕ ರಾಜ್ಯದಲ್ಲಿ ದೊಡ್ಡ ಕಂಪನಿಗಳನ್ನು ತರುವ ಕೆಲಸ ಮಾಡಬೇಕು ಎಂದರು.

ಜ್ಞಾನಭಂಡಾರ ಹಸ್ತಪ್ರತಿ, ಡಿಜಿಟಲ್ ಬಿಲ್ ಮಂಡನೆ

• **ವಿಧಾನಸಭೆ:** ಕರ್ನಾಟಕ ರಾಜ್ಯದಲ್ಲಿರುವ ಹಸ್ತಪ್ರತಿಗಳ ಸಮೀಕ್ಷೆ, ದಾಖಲೀಕರಣ, ಸಂರಕ್ಷಣೆ, ಡಿಜಿಟಲೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರ ಸ್ಥಾಪಿಸಲು ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ವಿಧೇಯಕ, 2026ನ್ನು ಮಂಡಿಸಲಾಯಿತು. ಮಂಗಳವಾರ ಸದನದಲ್ಲಿ ಎಚ್.ಕೆ.ಪಾಟೀಲ್ ಈ ವಿಧೇಯಕವನ್ನು ಮಂಡಿಸಿದರು. ಪುರಾತತ್ವ ಇಲಾಖೆಯ ಪ್ರಭಾರದಲ್ಲಿರುವ ಸಚಿವರು ಈ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿರಲಿದ್ದಾರೆ. ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಪದನಿಮಿತ್ತ ಸದಸ್ಯ ಕಾರ್ಯದರ್ಶಿ, ಐವರು ಪದನಿಮಿತ್ತ ಸದಸ್ಯರು, ಭಾರತಾಧ್ಯಯನ ಶಾಸ್ತ್ರ, ಕನ್ನಡ ಸಾಹಿತ್ಯ ಅಥವಾ ಹಸ್ತಪ್ರತಿ ಶಾಸ್ತ್ರದಲ್ಲಿ ಮೂವರು ವಿದ್ವಾಂಸರು ಸದಸ್ಯರು, ಖಾಸಗಿ ಹಸ್ತಪ್ರತಿಧಾರಕರು ಅಥವಾ ಮಠಗಳ ಇಬ್ಬರು ಪ್ರತಿನಿಧಿಗಳು ಸದಸ್ಯರು, ಡಿಜಿಟಲ್ ಮಾನವಿಕಗಳಲ್ಲಿನ ಒಬ್ಬ ತಜ್ಞ ಸದಸ್ಯರಾಗಿರಲಿದ್ದಾರೆ ಎಂದು ವಿಧೇಯಕದಲ್ಲಿ ತಿಳಿಸಲಾಗಿದೆ.

ಪೊಲೀಸ್, ಲೋಕಾಯುಕ್ತ ಕಾಯ್ದೆ ತಿದ್ದುಪಡಿ ವಿಧೇಯಕಗಳು

ಪೊಲೀಸ್ ಠಾಣೆಗಳು, ವೃತ್ತ, ಉಪ ವಿಭಾಗ, ಜಿಲ್ಲೆ ಮತ್ತು ವಲಯಗಳ ಪ್ರಭಾರದಲ್ಲಿರುವ ಅಧಿಕಾರಿಗಳ ಅಧಿಕಾರಾವಧಿ ವಯೋನಿವೃತ್ತಿಗೊಳಪಟ್ಟು, ಕಾಲಕಾಲಕ್ಕೆ ಸರ್ಕಾರದಿಂದ ಅಧಿಸೂಚಿಸಬಹುದಾದಂಥ ಕಾರ್ಯಾಚರಣೆ ಕರ್ತವ್ಯಗಳು ಅಥವಾ ಅಂಥ ಇತರೆ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು ಕನಿಷ್ಠ ಒಂದು ವರ್ಷದ ಅಧಿಕಾರಾವಧಿ ಹೊಂದಿರಬೇಕು ಎಂಬ ತಿದ್ದುಪಡಿಯೊಂದಿಗೆ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ, 2026 ವಿಧೇಯಕ ಮಂಡಿಸಲಾಯಿತು. ಅಲ್ಲದೇ ಲೋಕಾಯುಕ್ತರ ಭತ್ಯೆಗಳು ಮತ್ತು ಸೇವಾ ಷರತ್ತುಗಳನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಗೆ ಸಂದಾಯವಾಗಬಹುದಾದ ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳಿಗೆ ಸರಿಸಮನಾಗಿರುವಂತೆ ಉಪಬಂಧ ಕಲ್ಪಿಸಲು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 2026 ನ್ನು ಮಂಡಿಸಲಾಯಿತು.

443 ಅಗ್ನಿಶಾಮಕ ವಾಹನ ಚಾಲನೆ ಸ್ಥಗಿತ: ಪರಮೇಶ್ವರ

• **ವಿಧಾನಸಭೆ:** ಕೇಂದ್ರ ಗೃಹ ಮಂತ್ರಾಲಯದ ಗುಜರಿ ನೀತಿಯನ್ವಯ ಕಾರ್ಯಾಚರಣೆಗೆ ಯೋಗ್ಯವಾಗಿದ್ದರೂ 15 ವರ್ಷ ಮೇಲ್ಪಟ್ಟ 443 ಅಗ್ನಿಶಾಮಕ ವಾಹನಗಳನ್ನು ರಸ್ತೆ ಚಾಲನೆಯಿಂದ ಸ್ಥಗಿತಗೊಳಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಪೈಕಿ 155 ವಾಹನಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. ಪ್ರಸ್ತುತ 261 ವಾಹನಗಳ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ ಎಂದರು. ಈ ವಾಹನಗಳ ಬದಲಿಗೆ 15ನೇ ಹಣಕಾಸು ಆಯೋಗದ ಯೋಜನೆಯಲ್ಲಿ ಹಾಗೂ ಕೆ-ಸೇಫ್-2 ಯೋಜನೆಯಲ್ಲಿ ಒಟ್ಟು 270 ವಾಹನಗಳನ್ನು ಖರೀದಿಸಲು ಸರಬರಾಜು ಆದೇಶವನ್ನು ನೀಡಲಾಗಿದೆ. ಇದರಲ್ಲಿ 100 ವಾಹನಗಳು ಸರಬರಾಜು ಮಾಡಿದ್ದು, ಬಾಕಿ ಉಳಿದ 170 ವಾಹನಗಳ ಕವಚ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ವಾಹನಗಳು ಇಲಾಖೆಗೆ ಸರಬರಾಜು ಆದ ನಂತರ ಆದ್ಯತೆಯ ಮೇರೆಗೆ ವಾಹನಗಳನ್ನು ಮಂಜೂರು ಮಾಡಲಾಗುತ್ತದೆ ಎಂದು ವಿವರಿಸಿದರು. ಅಗ್ನಿಶಾಮಕ ದಳಕ್ಕೆ ಒಟ್ಟು 547 ವಾಹನಗಳನ್ನು ಖರೀದಿಸುತ್ತೇವೆ ಡಾ. ಪರಮೇಶ್ವರ ತಿಳಿಸಿದರು.

ಒಂದೇ ಅಗ್ನಿಶಾಮಕ ಠಾಣೆಯ ಎರಡು-ಮೂರು ಕಡೆ ಅಗ್ನಿ ಅವಘಡ ನಡೆದರೆ ಅಥವಾ ಬೃಹತ್ ಪ್ರಮಾಣದಲ್ಲಿ ಅಗ್ನಿ ಅನಾಹುತ ಸಂಭವಿಸಿದರೆ ಅಗ್ನಿಶಾಮಕ ವಾಹನಗಳ ನಿಯೋಜನೆಗೆ ಸಮಸ್ಯೆಯಾಗುತ್ತದೆ. ಇಂತಹ ಸಂದರ್ಭದಲ್ಲಿ 20 ಕಿ.ಮೀ. ವ್ಯಾಪ್ತಿಯಲ್ಲಿರುವ ಬೇರೆ ಠಾಣೆಗಳ ವಾಹನಗಳನ್ನು ನಿಯೋಜಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಜವಳಿ ಪಾರ್ಕ್ ಜಮೀನಿಗೆ ಕೇಂದ್ರಕ್ಕೆ ಪತ್ರ

• **ವಿಧಾನ ಪರಿಷತ್:** ಸಿಂಧನೂರು ತಾಲೂಕಿನಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು 15 ಎಕರೆ ಜಮೀನನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.



ಚುಕ್ಕೆ ಗುರುತಿನ ಪ್ರಶ್ನೋತ್ತರ ಕಲಾಪದಲ್ಲಿ ಉತ್ತರಿಸಿದ ಸಚಿವರು, ಜವಳಿ ಪಾರ್ಕ್ ಸ್ಥಾಪನೆಯ ಸಂಬಂಧ ಅಗತ್ಯವಿರುವ ಕನಿಷ್ಠ 15 ಎಕರೆ ಜಮೀನನ್ನು ಗುರುತು ಮಾಡಿ, ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲು ಸಿಂಧನೂರು ತಾಲೂಕಿನ ತಹಸೀಲ್ದಾರರು, ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ. ಜಮೀನಿನ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ ಎಂದರು.

ಸಿಂಧನೂರು ತಾಲೂಕಿನಲ್ಲಿ ಒಂದೇ ಕಡೆ 15 ಎಕರೆಯಷ್ಟು ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಆದರೆ, ಸಿಂಧನೂರು ತಾಲೂಕಿನಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸೆಂಟ್ರಲ್ ಸೀಡ್ ಫಾರಂ(ಸಿಎಸ್‌ಎಫ್) ನಲ್ಲಿ ಸುಮಾರು 7,500 ಎಕರೆಯಷ್ಟು ಭೂಮಿ ಲಭ್ಯವಿದ್ದು, ಈ ಜಮೀನನ್ನು ಇಲಾಖೆಗೆ ಮಂಜೂರು ಮಾಡಿದ್ದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಪರಿಶೀಲಿಸಲಾಗುವುದು ಎಂದು ಹೇಳಿದರು.

ಎಪಿಎಂಸಿಗಳಲ್ಲಿ ₹476 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹ

• **ವಿಧಾನ ಪರಿಷತ್:** ಪ್ರಸಕ್ತ ಹಣಕಾಸು ವರ್ಷದ ಜನವರಿ ಅಂತ್ಯಕ್ಕೆ ರಾಜ್ಯದ ಎಪಿಎಂಸಿಗಳಲ್ಲಿ ಒಟ್ಟು 71 ಸಾವಿರ ಕೋಟಿ ರೂ. ವಹಿವಾಟು ನಡೆದಿದೆ. 476.65 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದೆ ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು. ಸದಸ್ಯ ಟಿ. ಶರವಣ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಕಳೆದ ಹಣಕಾಸು ವರ್ಷದಲ್ಲಿ 82 ಸಾವಿರ ಕೋಟಿ ರೂ. ವಹಿವಾಟು ನಡೆದಿತ್ತು. ಈ ಅವಧಿಯಲ್ಲಿ 498 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದ್ದು, ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ ಎಂದು ಹೇಳಿದರು.

ರಾಜ್ಯದಲ್ಲಿ 170 ಎಪಿಎಂಸಿಗಳಿದ್ದು, ಅಂಗಡಿಗಳ ಹಂಚಿಕೆ ಪ್ರಕ್ರಿಯೆ ನಿರಂತರವಾಗಿರುತ್ತದೆ. 141 ಎಪಿಎಂಸಿಗಳಲ್ಲಿ ಅಂಗಡಿ ಹರಾಜು ಬಾಕಿ ಇದ್ದು, ಕ್ರಮ ಕೈಗೊಳ್ಳಲು ಸಮಿತಿಗಳಿಗೆ ಸೂಚನೆ ನೀಡಲಾಗಿದೆ ಎಂದು ವಿವರಿಸಿದರು. ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಮತ್ತೆ ಮುಂದುವರಿಸಲು ಅವಕಾಶವಿಲ್ಲ, ಅಂತಹ ಅಂಗಡಿಗಳನ್ನು ಹೊಸದಾಗಿ ಟೆಂಡರ್ ಕರೆದು ಬೇಡಿಕೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಿದ್ದು, ಬಾಕಿ ಉಳಿಯುವುದಿಲ್ಲ ಎಂದು ತಿಳಿಸಿದರು.

ಕ್ಯಾಂಟೀನ್‌ನಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಗೆ ಕ್ರಮ





• **ವಿಧಾನ ಪರಿಷತ್:** ರಾಜ್ಯದ ಇಂದಿರಾ ಕ್ಯಾಂಟೀನ್‌ಗಳಲ್ಲಿ ಶೀಘ್ರದಲ್ಲೇ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಬೈರತಿ ಸುರೇಶ್ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಜಗದೇವ್ ಗುತ್ತೇದಾರ್ ಪ್ರಸ್ತಾಪಿಸಿದ ವಿಷಯ ಪ್ರಸ್ತಾಪಿಸಿದರು. ಕಲಬುರಗಿಯ ಇಂದಿರಾ ಕ್ಯಾಂಟೀನ್‌ನಲ್ಲಿ ಮೆನು ಪ್ರಕಾರ ತಿಂಡಿ ನೀಡಲಾಗುತ್ತಿಲ್ಲ. ಜತೆಗೆ ಆಹಾರದ ಗುಣಮಟ್ಟವೂ ಸರಿಯಿಲ್ಲ ಎಂಬ ಅನೇಕ ದೂರುಗಳು ಬರುತ್ತಿವೆ. ಈ ವ್ಯವಸ್ಥೆಯನ್ನು ಸರಿಪಡಿಸುವುದರ ಜತೆಗೆ ಕ್ಯಾಂಟೀನ್‌ಗಳನ್ನು ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಬೈರತಿ ಸುರೇಶ್, ನಮಗೆ ದೊರೆತ ಮಾಹಿತಿ ಪ್ರಕಾರ ಇಂದಿರಾ ಕ್ಯಾಂಟೀನ್‌ಗಳಲ್ಲಿ ಮೆನು ಪ್ರಕಾರವೇ ಆಹಾರ ನೀಡಲಾಗುತ್ತಿದೆ. ಪ್ರಾದೇಶಿಕತೆಗೆ ಅನುಗುಣವಾಗಿ ತಿಂಡಿ ಮತ್ತು ಊಟವನ್ನು ನೀಡಲಾಗುತ್ತಿದೆ. ಈ ಬಗ್ಗೆ ನನಗೆ ಯಾವುದೇ ಗಂಭೀರ ದೂರುಗಳು ಬಂದಿಲ್ಲ ಎಂದು ಹೇಳಿದರು. ರಾಜ್ಯದ ಎಲ್ಲ ಇಂದಿರಾ ಕ್ಯಾಂಟೀನ್‌ಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಬೈರತಿ ತಿಳಿಸಿದರು.

ಮತಪತ್ರ ಬಳಕೆ: ವಿಧೇಯಕ ಮಂಡನೆ

• **ವಿಧಾನಸಭೆ:** ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಯಂತ್ರಗಳ ಬದಲಿಗೆ ಮತ ಪತ್ರವನ್ನು ಬಳಸಲು ಅನುವು ಮಾಡುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಗಳವಾರ ಮಂಡನೆ ಮಾಡಲಾಯಿತು.



ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ-2026 ಮಂಡಿಸಿದರು.

ಗ್ರಾಮ ಪಂಚಾಯತ್ ಸೇರಿದಂತೆ ಇತರೆ ಚುನಾವಣೆ ಸಂದರ್ಭದಲ್ಲಿ ಮತದಾರ ಮೇಲಿನ ದಬ್ಬಾಳಿಕೆ, ಬೆದರಿಕೆ ಹಾಗೂ ಅನಗತ್ಯ ಪ್ರಭಾವ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳುವ ಅಂಶವನ್ನು ಈ ವಿಧೇಯಕದಲ್ಲಿ ಸೇರ್ಪಡೆಗೊಳಿಸಲಾಗಿದೆ. ಸಂವಿಧಾನದ 326ನೇ ಅನುಚ್ಛೇದದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವ ಸಲುವಾಗಿ ಈ ವಿಧೇಯಕ ಅಗತ್ಯತೆವಿದೆ. ಅದರಲ್ಲೂ ಮುಖ್ಯವಾಗಿ ಮತದಾರರ ಮತಪತ್ರದ ಗೌಪ್ಯತೆ ಖಚಿತಪಡಿಸಿಕೊಳ್ಳಲು ಮತ್ತು ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯ ಸುರಕ್ಷಿತಗೊಳಿಸಲು ಈ ವಿಧೇಯಕ ತರಲಾಗಿದೆ. ಇವಿಎಂ ಕಾರ್ಯನಿರ್ವಹಣೆಯ ಕುರಿತು ಕಳವಳ ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆಯನ್ನು ಮರುಸ್ಥಾಪಿಸಲು ಸದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದು ಅವಶ್ಯಕ ಎಂದು ವಿವರಿಸಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಹಸ್ಯ ಮತದಾನ ವ್ಯವಸ್ಥೆಯ ಬಳಕೆ ಕಡ್ಡಾಯಗೊಳಿಸಲು ಶಾಸನ ರೂಪಿಸುವುದು ಅಗತ್ಯವಾಗಿದೆ. ರಾಜ್ಯ ಕಾಗದ ಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸಂಬಂಧ ಕಾನೂನು ತಿದ್ದುಪಡಿ ಮಾಡಲು ಈ ತಿದ್ದುಪಡಿ ವಿಧೇಯಕ ಮಂಡಿಸಲಾಗಿದೆ.

ಜಿಲ್ಲಾ ಪಂಚಾಯತ್‌ನ ಪ್ರತಿಯೊಂದು ಮತಕ್ಷೇತ್ರಗಳಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಈ ಸಂಬಂಧ ಮೂಲ ಅಧಿನಿಯಮದ 165ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಲಾಗಿದೆ. ಜಿ.ಪಂ. ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿ, ಆ ಮತಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುವುಳ್ಳವನಾಗಿರಲಿದ್ದಾನೆ. ಮೂಲ ಅಧಿನಿಯಮದಲ್ಲಿದ್ದ ಜಿಲ್ಲಾ ಪಂಚಾಯತ್‌ನ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಜಿಲ್ಲಾ ಪಂಚಾಯತ್‌ನ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳುವ ಅಂಶವನ್ನು ಕೈಬಿಡಲಾಗಿದೆ.

ಕೋವಿಗಳ ಪರವಾನಗಿ ನವೀಕರಣಕ್ಕೆ ರೈ ಮನವಿ

• **ವಿಧಾನಸಭೆ:** ಕೃಷಿ ಬೆಳೆ ರಕ್ಷಣೆ ಸಂಬಂಧಿಸಿ ಕೋವಿ ಪರವಾನಗಿ ನವೀಕರಿಸಲು ಜಮೀನಿಗೆ ಕಾಡುಪ್ರಾಣಿ ಬಂದಿರಬೇಕು, ಅದು ಬೆಳೆಗೆ ಹಾನಿಮಾಡಿರಬೇಕು ಮತ್ತು ಅದಕ್ಕೆ ಅರಣ್ಯ ಇಲಾಖೆಯಿಂದ ಪರಿಹಾರ ಸಿಕ್ಕಿರಬೇಕು ಎಂದು ಪೊಲೀಸರು ಹೇಳುತ್ತಿರುವಾಗಿ ಕಾಂಗ್ರೆಸ್ ಶಾಸಕ ಅಶೋಕ್ ಕುಮಾರ್ ರೈ ಗಮನ ಸೆಳೆದರು.

ಪ್ರಶ್ನೋತ್ತರ ಕಲಾಪದಲ್ಲಿ ಪ್ರಸ್ತಾಪಿಸಿದ ಅವರು, ಈಗ ಕೃತಕ ಕೋವಿಗಳನ್ನು ಇಟ್ಟುಕೊಂಡು ಮಂಗಗಳು, ಕಾಡುಹಂದಿಗಳನ್ನು ಓಡಿಸಲು ಸಾಧ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ಮೂವರು ಬಲಿಯಾಗಿದ್ದಾರೆ. ಆದರೆ, ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ ಕೋವಿಗಳ ಪರವಾನಗಿ ನವೀಕರಿಸುತ್ತಿಲ್ಲ ಎಂದು ಅಲವತ್ತುಗೊಂಡರು.

ಇದಕ್ಕೆ ಉತ್ತರಿಸಿದ ಡಾ.ಜಿ.ಪರಮೇಶ್ವರ, ಕೋವಿ ಪರವಾನಗಿ ನವೀಕರಣ ಪೊಲೀಸರು ಮಾಡುವುದಿಲ್ಲ. ಪೊಲೀಸರು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಮಾತ್ರ ನೀಡುತ್ತಾರೆ. ನವೀಕರಣಕ್ಕಾಗಿ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಅದನ್ನು ಉಪಯೋಗಿಸಲು ದೈಹಿಕ ಶಕ್ತಿ ಇರಬೇಕು, ಮಾನಸಿಕವಾಗಿ ಸದೃಢವಾಗಿರಬೇಕು, ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗವಹಿಸಿರಬಾರದು ಮೊದಲಾದ ಮಾನದಂಡಗಳಿವೆ. ಕೆಲವು ಸಂದರ್ಭದಲ್ಲಿ ಪರವಾನಗಿ ಒಂದು ಊರಿನಲ್ಲಿ ಇರುತ್ತದೆ. ಅವರು ಬೇರೆ ಕಡೆ ವಾಸವಿರುತ್ತಾರೆ. ಅಂತಹ ಸಂದರ್ಭದಲ್ಲಿ ಅವರಿಗೆ ಯಾಕೆ ಪರವಾನಗಿ ನೀಡಬೇಕೆಂಬ ಉದ್ದೇಶದಿಂದ ತಿರಸ್ಕರಿಸಲಾಗುತ್ತದೆ ಎಂದು ಹೇಳಿದರು.

ಪರಿಶೀಲಿಸಿ ಕ್ರಮ

ಕೋವಿಗಳ ನವೀಕರಣ ನಿಯಮಾವಳಿಗೆ ಸಂಬಂಧಿಸಿದ ವಿಚಾರವಾಗಿರುವುದರಿಂದ ಈ ಬಗ್ಗೆ ಪರಿಶೀಲನೆ ನಡೆಸುತ್ತೇವೆ. ರಾಜ್ಯದಲ್ಲಿಯೂ ತಾಲೂಕು ಕೇಂದ್ರದಲ್ಲೇ ಕೋವಿ ಪರವಾನಗಿ ನವೀಕರಿಸಲು ಅವಕಾಶ ನೀಡಬೇಕೆಂಬ ಬೇಡಿಕೆಯಿದೆ. ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಗೃಹ ಸಚಿವರು ಭರವಸೆ ನೀಡಿದರು.



ವಯಸ್ಸಾದರೆ ಮಗನಿಗೆ ಪರವಾನಗಿ ಕೊಡಿ

ಈ ವೇಳೆ ಅಶೋಕ್ ಕುಮಾರ್ ರೈ ಮಾತನಾಡಿ, ನನ್ನ ಕ್ಷೇತ್ರದಲ್ಲಿ ಗ್ರಾಮದಲ್ಲೇ ವಾಸವಿರುವ 250-300 ಜನರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ವಯಸ್ಸಾದವರಿದ್ದರೆ ಅವರ ಮಗನ ಹೆಸರಿಗೆ ಕೋವಿಯನ್ನು ನವೀಕರಿಸಿ ಕೊಡಬೇಕು. ಹೊಸ ಕೋವಿ ಪರವಾನಗಿ ಕೇಳುತ್ತಿಲ್ಲ, ಈಗಿರುವ ಪರವಾನಗಿಯನ್ನೇ ನವೀಕರಿಸಲು ಮನವಿ ಮಾಡುತ್ತಿದ್ದೇವೆ. ಆದರೆ, ಅರ್ಜಿ ಸಲ್ಲಿಸಿದ ಕೂಡಲೇ ಅದನ್ನು ತಿರಸ್ಕರಿಸಲಾಗುತ್ತಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವರು, ತಿರಸ್ಕೃತಗೊಂಡ ಪಟ್ಟಿ ನೀಡಿ ಅರ್ಹತೆ ಇದ್ದರೆ ನವೀಕರಿಸಿ ನೀಡಲಾಗುತ್ತದೆ ಎಂದರು. ಕಳೆದ ನಾಲ್ಕು ವರ್ಷಗಳಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕೋವಿ ಪರವಾನಗಿ ನವೀಕರಣ ಅರ್ಜಿಗಳನ್ನು ತಮ್ಮ ಕಚೇರಿಯಲ್ಲಿ ಸ್ವೀಕರಿಸಿ, ಕೋವಿ ಪರವಾನಗಿ ನವೀಕರಿಸಿ ಕೊಟ್ಟಿದ್ದಾರೆ. ಕ್ರಿಮಿನಲ್ ಪ್ರಕರಣಗಳು ದಾಖಲಾದ ಕೋವಿ ಪರವಾನಗಿದಾರರ ಪ್ರಕರಣಗಳನ್ನು ಹೊರತುಪಡಿಸಿದಂತೆ ಯಾವುದೇ ಪ್ರಕರಣಗಳು ಬಾಕಿಯಿಲ್ಲ ಎಂದು ಮಾಹಿತಿ ನೀಡಿದರು. ಮಧ್ಯೆ ಪ್ರವೇಶಿಸಿದ ಬಿಜೆಪಿ ಶಾಸಕ ಸಿಮೆಂಟ್ ಮಂಜು, ಕೋವಿಯನ್ನು ಬಸ್ಸಿನಲ್ಲಿ ದೂರದ ಜಿಲ್ಲಾ ಕೇಂದ್ರಕ್ಕೆ ತಂದು ಪರವಾನಗಿ ನವೀಕರಿಸುವುದು ಕಷ್ಟದ ಕೆಲಸ. ಆದ್ದರಿಂದ ತಾಲೂಕು ಕೇಂದ್ರಗಳಲ್ಲಿಯೇ ಪರವಾನಗಿ ನವೀಕರಣಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಸಮರ್ಪಕ ನಿರ್ವಹಣೆಗೆ ಚಿಂತನೆ

ಇಂದಿರಾ ಕ್ಯಾಂಟೀನ್‌ಗೆ ಎಐ ಸ್ಪರ್ಶ

ಬೆಂಗಳೂರು: ನಗರದ ಇಂದಿರಾ ಕ್ಯಾಂಟೀನ್‌ಗಳ ಸಮರ್ಥ ನಿರ್ವಹಣೆಗೆ ಮುಂದಾಗಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಎಐ ಸ್ಪರ್ಶ ನೀಡಲು ಚಿಂತನೆ ನಡೆಸಿದೆ.

ಬಡವರು ಮತ್ತು ಕೂಲಿ ಕಾರ್ಮಿಕರಿಗೆ ಕಡಿಮೆ ಬೆಲೆಯಲ್ಲಿ ಊಟ-ತಿಂಡಿ ದೊರಕಲಿ ಎಂಬ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಆರಂಭಿಸಿದ್ದ ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಜಾರಿ ಮಾಡಿದ್ದರು.ಆದರೆ ಇತ್ತೀಚಿಗೆ ಹಲವಾರು ಇಂದಿರಾ ಕ್ಯಾಂಟೀನ್‌ಗಳು ಮುಚ್ಚಲ್ಪಟ್ಟಿದ್ದವು. ಇದಕ್ಕೆ ವಿರೋಧ ವ್ಯಕ್ತವಾದ ಕಾರಣ ಜಿಬಿಎ ಇಂದಿರಾ ಕ್ಯಾಂಟೀನ್‌ನ್ನು ಸಮರ್ಪಕವಾಗಿ ನಿರ್ವಹಿಸಲಾಗುವುದು ಎಂದು ತಿಳಿಸಿತ್ತು. ಈಗ ಒಂದು ಹೆಜ್ಜೆ ಮುಂದೆ ಹೋಗಿ ತಂತ್ರಜ್ಞಾನ ಬಳಕೆ ಮಾಡುವ ಮೂಲಕ ಇಂದಿರಾ ಕ್ಯಾಂಟೀನ್‌ನಲ್ಲಿ ನಡೆಯುತ್ತಿರುವ ಕೆಲವು ಅಕ್ರಮಗಳಿಗೆ ಕಡಿವಾನ ಹಾಕಲು ಜಿಬಿಎ ಚಿಂತನೆ ನಡೆಸಿದೆ. ನಗರದ ಹಲವು ಇಂದಿರಾ ಕ್ಯಾಂಟೀನ್‌ಗಳಲ್ಲಿ ಆಹಾರ ಪೂರೈಕೆ ಗುತ್ತಿಗೆದಾರರು ನಿಜವಾದ ಮಾರಾಟಕ್ಕಿಂತ ಹೆಚ್ಚು ಸಂಖ್ಯೆಯನ್ನು ತೋರಿಸಿ ಸುಳ್ಳು ಲೆಕ್ಕ ನೀಡುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ. ಕೆಲ ಕ್ಯಾಂಟೀನ್ ಕಡಿಮೆ ಪ್ರಮಾಣದಲ್ಲಿ ತಿಂಡಿ-ಊಟದ ವಿತರಣೆ ನಡೆದರೂ, ಜಿಬಿಎಗೆ ಹೆಚ್ಚಿನ ಸಂಖ್ಯೆಯನ್ನು ತೋರಿಸಿ ಬಿಲ್ ಸಲ್ಲಿಸಿ ಹಣ ಪಡೆಯುತ್ತಿರುವ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ಲಭ್ಯವಾಗಿದೆ.



ಎಐ ಕ್ಯಾಮೆರಾ ಅಳವಡಿಕೆ

ಆದ್ದರಿಂದ ಈಗ ಎಲ್ಲಾ ಇಂದಿರಾ ಕ್ಯಾಂಟೀನ್‌ಗಳಲ್ಲಿ ಎಐ ಆಧಾರಿತ ಕ್ಯಾಮೆರಾವನ್ನು ಅಳವಡಿಸಿ, ದಿನ ಎಷ್ಟು ಮಂದಿ ತಿಂಡಿ-ಊಟ ಪಡೆಯುತ್ತಾರೆ ಎಂಬುದನ್ನು ಸ್ವಯಂಚಾಲಿತವಾಗಿ ದಾಖಲಿಸುವ ವ್ಯವಸ್ಥೆ ಮಾಡುವ ಚಿಂತನೆ ನಡೆಸಿದೆ. ಇನ್ನೂ ಎಐ ಕ್ಯಾಮೆರಾಗಳಿಂದ ಸಿಗುವ ಮಾಹಿತಿಯ ಆಧಾರದ ಮೇಲೆ ಗುತ್ತಿಗೆದಾರರಿಗೆ ಬಿಲ್ ಮೊತ್ತ ಪಾವತಿಸುವ ಹೊಸ ವ್ಯವಸ್ಥೆ ಜಾರಿಗೆ ತರಲು ಜಿಬಿಎ ಯೋಜನೆ ರೂಪಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದರ ನಡುವೆ ಇಂದಿರಾ ಕ್ಯಾಂಟೀನ್‌ನಲ್ಲಿ ಕಾರ್ಯ ನಿರ್ವಹಿಸಿತ್ತಿರೋ ಮಾರ್ಷಲ್‌ಗಳನ್ನು ತೆಗೆದು ಕಸ ವಿಲೇವಾರಿ ಹಾಗೂ ಇತರೆ ಕೆಲಸಗಳಿಗೆ ನೇಮಿಸುವಂತೆ ಜಿಬಿಎ ಮುಖ್ಯ ಅಯುಕ್ತರು ಎಲ್ಲಾ ನಗರಪಾಲಿಕೆ ಅಯುಕ್ತರಿಗೆ ಸೂಚನೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕ್ಯಾಂಟೀನ್‌ಗಳಲ್ಲಿ ನಿತ್ಯ ಎಷ್ಟು ಊಟ-ತಿಂಡಿ ಮಾರಾಟವಾಗುತ್ತಿದೆ ಎಂಬುದನ್ನು ಗಮನಿಸಲು ಮಾರ್ಷಲ್ ನೇಮಕ ಮಾಡಲಾಗಿತ್ತು. ಆದರೆ ಕೆಲವು ಕಡೆ ಮಾರ್ಷಲ್‌ಗಳು ಕೂಡ ಗುತ್ತಿಗೆದಾರರ ಜೊತೆ ಕೈಜೋಡಿಸಿ ಸರಿಯಾದ ಲೆಕ್ಕ ನೀಡುತ್ತಿಲ್ಲ ಎಂಬ ಆರೋಪಗಳು ಕೇಳಿಬಂದಿವೆ.

ಸಂಘಟಿತ ಹೋರಾಟಕ್ಕೆ ಸಂದ ಜಯ

ಮೈಸೂರು: ಜಿಲ್ಲೆಯ ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಕಾರ್ಖಾನೆ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದ ಸ್ಟೇಡಿಯಂ ಯೋಜನೆಯನ್ನು ಸರ್ಕಾರ ಕೈಬಿಟ್ಟಿದೆ. ಇದು ನಿಜಕ್ಕೂ ಸಂತಸದ ಸುದ್ದಿ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ. ಸ್ಟೇಡಿಯಂ ನಿರ್ಮಾಣ ಯೋಜನೆಯನ್ನು ಕೈಬಿಡಲಾಗಿದೆ ಎಂದು ಸಚಿವ ಕೆ.ವೆಂಕಟೇಶ್ ವಿಧಾನ ಮಂಡಲ ಅಧಿವೇಶನದಲ್ಲಿ ಘೋಷಣೆ ಮಾಡಿರುವ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಸರ್ಕಾರದ ಈ ತೀರ್ಮಾನವನ್ನು ಸ್ವಾಗತಿಸುತ್ತೇನೆ. ಇದು ಸಂಘಟಿತ ಹೋರಾಟಕ್ಕೆ ಸಿಕ್ಕಿರುವ ಜಯ. ಕಾರ್ಮಿಕರು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ನಾನೂ ಸೇರಿದಂತೆ ನಮ್ಮ ಬಿಜೆಪಿಯ ಹಲವಾರು ನಾಯಕರು ಭಾಗವಹಿಸಿದ್ದರು. ಸರ್ಕಾರ ಯೋಜನೆ ಕೈಬಿಟ್ಟಿರುವುದು ಸ್ವಾಗತಾರ್ಹ ಎಂದರು.



ಅಂತರ್ಜಲ ಕಲುಷಿತವಾಗಿದ್ದರೆ ಪರಿಶೀಲಿಸಿ ಕ್ರಮ: ಸಚಿವ

ವಿಧಾನ ಪರಿಷತ್: ಹಾಸನ ಜಿಲ್ಲೆಯ ಕೌಶಿಕ ಗ್ರಾಮದ ಅಂತರ್ಜಲ ಕೈಗಾರಿಕಾ ತ್ಯಾಜ್ಯದಿಂದ ಕಲುಷಿತವಾಗಿದ್ದರೆ, ಕೇಂದ್ರದಿಂದ ತಂಡ ಕಳಿಸಿ ಮತ್ತೊಮ್ಮೆ ಪರಿಶೀಲಿಸಿ, ನ್ಯೂನತೆ ಇದ್ದರೆ ಸೂಕ್ತ ಕ್ರಮ ಕೈಗೊಳ್ಳುವುದು ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಮಂಗಳವಾರ ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಸೂರಜ್ ರೇವಣ್ಣ ಅವರು ಹಾಸನ ಜಿಲ್ಲೆಯ ಕೌಶಿಕ ಗ್ರಾಮದ ಮನೆಗಳ ಬೋರ್‌ವೆಲ್‌ಗಳ ನೀರು ಸುತ್ತಮುತ್ತಲಿನ ಕಾರ್ಖಾನೆಗಳಾದ ವಿದ್ಯಾ ಹರ್ಬನ್, ವೈನ್ ಸೂಪರ್ ಪ್ರೈಡ್ ಮತ್ತು ಇಂಡಸ್ಟ್ರೀಸ್ ಹಾಗೂ ಇತರೆ ಲ್ಯಾಬೋರೇಟರಿಗಳಿಂದ ಯಾವುದೇ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳದೆ ರಾಸಾಯನಿಕ ತ್ಯಾಜ್ಯಗಳನ್ನು ಬಿಟ್ಟಿರುವುದರಿಂದ ಕೌಶಿಕ ಗ್ರಾಮದ ಕೊಳವೆ ಬಾವಿಗಳಿಗೆ ಸೇರಿ ಕುಡಿಯುವ ನೀರು ಕಲುಷಿತಗೊಂಡಿರುವ ಬಗ್ಗೆ ಗ್ರಾಮಸ್ಥರಿಂದ ದೂರು ಬಂದಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಪ್ರಶ್ನಿಸಿದರು. ಸೂರಜ್ ರೇವಣ್ಣ ಅವರು ಬಾಟಲ್‌ನಲ್ಲಿ ತಂದಿದ್ದ ನೀರನ್ನು ಸದನದಲ್ಲಿ ಪ್ರದರ್ಶಿಸಿದರು. ಬಳಿಕ ಆ ನೀರಿನ ಬಾಟಲಿಯನ್ನು ಪಡೆದುಕೊಂಡ ಸಚಿವರು, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ನೀರಿನ ಗುಣಮಟ್ಟ ಪರೀಕ್ಷಿಸಿ ಮೂರು ದಿನಗಳ ಒಳಗಾಗಿ ವರದಿ ನೀಡುವಂತೆ ಸೂಚಿಸಿದರು.

ಸರ್ಕಾರದ ವಿರುದ್ಧ ಹೊರಟ್ಟಿ ಆಕ್ರೋಶ

ಬೆಂಗಳೂರು: ಬೀದಿ ನಾಯಿಗಳ ನಿಯಂತ್ರಣಕ್ಕೆ ಶಿಕ್ಷಕರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲು ಮುಂದಾಗಿರುವ ಸರ್ಕಾರದ ನಿರ್ಧಾರದ ಬಗ್ಗೆ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಶಿಕ್ಷಣ ಸಚಿವ ಮಧುಬಂಗಾರಪ್ಪ ಅವರಿಗೆ ಪತ್ರ ಬರೆದಿರುವ ಅವರು, ಈಗಾಗಲೇ ಶಿಕ್ಷಕರು ಮತದಾನ, ಜನಗಣತಿ, ಜಾತಿಗಣತಿ, ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮಕ್ಕಳಿಗೆ ಹಾಲು-ಮೊಟ್ಟೆ ವಿತರಣೆಯಂತಹ ಬೋಧಕೇತರ ಕೆಲಸಗಳಲ್ಲಿಯೂ ನಿರತರಾಗಿದ್ದಾರೆ. ರಾಜ್ಯಾದ್ಯಂತ ಈಗಾಗಲೇ ಶಿಕ್ಷಕರ ಕೊರತೆ ಇದ್ದು, ಇಂತಹ ಸಂದರ್ಭದಲ್ಲಿ ನಾಯಿ ಕಾಯುವ ಜವಾಬ್ದಾರಿ ನೀಡುವುದು ಹಾಸ್ಯಾಸ್ಪದ. ಶಿಕ್ಷಕ ಸಮುದಾಯಕ್ಕೆ ಮಾಡುವ ಅವಮಾನ ಎಂದು ತಿಳಿಸಿದ್ದಾರೆ. ಈಗಾಗಲೇ ಶಿಕ್ಷಕರು ಹಲವು ಕೆಲಸಗಳನ್ನು ನಿರ್ವಹಿಸುತ್ತಿರುವ ಕಾರಣ, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹೆಚ್ಚು ಗಮನ ಹರಿಸಲು ಆಗುತ್ತಿಲ್ಲ. ಇದರಿಂದ ಮಕ್ಕಳ ಕಲಿಕೆಯ ಗುಣಮಟ್ಟ ಕಡಿಮೆಯಾಗಿ ಫಲಿತಾಂಶವು ಸಹ ಕಡಿಮೆಯಾಗುತ್ತದೆ. ಪ್ರಸ್ತುತ ರಾಜ್ಯಾದ್ಯಂತ ಶಿಕ್ಷಕರ ಕೊರತೆ ಕಾಣುತ್ತಿದೆ. ರಾಜ್ಯ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರವು ಜನಗಣತಿ ಆರಂಭಿಸುತ್ತಿದ್ದು ಅದರಲ್ಲೂ ಈ ಶಿಕ್ಷಕರೇ ಪಾಲ್ಗೊಳ್ಳಬೇಕಿದೆ. ಶಿಕ್ಷಕರ ಕೊರತೆಯ ನಡುವೆಯೇ ಸರ್ಕಾರದ ಎಲ್ಲಾ ಕಾರ್ಯಕ್ರಮಗಳಿಗೂ ಅವರನ್ನು ನಿಯೋಜಿಸುವುದರ ಜೊತೆಗೆ ಈಗ ಬೀದಿ ನಾಯಿಗಳ ನಿಯಂತ್ರಣ ಹೊಣೆ ಅವರಿಗೆ ನೀಡಲು ಹೊರಟ ಕ್ರಮ ನಿಜಕ್ಕೂ ಹಾಸ್ಯಾಸ್ಪದ. ಹೀಗಾಗಿ ಈ ನಿರ್ಧಾರವನ್ನು ಸರ್ಕಾರ ಕೂಡಲೇ ಕೈಬಿಡಬೇಕು ಎಂದು ಹೊರಟ್ಟಿ ಆಗ್ರಹಿಸಿದ್ದಾರೆ.

ಶಿಕ್ಷಕರಿಗೆ ಬೀದಿ ನಾಯಿ ಕಾಯುವ ಹೊಣೆಗಾರಿಕೆ

ಜಿಬಿಎ ರಚನೆ ವಿರೋಧಿಸಿ ಅರ್ಜಿ: ನಾಳೆ ವಿಚಾರಣೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024 ವಿರುದ್ಧ ಕರ್ನಾಟಕ ಹೈಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮಾರ್ಚ್ 12 ಕ್ಕೆ ವಿಚಾರಣೆಗೆ ಬರಲಿದೆ. ಚಲನಚಿತ್ರ ನಿರ್ದೇಶಕ,ಕನ್ನಡ ಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ.ಎಸ್. ನಾಗಾಭರಣ ಮತ್ತು ಅವರ ತಂಡ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024 ವಿರುದ್ಧ ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ. ಈ ಅರ್ಜಿಯನ್ನು ವಿಚಾರಣೆ ನಡೆಸಿದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿದ್ದ ಪೀಠ,ರಾಜ್ಯ ಸರ್ಕಾರ ಮತ್ತು ಜಿಬಿಎಗೆ ಈ ಬಗ್ಗೆ ಆಕ್ಷೇಪಣೆ ಸಲ್ಲಿಸುವಂತೆ ನೋಟಿಸ್ ಜಾರಿ ಮಾಡಿತ್ತು. ಈ ಸಂಬಂಧ ಕೋರ್ಟ್ ಮಾರ್ಚ್ 12 ಕ್ಕೆ ವಿಚಾರಣೆ ನಡೆಸಲಿದೆ. ಚುನಾವಣೆಗೆ ತಡೆ: ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024 ವಿರುದ್ಧ ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ಮುಗಿಯುವವರೆಗೆ ಜಿಬಿಎ ಚುನಾವಣೆಯನ್ನು ನಡೆಸಬಾರದೆಂದು ಮಾ.12 ರಂದು ವಾದ ನಡೆಸಲಾಗುವುದು. ಆದರೆ ಕೋರ್ಟ್ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಲಿದೆ ಎಂದು ಕಾದು ನೋಡಬೇಕೆಂದು ಅರ್ಜಿದಾರರು ತಿಳಿದ್ದಾರೆ. ಪಿಐಎಲ್‌ನಲ್ಲಿ ಕಾಯ್ದೆಯ ಕಾನೂನುಬದ್ಧತೆಯನ್ನು ಪ್ರಶ್ನಿಸಲಾ ಗಿದ್ದು, ಪ್ರಮುಖವಾಗಿ ಸಂವಿಧಾನದ 74ನೇ ತಿದ್ದುಪಡಿಯು ಸ್ಥಳೀಯ ಸಂಸ್ಥೆಗಳಿಗೆ (ನಗರ ಪಾಲಿಕೆಗಳಿಗೆ) ಸ್ವಾಯತ್ತತೆ ಮತ್ತು ಅಧಿಕಾರ ವಿಕೇಂದ್ರೀಕರಣವನ್ನು ನೀಡುತ್ತದೆ. ಆದರೆ, ಈ ಹೊಸ ಕಾಯ್ದೆಯು ಪಾಲಿಕೆಗಳ ಅಧಿಕಾರವನ್ನು ಕಿತ್ತುಕೊಂಡು ಅದನ್ನು ಸರ್ಕಾರದ ಅಧೀನದಲ್ಲಿರುವ ಪ್ರಾಧಿಕಾರಕ್ಕೆ ನೀಡುತ್ತಿದೆ. ಇದು ಅಸಾಂವಿಧಾನಿಕ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಮುಖ್ಯಮಂತ್ರಿಯವರೇ ಅಧ್ಯಕ್ಷರಾಗಿರುತ್ತಾರೆ. ಇದರಿಂದ ಚುನಾಯಿತ ಮೇಯರ್ ಮತ್ತು ಕಾರ್ಪೊರೇಟರ್‌ಗಳ ಅಧಿಕಾರ ಗೌಣವಾಗುತ್ತದೆ. ಸ್ಥಳೀಯ ಆಡಳಿತದಲ್ಲಿ ಸರ್ಕಾರದ ನೇರ ಹಸ್ತಕ್ಷೇಪ ಹೆಚ್ಚಾಗುವುದರಿಂದ ಇದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ ಎಂದು ಪಿಐಎಲ್‌ನಲ್ಲಿ ಹೇಳಲಾಗಿದೆ. ಈ ಎಲ್ಲಾ ವಿಚಾರವಾಗಿ ಸರ್ಕಾರದಿಂದ ಸ್ಪಷ್ಟನೆ ಕೇಳಿರುವ ಕೋರ್ಟ್, ಮಾರ್ಚ್ 12 ರಂದು ಏನು ತೀರ್ಮಾನ ಮಾಡಲಿದೆ ಎಂಬುದು ಸಧ್ಯಕ್ಕಿರುವ ಕುತೂಹಲವಾಗಿದೆ.

ಹಾಲಾಡಿಗೆ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಪ್ರಶಸ್ತಿ

ಬೆಂಗಳೂರು: ಲೇಖಕ ಪತ್ರಕರ್ತ ಶಶಿಧರ ಹಾಲಾಡಿ ಅವರ ನದಿ ದಾಟಿದವರು ಕಾದಂಬರಿಗೆ ದ್ವಾರನಕುಂಟೆ ಪಾತಣ್ಣಪ್ರತಿಷ್ಠಾನ 2025ನೇ ಸಾಲಿನ ಕಾದಂಬರಿ ಪ್ರಶಸ್ತಿಯನ್ನು ಮಾ.14ರಂದು ಸಂಜೆ 5 ಗಂಟೆಗೆ ಶೇಷಾದ್ರಿಪುರಂ ಕಾಲೇಜಿನ ಶಿಕ್ಷಣ ದತ್ತಿ ಸಭಾಂಗಣದಲ್ಲಿ ಪ್ರದಾನ ಮಾಡಲಿದೆ. ಸಮಾರಂಭದ ಉದ್ಘಾಟನೆಯನ್ನು ಹಿರಿಯ ವಿಮರ್ಶಕರಾದ ಡಾ.ಎಚ್.ಎಸ್.ರಾಘವೇಂದ್ರರಾವ್ ನೆರವೇರಿಸುವರು. ಪ್ರಶಸ್ತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಪ್ರದಾನ ಮಾಡುವರು. ಸಮಾರಂಭದ ಅಧ್ಯಕ್ಷತೆ ಯನ್ನು ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ಹನೀಫ್ ವಹಿಸುವರು. ಪ್ರಶಸ್ತಿ ಪುರಸ್ಕೃತರಾದ ಲೇಖಕ, ಪತ್ರಕರ್ತರಾದ ಶಶಿಧರ ಹಾಲಾಡಿ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಹಿರಿಯ ಕಾದಂಬರಿಕಾರರಾದ ದ್ವಾರನಕುಂಟೆ ಪಾತಣ್ಣ, ತೀರ್ಪುಗಾರರಾದ ಡಾ.ಎಂ.ಎಸ್.ಆಶಾದೇವಿ, ಎನ್.ಸಂಧ್ಯಾರಾಣಿ ಭಾಗವಹಿಸುವರು. ಟ್ರಸ್ಟಿಗಳಾದ ಡಾ.ಮೂಡ್ನಾಕೂಡು ಚಿನ್ನಸ್ವಾಮಿ, ಈ.ಬಸವರಾಜು, ಡಿ.ಬಿ.ರಾಮಯ್ಯ, ಕೆ.ಅಶೋಕ್, ಚ.ಹ.ರಘುನಾಥ್, ಡಾ.ಎಚ್.ಎಲ್.ಪುಷ್ಪಾ, ಎಂ.ತಿಮ್ಮಯ್ಯ, ಬಿ.ಸಿ.ರಾಘವೇಂದ್ರ ಸೇರಿದಂತೆ ಹಲವರು ಭಾಗವಹಿಸುವರು.



ದೊಡ್ಡಬಳ್ಳಾಪುರದಲ್ಲಿ ಮಾದಿಗರ ಮಹಾಸಭಾ ಆಗ್ರಹ

ಒಳಮೀಸಲಾತಿ ಜಾರಿಗಾಗಿ ಪ್ರತಿಭಟನೆ

ದೊಡ್ಡಬಳ್ಳಾಪುರ: ಒಳ ಮೀಸಲಾತಿ ಜಾರಿ ಮಾಡದೆ ಹಿಂದೇಟು ಹಾಕುತ್ತಿರುವ ರಾಜ್ಯ ಸರ್ಕಾರದ ನಡೆ ಮಾದಿಗರ ಆಕ್ರೋ ಶಕ್ಕೆ ಕಾರಣವಾಗಿದೆ, ಒಳ ಮೀಸಲಾತಿ ಜಾರಿಗೆ ಅಗ್ರಹಿಸಿ ಕರ್ನಾಟಕ ಮಾದರ ಸಭಾದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದಿಂದ ನಗರದ ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ಮಾಡಿದರು.

ಇದೇ ವೇಳೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಕರ್ನಾಟಕ ಮಾದರ ಮಾಹಾಸಭಾದ ಕಾರ್ಯದರ್ಶಿ ಬಚ್ಚಹಳ್ಳಿ ನಾಗರಾಜು ಮಾತನಾಡಿ, ಸ್ವಾತಂತ್ರ್ಯ ನಂತರದ ಭಾರತದ ಇತಿಹಾಸದಲ್ಲಿ ಸುದೀರ್ಘವಾದ ಹೋರಾಟ ಅಂದರೆ ಅದು ಒಳಮೀಸಲಾತಿ ಹೋರಾಟ ಮಾತ್ರ, 35 ವರ್ಷದ ಹೋರಾಟದ ಇತಿಹಾಸ ಸೇರಲಿದೆ. ಸುದೀರ್ಘವಾದ ಹೋರಾಟ ಇದ್ದರು, ನಮ್ಮನ್ನಾಳಿದ ಮೂರು ಪಕ್ಷದ ಸರ್ಕಾರಗಳು ನಮ್ಮ ನೋವಿಗೆ ಧ್ವನಿಯಾಗಲಿಲ್ಲ, ಸುಪ್ರೀಂಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರ ಒಳ ಮೀಸಲಾತಿಯನ್ನ ಜಾರಿ ಮಾಡಿದೆ ಎಂದರು. ಒಳಮೀಸಲಾತಿಗೆ ರಾಜ್ಯಪಾಲರ ಅಂಕಿತ ಸಿಕ್ಕಿದೆ. ಆದೇಶವನ್ನು ಕತ್ತಲಲ್ಲಿಟ್ಟ ಸರ್ಕಾರ ಒಳಮೀಸಲಾತಿ ಅಳವಡಿಸದೆ 56,342 ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಮುಂದಾಗಿದೆ. 2012ರ ಮೀಸಲಾತಿಯಂತೆ ನೇಮಕಾತಿಗೆ ಸರ್ಕಾರ ಅಧಿಸೂಚನೆ ಹೊರ ಡಿಸಿದೆ. 35ವರ್ಷದ ಒಳಮೀಸಲಾತಿ ಹೋರಾಟಕ್ಕೆ ನಮ್ಮ ಹೋರಾಟಗಾರರ ಬಲಿ ದಾನಕ್ಕೆ ಸರ್ಕಾರ ಕೊಡುವ ಬೆಲೆಯೇ ಇದು ಎಂದು ಪ್ರಶ್ನಿಸಿದರು. ಸರ್ಕಾರ ಅಧಿಸೂಚನೆಯನ್ನು ಹಿಂಪಡೆದು ಹೊಸ ಅಧಿಸೂಚನೆ ಹೊರಡಿಸಬೇಕು. ಒಳಮೀಸಲಾತಿಯಲ್ಲಿ ಖಾಲಿ ಹುದ್ದೆಗಳು ಭರ್ತಿಯಾಗಬೇಕು. ಮಾರ್ಚ್ 12ರಂದು ಫ್ರೀಡಂಪಾರ್ಕ್‌ನಲ್ಲಿ ಐಕ್ಯ ಹೋರಾಟ ಪ್ರಾರಂಭವಾಗಲಿದೆ. ಒಳಮೀಸಲಾತಿ ಪಡೆಯುವರೆಗೂ ಯಾರು ಮನೆಗೆ ಹೋಗುವುದಿಲ್ಲ ಎಂದರು. ಪ್ರತಿಭಟನೆಯಲ್ಲಿ 56,342 ಖಾಲಿ ಹುದ್ದೆಯನ್ನು ಒಳಮೀಸಲಾತಿಯಲ್ಲಿ ಭರ್ತಿ ಮಾಡಬೇಕು. ಶೇಕಡಾ15ರ ಹಂಚಿಕೆಯನ್ನು ಸ್ಪಷ್ಟವಾಗಿ ಅನ್ವಯಿಸಿ ಕ್ರಮ ತೆಗೆದು ಕೊಳ್ಳಬೇಕು. ಪರಿಷ್ಕೃತ ರೋಸ್ಟರ್ ಜಾರಿ ಗೊಳಿಸಬೇಕೆಂದು ಪ್ರತಿಭಟನಾ ನಿರತರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ಮಾದರ ಮಾಹಾಸಭಾದ ಜಿಲ್ಲಾಧ್ಯಕ್ಷ ಎಚ್.ಎಂ. ಸುಬ್ಬರಾಜು, ಉಪಾಧ್ಯಕ್ಷ ವಿ.ನಾರಾಯಣ ಸ್ವಾಮಿ, ಖಜಾಂಚಿ ಎಂ.ವೆಂಕಟೇಶ್, ತೂಬಗೆರೆ ಹೋಬಳಿ ಅಧ್ಯಕ್ಷ ಕಲ್ಲುಕೋಟೆ ನಾಗರಾಜು, ಉಪಾಧ್ಯಕ್ಷ ಲಘುಮೇನಹಳ್ಳಿ ಮಂಜುನಾಥ್, ಸಮುದಾಯದ ಮುಖಂಡರಾದ ಅಪ್ಪಕಾರನಹಳ್ಳಿ ಹನುಮಯ್ಯ, ದೊಡ್ಡ ತುಮಕೂರು ವೆಂಕಟೇಶ್, ದೊಡ್ಡ ತುಮಕೂರು ರಾಮಕೃಷ್ಣಪ್ಪ, ಟಿ.ಡಿ. ಮುನಿಯಪ್ಪ, ತಳವಾರನಾಗರಾಜು, ಹಾದ್ರಿಪುರ ಹರ್ಷ, ಕಾಂತರಾಜು, ಕನ್ನಡ ವೆಂಕಟೇಶ್, ಮಾಡೇಶ್ವರ ನರೇಂದ್ರ, ನಾರಸಿಂಹನಹಳ್ಳಿ ಗಂಗರಾಜು ಸೇರಿದಂತೆ ಹಲವರಿದ್ದರು.



ಅಪರ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಶಿಡ್ಲಘಟ್ಟ

ಸಿ.ಮಿಸ್‌ನಂ.130/2026

ಅರ್ಜಿದಾರರು: ಶ್ರೀಮತಿ ವ್ಯಾವಮ್ಮ ಮತ್ತು ಇತರರು -ವಿರುದ್ಧ- ಎದುರುದಾರರು : ತಹಸೀಲ್ದಾರ್, ಮರಣ ಮತ್ತು ಜನನ ಇಲಾಖೆ, ಶಿಡ್ಲಘಟ್ಟ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ. ಶಾಂತಕುಮಾರ್, ಜೆ.ಎಂ. ಬಿನ್ ಲೇಟ್ ಮುನಿಕೃಷ್ಣಪ್ಪ ರವರ ಹೇಳಿಕೆಯ ಮೇರೆಗೆ ಶಾಂತಕುಮಾರ್ ರವರ ತಂದೆಯಾದ ಶ್ರೀ ಮುನಿಕೃಷ್ಣಪ್ಪ ಬಿನ್ ಲೇಟ್ ದೊಡ್ಡಮುನಿಯಪ್ಪ ರವರು ದಿನಾಂಕ: 30-03-2006 ರಂದು ದಿಬ್ಬೂರಹಳ್ಳಿ ಗ್ರಾಮ, ಸಾದಲಿ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಇಲ್ಲಿ ನಿಧನರಾಗಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಶಿಡ್ಲಘಟ್ಟ ಇಲ್ಲಿ ಸಿಮಿಸ್.ನಂ.130/2026 ರಂತೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ದಿನಾಂಕ: 15-04-2026 ರಂದು ಬೆಳಿಗ್ಗೆ 11.00 ಗಂಟೆಗೆ ವಿಚಾರಣೆಯಲ್ಲಿರುತ್ತದೆ. ಸದರಿ ಅರ್ಜಿಯ ಬಗ್ಗೆ ಯಾವುದೇ ತಕರಾರು ಇದ್ದಲ್ಲಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಸದರಿ ದಿನದಂದು ಹಾಜರಾಗಲು ಸೂಚಿಸಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ಶಿರಸ್ತೇದಾರರು, ಅಪರ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಶಿಡ್ಲಘಟ್ಟ

ಅರ್ಜಿದಾರರ ಪರ ವಕೀಲರು: ಶ್ರೀ. ಎಸ್. ಹರೀಶ್,ವಕೀಲರು, ಹನುಮಂತಪ್ಪ ಕಾಂಪ್ಲೆಕ್ಸ್, ಹೊಸ ಬಸ್ ನಿಲ್ದಾಣ, ದೇವನಹಳ್ಳಿ ಟೌನ್, ಮೊ.9008669989.ದಿನಾಂಕ :ಸ್ಥಳ: ಶಿಡ್ಲಘಟ್ಟ

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಕುಣಿಗಲ್

ಅಸಲು ದಾವಾ ನಂ: 343/2024

ವಾದಿ : ಶ್ರೀ ಆರ್. ರವಿಕುಮಾರ -ವಿರುದ್ಧ-

ಪ್ರತಿವಾದಿ : ಶ್ರೀಮತಿ ಆರ್.ರಮಣಿ ಮತ್ತು ಇತರರು

ಪತ್ರಿಕಾ ಪ್ರಕಟಣೆ

ಮೇಲ್ಕಂಡ ವಾದಿ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವ ಷೆಡುಲ್ ಸ್ವತ್ತಿಗೆ ಸಂಭಂದಿಸಿದಂತೆ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು, ಯಾಡಿಯೂರು ಹೋಬಳಿ, ಬ್ಯಾಲದಕೆರೆ ಗ್ರಾಮದ, ಪಿ.ಐ.ಡಿ.ನಂ.152500403500400188, ಸ್ವತ್ತಿನ ನಂ. 180A ವಿಸ್ತೀರ್ಣ, ಪೂರ್ವ- ಪಶ್ಚಿಮ-6.096 ಮೀಟರ್, ಉತ್ತರ-ದಕ್ಷಿಣ-18.288, ಒಟ್ಟು ವಿಸ್ತೀರ್ಣ,111.48 ಸ್ಕೇರ್ ಮೀಟರ್ ಸ್ವತ್ತಿಗೆ ಸಂಭಂದಿಸಿದಂತೆ ಭಾಗಶಃ ಮತ್ತು ಇತರೆ ಪರಿಹಾರಗಳನ್ನು ಕೋರಿ, ಕುಣಿಗಲ್ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಸದರಿ ಪ್ರಕಾರಣವು ದಿನಾಂಕ 30-04-2026 ರಂದು ಮುದ್ದತ್ತು ಇರುತ್ತದೆ. ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಯಾಡಿಯೂರು ಹೋಬಳಿ, ಬ್ಯಾಲದಕೆರೆ ಗ್ರಾಮದ ಶ್ರೀ ಆರ್. ರತ್ನ ಬಾಬು ಬಿನ್ ಲೇಟ್ ರಂಗಪ್ಪ, ಸುಮಾರು 52 ವರ್ಷ ರವರುಗಳನ್ನು ಅಸಲು ದಾವ ನಂ:343/2024 ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದು, ಸದರಿ ಪ್ರಕರಣದಲ್ಲಿ ತಕರಾರು ಸಲ್ಲಿಸುವ ಇಚ್ಛೆಯಿದ್ದಲ್ಲಿ ಸದರಿ ದಿನಾಂಕದಂದು ಬೆಳಿಗ್ಗೆ 11.00 ಗಂಟೆಗೆ ಕುಣಿಗಲ್ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ತಪ್ಪಿದಲ್ಲಿ ವಾದಿಯ ದಾವೆಯನ್ನು ಕಾನೂನಿನ ಅಡಿಯಲ್ಲಿ ಪರಿಗಣಿಸಲಾಗುವುದು ಮಾತ್ತು ಏಕ ಪಕ್ಷೀಯವಾಗಿ ಆದೇಶವಾಗುತ್ತದೆ. ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ 07-03-2026 ರಂದು ನೀಡಲಾಯಿತು.

ನ್ಯಾಯಲಯದ ಅಪ್ಪಣೆ ಮೇರೆಗೆ

ಶಿರಸ್ತೇದಾರರು, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ

ವಾದಿ ಪರ ವಕೀಲರು : ನಿಜಾಂಪಾಷ

ಮಾನ್ಯ ಹೆಚ್ಚುವರಿ ಮುಖ್ಯ 18ನೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

ಸಿ.ಮಿಸ್. ಸಂಖ್ಯೆ : 3552/2026

ಇವರ ನಡುವೆ : 1) ಮುಧ್ರೇ ಬಾಬು .ಎ, ತಂದೆ ಅಲ್ಲೂರಿ ಸುಂದರರಾಜ್, ವಯಸ್ಸು 39 ವರ್ಷ, ವಾಸ : ನಂ. 44, 2ನೇ ಅಡ್ಡರಸ್ತೆ, ಕೆಂಪಯ್ಯ ಲೇಔಟ್, ಬೊಮ್ಮಸಂದ್ರ, ಟಿ. ದಾಸರಹಳ್ಳಿ, ಬೆಂಗಳೂರು-560057. 2) ಸುನೀತಾ .ಎ, ಪತಿ ಅಪ್ಪಾ ರಾವ್ ಪುಟ್ಟಾ, ತಂದೆ ಅಲ್ಲೂರಿ ಸುಂದರರಾಜ್, ವಯಸ್ಸು 46 ವರ್ಷ, ವಾಸ : ನಂ. 28/29, ಮಹಾಲಕ್ಷ್ಮೀ ನಿಲಯ, ಕಾಲಿಯಮ್ಮ ದೇವಸ್ಥಾನದ ಗಲ್ಲಿ, ಟಿ. ದಾಸರಹಳ್ಳಿ, ಬೆಂಗಳೂರು-560057. 3) ಸುಮಲತಾ ಎ, ಕೆ/ಓ. ಪ್ರಸನ್ನ ಕುಮಾರ್ ಬೋಯಲ್ಲಾ, ತಂದೆ ಅಲ್ಲೂರಿ ಸುಂದರರಾಜ್, ವಯಸ್ಸು 41 ವರ್ಷ, ವಾಸ : ನಂ. 34-80-25, ಸರ್ದಾರ್ ನಗರ, ಕವಿತಿ ರಸ್ತೆ, [illegible], ಆಂಧ್ರಪ್ರದೇಶ-560026. 4) ಅಲ್ಲೂರಿ ಸುಂದರರಾಜ್, ತಂದೆ ಅಲ್ಲೂರಿ [illegible], ವಯಸ್ಸು 73 ವರ್ಷ, ವಾಸ : ಪ್ಲಾಟ್ ನಂ. 44, [illegible] ಕೆಂಪಯ್ಯ ಲೇಔಟ್, ಟಿ. ದಾಸರಹಳ್ಳಿ ಕೆರೆ, ಬೊಮ್ಮಸಂದ್ರ, ದಾಸರಹಳ್ಳಿ, ಬೆಂಗಳೂರು-560057. ...ಅರ್ಜಿದಾರರು

ಮತ್ತು : 1) ಆಯುಕ್ತರು, ಜನನ ಮತ್ತು ಮರಣಗಳ ನೋಂದಣಾಧಿಕಾರಿ, ಬಿ.ಬಿ.ಎಂ.ಪಿ, ಬೆಂಗಳೂರು-560004. ...ಪ್ರತಿವಾದಿ

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೃತರಾದವರು ಅರ್ಜಿದಾರ ನಂ. 1, 2 ಮತ್ತು 3 ರ ತಾಯಿ ಹಾಗೂ ಅರ್ಜಿದಾರರ ನಂ. 4 ರ ಪತ್ನಿಯಾಗಿದ್ದು, ಇವರ ಹೆಸರು ಎ. ರತ್ನಮ್ಮ (A. Rathnamma) ಪತಿ ಅಲ್ಲೂರಿ ಸುಂದರರಾಜ್, ಇವರು ದಿನಾಂಕ : 18.03.2014 ರಂದು ನಂ. 44, 2ನೇ ಮುಖ್ಯ ರಸ್ತೆ, [illegible] ಕೆಂಪಯ್ಯ ಲೇಔಟ್, [illegible], ಟಿ. ದಾಸರಹಳ್ಳಿ, ಬೆಂಗಳೂರು-560058 ರಲ್ಲಿ ಮರಣ ಹೊಂದಿದ್ದಾರೆ. ಮೃತರ ಮರಣ ಪ್ರಮಾಣ ಪತ್ರವನ್ನು ಪಡೆಯಲು ನ್ಯಾಯಾಲಯದಲ್ಲಿ ಸಿ.ಮಿಸ್. ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

ಸದರಿ ನ್ಯಾಯಾಲಯವು ಪ್ರಕರಣವನ್ನು ದಿನಾಂಕ : 01.04.2026 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಿದೆ. ಅರ್ಜಿದಾರರ ಹಕ್ಕುದಾರರು/ಯಾರಾದರೂ ತಂಟೆ ತಕರಾರುಗಳು ಇದ್ದಲ್ಲಿ ಅವರುಗಳು ನ್ಯಾಯಾಲಯದಲ್ಲಿ ತಮ್ಮ ತಗಾದೆಯನ್ನು ಸಲ್ಲಿಸಬಹುದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು.

ನನ್ನ ಸಹಿಯೊಂದಿಗೆ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 09.03.2026 ರಂದು ನೀಡಲಾಗಿದೆ.

By Order of the Court, Senior Sheristedar, XVIII Addl. Chief Judicial Magistrate Court, Bengaluru City.

ಅರ್ಜಿದಾರರ ಪರ ವಕೀಲರು : ಶ್ರೀಮತಿ. ನಳಿನಾ .ಬಿ, ವಕೀಲರು ದಾಸರಹಳ್ಳಿ, ಬೆಂಗಳೂರು.

ಮಾನ್ಯ ಹೆಚ್ಚುವರಿ ಮುಖ್ಯ 1ನೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

C.MISC. No. 3100/2026

ಅರ್ಜಿದಾರರು: 1. ಮುಮ್ತಾಜ್, ಕಾಸಿಂ ಬಾಯಿ ರವರ ಪುತ್ರಿ, ಅನ್ವರ್ ರವರ ಪತ್ನಿ, ಸುಮಾರು 65 ವರ್ಷ ವಯಸ್ಸು, ವಾಸ: ನಂ.14, 1ನೇ ಮುಖ್ಯರಸ್ತೆ, ಬಿ.ಹೆಚ್.ಇ.ಎಲ್. ಮಿನಿ ಕಾಲೋನಿ, ಮಲ್ಲಸಂದ್ರ, ಬೆಂಗಳೂರು ಉತ್ತರ, ಬೆಂಗಳೂರು - 560057. 2. ಎ.ಕೆ. ಶರೀಫ್, ಕಾಸಿಂ ಬಾಯಿ ರವರ ಪುತ್ರ, ಸುಮಾರು 65 ವರ್ಷ ವಯಸ್ಸು, ವಾಸ: ನಂ.14, 1ನೇ ಮುಖ್ಯರಸ್ತೆ, ಬಿ.ಹೆಚ್.ಇ.ಎಲ್. ಮಿನಿ ಕಾಲೋನಿ, ಮಲ್ಲಸಂದ್ರ, ಬೆಂಗಳೂರು ಉತ್ತರ, ಬೆಂಗಳೂರು - 560057. ...ಅರ್ಜಿದಾರರು

ಮತ್ತು : ಆಯುಕ್ತರು, ಜನನ ಮತ್ತು ಮರಣಗಳ ನೋಂದಣಾಧಿಕಾರಿ, ಬಿ.ಬಿ.ಎಂ.ಪಿ., ಬೆಂಗಳೂರು - 560004. ...ಪ್ರತಿವಾದಿ

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೃತರಾದವರು ಅರ್ಜಿದಾರರ ನಂ. 1 ಮತ್ತು ಅರ್ಜಿದಾರರ ನಂ. 2 ರ ತಾಯಿ, ಇವರ ಹೆಸರು ಗೋರಿಬಿ ಕಾಸಿಂ ಬಾಯಿ, ದಿವಂಗತ ಕಾಸಿಂ ಬಾಯಿ ರವರ ಪತ್ನಿ ಆಗಿದ್ದು, ಇವರು ದಿನಾಂಕ 16/10/2018 ರಂದು ನಂ.14, 1ನೇ ಮುಖ್ಯರಸ್ತೆ, ಬಿ.ಹೆಚ್.ಇ.ಎಲ್. ಮಿನಿ ಕಾಲೋನಿ, ಮಲ್ಲಸಂದ್ರ, ಬೆಂಗಳೂರು ಉತ್ತರ, ಬೆಂಗಳೂರು - 560057 ರಲ್ಲಿ ಮರಣ ಹೊಂದಿದ್ದಾರೆ. ಮೃತರ ಮರಣ ಪ್ರಮಾಣ ಪತ್ರವನ್ನು ಪಡೆಯಲು, ನ್ಯಾಯಾಲಯದಲ್ಲಿ ಸಿ.ಮಿಸ್ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

ಸದರಿ ನ್ಯಾಯಾಲಯವು ಪ್ರಕರಣವನ್ನು ದಿನಾಂಕ: 26.03.2026 ರಂದು ಬೆಳಿಗ್ಗೆ 11-00 ಗಂಟೆಗೆ ನಿಗದಿಪಡಿಸಿದೆ. ಅರ್ಜಿದಾರರ ಹಕ್ಕುದಾರರು / ಯಾರಾದರೂ ತಂಟೆ ತಕರಾರುಗಳು ಇದ್ದಲ್ಲಿ ಅವರುಗಳು ನ್ಯಾಯಾಲಯದಲ್ಲಿ ತಮ್ಮ ತಗಾದೆಯನ್ನು ಸಲ್ಲಿಸಬಹುದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು.

ಸದರಿ ಪತ್ರಿಕಾ ಪ್ರಕಟಣೆಯನ್ನು ಕನ್ನಡ-ಹೊಸದಿಗಂತ ಮತ್ತು ಇಂಗ್ಲೀಷ್-ಬಿಸಿನೆಸ್ ಸ್ಟ್ಯಾಂಡರ್ಡ್ ದಿನಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ.

ನನ್ನ ಸಹಿಯೊಂದಿಗೆ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 10.03.2026 ರಂದು ನೀಡಲಾಗಿದೆ.

By Order of the Court, Senior Sheristedar, I Addl. Chief Judicial Magistrate Court, Bengaluru City.

ಅರ್ಜಿದಾರರ ಪರ ವಕೀಲರು : ಶ್ರೀಮತಿ. ನಳಿನಾ .ಬಿ., ವಕೀಲರು ದಾಸರಹಳ್ಳಿ, ಬೆಂಗಳೂರು.

ಮಾನ್ಯ 34ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮೇಯೋಹಾಲ್, ಬೆಂಗಳೂರು

ಕ್ರಿ.ಮಿಸ್. ನಂ. 50151/2026

ಅರ್ಜಿದಾರರು : 1) ಶ್ರೀಮತಿ ಮುನಿತಾಯಮ್ಮ, ಬಿನ್ ಲೇಟ್ ವೆಂಕಟಮ್ಮ .ಸಿ, ವಯಸ್ಸು 74 ವರ್ಷ, ವಾಸ : ನಂ. 20, ತ್ಯಾಗಿ ಗ್ರಾಮ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ, ಕರ್ನಾಟಕ-563139. 2) ಶ್ರೀಮತಿ ಅಮ್ಮಯ್ಯಮ್ಮ, ವಯಸ್ಸು 70 ವರ್ಷ, ಬಿನ್ ಲೇಟ್ ವೆಂಕಟಪ್ಪ .ಸಿ, ವಾಸ ಎಸ್. ಬಿಂಗಿಪುರ, ಹುಲಿಮಂಗಲ ಅಂಚೆ, ಜಿಗಣಿ ಹೋಬಳಿ, ಬೆಂಗಳೂರು-560105. 3) ವೆಂಕಟೇಶ್ .ವಿ, ವಯಸ್ಸು 59 ವರ್ಷ, ವಾಸ : ನಂ. 24, 1ನೇ ಕ್ರಾಸ್, 2ನೇ ಮುಖ್ಯರಸ್ತೆ, ಸರ್ಜಾಪುರ ರಸ್ತೆ, ಆಂಜನೇಯ ದೇವಸ್ಥಾನದ ಮುಂಭಾಗ, ಇಬ್ಬಲೂರು, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು-560102.

ವಿರುದ್ಧ : ಪ್ರತಿವಾದಿ : ಮಾನ್ಯ ಆಯುಕ್ತರು, ಮುಖ್ಯ ಜನನ ಮತ್ತು ಮರಣ ನೋಂದಣಿ ಇಲಾಖೆ, ಬೊಮ್ಮನಹಳ್ಳಿ ವಲಯ, ಬೃ.ಬೆಂ.ಮ. ಪಾಲಿಕೆ, ಬೆಂಗಳೂರು-560068.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರಿಗೆ ತಾಯಿಯಾದ ಮೃತ ಶ್ರೀಮತಿ ತಿಮ್ಮಕ್ಕ, ಕೋಂ. ಲೇಟ್ ಸಿ. ವೆಂಕಟಪ್ಪ ರವರು ದಿನಾಂಕ : 20.12.2016 ರಂದು ನಂ. 24, 1ನೇ ಕ್ರಾಸ್, 2ನೇ ಮುಖ್ಯರಸ್ತೆ, ಸರ್ಜಾಪುರ ರಸ್ತೆ ಆಂಜನೇಯ ದೇವಸ್ಥಾನದ ಮುಂಭಾಗ, ಇಬ್ಬಲೂರು, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು-560102 ರಲ್ಲಿ ಮೃತಪಟ್ಟಿರುತ್ತಾರೆ.

ಸದರಿ ಮೃತರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಕೊಂಡ ಮರಣ ಪ್ರಮಾಣ ಪತ್ರ ಪಡೆಯಲು ಸದರಿ ನ್ಯಾಯಾಲಯದಲ್ಲಿ ಪ್ರಕರಣ ಹೂಡಿದ್ದು, ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದಲ್ಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸಿದಲ್ಲಿ ದಿನಾಂಕ : 24.03.2026 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆ ಸಲ್ಲಿಸಬೇಕು, ಇಲ್ಲವಾದರೆ ಏಕಪಕ್ಷೀಯ ಪ್ರಕರಣವೆಂದು ತೀರ್ಮಾನಿಸಲಾಗುವುದು.

ಸದರಿ ಪತ್ರಿಕಾ ಪ್ರಕಟಣೆಯನ್ನು ಕನ್ನಡ-ಹೊಸದಿಗಂತ ಮತ್ತು ಇಂಗ್ಲೀಷ್ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯಲ್ಲಿ ಪ್ರಕಟಿಸಲು ಅನುಮತಿಗಾಗಿ ಕೋರಿದೆ.

ದಿನಾಂಕ : 06.03.2026 ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

By order of the Court, Sheristedar, XXXIV ADDL. Chief Judicial Magistrate Court, Bengaluru City.

ಅರ್ಜಿದಾರರ ಪರ ವಕೀಲರು : ಶ್ರೀ ಹರೀಶ್ ಕುಮಾರ್ .ಕೆ.ಎಂ, ವಕೀಲರು ನಂ. 47/1, ಲಾಲ್‌ಬಾಗ್ ಫೋರ್ಟ್ ರಸ್ತೆ, ಬೆಂಗಳೂರು-560004.

PUBLIC NOTICE

Public are informed that my client Smt.C.Gowramma, Residing at Kanaminike Village, Kumbalagodu post Kengeri Hobli, Bangalore South Taluk, Bengaluru.

My client is the absolute owner in possession of the property bearing Old Municipal No.95, Later.No.112 thereafter 112/15, Now 15/2, Situated 9th Cross, 1st main Road 26th Division Chamarajpet, Bangalore and bounded on;

East by : 09 feet Road;
West by : Remaining portion of the property;
North by : Passage
South by : Dasappa property.

My client has lost the Original property documents i.e. Registered release Deed bearing 4875/1983-84 and Gift deed bearing document No.CMP-1-00900-2008-09, registered in the Office of the Sub-Registrar Chamarajpet Bangalore

The said property is in possession of Smt. C. Gowramma; she is the absolute owner and free from all encumbrance whatsoever.

My Client had lost the above mentioned deeds Inspite of several efforts the Original deeds are not found and she has lodged the police complaint through online dated 02.03.2026/01.03.2026, Lost report No. 2089274/2026 and 2087576/2026

If any person found or anyone having any claim or interest over the said property, he/she is requested to forward their claims along with the relevant documents to us within 07 days of this public notice. If we do not receive any claim from any person within 07 days, it will be strictly presumed that this property is absolutely free from any claim or encumbrance and no one has any claim over this property and if any One found the above deed kindly contact below mentioned.

PREMA B DUBAE - ADVOCATE
FFD VI, 4th Floor Sampoorna Chambers, Vasavi Temple Road, V.V. Puram, Bengaluru-560004.
Ph : 080-42053588/080-42296969

PUBLIC NOTICE

Public are informed that my Stanley Michael Tennison C/o. Jyothsna K # 105, 1st Floor A Block, Hemanth Orange Apartment, 6th Cross, Kaggadasapura Main Road, Vignan Nagar - 560075.

My client is the absolute owner the property bearing the Site No.19 of V.P.Khatha No.44 and Assessment No.44/4 Situated at Hennur Village, Kasaba Hobli, Bangalore North Taluk, presently within the limit of BBMP and bounded on;

East by : 25 feet wide Road;
West by : Site No.38;
North by : Site No.30;
South by : 25 feet Wide Road.

My client has lost the Original property documents i.e. Registered Sale Deed bearing No.12119/2003-04 dated 02.07.2003, registered in the Office of the Sub-Registrar Bangalore North Taluk.

The said property is in possession of Stanley Michael Tennison; he is the absolute owner and free from all encumbrance whatsoever.

My Client had lost the above mentioned Sale deeds Inspite of several efforts the Original deed is not found and he has lodged the police complaint through online dated 09.03.2026, Lost report No. 2100602/2026.

If any person found or anyone having any claim or interest over the said property, he/she is requested to forward their claims along with the relevant documents to us within 07 days of this public notice. If we do not receive any claim from any person within 07 days, it will be strictly presumed that this property is absolutely free from any claim or encumbrance and no one has any claim over this property and if any One found the above deed kindly contact below mentioned

PREMA B DUBAE - ADVOCATE
FFD VI, 4th Floor Sampoorna Chambers, Vasavi Temple Road, V.V. Puram, Bengaluru-560004.
Ph : 080-42053588/080-42296969

IN THE COURT OF THE PRINCIPAL CIVIL JUDGE JMFC AT ANEKAL

Crl. Misc. No. 432/2026

Between : 1. Smt. Thamburappa, S/o. Late Thoti Muniyappa, Aged about 70 years, R/at- Halasahalli Thippasandra Village Sarjapura Hobli Anekal Taluk, Bangalore-560087. ...PETITIONER

And : Thahasildhar, Anekal ...RESPONDENT

PUBLIC NOTICE

Whereas, the Petitioner above named filed the above petition for seeking death certificate of my **Mother namely Thoti Muniyamma W/o. Late. Thoti Muniyappa, who was died on 16/05/2000** at Halasahalli Thippasandra Village, Sarjapura Hobli, Anekal Taluk, Bangalore-560087, Before the Principal Civil Judge and JMFC at Anekal. You are if anyone have any objection hereby inform to appear before this Hon'ble court in person or Legal heirs are by a pleader duly instructed on **16/04/2026 at 11.00 AM** in forenoon to show case against the claim, filing which the matter will be heard and determined ex-party.

Given under my hand and the seal of the court this 05 day of on March 2026.

By Order of the Court, Sheristedar, Civil Judge (Jr.Dv.) and JMFC Court, Anekal

Advocate for the petitioner : **Ramesh. G, Sujindra Kumar. P,** Advocates
Off at No. 2, R.G.Law, Associates, Behind Ragavendra Bhavan, Beside PLD Bank, Anekal Town.

PUBLIC NOTICE

LOSS OF ORIGINAL DOCUMENTS

This is to notify to the general public that our client **Sri. COMMANDER ANAND JOSHI @ Sri. ANAND NARASINGARAO JOSHI,** S/o Narasimha Rao Joshi Presently Residing at No. 80, Krishna Kunj Saptapur, 4th cross, Saptapur, Dharwad, Karnataka- 580001, now at Bangalore has lost Original sale deed dated 25.10.2003, registered as Doc. No. 2501/2003-04, in Book I, Vol 839, at pages 52-54 registered in the office of Additional Sub Registrar, Bangalore Urban District, executed by Bangalore Development authority with respect to Property bearing No. 560, situated at Jnanabharathi Valagerahalli Layout 1st stage measuring East to West 18.30 mtrs and North to South 12.20 mtrs in all measuring 223.26 sq mtrs. In this regard our client had lodged complaint on 10.07.2025, in Bangalore City, with Lost Report No. 1695125/2025, at Bengaluru City Police unit.

Whereas Original Allotment letter dated 31.05.2000, bearing orders No. BDA/ADM/DS-3/560/GB-I/2000-01, which was issued by Bangalore Development authority in favor of Original Allottee Sri. **COMMANDER ANAND JOSHI @ Sri. ANAND NARASINGARAO JOSHI,** S/o Narasimha Rao Joshi with respect to Schedule property has been lost and in this regard, he has lodged complaint on 6.03.2026 in Bangalore City, with Lost Report No. 2096479/2026, at Bengaluru City Police unit. Any person(s), firm(s), company(ies), bank(s), financial institution(s) authority(ies) claiming any right, title, interest, lien, charge, encumbrance, lease, mortgage, inheritance, agreement, or claim whatsoever in respect of the Schedule Property or any part thereof, or raising any objection to the proposed transaction, are hereby required to submit such claim(s) or objection(s) in writing, together with copies of all supporting documents, to the undersigned, within **fifteen (15) days** from the date of publication of this notice. In the event no claim(s) or objection(s) are received within the aforesaid period, it shall be deemed that there are no subsisting claims or encumbrances affecting the Schedule Property, and our client shall be at liberty to proceed with the transaction without any further reference to any such person(s) or entity (ies).

SCHEDULE PROPERTY

All that piece and parcel of Property bearing No. 560, situated at Jnanabharathi Valagerahalli Layout 1st stage measuring East to West 18.30 mtrs and North to South 12.20 mtrs in all measuring 223.26 sq mtrs and bounded on by: East by : 9th Main Road, West by : SITE NO. 561, North by : SITE NO. 632, South by : SITE NO. 560/A

MEENA, Advocate
EXPERT JURIST LLP,
No.61, 3rd Cross, Honnappa Layout, Kengunte Cross, Mallathahalli, Bangalore-560 056.
Mob: 9900725633 / 8296907391

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಪಿರಿಯಾಪಟ್ಟಣ.

ಅಸಲು ದಾವಾ ಸಂಖ್ಯೆ 68 /2025

[illegible]

ದಾವಾ ಎ ಷೆಡ್ಯೂಲ್

[illegible]

ದಾವಾ ಬಿ ಷೆಡ್ಯೂಲ್

[illegible]

ನ್ಯಾಯಾಲಯದ ಆದೇಶದಂತೆ

ಶಿರಸ್ತೇದಾರರು, ಚೀಫ್ ಮಿನಿಸ್ಟೀರಿಯಲ್ ಆಫೀಸರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಿರಿಯಾಪಟ್ಟಣ.

ವಾದಿ ಪರ ವಕೀಲರು

ಗುರುಪ್ರಸಾದ್.ಪಿ. ವಕೀಲರು, ತಾಲ್ಲೂಕು ಕಛೇರಿ ಎದುರು, ಪಿರಿಯಾಪಟ್ಟಣ.

ನೆಲಮಂಗಲ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

ಸಿ.ಮಿಸ್. ನಂ. 172/2026

[illegible]

BEFORE THE MOTOR ACCIDENT CLAIMS TRIBUNAL AT BENGALURU

MVC.NO.3240/2025

BETWEEN: NIKHIL R ....Petitioner

AND: MANI SEMALAI GOUNDAR & another ....Respondents

NOTICE TO RESPONDENT NO.1

MANI SEMALAI GOUNDAR S/o. Semalai Goundar R/at.# 7 RCC 206/261, SG Mutt Road, Chamarajpet, Bangalore-560018,

WHEREAS the above named petitioner have filed the Claim petition against you as one of the Respondent, Claiming Compensation of Rs. **25,00,000/-(RUPEES Twenty-Five LAKHS ONLY)** together with costs and interest for the injuries in a road traffic accident caused by your Ashok Leyland bearing No.KA-01-AG-9693 on 30/11/2024 at around 3.30-3.35PM, Doddaballapura Devanahalli Road, Near Gitam college Nagadenahalli village, kasaba(H), DB Pura Taluk, Bengaluru Dist, Karnataka.

Hence you are hereby Summoned to appear to answer in this questions relating to case on the **18-04-2026 at 11.00 AM**, in default of your appearance on the day mentioned above, the petition will be heard and determined in our absence. Given under my hand and the seal of the court on **10-03-2026** at Bangalore

By Order Of The Court, Assistant Registrar Court of Small Causes, Bangalore.

CHAMPA .C, B.A., LL.B. ADVOCATE
#6, UAS Layout, 1st Main, Opp. 4th Cross, Sanjayanagar, BANGALORE-560 094

PUBLIC NOTICE

This is to inform the general public that my clients Mrs. Yashodhamma B W/o. Mr. Nanjegowda K is the absolute owner of the Property bearing Site No. 8, Khatha No. 1198/1140/765/673/811, Old Khaneshumari Khatha No. 673/811/8, Bolappanahalli, Ramanagara Town, Ramanagara Taluk, Bengaluru Rural District,; measuring East to West: 50 feet and North to South: on Eastern Side 25feet, and on Western Side 35 feet.; and bounded on the East by: Property of Appajigowda, West by: 18 feet Road, North by: Site No. 9, belonging to Vanajakshi and South by: Site No. 7 belonging to Swarnagowramma.

While renovating her house, my client has lost the (1) Original Sale Deed dated 02/05/1983, Doc No. 204/1983-84, Volume-1401, Pages 159 to 161, Book-1, SRO, Ramanagara, pertaining to the said property:

In the event any person having the above said original documents, kindly handover the same to the below mentioned address within 15 days of the publication of this notice. The general public are informed not to act on the basis of the said original documents.

SOMASHEKHARA A.N, Advocate
No. 105, 3rd Floor, MR Mansion 12th 'D' Main Road Muthyalanagar Bengaluru - 560 054

BEFORE THE MOTOR ACCIDENT CLAIMS TRIBUNAL AT BENGALURU (SCCH-17)

M.V.C. No.7013/2025

BETWEEN: Mr. Tabrez Pasha ... PETITIONER

AND: Mr. Shaik Arbaz & Anr.. RESPONDENTS

Mr. Shaik Arbaz, S/o Babu, Aged about 30 years, R/at: No.3372, Sait Compound, Bangarapet Town, Kolar District - 563114.

NOTICE TO RESPONDENT No.1

Whereas, the petitioner in the above case has filed the above claim petition against you, claiming compensation of Rs.50,00,000/- (Rs. Fifty Lakhs Only) for the injuries sustained by the petitioner in a R.T.A, caused by your Ashok Leyland Dost Plus LGV bearing Reg. No.KA-08-A-3387on 28-03-2025 at about 6:10 A.M.,(reached) at near Bagur bus stop, on Chikkatirupathi Sarjapur NH-648 road, Hosakote Taluk, Bengaluru Rural District. Hence, you are hereby summoned to appear before this court in person or by a pleader duly instructed, and able to answer all the material questions relating to the case on **15-04-2026 at 11:00 A.M** (SCCH-17) failing which the above cases will be disposed off ex-parte.

Given under my hand and the seal of this court on 26-02-2026.

By order of the court, Assistant Registrar, Court of Small Causes, Bangalore.

N. MANJUNATH, Advocate
No.3, Amar Towers, 1st Cross, Gandhinagar, Bengaluru-09.

BEFORE THE ASSISTANT COMMISSIONER DODDABALLAPURA SUB-DIVISION AT DODDABALLAPURA

R.A. (N) No. 168/2025

Appellant : Sri Ravi

V/s

Respondents : The Thasildar and Others

Adress of the Respondent No. 3

3. Sri. MOHANKUMAR. L.N S/o late Nagegowda Aged about 32 years, R/at No. 10, 1st A Main Road, Vinayaka Nagara, Kamkshipalya, BBMP, Yeshwanthapura Hobli, Bangalore North Taluk, Bangalore-560079.

Summons under Order 5 Rule 20(1-A) of C.P.C.

WHEREAS, the Petitioner has filed the above appeal agrreived against Mutation effected in vide MR. No. 02/2023-24 dated 19.07.2023 passed by 1st Respondent in favour of the Respondents No.2 and 3 and for other reliefs in respect of the Land bearing Sy.No. 62/1 measuring to an extent of 3 Acres 01 guntas situated at Baraguru Village, Sompura Hobli, Nelamangala Taluk, Bangalore Rural District and for other consequential reliefs. The Hon'ble Court has posted the above case **on 23.03.2026 at 3.00 P.M.** for your appearance personally or through your counsel, on that day. Hence, you are summoned to appear before the court on the said date in person or by the pleader, otherwise the Hon'ble Court will be deciding the matter in your absence by placing you ex-parte.

Given under my hand and seal of this Court on the 10.03.2026.

By order of the Court, ಉಪವಿಭಾಗಾಧಿಕಾರಿ-7, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ

M & L ASSOCIATES,
SRI LOKESH .N.N, Advocate
No. 9, 2nd Floor, Ananda Complex, B.H. Road, Nelamanagala-562123.

IN THE COURT OF HON'BLE II ADDL. CIVIL JUDGE AND J.M.F.C. AT TUMAKURU

CRL. Mis. No. 61/2026

PETITIONERS : 1. SHABBIR PASHA, S/o Late Syed Wajid, aged about 55 years, R/at 3rd Cross, 8th Main, Shanthinagara, Shivamogga. **2. KHUTEJA BI,** W/o Zameer Ahmed, D/o Late Syed Wajid, aged about 55 years, R/at 1st Cross, 1st Main Road, G.C.R. Colony, Tumakuru. **3. SYED KAREEM,** S/o Late Syed Wajid, aged about 48 years, R/at Oil Mill Road, Near Azam Masjid, Tumakuru. **4. NAZIMA BANU,** W/o Ziyaulla Khan, aged about 37 years, R/at Nagavalli Village, Hebbur Hobli, Tumakuru Taluk. **-V/s-**

RESPONDENT: THE COMMISSIONER, Registrar of Births and Deaths, Tumakuru Mahanagara Palike. Tumakuru.

NOTICE

The petitioners have filed the above said petition Under Section 13 (3) of the Registration of Birth and Death Act. to obtain the death certificate of the their mother by name SHAHID KHANUM W/o Syed Wajid, who died on 31-08-2022 at Masjid Road, Santhepete, Tumakuru. If any body as any objections or right with respect to the above said facts and petition may file objection in the above said case by personally or through counsel. The case is posted on **20/06/2026** at **11:00 A.M.** Otherwise the said matter will be disposed accordance with law.

Given under my hand and the seal of the Court on this 10/03/2026 at Tumakuru

By order of the Court, Sheristedar, Prl. Civil Judge & J.M.F.C Tumakuru

K.S. PRABHU, Advocate
7th Cross, Sriramanagara, Tumakuru
Mob: 7892367736.

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18

ಕಛೇರಿ: 26678572 : 26600512 : 26609066 : ಟೆಲಿಫ್ಯಾಕ್ಸ್ : (080) 26617980

ತಗಾದೆ ನೋಟಿಸ್

ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಮರುಸಂಗ್ರಹಣೆ ಮತ್ತು ಭದ್ರತಾ ಬಡ್ಡಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಸೂಚನೆ (ಇನ್ನು ಮುಂದೆ 'ಆಕ್ಟ್' ಎಂದು ಕರೆಯಲಾಗುತ್ತದೆ).

ಅವರ ಕೋರಿಕೆಯ ಮೇರೆಗೆ, ಬ್ಯಾಂಕ್ ತನ್ನ ಕೆಳಗೆ ತಿಳಿಸಲಾದ ಶಾಖೆಗಳ ಮೂಲಕ ಸೆಕ್ಯೂರ್ಡ್ ಆಸ್ತಿಗಳಿಗೆ ಪ್ರತಿಯಾಗಿ ಕೆಳಗೆ ತಿಳಿಸಲಾದ ವ್ಯಕ್ತಿಗಳಿಗೆ ಸಾಲ ಸೌಲಭ್ಯಗಳನ್ನು ವಿಸ್ತರಿಸಿದೆ. ಭದ್ರತಾ ಒಪ್ಪಂದ/ದಾಖಲೆಗಳನ್ನು ಕಾರ್ಯಗತಗೊಳಿಸುವ ಮೂಲಕ ಮತ್ತು ಶೀರ್ಷಿಕೆ ಪತ್ರಗಳ ಅಡಮಾನದ ಮೂಲಕ ಠೇವಣಿ ಮಾಡುವ ಮೂಲಕ ಅವರು ಭದ್ರತಾ ಆಸಕ್ತಿಯನ್ನು ಸೃಷ್ಟಿಸಿರುವ ಆಸ್ತಿಯ ಸಂಬಂಧಿತ ವಿವರಗಳನ್ನು ಇಲ್ಲಿ ನೀಡಲಾಗಿದೆ. ಹಣಕಾಸಿನ ನೆರವು/ಸಾಲ ಸೌಲಭ್ಯಗಳ ಕಾರ್ಯಾಚರಣೆ ಮತ್ತು ನಡವಳಿಕೆಯು ಅನಿಯಮಿತವಾಗಿರುವುದರಿಂದ, ಸಾಲಗಾರರು ಮೂಲ ಸಾಲ ಮತ್ತು ಅದರ ಮೇಲಿನ ಬಡ್ಡಿಯನ್ನು ಮರುಪಾವತಿಸುವಲ್ಲಿ ಮಾಡಿದ ಡೀಫಾಲ್ಟ್ ಪರಿಣಾಮವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿದ ನಿರ್ದೇಶನಗಳು / ಮಾರ್ಗಸೂಚಿಗಳ ಪ್ರಕಾರ ಸಾಲಗಳನ್ನು ಅನುತ್ಪಾದಕ ಆಸ್ತಿಗಳೆಂದು ವರ್ಗೀಕರಿಸಲಾಗಿದೆ. ರಿಜಿಸ್ಟರ್ ಎಡಿ ಕಳುಹಿಸಿದ ತಗಾದೆ ಸೂಚನೆಯನ್ನು ಅವರಿಗೆ ನೀಡಲಾಗಲಿಲ್ಲ / ಅಂಗೀಕರಿಸಲಾಗಿಲ್ಲ / ವಿಳಾಸದಾರ ಬಿಡಲಾಗಿದೆ / ಈ ಪ್ರಕಟಣೆಯನ್ನು ಈಗ ನೀಡಲಾಗಿದೆ.

01) ಸಾಲಗಾರರ ಹೆಸರು ಮತ್ತು ವಿಳಾಸ :– ಶ್ರೀಮತಿ ಸಾಯಿರಾ ಖಾನಮ್ W/o ಶ್ರೀ. ನೂರುಲ್ಲಾ ಖಾನ್ ಖಾತರಿದಾರರು:– 1. ನೂರುಲ್ಲಾ ಖಾನ್ 2. ಸನಾವುಲ್ಲಾಖಾನ್, ನಂ. 54, ಎಂಎಂ ರಸ್ತೆ, ಎಂಕೆ ಪಾಳ್ಯ, ಫ್ರೇಜರ್ ಟೌನ್, ಪುಲಿಕೇಶಿ ನಗರ, ಬೆಂಗಳೂರು–05. ಆಸ್ತಿಯ ಎಲ್ಲಾ ಭಾಗಗಳು :– ಹೊಸ ಪುರಸಭೆ ಸಂಖ್ಯೆ 73, ಹಳೆಯ ಬಿಬಿಎಂಪಿ ಸಂಖ್ಯೆ 73 & 74, (ಹಳೆಯ ಸಂಖ್ಯೆ 65 & 65A), ಸುಲ್ತಾಂಜಿ ಗುಂಟಾ ರಸ್ತೆ, ಸಿವಿಲ್ ಸ್ಟೇಷನ್, ಶಿವಾಜಿನಗರ, ಶಿವಾಜಿನಗರದ ಬಿಬಿಎಂಪಿ ವಾರ್ಡ್ ಸಂಖ್ಯೆ 79, ಪಿಐಡಿ ಸಂಖ್ಯೆ 79–83–73, ಬೆಂಗಳೂರು.

ಅಳತೆ: ಪೂರ್ವ : 45–0 , ಪಶ್ಚಿಮ :– 18-10½, 17-3 ಅಡಿ & ಉತ್ತರ : 20–8, 32–9, ದಕ್ಷಿಣ : 3–1, 2, 10–5, 9–3, 11–9 & ಒಟ್ಟು 1327 ಚದರ ಅಡಿ, ಪೂರ್ವಕ್ಕೆ : ಆಸ್ತಿ ಹಳೆಯ ಸಂಖ್ಯೆ 12, ಹೊಸ ಸಂಖ್ಯೆ 16 ನಂತರ ಧನಕೋಟಿ ಲೇನ್, **ಪಶ್ಚಿಮಕ್ಕೆ :** ಸುಲ್ತಾಂಜಿ ಗುಂಟಾ ರಸ್ತೆ, **ಉತ್ತರಕ್ಕೆ :** ಹಳೆಯ ಆಸ್ತಿ ಸಂಖ್ಯೆ 65/B, ಹೊಸ ಸಂಖ್ಯೆ 72, **ದಕ್ಷಿಣಕ್ಕೆ :** ಹಳೆಯ ಆಸ್ತಿ ಸಂಖ್ಯೆ 66, ಹೊಸ ಸಂಖ್ಯೆ 75.

ಸಾಲ ಸೌಲಭ್ಯಗಳು : **ದೀರ್ಘಾವಧಿ ಸಾಲ ರೂ. 95,00,000/– & 38,00,000/–** **ಖಾತೆ ನಂ : LTL:- 1219 & LTL EMI:- 229** **ಸಾಲ ನೀಡಿದ ದಿನಾಂಕ : 03.07.2015 & 12.03.2020**

ಬರಬೇಕಾದ ಮೊತ್ತ : **ರೂ.72,52,212/– (ರೂಪಾಯಿಗಳು ಎಪ್ಪತ್ತೆರಡು ಲಕ್ಷ ಐವತ್ತೆರಡು ಸಾವಿರದ ಇನ್ನೂರ ಹನ್ನೆರಡು ರೂಪಾಯಿಗಳು ಮಾತ್ರ), ದಿನಾಂಕ 02.02.2026 ರಂತೆ, ಮೇಲೆ ತಿಳಿಸಿದ ಮೊತ್ತದ ಮೇಲಿನ ಒಪ್ಪಂದದ ದರದಲ್ಲಿ ಭವಿಷ್ಯದ ಬಡ್ಡಿ ಮತ್ತು ಘಟನೆ ವೆಚ್ಚಗಳು, ವೆಚ್ಚಗಳು ಇತ್ಯಾದಿಗಳೊಂದಿಗೆ.**

ಎನ್.ಪಿ.ಎ ಆಗಿ ವರ್ಗೀಕರಣಗೊಂಡ ದಿನಾಂಕ:– **10.01.2026** ಡಿಮ್ಯಾಂಡ್ ನೋಟಿಸ್ ದಿನಾಂಕ : **02.02.2026** ಶಾಖೆ :– ಸಂಜಯನಗರ

02) ಸಾಲಗಾರರ ಹೆಸರು ಮತ್ತು ವಿಳಾಸ :– ಶ್ರೀ. ಸೈಯದ್ ಮುಸ್ತಫಾ ಬಿನ್ ಲೇಟ್. ಸೈಯದ್ ರಸೂಲ್ ಸಾಬ್, ನಂ. 24, 6ನೇ ಎ ಮೇನ್ ಇಲಿಯಾಸ್ ನಗರ, ಬೆಂಗಳೂರು.

ಆಸ್ತಿಯ ಎಲ್ಲಾ ಭಾಗಗಳು :– ಸೈಟ್ ನಂ. 13–ಎ, ನಂ.26 ರಲ್ಲಿ ನಂತರ ಸೈಟ್ ನಂ.38, ಹೊಸ ಮುನ್ಸಿಪಲ್ ನಂ. 24, 6 ನೇ ಎ ಮೇನ್, ಇಲಿಯಸ್ನಗರ, ಮಿಣಜನಗರ, ಕದಿರೇನಹಳ್ಳಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಬಿಬಿಎಂಪಿ ವಾರ್ಡ್ ನಂ. 55 ರ ಲಾ ಪದ್ಮನಾಭ ನಗರ & 55 ರ ಹೊಸ ಪದ್ಮನಾಭ ನಗರ ಕಚಳ ಸಂಖ್ಯೆ 55–716–24, ಬೆಂಗಳೂರು. **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 19 ಅಡಿ & ಉತ್ತರದಿಂದ ದಕ್ಷಿಣಕ್ಕೆ: ಪೂರ್ವ ಭಾಗ: 32 ಅಡಿ ಪಶ್ಚಿಮ ಭಾಗ: 36 ಅಡಿ. ಪೂರ್ವಕ್ಕೆ :** ಸೈಟ್ ಸಂಖ್ಯೆ 13–ಬಿ, **ಪಶ್ಚಿಮಕ್ಕೆ :** ರಸ್ತೆ, **ಉತ್ತರಕ್ಕೆ :** ಸೈಟ್ ಸಂಖ್ಯೆ 14, **ದಕ್ಷಿಣಕ್ಕೆ :** ರಸ್ತೆ.

ಸಾಲ ಸೌಲಭ್ಯಗಳು : **ದೀರ್ಘಾವಧಿ ಸಾಲ ರೂ. 27,00,000/–** **ಖಾತೆ ನಂ : LTL EMI :- 101** **ಸಾಲ ನೀಡಿದ ದಿನಾಂಕ : 05.04.2022**

ಬರಬೇಕಾದ ಮೊತ್ತ : **ರೂ.13,81,000/– (03.02.2026 ರ ಪ್ರಕಾರ ಹದಿಮೂರು ಲಕ್ಷ ಎಂಬತ್ತು ಒಂದು ಸಾವಿರ ರೂಪಾಯಿಗಳು ಮಾತ್ರ, ಜೊತೆಗೆ ಮೇಲೆ ತಿಳಿಸಿದ ಮೊತ್ತದ ಮೇಲಿನ ಒಪ್ಪಂದದ ದರದಲ್ಲಿ ಭವಿಷ್ಯದ ಬಡ್ಡಿ ಮತ್ತು ಘಟನೆ ವೆಚ್ಚಗಳು, ವೆಚ್ಚ, ಶುಲ್ಕಗಳು ಇತ್ಯಾದಿ.)**

ಎನ್.ಪಿ.ಎ ಆಗಿ ವರ್ಗೀಕರಣಗೊಂಡ ದಿನಾಂಕ:– **05.01.2026** ಡಿಮ್ಯಾಂಡ್ ನೋಟಿಸ್ ದಿನಾಂಕ : **03.02.2026** ಶಾಖೆ :– ಪದ್ಮನಾಭನಗರ

ಸೂಚನೆ ನೀಡಿದ ದಿನಾಂಕದಿಂದ 60 ದಿನಗಳ ಒಳಗೆ ಬಡ್ಡಿ ಮತ್ತು ಆಕಸ್ಮಿಕ ವೆಚ್ಚಗಳೊಂದಿಗೆ ಮೇಲೆ ತಿಳಿಸಿದ ಮೊತ್ತವನ್ನು ಮರುಪಾವತಿಸಲು ನೀವು ವಿಫಲವಾದರೆ, ಸರ್ಫೇಸಿ ಕಾಯ್ದೆಯ ಸೆಕ್ಷನ್ 13 ರ ಉಪವಿಭಾಗ (4) ರ ಅಡಿಯಲ್ಲಿ ವಿವರಿಸಲಾದ ಎಲ್ಲಾ ಅಥವಾ ಯಾವುದೇ ಹಕ್ಕುಗಳನ್ನು ಬ್ಯಾಂಕ್ ಚಲಾಯಿಸುತ್ತದೆ. ಸೆಕ್ಷನ್ 13 ರ ಉಪವಿಭಾಗ (2) ರ ಪ್ರಕಾರ, ಬ್ಯಾಂಕಿನ ಲಿಖಿತ ಒಪ್ಪಿಗೆಯನ್ನು ಪಡೆಯದೆ ಮೇಲೆ ವಿವರಿಸಲಾದ ಹೇಳಲಾದ ಸುರಕ್ಷಿತ ಸ್ವತ್ತುಗಳನ್ನು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು ಎಂದು ನಿಮಗೆ ಸೂಚನೆ ನೀಡಲಾಗಿದೆ. ಕಾನೂನಿನ ಯಾವುದೇ ಇತರ ಅನ್ವಯವಾಗುವ ನಿಬಂಧನೆಗಳ ಅಡಿಯಲ್ಲಿ ಅಗತ್ಯವೆಂದು ಪರಿಗಣಿಸುವ ಇತರ ಕ್ರಮ ಅಥವಾ ಕಾನೂನು ಕ್ರಮಗಳನ್ನು ಪ್ರಾರಂಭಿಸುವ ಬ್ಯಾಂಕಿನ ಹಕ್ಕುಗಳಿಗೆ ಈ ಸೂಚನೆಯು ಯಾವುದೇ ಹಾನಿ ಮಾಡುವುದಿಲ್ಲ. SARFAESI ಕಾಯ್ದೆಯ ಸೆಕ್ಷನ್ 13 ರ ಉಪ–ವಿಭಾಗ (8) ರ ನಿಬಂಧನೆಗಳಿಗೆ ನಿಮ್ಮ ಗಮನವನ್ನು ಆಹ್ವಾನಿಸಲಾಗಿದೆ. ಅಲ್ಲಿ ನೀವು ಸಾರ್ವಜನಿಕ ಹರಾಜಿನ ಮೂಲಕ, ಉಲ್ಲೇಖಗಳನ್ನು ಆಹ್ವಾನಿಸುವ ಮೂಲಕ, ಸಾರ್ವಜನಿಕರಿಂದ ಅಥವಾ ಖಾಸಗಿ ಒಪ್ಪಂದದ ಮೂಲಕ ಸುರಕ್ಷಿತ ಆಸ್ತಿ(ಗಳ) ಮಾರಾಟಕ್ಕೆ ಸೂಚನೆ ಪ್ರಕಟವಾಗುವ ದಿನಾಂಕದವರೆಗೆ ಮಾತ್ರ ಬ್ಯಾಂಕಿನಿಂದ ಉಂಟಾದ ಎಲ್ಲಾ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳೊಂದಿಗೆ ಬಾಕಿ ಇರುವ ಬಾಕಿಗಳ ಸಂಪೂರ್ಣ ಮೊತ್ತವನ್ನು ಟೆಂಡರ್ ಮಾಡಬಹುದು. ಸಾರ್ವಜನಿಕ ಹರಾಜಿನ ಮೂಲಕ, ಉಲ್ಲೇಖಗಳನ್ನು ಆಹ್ವಾನಿಸುವ ಮೂಲಕ, ಸಾರ್ವಜನಿಕರಿಂದ ಅಥವಾ ಖಾಸಗಿ ಒಪ್ಪಂದದ ಮೂಲಕ ಸುರಕ್ಷಿತ ಆಸ್ತಿಗಳ ಮಾರಾಟಕ್ಕೆ ಸೂಚನೆ ಪ್ರಕಟವಾಗುವ ಮೊದಲು ಬ್ಯಾಂಕ್‌ನಿಂದ ಉಂಟಾದ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳೊಂದಿಗೆ ಬಾಕಿ ಇರುವ ಬಾಕಿಗಳ ಸಂಪೂರ್ಣ ಮೊತ್ತವನ್ನು ಟೆಂಡರ್ ಮಾಡದಿದ್ದರೆ, ನೀವು ಸುರಕ್ಷಿತ ಆಸ್ತಿ(ಗಳನ್ನು) ಪುನಃ ಪಡೆದುಕೊಳ್ಳಲು ಅರ್ಹರಾಗಿರುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.

ದಿನಾಂಕ: 10.03.2026
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ– ಆಪರೇಟಿವ್ ಬ್ಯಾಂಕ್ ಲಿ.,

ಜಾಹೀರಾತಿಗಾಗಿ ಸಂಪರ್ಕಿಸಿ :
9845438807 / 9611755391

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ

ಶಿಮನಪಾಶಿ:ಕಾ.ಅ:ವಿದ್ಯುತ್:ಡಿ:ಎಂ/ಸಿ.ಆರ್:22/2025–26 ದಿನಾಂಕ: 10.03.2026

ಟೆಂಡರ್ ಪ್ರಕಟಣೆ

ಇ–ಪ್ರಕ್ಯೂರ್ ಮೆಂಟ್ www.kppp.karnataka.gov.in ಮುಖಾಂತರ

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ & ಸಮಯ: 18.03.2026 10.00 AM

ಟೆಂಡರ್ ತೆರೆಯುವ ದಿನಾಂಕ & ಸಮಯ: 20.03.2026 10.30 AM

ಕ್ರ.ಸಂ. 1. **ಇಂಡೆಂಟ್ ಸಂಖ್ಯೆ:** DMA/2025-26/SE7463 Providing vehicles along with driver on hire basis for Shivamogga City Corporation (3 numbers A/C Cars and 12 numbers Non A/C Cars) Package 1 **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 6541920.00 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 164000.00

ಕ್ರ.ಸಂ. 2. **ಇಂಡೆಂಟ್ ಸಂಖ್ಯೆ:** DMA/2025-26/SE7464 Providing vehicles along with driver on hire basis for Shivamogga City Corporation (3 numbers A/C Cars and 12 numbers Non A/C Cars) - Package 2 **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 6541920.00 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 164000.00

ಕ್ರ.ಸಂ. 3. **ಇಂಡೆಂಟ್ ಸಂಖ್ಯೆ:** DMA/2025-26/WT/WORK_INDENT 56247 ಪಾಲಿಕೆ ವ್ಯಾಪ್ತಿಯಲ್ಲಿನ ಮಲಿನ ನೀರು ಶುದ್ಧೀಕರಣ ಘಟಕಕ್ಕೆ ಸಂಬಂಧಿಸಿದಂತೆ ಗುಂಡಪ್ಪ ಶೆಡ್ ವೆಟ್ ವೆಲ್ ನ ಡಿ–ಸಿಲ್ಟಿಂಗ್ ಕಾಮಗಾರಿ **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 1671411.84 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 41800.00

ಸೂಚನೆ: ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್ ಸೈಟ್ www.kppp.karnataka.gov.in ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು(ವಿ) ರವರ ಕಛೇರಿಯನ್ನು ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿ) ಮಹಾನಗರ ಪಾಲಿಕೆ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/25-26/58/03/1985

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಚಾಮರಾಜಪೇಟೆ ವಿಭಾಗ, 2ನೇ ಮೈನ್, ಟಿ.ಆರ್. ಮಿಲ್ ರಸ್ತೆ, ಚಾಮರಾಜಪೇಟೆ ಬೆಂಗಳೂರು – 560018

ದೂ. 9480688278/9481033253 ಇಮೇಲ್ : bbmpcmp@gmail.com

ಸಂ. ಕಾಅ/ಚಾಪೇ/ಟೆಂಡರ್/22/2025–26 ದಿನಾಂಕ : 10–03–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಏಕ ಲಕೋಟೆ ವ್ಯವಸ್ಥೆ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಬೆಕೇನಪಾ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ಚಾಮರಾಜಪೇಟೆ ವಿಭಾಗ, ವಲಯ–2, ಬೆಕೇನಪಾ, ಇವರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆ / ಕೆಪಿಡಬ್ಲ್ಯೂಡಿ / ವಿದ್ಯುತ್ / ಸಿಪಿಡಬ್ಲ್ಯೂಡಿ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಯಲ್ಲಿ ನೋಂದಣಿ ಹೊಂದಿರುವ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಬಿಡ್ ದಾಖಲೆಗಳು ಕೆಡಬ್ಲ್ಯು–1 & 2 ಅನುಸಾರವಾಗಿ ಐಟಂ ದರ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ	ಕಾಮಗಾರಿಯ ಹೆಸರು
1	ವಾರ್ಡ್ ಸಂ.158 ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಪ್ರಾರ್ಥನೆಗೆ ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳು ಭೇಟಿ ನೀಡುವ ಸಂದರ್ಭಕ್ಕಾಗಿ ಸುರಕ್ಷತಾ ಕ್ರಮಗಳ ತಯಾರಿಕೆ. **ಕಾಮಗಾರಿಯ ಅಂದಾಜು ಮೌಲ್ಯ :** ರೂ.5.50 ಲಕ್ಷಗಳು. **ಇಎಂಡಿ :** ರೂ.13,750/–

ವೇಳಾಪಟ್ಟಿ : (1) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ (**https://kppp.karnataka.gov.in**) ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು. (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **18–03–2026 ರಂದು 16:00 ಗಂಟೆಯವರೆಗೆ** (3) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ : **19–03–2026 ರಂದು 17:00 ಗಂಟೆಯ** ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ,
ಕರ್ನಾಟಕ ಬ್ಯಾಂಕ್ ಕಟ್ಟಡ, ಮೊದಲ ಮಹಡಿ, ವಾರ್ಡ್ ನಂ.29, ಮರಳೂರು ಎಕ್ಸ್‌ಟೆನ್ಷನ್, ಸದಾಶಿವನಗರ, ತುಮಕೂರು–572105
ದೂರವಾಣಿ: 0816-2294905/2294906
ಇ–ಮೇಲ್: tum.arm@ktkbank.com
ವೆಬ್‌ಸೈಟ್: www.karnatakabank.com
CIN: L85110KA1924PLC001128

ಇ–ಹರಾಜು
ಸ್ಥಿರಾಸ್ತಿ ಸ್ವತ್ತಿನ ಮಾರಾಟ ಸೂಚನೆ ದಿನಾಂಕ: 30.03.2026

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6)/ನಿಯಮ 9(1)ರ ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಇ–ಹರಾಜು).

ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು), ಜಾಮೀನುದಾರ(ರು), ಅಡಮಾನದಾರ(ರು) ಮತ್ತು ಸಹಬಾಧ್ಯತಾದಾರ(ರು) ರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತುಗಳನ್ನು ಭದ್ರತಾ ಸಾಲಗಾರರಿಗೆ ಅಡಮಾನ/ ಚಾರ್ಜ್ ಮಾಡಲಾಗಿದ್ದು, **ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ** ಅಧಿಕೃತ ಅಧಿಕಾರಿಯವರಿಂದ **ಭೌತಿಕ ಸ್ವಾಧೀನತೆಯನ್ನು** ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತುಗಳನ್ನು **"ಎಲ್ಲಿ ಹೇಗಿದೆಯೋ ಹಾಗೆ"** , **"ಎಲ್ಲಿ ಏನಿದೆಯೋ ಹಾಗೆ"** ಮತ್ತು **"ಅಲ್ಲಿ ಏನೇ ಇರಲಿ ಹಾಗೆ"** ಆಧಾರದ ಮೇಲೆ **ದಿನಾಂಕ: 30.03.2026** ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು.

ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡೆಪಾಸಿಟ್ ಅನ್ನು **ದಿನಾಂಕ: 27.03.2026 ರಂದು ಸಂಜೆ 4.00 ಗಂಟೆಯ** ಒಳಗೆ ಆನ್‌ಲೈನ್ ಪಾವತಿಯ ಮೂಲಕ ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಅಥವಾ **ಕರ್ನಾಟಕ ಬ್ಯಾಂಕ್ ಲಿಮಿಟೆಡ್** ಪರವಾಗಿ ಡಿಡಿ ಮೂಲಕ ಸಂದಾಯ ಮಾಡಬಹುದಾಗಿದೆ.

ಕ್ರ ಸಂ	ಸಾಲ ಪಡೆದವರ /ಅಡಮಾನದಾರರ/ ಜಾಮೀನುದಾರರ / ಸಹ–ಬಾಧ್ಯತಾದಾರರ ಹೆಸರು ಮತ್ತು ಸಾಲ ಖಾತೆ ಸಂಖ್ಯೆ	ದಿನಾಂಕ: 10.03.2026 ರಂತೆ ಬಾಕಿ ಮೊತ್ತ ರೂ. ಮುಂದಿನ ಬಡ್ಡಿ + ಇತರೆ ಖರ್ಚು ವೆಚ್ಚಗಳು	ಸ್ವಾಧೀನತೆಯ ದಿನಾಂಕ ಸ್ವಾಧೀನತೆಯ ವಿಧ	ಸ್ಥಿರಾಸ್ತಿ ಸ್ವತ್ತಿನ ವಿವರಗಳು	ಮೀಸಲು ಬೆಲೆ (ರೂ.)	ಇಡಗಂಟು ಹಣ ಠೇವಣಿ (ಇಎಂಡಿ) ರೂ.	ಹರಾಜು ಸಮಯ	ಬಿಡ್ ಮೊತ್ತ ಹೆಚ್ಚಿಸುವಿಕೆ/ ಗುಣಾಂಕ	ಶಾಖೆಯ ಹೆಸರು ಮತ್ತು ಖಾತೆಯ ಹಾಗೂ IFSC ವಿವರಗಳು (ಇಎಂಡಿ ಪಾವತಿಗಾಗಿ)
1	(1) ಮೆ॥ ಸುಪ್ರೀಂ ಸ್ಟೀಲ್ ಅಂಡ್ ಕಂಪನಿ., ಪ್ರತಿನಿಧಿಸುವ ಪಾಲುದಾರರು: ಶ್ರೀ. ಸೈಯದ್ ಸೈಫುದ್ದೀನ್, ಶ್ರೀ. ಸೈಯದ್ ಸಮಿಯುದ್ದೀನ್, ಶ್ರೀ. ಸೈಯದ್ ನಜ್ಮುದ್ದೀನ್, ಶ್ರೀ. ಸೈಯದ್ ಜಹುರುದ್ದೀನ್, ಇವರುಗಳ ವಿಳಾಸ: ಸನಾ ಬಿಲ್ಡಿಂಗ್, 1584/1, ತಾಜ್ ಹೋಟೆಲ್ ಹಿಂಭಾಗ, ಬಿ ಎಂ ರಸ್ತೆ, ಚನ್ನಪಟ್ಟಣ–562160, ರಾಮನಗರ ಜಿಲ್ಲೆ, (2) ಶ್ರೀ.ಸೈಯದ್ ಸೈಫುದ್ದೀನ್ ಬಿನ್ ಶ್ರೀ.ಸೈಯದ್ ಅಹಮದ್ ನಂ.1582, ಸಿರಾಜ್ ಕಾಂಪೌಂಡ್ ಖಿನಾಥ್ ಕಾಲೋನಿ, ಚನ್ನಪಟ್ಟಣ–562160 ರಾಮನಗರ ಜಿಲ್ಲೆ. (3) ಶ್ರೀ.ಸೈಯದ್ ಸಮೀಯುದ್ದೀನ್ ಬಿನ್ ಸೈಯದ್ ಅಹಮದ್, ನಂ.1582, ಸಿರಾಜ್ ಕಾಂಪೌಂಡ್, ಖಿನಾಥ್ ಕಾಲೋನಿ, ಚನ್ನಪಟ್ಟಣ–562160, ರಾಮನಗರ ಜಿಲ್ಲೆ (4) ಶ್ರೀ.ಸೈಯದ್ ನಜ್ಮುದ್ದೀನ್ ಬಿನ್ ಸೈಯದ್ ಅಹ್ಮದ್ ನಂ.1582, ಅಪ್ಪರ್ ದೈರಾ, ಖಿನಾಥ ಮೊಹಲ್ಲಾ 562160, ಚನ್ನಪಟ್ಟಣ–562160, ರಾಮನಗರ ಜಿಲ್ಲೆ (5) ಶ್ರೀ. ಸೈಯದ್ ಜಹುರುದ್ದೀನ್ ಬಿನ್ ಶ್ರೀ. ಸೈಯದ್ ಅಹಮುದ್, ನಂ.1471/ಎ, ಇಸ್ಲಾಮಪುರ ಮೊಹಲ್ಲಾ, ದೈರಾ, ಚನ್ನಪಟ್ಟಣ–562160, ರಾಮನಗರ ಜಿಲ್ಲೆ ಸಾಲದ ಖಾತೆ ಸಂಖ್ಯೆಗಳು : 1) ಪಿಎಸ್‌ಒಡಿ ಖಾತೆ ಸಂಖ್ಯೆ 1437000600020101 2) ಪಿಎಸ್‌ಟಿಎಲ್ ಖಾತೆ ಸಂಖ್ಯೆ 1437001800083901 3) ಪಿಎಸ್‌ಟಿಎಲ್ ಖಾತೆ ಸಂಖ್ಯೆ 1437001800084401 4) ಬ್ಯಾಂಕ್ ಗ್ಯಾರಂಟಿ (ಪ್ರೊಟೆಕ್ಟೆಡ್ ಬಿಲ್ಸ್ ಖಾತೆ ಸಂಖ್ಯೆ 1437003900000301) 5) ಬ್ಯಾಂಕ್ ಗ್ಯಾರಂಟಿ (ಪ್ರೊಟೆಕ್ಟೆಡ್ ಬಿಲ್ಸ್ ಖಾತೆ ಸಂಖ್ಯೆ 0143702400017201)	ಒಟ್ಟು ಮೊತ್ತ ರೂ.3,70,25,397.58 [ರೂಪಾಯಿ ಮೂರು ಕೋಟಿ ಎಪ್ಪತ್ತು ಲಕ್ಷದ ಇಪ್ಪತ್ತೈದು ಸಾವಿರದ ಮುನ್ನೂರ ತೊಂಭತ್ತೇಳು ಮತ್ತು ಐವತ್ತೆಂಟು ಪೈಸೆ ಮಾತ್ರ] ದಿನಾಂಕ 10.03.2026 ರಂತೆ 1) [ರೂ.2,04,59,556.32 01.03.2026 ರಿಂದ ಮುಂದಿನ ಬಡ್ಡಿ + ಇತರೆ ಖರ್ಚು ವೆಚ್ಚಗಳು + 2) [ರೂ.40,50,524.48 26.02.2026 ರಿಂದ ಮುಂದಿನ ಬಡ್ಡಿ + ಇತರೆ ಖರ್ಚು ವೆಚ್ಚಗಳು + 3) [ರೂ.3,76,052.78 11.03.2026 ರಿಂದ ಮುಂದಿನ ಬಡ್ಡಿ + ಇತರೆ ಖರ್ಚು ವೆಚ್ಚಗಳು + 4) [ರೂ.26,84,996.00 01.03.2026 ರಿಂದ ಮುಂದಿನ ಬಡ್ಡಿ + ಇತರೆ ಖರ್ಚು ವೆಚ್ಚಗಳು + 5) [ರೂ.94,54,268.00 01.03.2026 ರಿಂದ ಮುಂದಿನ ಬಡ್ಡಿ + ಇತರೆ ಖರ್ಚು ವೆಚ್ಚಗಳು]	20.08.2024 ಭೌತಿಕ	ಐಟಂ ನಂ. 1 : ಶ್ರೀ. ಸೈಯದ್ ಜಹುರುದ್ದೀನ್‌ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತಿನ ಖಾತಾ ನಂ. 1964/1795/4, (ಹಳೆ ನಂ. 1584/2/4). ಪಿಐಡಿ ನಂ. 29–2–7–10ಜಿ, ನಿವೇಶನದ ವಿಸ್ತೀರ್ಣ 2400 ಚದರ ಅಡಿ, ಜೊತೆಗೆ ಅಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದ್ದು ಈ ಆಸ್ತಿಯು ನಂ.10ಜಿ, ವಾರ್ಡ್ ನಂ.29, ಬಿ ಎಂ ರಸ್ತೆ ಪೂರ್ವ, ಬ್ಲಾಕ್ ನಂ.2, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆಯಲ್ಲಿದೆ. ದಾಖಲೆಗಳ ಪ್ರಕಾರ ಭೂಮಿಯ ಚಕ್ಕುಬಂದಿ: ಪೂರ್ವಕ್ಕೆ: ಅಜೀಜುನ್ನೀಸಾರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ: ಮುಶಾಕ್ ಅಹ್ಮದ್ ಮತ್ತು ಮುಸ್ತಾರಿ ಬೇಗಂರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ಮುಮ್ತಾಜ್‌ರವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ರಸ್ತೆ.	ರೂ. 1,36,35,000/– (ರೂಪಾಯಿ ಒಂದು ಕೋಟಿ ಮೂವತ್ತಾರು ಲಕ್ಷದ ಮೂವತ್ತೈದು ಸಾವಿರ ಮಾತ್ರ)	ರೂ. 13,63,500/– (ರೂಪಾಯಿ ಹದಿಮೂರು ಲಕ್ಷದ ಅರವತ್ತಮೂರು ಸಾವಿರದ ಐದುನೂರು ಮಾತ್ರ)	ಬೆಳಗ್ಗೆ 11:30 ರಿಂದ 11:45 ರವರೆಗೆ	ರೂ. 50,000/–	ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಚನ್ನಪಟ್ಟಣ ಖಾತೆ ಸಂಖ್ಯೆ: 1433500200004101 IFSC Code : KARB0000143
				ಐಟಂ ನಂ. 2 : ಶ್ರೀ. ಸೈಯದ್ ಸೈಫುದ್ದೀನ್‌ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತಿನ ಖಾತಾ ನಂ. 1964/1795/5, (ಹಳೆ ನಂ. 1584/2/5). ಪಿಐಡಿ ನಂ. 29–2–7–10ಡಿ, ನಿವೇಶನದ ವಿಸ್ತೀರ್ಣ 1200 ಚದರ ಅಡಿ, ಜೊತೆಗೆ ಅಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದ್ದು ಈ ಆಸ್ತಿಯು ನಂ.10ಡಿ, ವಾರ್ಡ್ ನಂ.29, ಬಿ ಎಂ ರಸ್ತೆ ಪೂರ್ವ, ಬ್ಲಾಕ್ ನಂ.2, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆಯಲ್ಲಿದೆ. ದಾಖಲೆಗಳ ಪ್ರಕಾರ ಭೂಮಿಯ ಚಕ್ಕುಬಂದಿ: ಪೂರ್ವಕ್ಕೆ: ಅಜ್ಮತ್ ಉನ್ನೀಸಾರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಮುಸ್ತಾರಿ ಬಾನುರವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ರಸ್ತೆ.	ರೂ. 68,17,500/– (ರೂಪಾಯಿ ಅರವತ್ತೆಂಟು ಲಕ್ಷದ ಹದಿನೇಳು ಸಾವಿರದ ಐದುನೂರು ಮಾತ್ರ)	ರೂ. 6,81,750/– (ರೂಪಾಯಿ ಆರು ಲಕ್ಷದ ಎಂಭತ್ತೊಂದು ಸಾವಿರದ ಏಳುನೂರ ಐವತ್ತು ಮಾತ್ರ)	ಬೆಳಗ್ಗೆ 11:50 ರಿಂದ ಮಧ್ಯಾಹ್ನ 12:05 ರವರೆಗೆ	ರೂ. 50,000/–	ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಚನ್ನಪಟ್ಟಣ ಖಾತೆ ಸಂಖ್ಯೆ: 1433500200004101 IFSC Code : KARB0000143
				ಐಟಂ ನಂ. 3 : ಶ್ರೀ. ಸೈಯದ್ ನಜ್ಮುದ್ದೀನ್‌ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತಿನ ಖಾತಾ ನಂ. 1964/1795/1, (ಹಳೆ ನಂ. 1584/2/1). ಪಿಐಡಿ ನಂ. 29–2–7–10ಸಿ, ನಿವೇಶನದ ವಿಸ್ತೀರ್ಣ 1200 ಚದರ ಅಡಿ, ಜೊತೆಗೆ ಅಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದ್ದು ಈ ಆಸ್ತಿಯು ನಂ.10ಸಿ, ವಾರ್ಡ್ ನಂ.29, ಬಿ ಎಂ ರಸ್ತೆ ಪೂರ್ವ, ಬ್ಲಾಕ್ ನಂ.2, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆಯಲ್ಲಿದೆ. ದಾಖಲೆಗಳ ಪ್ರಕಾರ ಭೂಮಿಯ ಚಕ್ಕುಬಂದಿ: ಪೂರ್ವಕ್ಕೆ: ಶ್ರೀ. ಸೈಯದ್ ಜಫುದ್ದೀನ್‌ರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಮೊಹಮ್ಮದ್ ಮುಮ್ತಾಜ್‌ರವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ಸೈಯದ್ ಸೈಫುದ್ದೀನ್‌ರವರಿಗೆ ಸೇರಿದ ಆಸ್ತಿ.	ರೂ. 82,38,000/– (ರೂಪಾಯಿ ಎಂಭತ್ತೆರಡು ಲಕ್ಷದ ಮೂವತ್ತೆಂಟು ಸಾವಿರ ಮಾತ್ರ)	ರೂ. 8,23,800/– (ರೂಪಾಯಿಎಂಟು ಲಕ್ಷದ ಇಪ್ಪತ್ತಮೂರು ಸಾವಿರದ ಎಂಟುನೂರು ಮಾತ್ರ)	ಮಧ್ಯಾಹ್ನ 12:10 ರಿಂದ 12:25 ರವರೆಗೆ	ರೂ. 50,000/–	ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಚನ್ನಪಟ್ಟಣ ಖಾತೆ ಸಂಖ್ಯೆ: 1433500200004101 IFSC Code : KARB0000143
				ಐಟಂ ನಂ. 4 : ಶ್ರೀ. ಸೈಯದ್ ಸಮಿಯುದ್ದೀನ್‌ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತಿನ ಖಾತಾ ನಂ. 1964/1795/2, (ಹಳೆ ನಂ. 1584/2/2). ಪಿಐಡಿ ನಂ. 29–2–7–10ಐ, ನಿವೇಶನದ ವಿಸ್ತೀರ್ಣ 2400 ಚದರ ಅಡಿ, ಈ ಆಸ್ತಿಯು ನಂ.10ಐ, ವಾರ್ಡ್ ನಂ.29, ಬಿ ಎಂ ರಸ್ತೆ ಪೂರ್ವ, ಬ್ಲಾಕ್ ನಂ.2, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆಯಲ್ಲಿದೆ. ದಾಖಲೆಗಳ ಪ್ರಕಾರ ಭೂಮಿಯ ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ಮೊಹಮ್ಮದ್ ಸಲೀಂರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ: ಅಜ್ಮತ್ ಉನ್ನೀಸಾರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ಮೊಹಮ್ಮದ್ ಮುಮ್ತಾಜ್‌ರವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ರಸ್ತೆ.	ರೂ. 1,74,40,000/– (ರೂಪಾಯಿ ಒಂದು ಕೋಟಿ ಎಪ್ಪತ್ತನಾಲ್ಕು ಲಕ್ಷದ ನಲವತ್ತು ಸಾವಿರ ಮಾತ್ರ)	ರೂ. 17,44,000/– (ರೂಪಾಯಿ ಹದಿನೇಳು ಲಕ್ಷದ ನಲವತ್ತನಾಲ್ಕು ಸಾವಿರ ಮಾತ್ರ)	ಮಧ್ಯಾಹ್ನ 12:30 ರಿಂದ 12:45 ರವರೆಗೆ	ರೂ. 50,000/–	ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಚನ್ನಪಟ್ಟಣ ಖಾತೆ ಸಂಖ್ಯೆ: 1433500200004101 IFSC Code : KARB0000143

(ಸಾಲಗಾರರು/ಅಡಮಾನದಾರರ/ ಜಾಮೀನುದಾರರ /ಸಹ–ಬಾಧ್ಯತಾದಾರರ ಗಮನಕ್ಕೆ ನಿಬಂಧನೆಗಳ ಉಪ–ವಿಭಾಗ (8)ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ, ಭದ್ರತಾ ಸ್ವತ್ತುಗಳನ್ನು ಪಡೆದುಕೊಳ್ಳಲು ಆಹ್ವಾನಿಸಲಾಗಿದೆ.)

(ಈ ಪ್ರಕಟಣೆಯನ್ನು ನಿಯಮ 8 ಉಪನಿಯಮ (6) / **ನಿಯಮ 9 ಉಪ ನಿಯಮ (1) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ/ ಜಾಮೀನುದಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು**).

ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ಕರ್ನಾಟಕ ಬ್ಯಾಂಕಿನ ವೆಬ್‌ಸೈಟ್ https://karnatakabank.com ನಲ್ಲಿ ನೋಡಿ.

ಇ–ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ **ದಿನಾಂಕ: 30.03.2026 ರಂದು ಮೇಲೆ ತಿಳಿಸಲಾದ ಸಮಯದಲ್ಲಿ https://www.auctionbazaar.com** ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು **https://www.auctionbazaar.com** ನಲ್ಲಿ ನೊಂದಾಯಿಸಿಕೊಳ್ಳಬೇಕು ಮತ್ತು ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಉಚಿತವಾಗಿ **ಮೆ॥ ಅರ್ಕಾ ಇಮಾರ್ಟ್ ಪ್ರೈ.ಲಿ.,** (ಇದರ ವೆಬ್‌ಸೈಟ್: **www.auctionbazaar.com**) ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: **8885035382,** ಇ–ಮೇಲ್: **contact@auctionbazaar.com and disposal.karnataka@auctionbazaar.com** ರವರಿಂದ (**ತಾತ್ಕಾಲಿಕವಾಗಿ 27.03.2026 ರಂದು**) ಆನ್‌ಲೈನ್ ತರಬೇತಿಯನ್ನು ಪಡೆಯಬಹುದು.

ದಿನಾಂಕ: 10.03.2026
ಸ್ಥಳ: ತುಮಕೂರು

ಸಹಿ/– ಮುಖ್ಯ ವ್ಯವಸ್ಥಾಪಕರು ಮತ್ತು ಅಧಿಕೃತ ಅಧಿಕಾರಿ
ಕರ್ನಾಟಕ ಬ್ಯಾಂಕ್ ಲಿಮಿಟೆಡ್.,

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No: 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗ/ಲೋಇ:ಪಿಬಿ–1 3: ವಿವಿಧ:2025–26/5597 ದಿನಾಂಕ: 10.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1762.65 ಲಕ್ಷ** ಮೊತ್ತದಲ್ಲಿ ಒಟ್ಟು **24** ಕಾಮಗಾರಿಗೆ (ಕನಿಷ್ಠ ಮೊತ್ತ **ರೂ: 10.00 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ: 196.00 ಲಕ್ಷ**) ಕೆಪಿಪಿಪಿ (KPPP) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (KPPP) ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ ಡಬ್ಲ್ಯೂ–1, 2 3 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.kppp.karnataka.gov.in/** ನಲ್ಲಿ ನೋಡಿಕೊಳ್ಳಬಹುದು.

"Work Indent No:- Part 1- 32772, 32776 ,32785 ,32751, 33839/Call-2

ಮೇಲಿನ ಕಾಮಗಾರಿಯ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ: 13–03–2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 17–03–2026 ಮಧ್ಯಾಹ್ನ 4.00 ಗಂಟೆಯವರೆಗೆ** , ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 18–03–2026** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 20–03–2026**

Work Indent No: Part 2- 32754, 32755- Category-2A, 32757, 32758- Category-2A, 32761, 32771-ST, 32774, 32775, 32759, 32764-SC,

ಮೇಲಿನ ಕಾಮಗಾರಿಗಳ ಟೆಂಡರ್ ವಿವರ ಪ್ರಶ್ನೋತ್ತರ **ದಿನಾಂಕ: 16.03.2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 18.03.2026 ಮಧ್ಯಾಹ್ನ 4.00 ಗಂಟೆಯ ವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 20.03.2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 23.03.2026.**

Work Indent No: Part 3- 29111/Call-2, 22511/Call-2/SC, 33179/ Category-2A, 33340, 33746/Category-2A 33444, 33451, 33035, 33084

ಮೇಲಿನ ಕಾಮಗಾರಿಗಳ ಟೆಂಡರ್ ವಿವರ ಪ್ರಶ್ನೋತ್ತರ **ದಿನಾಂಕ: 02.04.2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 04.04.2026 ಮಧ್ಯಾಹ್ನ 4.00 ಗಂಟೆಯ ವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06.04.2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 07.04.2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರಿದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ವಾ.ಸಾ.ಇ/ಗದಗ/700/ ದೇಶಪಾಂಡೆಪಬ್ಲಿಸಿಟಿ/2025–26

ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ


ಇರಾನ್‌ಗೆ ನೌಕಾಬಲ, ಸಂಪರ್ಕ ವ್ಯವಸ್ಥೆ, ವಾಯುಪಡೆ ಸೌಲಭ್ಯ ಕೂಡ ಇಲ್ಲ ಎಂದ ಟ್ರಂಪ್

ಜಲಸಂಧಿಯನ್ನೇ ವಶಪಡಿಸಿಕೊಳ್ಳುವುದಾಗಿ ಎಚ್ಚರಿಕೆ!

ಟೆಹ್ರಾನ್: ಇರಾನ್ ಅತಿ ಬುದ್ಧಿವಂತಿಕೆ ಮೆರೆದು ಮಧ್ಯಪ್ರಾಚ್ಯದಲ್ಲಿನ ಅಮೆರಿಕದ ಹಾಗೂ ಇಸ್ರೇಲಿ ನೆಲೆಗಳ ಮೇಲೆ ಇನ್ನಷ್ಟು ದಾಳಿ ನಡೆಸಿದಲ್ಲಿ, ನಿರ್ಣಾಯಕ ಹೊರ್ಮುಜ್ ಜಲಸಂಧಿ ಮೇಲೆ ತಾನು ನಿಯಂತ್ರಣ ಸಾಧಿಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಗುಡುಗಿದ್ದಾರೆ.

ಇರಾನ್, ಖಮೇನಿಪುತ್ರ ಅಯತೊಲ್ಲಾಮೊಜ್ತಾಬಾ ಖಮೇನಿಯನ್ನು ಇರಾನ್‌ನ ಸರ್ವೋಚ್ಚ ನಾಯಕನಾಗಿ ಆರಿಸಿದ ಬೆನ್ನಲ್ಲೇ ತೈಲ ಬೆಲೆಗಳು 2022ರ ನಂತರ ಕಂಡರಿಯದ ರೀತಿಯಲ್ಲಿ ಗಗನಕ್ಕೇರಿದ್ದು, ಈ ಹಿನ್ನೆಲೆಯಲ್ಲಿ ಟ್ರಂಪ್ ಪ್ರಸ್ತುತ ಎಚ್ಚರಿಕೆ ನೀಡಿದ್ದಾರೆ.

ಸುಮಾರು ಶೇ. 20 ಜಾಗತಿಕ ತೈಲ ಸರಬರಾಜಾಗುವುದು ಹೊರ್ಮುಜ್ ಜಲಸಂಧಿಯಿಂದಾಗಿ. ಇರಾನ್ ನಿರ್ಬಂಧದಿಂದಾಗಿ ಈ ಜಲಸಂಧಿ ಮುಖೇನ ವಾಣಿಜ್ಯಿಕ ನೌಕೆಗಳ ಓಡಾಟ ವಸ್ತುಶ: ದುಸ್ತರವಾಗಿದೆ. ನನ್ನ ಪ್ರಕಾರ ಯುದ್ಧ ಪೂರ್ತಿಯಾಗಿದೆ ಎಂದು ಟ್ರಂಪ್ ಸಿಬಿಎಸ್ ನ್ಯೂಸ್‌ಗೆ ಫೋನ್ ಸಂದರ್ಶನದಲ್ಲಿ ತಿಳಿಸಿದ್ದಾರೆ. ಇರಾನ್‌ಗೆ ನೌಕಾಬಲ ಇಲ್ಲ, ಸಂಪರ್ಕ ವ್ಯವಸ್ಥೆ ಇಲ್ಲ.ವಾಯುಪಡೆ ಕೂಡ ಇಲ್ಲ. ಅವರ ಕ್ಷಿಪಣಿಗಳು ಧ್ವಂಸಗೊಂಡಿವೆ. ಅವರ ಡ್ರೋನ್ ತಯಾರಿ ಘಟಕಗಳ ಸಹಿತ ಅವರ ಡ್ರೋನ್‌ಗಳು ಎಲ್ಲಾ ಕಡೆ ಹೊತ್ತುರಿದಿವೆ ಎಂದು ಟ್ರಂಪ್ ಸಂದರ್ಶನದಲ್ಲಿ ಹೇಳಿದ್ದಾರೆ. ಮಿಲಿಟರಿ ದೃಷ್ಟಿಯಿಂದ ಇರಾನ್ ಬಳಿ ಏನೂ ಉಳಿದಿಲ್ಲ ಎಂದಿದ್ದಾರೆ. ಜಲಮಾರ್ಗವನ್ನು ನಿರ್ಬಂಧಿಸಿದಲ್ಲಿ ಹೊರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸುವುದಾಗಿಯೂ ಟ್ರಂಪ್ ಗುಡುಗಿದ್ದಾರೆ. ಇರಾನ್ ಏನೆಲ್ಲಾ ದಾಳಿ ಮಾಡ್ಬೇಕೋ ಎಲ್ಲವನ್ನು ಮಾಡಿದೆ. ಇನ್ನೂ ಜಾಣತನ ಪ್ರದರ್ಶಿಸಿದಲ್ಲಿ ಆ ರಾಷ್ಟ್ರದ ಅಂತ್ಯವಾದೀತು. ಅವರೇನಾದರು ಕೆಡುಕು ಮಾಡಿದಲ್ಲಿ ಅದು ಇರಾನ್ ಅಂತ್ಯಕ್ಕೆ ದಾರಿಯಾದೀತು. ಇರಾನ್ ಹೆಸರನ್ನು ಮತ್ತೆ ನೀವು ಕೇಳಲಿಕ್ಕಿಲ್ಲ ಎಂದಿರುವ ಟ್ರಂಪ್, ಇದೀಗ ಜಲಸಂಧಿ ತೆರೆದುಕೊಂಡಿದೆ ಮತ್ತು ಹಡಗುಗಳು ಜಲಸಂಧಿ ಪ್ರವೇಶಿಸಲು ಶುರುವಿಟ್ಟಿವೆ ಎಂದಿದ್ದಾರೆ. ಸಂಘರ್ಷದ ಮೊದಲ ವಾರದಲ್ಲೇ ನಾವು ಇರಾನಿನ 5000 ನೆಲೆಗಳ ಮೇಲೆ ದಾಳಿ ಮಾಡಿದ್ದೇವೆಂದು ಅಮೆರಿಕನ್ ಮಿಲಿಟರಿ ಪಡೆ ಹೇಳಿಕೊಂಡಿದೆ.



ಕದನವಿರಾಮ ಬಯಸಲ್ಲ: ಇರಾನ್ ಸ್ಪೀಕರ್!

ಅಮೆರಿಕ ಮತ್ತು ಇಸ್ರೇಲ್‌ನೊಂದಿಗಿನ ಯುದ್ಧದಲ್ಲಿ ಇರಾನ್ ಕದನವಿರಾಮ ಮಾಡಿಕೊಳ್ಳಲು ಬಯಸುವುದಿಲ್ಲ. ಆಕ್ರಮಣಕಾರಿಗಳನ್ನು ಶಿಕ್ಷೆಗೆ ಒಳಪಡಿಸುವುದೇ ನಮ್ಮ ಗುರಿ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಖಾರ್ ಖಾಲಿಬಫ್ ಹೇಳಿದ್ದಾರೆ. ಸೋಮವಾರ ತಡರಾತ್ರಿ ಸಂದರ್ಶನದಲ್ಲಿ ಮಾತನಾಡಿದ ಬಖಾರ್, ಶತ್ರುಗಳು ಯಾವುದೇ(ನೆರೆಯ) ರಾಷ್ಟ್ರಗಳಿಂದ ದಾಳಿ ನಡೆಸಿದರೂ, ನಾವು ಪ್ರಖರ ಪ್ರತಿದಾಳಿ ನಡೆಸುತ್ತೇವೆ ಎಂದು ಬಖಾರ್ ಎಚ್ಚರಿಸಿದ್ದಾರೆ. ಸ್ಪೀಕರ್ ಎಚ್ಚರಿಕೆಯ ನಂತರ ಇರಾನ್ ದಾಳಿ ಇನ್ನಷ್ಟು ಹೆಚ್ಚಿಸಿದೆ.

ಭಾರತದಿಂದ ಹೆಚ್ಚುವರಿ ಡೀಸೆಲ್‌ಗೆ ಬಾಂಗ್ಲಾ ಮನವಿ

ಹೊಸದಿಲ್ಲಿ: ಇಂಧನ ಸಂಗ್ರಹವನ್ನು ಸುಧಾರಿಸಲು ಮತ್ತು ಕೊರತೆಯನ್ನು ತಡೆಗಟ್ಟಲು, ಬಾಂಗ್ಲಾದೇಶವು ಮುಂದಿನ ನಾಲ್ಕು ತಿಂಗಳಲ್ಲಿ ಮಾರ್ಚ್-ಜೂನ್ ಅವಧಿಯಲ್ಲಿ ಭಾರತದಿಂದ ಹೆಚ್ಚುವರಿ 50,000 ಮೆಟ್ರಿಕ್ ಟನ್ ಡೀಸೆಲ್ ಅನ್ನು ನೀಡುವಂತೆ ಔಪಚಾರಿಕವಾಗಿ ವಿನಂತಿಸಿದೆ. ಈ ಕೊರತೆಯನ್ನು ಹಣಕಾಸು ಸಚಿವ ಅಮೀರ್ ಖುಸ್ರು ಮಹಮೂದ್ ಚೌಧರಿ ಅವರು ಭಾರತೀಯ ಹೈಕಮಿಷನರ್ ಪ್ರಣಯ್ ವರ್ಮಾ ಅವರಿಗೆ ತಿಳಿಸಿದರು. ಬಾಂಗ್ಲಾದೇಶವು ವಿದ್ಯುತ್ ಉತ್ಪಾದನೆ ಮತ್ತು ಇತರ ಅಗತ್ಯಗಳಿಗಾಗಿ ಆಮದು ಮಾಡಿಕೊಂಡ ಇಂಧನಗಳಾದ ತೈಲ, ಅನಿಲ, ಕಲ್ಲಿದ್ದಲನ್ನು ಹೆಚ್ಚು ಅವಲಂಬಿಸಿದೆ. ಇತ್ತೀಚಿನ ಜಾಗತಿಕ ಅಡೆತಡೆಗಳು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಸಂಬಂಧಿಸಿವೆ.

ಪಾಕ್‌ನಲ್ಲಿ ಸೋಮವಾರದಿಂದ ಶಾಲೆಗೆ ರಜೆ ನಾಲ್ಕೇ ದಿನ ಕೆಲಸ

ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದು, ಇದು ಜಗತ್ತನ್ನೆ ತಲ್ಲಣಗೊಳಿಸುತ್ತಿದೆ. ಇಂಧನ ಕೊರತೆ ಇಡೀ ಜಗತ್ತನ್ನೇ ತತ್ತರಿಸುತ್ತಿದೆ. ಜಾಗತಿಕ ತೈಲ ಪೂರೈಕೆಯು ಹೆಚ್ಚುತ್ತಿರುವ ಒತ್ತಡ ಎದುರಿಸುತ್ತಿದೆ. ಹಲವಾರು ಪ್ರದೇಶಗಳಲ್ಲಿ ಅಡೆತಡೆ ಎದುರಾಗುತ್ತಿದೆ. ಈ ತೈಲ ಬಿಸಿಯು ಪಾಕಿಸ್ತಾನವನ್ನೂ ತಲುಪಿದೆ. ಹೊಡೆತವನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ, ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಇರಾನ್ ಯುದ್ಧದಿಂದಾಗಿ ನಡೆಯುತ್ತಿರುವ ಪೂರೈಕೆ ಅಡೆತಡೆಗಳ ನಡುವೆ ಇಂಧನವನ್ನು ಉಳಿಸುವ ಗುರಿ ಹೊಂದಿರುವ ಸರ್ಕಾರಿ ವೆಚ್ಚ ಕಡಿತ, ಮನೆಯಿಂದ ಕೆಲಸ ಮಾಡುವ ಮಾರ್ಗಸೂಚಿಗಳಿಂದ ಹಿಡಿದು ಇತರ ಹೊಸ ಕ್ರಮಗಳನ್ನು ಕೈಗೊಂಡಿದ್ದಾರೆ. ದೇಶವನ್ನು ಉದ್ದೇಶಿಸಿ ಮಾತನಾಡಿದ ಷರೀಫ್, ಫೆಡರಲ್ ಮತ್ತು ಪ್ರಾಂತೀಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಈ ಕ್ರಮಗಳನ್ನು ಚರ್ಚಿಸಲಾಗಿದೆ ಎಂದು ಹೇಳಿದ್ದಾರೆ. ಕಠಿಣ ಪರಿಸ್ಥಿತಿ ಹಿನ್ನಲ್ಲೆ ಸರ್ಕಾರವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು ಎಂದು ಹೇಳಿದರು. ಇಂಧನ ಉಳಿತಾಯ ಪ್ರಮುಖ ಕ್ರಮಗಳ ಪೈಕಿ, ಸರ್ಕಾರವು ಮುಂದಿನ ಎರಡು ತಿಂಗಳುಗಳ ಕಾಲ ಅಧಿಕೃತ ವಾಹನಗಳ ಇಂಧನ ಭತ್ಯೆಯನ್ನು ಶೇ.50ರಷ್ಟು ಕಡಿತಗೊಳಿಸಲಿದೆ.

ಯುದ್ಧ ಇನ್ನೂ ಮುಗಿದಿಲ್ಲ: ನೆತನ್ಯಾಹು

ಇಸ್ರೇಲ್ ಸೇನೆ ಇರಾನ್ ಬೆನ್ನೆಲುಬು ಮುರಿದಿದೆ. ಆದರೆ ಯುದ್ಧ ಇನ್ನೂ ಮುಗಿದಿಲ್ಲ. ಇರಾನ್‌ನಲ್ಲಿ ಇಸ್ಲಾಮಿಕ್ ಆಡಳಿತವನ್ನು ಅಂತ್ಯಗೊಳಿಸದವರೆಗೂ ನಾವು ಯುದ್ಧವನ್ನು ನಿಲ್ಲಿಸುವುದಿಲ್ಲ. ದಬ್ಬಾಳಿಕೆಯಿಂದ ಇರಾನ್ ಜನರಿಗೆ ಸ್ವಾತಂತ್ರ್ಯ ನೀಡುವುದು ನಮ್ಮ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಇಲ್ಲಿಯವರೆಗಿನ ಯುದ್ಧದಲ್ಲಿ ನಾವು ಇರಾನ್ ಬೆನ್ನೆಲುಬು ಮುರಿದಿದ್ದೇವೆ. ಇದು ಇನ್ನೂ ಮುಗಿದಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಕೆ ನೀಡಿದ್ದಾರೆ. ಇತ್ತೀಚೆಗೆ ಕ್ಷಿಪಣಿ ದಾಳಿಗೆ ನೆತನ್ಯಾಹು ಗಾಯಗೊಂಡಿದ್ದಾರೆ. ಇದರಿಂದ ನೆತನ್ಯಾಹು ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿಲ್ಲ ಎಂಬ ವದಂತಿಯನ್ನು ಇರಾನ್ ಹಬ್ಬಿಸಿತ್ತು. ಮಂಗಳವಾರ ನೆತನ್ಯಾಹು ರಾಷ್ಟ್ರೀಯ ಆರೋಗ್ಯ ಕೇಂದ್ರಕ್ಕೆ ಸಾರ್ವಜನಿಕ ಭೇಟಿ ನೀಡಿದ್ದಾರೆ.

ಇನ್ನು 1 ಟನ್ ಬಾಂಬ್ ಅಷ್ಟೇ ಬಳಸುತ್ತೆ ಇರಾನ್!

ಮಧ್ಯ ಪ್ರಾಚ್ಯ ಯುದ್ಧದಲ್ಲಿ ಇಸ್ರೇಲ್ ಮತ್ತು ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ತೀವ್ರತೆ ಹೆಚ್ಚಿಸಲು ಇರಾನ್ ಹೊಸ ಕಾರ್ಯತಂತ್ರವನ್ನು ರೂಪಿಸಿದೆ. ಯುದ್ಧದಲ್ಲಿನ್ನು 1,000 ಕೆ.ಜಿ. (1 ಟನ್) ಅಥವಾ ಅದಕ್ಕಿಂತ ಹೆಚ್ಚು ಭಾರದ ವಾರ್‌ಹೆಡ್ ಹೊರಬಲ್ಲ ಕ್ಷಿಪಣಿಗಳನ್ನು ಮಾತ್ರ ಉಡಾಯಿಸುವುದಾಗಿ ಇರಾನ್ ಸೇನಾ ಕಮಾಂಡರ್ ನಿಲುವು ತೆಗೆದುಕೊಂಡಿದ್ದಾರೆ. ಇದರಿಂದ ಯುದ್ಧ ಇನ್ನಷ್ಟು ಉಲ್ಬಣಿಸುವುದು ಖಚಿತ. ಶತ್ರುಗಳಿಗೆ ಹೆಚ್ಚಿನ ಹಾನಿಯಾಗಬೇಕು ಎಂಬ ಉದ್ದೇಶದಿಂದ ಇರಾನ್ 1,000 ಕೆ.ಜಿ. ಅಥವಾ ಅದಕ್ಕಿಂತ ಹೆಚ್ಚಿನ ಭಾರದ ಸ್ಫೋಟಕಗಳನ್ನು ಬಳಸಲು ಆರಂಭಿಸಿದೆ.



ಭಾರದ ಸ್ಫೋಟಕಗಳನ್ನು ಕ್ಷಿಪಣಿಗಳಲ್ಲಿ ಬಳಸಿದಾಗ ಕ್ಷಿಪಣಿಯೊಂದರ ದಾಳಿ ವ್ಯಾಪ್ತಿ ಮತ್ತು ಹಾನಿ ಮಾಡಬಲ್ಲ ಶಕ್ತಿ ದ್ವಿಗುಣಗೊಳ್ಳುತ್ತದೆ. ಈವರೆಗೆ ಇರಾನ್ 300ರಿಂದ 500 ಕೆಜಿ. ಭಾರದ ಸ್ಫೋಟಕಗಳನ್ನು ಇರಾನ್ ಕ್ಷಿಪಣಿಗಳು ಹೊತ್ತೊಯ್ಯುತ್ತಿದ್ದವು. ಆದರೆ ಇನ್ನು ಕನಿಷ್ಠಪಕ್ಷ 1000 ಕೆಜಿ ಭಾರದ ಸ್ಫೋಟಕಗಳನ್ನು ಬಳಸಲು ಇರಾನ್ ನಿರ್ಧರಿಸಿದೆ.


ಇರಾನ್ ಕ್ಷಿಪಣಿ ಬತ್ತಳಿಕೆ ಹೀಗಿದೆ: ಮಧ್ಯ ಪ್ರಾಚ್ಯದಲ್ಲಿ ಇರಾನ್ ಅತಿ ದೊಡ್ಡ ಮತ್ತು ವಿವಿಧ ರೀತಿಯ ಕ್ಷಿಪಣಿಗಳನ್ನು ಹೊಂದಿದೆ. ಅಣ್ವಸ್ತ್ರ ಸಾಮರ್ಥ್ಯದ 3,000 ಕಿ.ಮೀ. ವ್ಯಾಪ್ತಿಯ ಸೌಮಾರ್, 2,000 ಕಿ.ಮೀ. ವ್ಯಾಪ್ತಿಯ ಸೆಜ್ಜಿಲ್ ಎಂಬ ಖಂಡಾಂತರ ಕ್ಷಿಪಣಿಯನ್ನು ಇರಾನ್ ಬಳಿಯಿದೆ. ಉತ್ತರ ಕೊರಿಯಾದ ಹ್ವಾಸೊಂಗ್-10 ಕ್ಷಿಪಣಿಗೆ ಹೋಲುವ 2,000ದಿಂದ 3,000 ವ್ಯಾಪ್ತಿಯ ಖೋರಮ್‌ಶಹರ್ ಕ್ಷಿಪಣಿ ಇರಾನ್ ಬತ್ತಳಿಕೆಯಲ್ಲಿದ್ದು, ಇದರ ಪೇಲೋಡ್ ಸಾಮರ್ಥ್ಯ 1,800 ಕೆ.ಜಿ. ಆಗಿದೆ.

ಐಇಎ ಯೋಜನೆಗೆ ಭಾರತ ಸೇರಲ್ಲ

ತೈಲ ಬೆಲೆಗಳನ್ನು ತಗ್ಗಿಸುವ ಪ್ರಯತ್ನದ ಭಾಗವಾಗಿ ಕಾರ್ಯತಂತ್ರದ ತೈಲ ನಿಕ್ಷೇಪಗಳನ್ನು ಬಿಡುಗಡೆ ಮಾಡುವ ಅಂತಾರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ)ಯೋಜನೆಗೆ ಭಾರತ ಸೇರುವುದಿಲ್ಲ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ. ವಿಶ್ವದ ಮೂರನೇ ಅತಿದೊಡ್ಡ ತೈಲ ಆಮದು ಮತ್ತು ಬಳಕೆದಾರ ರಾಷ್ಟ್ರವಾದ ಭಾರತವು 53.3 ಲಕ್ಷ ಟನ್ ಭೂಗತ ವ್ಯೂಹಾತ್ಮಕ ನಿಕ್ಷೇಪಗಳನ್ನು ಹೊಂದಿದೆ. ಆದರೆ, ಸದ್ಯ ಶೇ.80ರಷ್ಟು ಮಾತ್ರ ಭರ್ತಿಯಾಗಿವೆ. ಹೆಚ್ಚುತ್ತಿರುವ ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 120 ಡಾಲರ್‌ಗೆ ಹತ್ತಿರವಾಗುತ್ತಿರುವ ಹಿನ್ನಲ್ಲೇ ಜಿ7 ರಾಷ್ಟ್ರಗಳು ತೈಲ ನಿಕ್ಷೇಪಗಳನ್ನು ಬಿಡುಗಡೆ ಮಾಡುವ ಸಾಧ್ಯತೆಯ ಬಗ್ಗೆ ಚರ್ಚಿಸಲಿವೆ. ಬಿಕ್ಕಟ್ಟು ನಮ್ಮ ಸೃಷ್ಟಿಯಲ್ಲ. ಇದಕ್ಕೆ ಕಾರಣರಾದವರು ಅದನ್ನು ನಿಭಾಯಿಸಬೇಕು ಮತ್ತು ಸರಾಗಗೊಳಿಸುವ ಪರಿಸ್ಥಿತಿಗಳನ್ನು ಸೃಷ್ಟಿಸಬೇಕು ಎಂದು ಭಾರತೀಯ ಮೀಸಲುಗಳನ್ನು ಬಿಡುಗಡೆ ಮಾಡುವುದನ್ನು ತಳ್ಳಿಹಾಕಿದ ಮೂಲಗಳು ಹೇಳಿವೆ.

ರಫ್ತುದಾರರಿಗೆ ಸಹಾಯ ಮಾಡಲು ಕೇಂದ್ರ ಸಿದ್ಧತೆ

ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಬಿಕ್ಕಟ್ಟನ್ನು ಎದುರಿಸಲು ಸಹಾಯ ಮಾಡಲು ವಿಮಾ ಕ್ಷೇತ್ರದಲ್ಲಿ ರಫ್ತುದಾರರಿಗೆ ಸಹಾಯ ಮಾಡಲು ಸರ್ಕಾರ ಚಿಂತಿಸುತ್ತಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮಂಗಳವಾರ ಹೇಳಿದ್ದಾರೆ. ಅಂತರ-ಸಚಿವಾಲಯದ ಗುಂಪು ಪ್ರತಿದಿನ ಬೆಳವಣಿಗೆಗಳ ಮೇಲೆ ನಿಗಾ ಇಡುತ್ತಿದೆ. ರಫ್ತುದಾರರೊಂದಿಗೆ ಸಂವಹನ ನಡೆಸುತ್ತಿದೆ ಎಂದು ಹೇಳಿದರು. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಹಾರ್ಮುಜ್ ಜಲಸಂಧಿಯ ಮುಚ್ಚುವಿಕೆ ಮತ್ತು ಕಡಲ ಮಾರ್ಗಗಳಲ್ಲಿನ ಅಡೆತಡೆಗಳಿಂದಾಗಿ ಭಾರತೀಯ ಬಂದರುಗಳಿಗೆ ಹಿಂದಿರುಗುವ ರಫ್ತು ಸರಕುಗಳನ್ನು ಎದುರಿಸಲು ಕಸ್ಟಮ್ಸ್ ಇಲಾಖೆಯು ಮಾನದಂಡಗಳನ್ನು ಹೊರತಂದಿದೆ.



ಕಪ್ಪು ಮಳೆಗೆ ತತ್ತರಿಸಿದ ಇರಾನ್ ಜನ

ಟೆಹ್ರಾನ್ ನಗರಕ್ಕೆ ಕಪ್ಪು ಮಳೆ ಸುರಿದಂತೆ ವಿಚಿತ್ರ ವಿದ್ಯಮಾನವನ್ನು ಅನುಭವಿಸಿದೆ. ಇರಾನ್‌ನ ರಾಜಧಾನಿ ನಗರದ ನಿವಾಸಿಗಳು ಈ ಮಳೆಯಿಂದ ಉಳಿದ ತೈಲ ಅವಶೇಷವು ಕಟ್ಟಡಗಳು, ಕಾರುಗಳು ಮತ್ತು ರಸ್ತೆಗಳನ್ನು ಆವರಿಸಿದೆ. ಸುಟ್ಟ ಪೆಟ್ರೋಲ್‌ನಂತಹ ಗಾಳಿಯ ವಾಸನೆಯ ಬರುತ್ತಿದೆ ಎಂದು ನಿವಾಸಿಗಳು ಆತಂಕಪಡುತ್ತಿದ್ದಾರೆ. ಅನೇಕರು ಉಸಿರಾಟದ ತೊಂದರೆ ಮತ್ತು ಮೈಗ್ರೇನ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ಹಿನ್ನಲ್ಲೇ ಪ್ರತಿಯೊಬ್ಬರೂ ತಮ್ಮ ಮನೆಗಳಿಂದ ಹೊರಹೋಗುವಾಗ ಮಾಸ್ಕ್ ಧರಿಸುವಂತೆ ಟೆಹ್ರಾನ್‌ನ ರಾಜ್ಯಪಾಲರು ಹೇಳಿಕೆ ನೀಡಿದ್ದಾರೆ. ಹಲವಾರು ಗಂಟೆಗಳ ಕಾಲ ನಗರವನ್ನು ಸುಟ್ಟುಹಾಕಿದ ನಗರದ ಹಲವಾರು ಇಂಧನ ಸಂಗ್ರಹಣೆ ಮತ್ತು ತೈಲ ಸೌಲಭ್ಯಗಳ ಮೇಲೆ ಇಸ್ರೇಲ್ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಈ ಘಟನೆ ಸಂಭವಿಸಿದೆ.

ಕಿರುಸುದ್ದಿ

ಒಳನುಸುಳುವಿಕೆ ಯತ್ನ ವಿಫಲ: ಉಗ್ರನ ವಧೆ

ಶ್ರೀನಗರ: ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಸೇನಾ ಪಡೆಗಳು ಮಂಗಳವಾರ ಒಳನುಸುಳುವಿಕೆ ಯತ್ನ ವಿಫಲಗೊಳಿಸಿದ್ದು, ಎನ್‌ಕೌಂಟರ್‌ನಲ್ಲಿ ಓರ್ವ ಭಯೋತ್ಪಾದಕನನ್ನು ಹೊಡೆದುರುಳಿಸಿದ್ದಾರೆ. ಗುಪ್ತಚರ ಮಾಹಿತಿ ಆಧಾರದ ಮೇಲೆ, ಭದ್ರತಾ ಪಡೆಗಳು ಎಲ್‌ಒಸಿ ನೌಶೆರಾ ಸೆಕ್ಟರ್‌ಲ್ಲಿರುವ ಝೂಂಗರ್‌ನ ಸಾಮಾನ್ಯ ಪ್ರದೇಶದಲ್ಲಿ ಮಧ್ಯಾಹ್ನ 3 ಗಂಟೆಗೆ ಇಬ್ಬರು ಭಯೋತ್ಪಾದಕರ ಚಲನವಲನವನ್ನು ಪತ್ತೆಹಚ್ಚಿವೆ ಎಂದು ವೈಟ್ ನೈಟ್ ಕಾರ್ಪ್ಸ್ ಎಕ್ಸ್‌ನಲ್ಲಿ ತಿಳಿಸಿದೆ. ಆನಂತರ ನಡೆದ ಗುಂಡಿನ ಚಕಮಕಿಯಲ್ಲಿ, ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದಕನೊಬ್ಬನನ್ನು ವಧೆ ಮಾಡಲಾಗಿದೆ ಎಂದು ಹೇಳಿದೆ.

ಗೋಡೆ ಕುಸಿದು ಏಳು ಕಾರ್ಮಿಕರು ಸಾವು

ಗುರುಗ್ರಾಮ: ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಗೋಡೆ ಕುಸಿದು ಏಳು ಕಾರ್ಮಿಕರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಗುರುಗ್ರಾಮ್‌ನ ಸಿದ್ರಾವಳಿ ಪ್ರದೇಶದ ಸಿಗ್ನೇಚರ್ ಗ್ಲೋಬಲ್ ಸೊಸೈಟಿಯಲ್ಲಿ ಸೋಮವಾರ ಸಂಜೆ ಈ ಘಟನೆ ನಡೆದಿದೆ. ಪೊಲೀಸರ ಪ್ರಕಾರ, ದೊಡ್ಡ ಶಬ್ದದಿಂದ ಗೋಡೆ ಕುಸಿದು ಸುಮಾರು 12ರಿಂದ 15 ಕಾರ್ಮಿಕರು ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದರು. ಸ್ಥಳೀಯ ಪೊಲೀಸರು, ಆಡಳಿತ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಅಧಿಕಾರಿಗಳು ಭಾರೀ ಯಂತ್ರೋಪಕರಣಗಳನ್ನು ಬಳಸಿ ಅವಶೇಷಗಳನ್ನು ತೆಗೆದುಹಾಕಿದ್ದಾರೆ.

ಹೊಸೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತೊಂದು ವಿಘ್ನ

ಚೆನ್ನೈ: ಹೊಸೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತೊಂದು ತಡೆ ಎದುರಾಗಿದ್ದು, ಸರ್ಕಾರದ ನಿರ್ಧಾರದ ವಿರುದ್ಧ ರೈತರು ಭಾರೀ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದಾರೆ. ಹೊಸೂರಿನಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣವನ್ನು ನಿರ್ಮಿಸುವುದು ಸೇರಿದಂತೆ ಮೂಲಸೌಕರ್ಯ ಯೋಜನೆಗಳಿಗಾಗಿ ಸಾವಿರಾರು ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮವನ್ನು ವಿರೋಧಿಸಿ ರೈತರು ಮೆರವಣಿಗೆ ನಡೆಸಿದ್ದಾರೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ವಿಮಾನ ನಿಲ್ದಾಣವು ಕಾರ್ಯಗತಗೊಳಿಸಿದ ರಾಷ್ಟ್ರೀಯ ಪ್ರಾಮುಖ್ಯತೆಯ ರಕ್ಷಣಾ ಯೋಜನೆಗಳಿಗೆ ಆದ್ಯತೆ ನೀಡುವ ಸಲುವಾಗಿ ತಮಿಳುನಾಡು ಮಂಡಿಸಿದ ಹೊಸೂರು ವಿಮಾನ ನಿಲ್ದಾಣ ಯೋಜನೆಯ ಪ್ರಸ್ತಾಪವನ್ನು ಶಿಫಾರಸು ಮಾಡಿರಲಿಲ್ಲ. ಈ ಬೆನ್ನಲ್ಲೇ ರೈತರು ಕೂಡ ಈ ನಿಲ್ದಾಣ ನಿರ್ಮಿಸುವುದನ್ನು ವಿರೋಧಿಸಿದ್ದಾರೆ.

ಅರ್ಹ ಮತದಾರರನ್ನು ಪಟ್ಟಿಯಿಂದ ಹೊರಗಿಡಲ್ಲ

ಕೋಲ್ಕತ್ತಾ: ಯಾರೇ ಅರ್ಹ ಮತದಾರರ ಹೆಸರನ್ನು ಮತದಾರರ ಯಾದಿಯಿಂದ ಕಿತ್ತುಹಾಕುವುದಿಲ್ಲ. ರಾಜ್ಯದಲ್ಲಿ ಮುಕ್ತ, ನ್ಯಾಯೋಚಿತ ಹಾಗೂ ಶಾಂತಿಯುತ ಚುನಾವಣೆ ನಡೆಯಬೇಕೆಂಬುದು ಚುನಾವಣಾ ಆಯೋಗದ ಆಶಯ ಮತ್ತು ಇದಕ್ಕೇ ಪ್ರಾಧಾನ್ಯತೆ ನೀಡುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮಂಗಳವಾರ ಹೇಳಿದ್ದಾರೆ.

ಚುನಾವಣಾ ಹೊಸ್ತಿನಲ್ಲಿರುವ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಸಿದ್ಧತೆ ಕುರಿತು ವಿವಿಧ ರಾಜಕೀಯ ಪಕ್ಷಗಳು, ಹಿರಿಯ ಆಡಳಿತಾತ್ಮಕ ಅಧಿಕಾರಿಗಳ ಜತೆ, ಆಯೋಗದ ಎಲ್ಲಾ ಅಧಿಕಾರಿಗಳ ಸಹಿತ ಸರಣಿ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಆಯೋಗದ ಆಶಯವನ್ನು ಸ್ಪಷ್ಟಪಡಿಸಿದರು. ಚುನಾವಣಾ ಆಯೋಗದ ಅಧಿಕಾರಿಗಳ ತಂಡ ದಿಲ್ಲಿಗೆ ಮರಳಿದ ಬಳಿಕ ರಾಜ್ಯದ ಚುನಾವಣಾ ದಿನಾಂಕ ಮತ್ತು ಎಷ್ಟು ಹಂತಗಳಲ್ಲಿ ಚುನಾವಣೆ ನಡೆಸಬೇಕೆಂಬುದನ್ನು ನಿರ್ಧರಿಸುವುದು ಎಂದು ಹೇಳಿದರು.

ರಾಜ್ಯದಲ್ಲಿ ನಿರ್ಭೀತಿಯಿಂದ ಮತ್ತು ಕಟ್ಟುನಿಟ್ಟಾಗಿ ಕಾನೂನು ಸುವ್ಯವಸ್ಥೆ ಅನುಷ್ಠಾನಿಸಲು ಆಯೋಗವು ಅಧಿಕಾರಿಗಳಿಗೆ ನಿರ್ದೇಶವಿತ್ತಿದೆ. ರಾಜ್ಯದ ಕಾನೂನು ಸ್ಥಿತಿಗತಿಗಳನ್ನು ನಾವು ಪರಾಮರ್ಶಿಸಿದ್ದೇವೆ. ಚುನಾವಣೆ ಹಿಂಸಾಚಾರಮುಕ್ತವಾಗಿ ಮತ್ತು ಯಾವುದೇ ಪ್ರಚೋದನೆ ರಹಿತ ನಡೆಯುವುದೆಂದು ಪ.ಬಂಗಾಳ ಸರಕಾರದ ಮುಖ್ಯ ಕಾರ್ಯದರ್ಶಿಗಳು, ಡಿಜಿಪಿ, ಸಿಪಿಗಳು, ಎಸ್‌ಪಿಗಳು ಆಯೋಗಕ್ಕೆ ಆಶ್ವಾಸನೆ ನೀಡಿರುವುದಾಗಿ ಹೇಳಿದರು. ಚುನಾವಣಾ ಪ್ರಕ್ರಿಯೆಗಳ ಸಂದರ್ಭ ರಾಜ್ಯದ ಅಧಿಕಾರಿಗಳು ನಿರ್ದಿಷ್ಟ ಪರಿಮಿತಿಯೊಳಗೆ ಕಾರ್ಯ ನಿರ್ವಹಿಸಬೇಕೆಂದು ಆಯೋಗಕ್ಕೆ ನಿರೀಕ್ಷೆಯಿರುತ್ತದೆ.

ಸ್ವದೇಶಿ ಏರ್ ಡ್ರಾಪೆಬಲ್ ಕಂಟೇನರ್ ಪರೀಕ್ಷೆ ಯಶ

ಹೊಸದಿಲ್ಲಿ: ಡಿಆರ್‌ಡಿಒ ಮತ್ತು ಭಾರತೀಯ ನೌಕಾಪಡೆಯು ಸ್ಥಳೀಯವಾಗಿ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದ ಏರ್ ಡ್ರಾಪೆಬಲ್ ಕಂಟೇನರ್ ವ್ಯವಸ್ಥೆಯ ನಾಲ್ಕು ಯಶಸ್ವಿ ಇನ್-ಫ್ಲೈಟ್ ಬಿಡುಗಡೆ ಪ್ರಯೋಗಗಳನ್ನು ನಡೆಸಿದೆ. ಇದು ನೌಕಾ ಹಡಗಿಗೆ 150 ಕೆಜಿ ತೂಕದ ಪೇಲೋಡ್ ಅನ್ನು ತಲುಪಿಸಬಲ್ಲದು. ಎಲ್ಲಾ ಅಭಿವೃದ್ಧಿ ವಿಮಾನ ಪ್ರಯೋಗಗಳು ಯಶಸ್ವಿಯಾಗಿ ಪೂರ್ಣಗೊಂಡಿರುವುದರಿಂದ, ಈ ವ್ಯವಸ್ಥೆಯನ್ನು ಶೀಘ್ರದಲ್ಲೇ ನೌಕಾಪಡೆಗೆ ಸೇರಿಸುವ ನಿರೀಕ್ಷೆಯಿದೆ ಎಂದು ರಕ್ಷಣಾ ಸಚಿವಾಲಯ ಮಂಗಳವಾರ ತಿಳಿಸಿದೆ. ನೌಕಾಪಡೆಯ ಅಗತ್ಯವನ್ನು ಪೂರೈಸಲು, ಪಿ8ಐ ವಿಮಾನಕ್ಕಾಗಿ ಎಡಿಸಿ-150 ವ್ಯವಸ್ಥೆಯನ್ನು ಅಲ್ಪಾವಧಿಯಲ್ಲಿಯೇ ಅಭಿವೃದ್ಧಿಪಡಿಸಲಾಯಿತು ಮತ್ತು ಅರ್ಹತೆ ಪಡೆಯಲಾಯಿತು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ನೌಕಾಪಡೆ ಜಂಟಿಯಾಗಿ ಫೆಬ್ರವರಿ 21 ರಿಂದ ಮಾರ್ಚ್ 1ರನಡುವೆ ಗೋವಾ ಕರಾವಳಿಯಲ್ಲಿ ಪಿ8ಐ ವಿಮಾನದಿಂದ ಸ್ಥಳೀಯ ಏರ್ ಡ್ರಾಪೆಬಲ್ ಕಂಟೇನರ್ ಎಡಿಸಿ-150ನ ನಾಲ್ಕು ಯಶಸ್ವಿ ಇನ್-ಫ್ಲೈಟ್ ಬಿಡುಗಡೆ ಪ್ರಯೋಗಗಳನ್ನು ನಡೆಸಿದವು ಎಂದು ಸಚಿವಾಲಯ ತಿಳಿಸಿದೆ. 150 ಕೆಜಿ ಪೇಲೋಡ್ ಅನ್ನು ತಲುಪಿಸಲು ಸ್ಥಳೀಯವಾಗಿ ವಿನ್ಯಾಸಗೊಳಿಸಲಾಗಿರುವ ಮತ್ತು ಅಭಿವೃದ್ಧಿಪಡಿಸಲಾಗಿರುವ 'ಏರ್ ಡ್ರಾಪೆಬಲ್ ಕಂಟೇನರ್' ಕರಾವಳಿಯಿಂದ ದೂರದಲ್ಲಿ ನಿಯೋಜಿಸಲಾಗಿರುವ ಸಮುದ್ರದಲ್ಲಿ ಸಂಕಷ್ಟದಲ್ಲಿರುವ ನೌಕಾ ಹಡಗುಗಳಿಗೆ ತ್ವರಿತ ಪ್ರತಿಕ್ರಿಯೆ ನೀಡಲು, ನಿರ್ಣಾಯಕ ಮಳಿಗೆಗಳು ಅಥವಾ ಉಪಕರಣಗಳು, ವೈದ್ಯಕೀಯ ನೆರವು ಇತ್ಯಾದಿಗಳಿಗೆ ನೌಕಾ ಕಾರ್ಯಾಚರಣೆಯ ಲಾಜಿಸ್ಟಿಕ್ಸ್ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ ಎಂದು ಹೇಳಿದೆ.

ಭಾರತ-ನೇಪಾಳ ಸಂಬಂಧ ಗಾಢವಾಗುವುದು ಖಚಿತ

ಕಠ್ಮಂಡು: ಐತಿಹಾಸಿಕ ನೇಪಾಳ-ಭಾರತ ಸಂಬಂಧಗಳನ್ನು ಮತ್ತಷ್ಟು ಗಾಢವಾಗಿಸುವ ವಿಶ್ವಾಸವನ್ನು ರಾಷ್ಟ್ರೀಯ ಸ್ವತಂತ್ರ ಪಕ್ಷದ (ಆರ್‌ಎಸ್‌ಪಿ) ಪ್ರಧಾನಿ ಅಭ್ಯರ್ಥಿ ಬಲೇಂದ್ರ ಷಾ ಅವರು ಮಂಗಳವಾರ ವ್ಯಕ್ತಪಡಿಸಿದ್ದಾರೆ. ಇವರು ನೇಪಾಳದ ಮೊದಲ ಮಧೇಶಿ ಪ್ರಧಾನಿಯಾಗಲು ಸಿದ್ಧರಾಗಿದ್ದಾರೆ. ಪಕ್ಷದ



ಚುನಾವಣಾ ಯಶಸ್ಸಿಗೆ ಶುಭ ಹಾರೈಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಶುಭಾಶಯಗಳಿಗೆ ಧನ್ಯವಾದಗಳು ಎಂದು ಅವರು ಪೋಸ್ಟ್‌ನಲ್ಲಿ ಬರೆದಿದ್ದಾರೆ. ಮುಂಬರುವ ದಿನಗಳಲ್ಲಿ ನೇಪಾಳ ಮತ್ತು ಭಾರತದ ನಡುವೆ ಇರುವ ಐತಿಹಾಸಿಕ, ನಿಕಟ ಮತ್ತು ಬಹು ಆಯಾಮದ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು, ಗಾಢವಾಗಿಸಲು ಮತ್ತು ಹೆಚ್ಚು ಫಲಿತಾಂಶ ಆಧಾರಿತವಾಗಿಸಲು ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ನಾನು ನನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ ಎಂದು ಹೇಳಿದರು. ಸತತವಾಗಿ ಎರಡು ಬಾರಿ ವಿಶ್ವಕಪ್ ಪ್ರಶಸ್ತಿಯನ್ನು ಯಶಸ್ವಿಯಾಗಿ ಗೆದ್ದ ಭಾರತ ಸರ್ಕಾರ ಮತ್ತು ಭಾರತೀಯ ಜನರಿಗೆ ಷಾ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅಭಿನಂದನೆಗಳನ್ನು ತಿಳಿಸಿದ್ದಾರೆ. ಮೋದಿ ಅವರು ಸೋಮವಾರ ಆರ್‌ಎಸ್‌ಪಿ ಮುಖ್ಯಸ್ಥ ರಬಿ ಲಮಿಚಾನೆ ಮತ್ತು ಪಕ್ಷದ ಹಿರಿಯ ನಾಯಕ ಷಾ ಅವರನ್ನು ಅವರ ಚುನಾವಣಾ ವಿಜಯಕ್ಕಾಗಿ ಅಭಿನಂದಿಸಿದ್ದರು. ಉಭಯ ದೇಶಗಳ ಪರಸ್ಪರ ಸಮೃದ್ಧಿ, ಪ್ರಗತಿ ಮತ್ತು ಯೋಗಕ್ಷೇಮಕ್ಕಾಗಿ ಅವರೊಂದಿಗೆ ಕೆಲಸ ಮಾಡುವ ಭಾರತದ ಬದ್ಧತೆಯನ್ನು ತಿಳಿಸಿದ್ದರು.

ಮಹಿಳಾ ಮೀಸಲಾತಿ ಶೀಘ್ರ ಕಾಯ್ದೆ ಜಾರಿ?

ಹೊಸದಿಲ್ಲಿ: ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಜನಗಣತಿಯ ನಂತರದ ಡಿಲಿಮಿಟೇಶನ್ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೆ ತರುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ. ಕೇಂದ್ರ ಸಚಿವ ಸಂಪುಟಕ್ಕೆ ಔಪಚಾರಿಕ ಪ್ರಸ್ತಾಪವನ್ನು ಸಿದ್ಧಪಡಿಸಲು ಇನ್ನೂ ಯಾವುದೇ ಸೂಚನೆಗಳನ್ನು ನೀಡಲಾಗಿಲ್ಲವಾದರೂ, 2023ರಲ್ಲಿ ಸಂಸತ್ತು ಅಂಗೀಕರಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಸಾಧ್ಯತೆಯನ್ನು ಅನ್ವೇಷಿಸಲು ಯೋಜನೆಗಳು ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ. ಸಂವಿಧಾನವನ್ನು ತಿದ್ದುಪಡಿ ಮಾಡುವ ಮೂಲಕ ಲೋಕಸಭಾ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಒದಗಿಸುವ ನಿಬಂಧನೆ ತರಲಾಯಿತು. ಆದರೆ ಇದು ಡಿಲಿಮಿಟೇಶನ್ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಜಾರಿಗೆ ಬರುತ್ತದೆ. ಡಿಲಿಮಿಟೇಶನ್ ಆಯೋಗವು ಲೋಕ ಸಭಾ, ವಿಧಾನಸಭಾ ಕ್ಷೇತ್ರಗಳನ್ನು ಮರುಹೊಂದಿಸಲು ಕಡ್ಡಾಯವಾದ ಸಂಸ್ಥೆಯಾಗಿದೆ. ಅದರ ನಿರ್ಧಾರಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಹ ಪ್ರಶ್ನಿಸಲು ಸಾಧ್ಯವಿಲ್ಲ.

100 ಕೋಟಿ ರೂ. ವೆಚ್ಚದಲ್ಲಿ ಸ್ವದೇಶಿ ಉತ್ಪನ್ನಗಳ ಅಪರೂಪದ ವೇದಿಕೆ

ಬರಲಿದೆ ಪಿಎಂ ಏಕತಾ ಮಾಲ್

ಹೊಸದಿಲ್ಲಿ: ದೇಶಾದ್ಯಂತ ತಯಾರಾದ ಸ್ವದೇಶಿ ಉತ್ಪನ್ನಗಳು, ಸ್ಥಳೀಯ ಕರಕುಶಲ ವಸ್ತುಗಳು ಮತ್ತು ವೈವಿಧ್ಯಮಯ ಅಡುಗೆಗಳ ಪ್ರದರ್ಶನ- ವಿಕ್ರಯಕ್ಕೆ ಉತ್ತೇಜಕ ವೇದಿಕೆ ರೂಪದ ಪಿಎಂ ಏಕತಾ ಮಾಲ್ ಶೀಘ್ರದಲ್ಲೇ ದಿಲ್ಲಿಯಲ್ಲಿ ಮೈದಳೆಯಲಿದೆ. ಸುಮಾರು 100 ಕೋಟಿ ರೂ.ವೆಚ್ಚದಲ್ಲಿ ಪಿಎಂ ಏಕತಾ ಮಾಲ್ ನಿರ್ಮಾಣವಾಗಲಿದೆ.



ಪ್ರತೀ ರಾಜ್ಯಕ್ಕೆ ತಲಾ100 ಕೋಟಿ ರೂ.ಬೆಂಬಲ: ದಿಲ್ಲಿ ಪ್ರವಾಸೋದ್ಯಮ ಮತ್ತು ಸಾರಿಗೆ ಅಭಿವೃದ್ಧಿ ನಿಗಮ ಪ್ರಸ್ತಾವಿಸಿರುವ ಪ್ರಸ್ತುತ ಯೋಜನೆಯು, ರಾಜ್ಯಗಳಿಗೆ ಬಂಡವಾಳ ಹೂಡಿಕೆಗಾಗಿ ಕೇಂದ್ರದ ವಿಶೇಷ ನೆರವಿನ ಯೋಜನೆಯಲ್ಲಿ ಸಾಕಾರಗೊಳ್ಳಲಿದೆ. ಕೇಂದ್ರ, ವಿಶೇಷ ನೆರವಿನ ಯೋಜನೆಯಲ್ಲಿ ರಾಜ್ಯಗಳಿಗೆ ಸುಮಾರು 50 ವರ್ಷಗಳ ಸುದೀರ್ಘಾವಧಿಯಲ್ಲಿ ಮರುಪಾವತಿಸಬಹುದಾದ ಬಡ್ಡಿಮುಕ್ತ ಸಾಲಸೌಲಭ್ಯ ಕಲ್ಪಿಸಲಾಗುತ್ತದೆ. ಅಂದರೆ ಪ್ರತೀ ರಾಜ್ಯಗಳಿಗೆ ಕನಿಷ್ಠ 100 ಕೋಟಿ ರೂ.ಹಣಕಾಸು ಬೆಂಬಲ ನೀಡಲಾಗುತ್ತದೆ. ದೇಶಾದ್ಯಂತ ಏಕತಾ ಮಾಲ್‌ಗಳ ನಿರ್ಮಾಣಕ್ಕಾಗಿ ಕೇಂದ್ರ ಸರಕಾರ 5ಸಾವಿರ ಕೋಟಿ ರೂ.ಮೀಸಲಿರಿಸಿದೆ.

ದೇಶದ ಕರಕುಶಲ ಕರ್ಮಿಗಳು ಗ್ರಾಹಕರೊಂದಿಗೆ ಸುಲಭವಾಗಿ ವ್ಯವಹರಿಸಲು ಅವಕಾಶವಿರುವ ಪಿಎಂ ಏಕತಾಮಾಲ್ , ಕಾಯಂ ಮಾರುಕಟ್ಟೆ ಕೇಂದ್ರವಾಗಿ ಕಾರ್ಯ ನಿರ್ವಹಿಸಲಿದೆ. ವಾಣಿಜ್ಯಿಕವಾಗಿ ಲಾಭದಾಯಕವಾಗಬಲ್ಲ ಮತ್ತು ಜನರನ್ನು ಸೂಜಿಗಲ್ಲಂತೆ ಸೆಳೆಯಬಲ್ಲ ಹಣಕಾಸು ಕೇಂದ್ರ, ಅಥವಾ ಪ್ರಮುಖ ಪ್ರವಾಸೀ ಕೇಂದ್ರದಲ್ಲಿ ಮಾಲ್ ತೆರೆಯಲಾಗುವುದು. ಐಎನ್‌ಎ ದಿಲ್ಲಿ ಹಾತ್‌ಗೆ ಸಮೀಪ ಪೀತಂಪುರದ ನೇತಾಜಿ ಸುಭಾಷ್ ಸ್ಥಳ ಅಥವಾ ಪುರಸಭೆಯ ಆಡಳಿತಾತ್ಮಕ ಸೌಕರ್ಯಗಳು ಈಗಾಗಲೆ ಇರುವ ಮಂಜು ಕಾ ತಿಲ್ಲಾದಲ್ಲಿ ಮಾಲ್ ತಲೆಯೆತ್ತೋ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ಉತ್ಪಾದಕರಿಗೆ ರಾಷ್ಟ್ರೀಯ ವೇದಿಕೆಯಿದು: ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಸುವ 36 ಸ್ಟಾಲ್‌ಗಳು ಮಾಲ್‌ನಲ್ಲಿರಲಿವೆ. ತನ್ಮೂಲಕ ಒಂದು ಜಿಲ್ಲೆ, ಒಂದು ಉತ್ಪನ್ನ ಉಪಕ್ರಮದಡಿ, ತಮ್ಮ ವಿಶಿಷ್ಟ ಉತ್ಪನ್ನಗಳ ಜನರಿಗೆ ಪರಿಚಯಿಸಲು ದೇಶದ ಪ್ರತಿಯೊಂದು ಜಿಲ್ಲೆಗೂ ಮಾಲ್‌ಅತ್ಯುತ್ತಮ ವೇದಿಕೆಯಾಗಲಿದೆ. ಭಾರತದ ಪ್ರತಿಯೊಂದು ಜಿಲ್ಲೆಯ ವಿಶಿಷ್ಟ ಕರಕೌಶಲಗಳು ಹಾಗೂ ವಿಶೇಷತೆಗಳ ಎತ್ತಿ ಹಿಡಿಯೋದು, ತನ್ಮೂಲಕ ಸ್ಥಳೀಯ ಉತ್ಪಾದಕರಿಗೆ ರಾಷ್ಟ್ರೀಯ ವೇದಿಕೆಯನ್ನು ಸೃಜಿಸೋದು ಮಾಲ್‌ನ ಆಶಯವಾಗಿದೆ.

ಗಡಿ ರಾಷ್ಟ್ರಗಳಿಂದ ಹೂಡಿಕೆ ಹರಿದುಬರಲು ಪ್ರೋತ್ಸಾಹ

ನೆರೆರಾಷ್ಟ್ರಗಳಿಗೆ ಎಫ್‌ಡಿಐ ನಿರ್ಬಂಧ ಸಡಿಲ?

ಹೊಸದಿಲ್ಲಿ: ಭಾರತದೊಂದಿಗೆ ಗಡಿ ರೇಖೆ ಹಂಚಿಕೊಳ್ಳುವ ಚೀನಾ ಸಹಿತ ನೆರೆಯ ರಾಷ್ಟ್ರಗಳಿಂದ ಹರಿದುಬರುವ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮೇಲಿನ ನಿರ್ಬಂಧಗಳನ್ನು ಕೇಂದ್ರ ಸರ್ಕಾರ ಸಡಿಲಗೊಳಿಸಿದೆ ಎಂದು ಸರ್ಕಾರಿ ಮೂಲಗಳು ಮಂಗಳವಾರ ತಿಳಿಸಿವೆ.

ಇವುಗಳಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ್, ನೇಪಾಳ, ಮ್ಯಾನ್ಮಾರ್ ಮತ್ತು ಅಫ್ಘಾನಿಸ್ತಾನವೂ ಒಳಗೊಂಡಿವೆ. ಚೀನಾದಿಂದ ಬರುವ ಎಫ್‌ಡಿಐ ಕಡಿಮೆಯಿದ್ದರೂ, ದ್ವಿಪಕ್ಷೀಯ ವ್ಯಾಪಾರ ಹಲವು ಪಟ್ಟು ಹೆಚ್ಚಾಗಿದೆ.

ಚೀನಾ ಈಗ ಭಾರತದ ಎರಡನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿ ಹೊರಹೊಮ್ಮಿದೆ. ಆದರೆ ಈ ಬಗ್ಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಯಾವುದೇ ಘೋಷಣೆಗಳನ್ನು ಮಾಡಿಲ್ಲ.

ಜೇವರ್ ವಿ.ನಿಲ್ದಾಣದ ರಸ್ತೆ ಅಭಿವೃದ್ಧಿಗೆ 3,630 ಕೋಟಿ: ಉತ್ತರಪ್ರದೇಶದ ನೂತನ ಜೇವರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಸ್ತೆ ಅಭಿವೃದ್ಧಿಗೊಳಿಸಲು 3,630.77 ಕೋಟಿ ರೂ. ವೆಚ್ಚವನ್ನು ಕೇಂದ್ರ ಸಚಿವ ಸಂಪುಟವು ಮಂಜೂರು ಮಾಡಿದೆ. ದಕ್ಷಿಣ ದಿಲ್ಲಿ, ಫರೀದಾಬಾದ್ ಮತ್ತು ಗುರುಗ್ರಾಮದಿಂದ ವಿಮಾನ ನಿಲ್ದಾಣವನ್ನು ನೇರ ಸಂಪರ್ಕಗೊಳಿಸುವ ಅತಿ ವೇಗದ 31.42 ಕಿ.ಮೀ. ರಸ್ತೆ ಯೋಜನೆ ಇದಾಗಿದೆ.

- ಮಧುರೈ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ನಿಲ್ದಾಣವನ್ನಾಗಿ ಘೋಷಿಸಲು ಕೇಂದ್ರ ಸಂಪುಟ ಅನುಮತಿ. ಇದರಿಂದ ಮಧುರೈ ಮೀನಾಕ್ಷಿ, ಕೂಡಲ್ ಅಳಗರ್, ತಿರುಪ್ಪರನ್‌ಕೂಂಡ್ರಂ ಮುರುಗನ್, ಪಲಮುದಿರ್‌ಚೋಳೈ ಮುರುಗನ್ ಮತ್ತು ರಾಮೇಶ್ವರಂ ತೀರ್ಥಯಾತ್ರೆ ಇನ್ನಷ್ಟು ಸುಧಾರಣೆ
- ಪಶ್ಚಿಮ ಬಂಗಾಳ-ಜಾರ್ಖಂಡ್ ಸಂಪರ್ಕಿಸುವ 4,474 ಕೋಟಿ ರೂ. ವೆಚ್ಚದ 2 ರೈಲ್ವೆ ಯೋಜನೆಗಳಿಗೆ ಕೇಂದ್ರ ಗ್ರೀನ್ ಸಿಗ್ನಲ್

ದಿವಾಳಿ ಕಾನೂನು ತಿದ್ದುಪಡಿಗೆ ಒಪ್ಪಿಗೆ: ದಿವಾಳಿ ಕಾನೂನು ಮತ್ತು ಕಂಪನಿಗಳ ಕಾಯ್ದೆ 2013ರಲ್ಲಿನ ತಿದ್ದುಪಡಿಗಳಿಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಜಲ್ ಜೀವನ್ ಮಿಷನ್ ವಿಸ್ತರಣೆ: ಜಲ್ ಜೀವನ್ ಮಿಷನ್ ಯೋಜನೆಯನ್ನು 8.7 ಲಕ್ಷ ಕೋಟಿ ರೂ. ವೆಚ್ಚದಲ್ಲಿ ಡಿಸೆಂಬರ್ 2028ರವರೆಗೆ ವಿಸ್ತರಿಸಲು ಕೇಂದ್ರ ಸಂಪುಟ ಅನುಮೋದನೆ ನೀಡಿದ್ದಾಗಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಸಂಪಾದಕೀಯ

ನೇಪಾಳ: ಹೊಸ ರಾಜಕೀಯ ಯುಗ

ನೆರೆಯ ನೇಪಾಳದಲ್ಲಿ ನಡೆದ ಸಂಸದೀಯ ಚುನಾವಣೆಯ ಫಲಿತಾಂಶವು ಅಲ್ಲಿ ನೂತನ ರಾಜಕೀಯ ಯುಗವೊಂದು ಆರಂಭವಾಗಿರುವುದನ್ನು ಸಂಕೇತಿಸಿದೆ. ಕಳೆದ ವರ್ಷ ಯುವ ಜನಾಂಗದಿಂದ ನಡೆದ ಭಾರೀ ಜನಾಂದೋಲನವು ಸರಕಾರದ ಪತನಕ್ಕೆ ಕಾರಣವಾಗಿದ್ದರೆ, ಈಗ ಅದೇ ಯುವ ಜನಾಂಗವು ಹೊಸ ಸರಕಾರವನ್ನು ಅಧಿಕಾರಕ್ಕೆ ತಂದಿದೆ. ಇದು ಕೇವಲ ಸರಕಾರದ ಬದಲಾವಣೆಯಷ್ಟೇ ಅಲ್ಲ, ಬದಲಾಗಿ ಇದು ನೇಪಾಳದ ಇಡೀ ರಾಜಕೀಯ ವ್ಯವಸ್ಥೆಯ ಕ್ರಾಂತಿಕಾರಿ ಸ್ಥಿತ್ಯಂತರಕ್ಕೆ ನಾಂದಿ ಹಾಕಿದೆ ಎನ್ನಬಹುದು. ಹೊಸ ಪೀಳಿಗೆಯ ರಾಜಕೀಯ ಕ್ರಾಂತಿಯು ತಂದಿರುವ ಬದಲಾವಣೆಯು ಕಣ್ಣಿಗೆ ರಾಚುವಂತಿದೆ. ಈವರೆಗೆ ನೇಪಾಳದ ರಾಜಕೀಯದಲ್ಲಿ ಪ್ರಧಾನ ಪಾತ್ರ ವಹಿಸಿಕೊಂಡು ಬಂದ ನೇಪಾಳಿ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷ ಮೊದಲಾದ ರಾಜಕೀಯ ಪಕ್ಷಗಳೆಲ್ಲ ಮೂಲೆಗುಂಪಾಗಿವೆ. ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಕೂಡಾ ಸೋಲು ಕಂಡಿದ್ದಾರೆ. ಹೊಸದಾದ ಸುಧಾರಣವಾದಿ ನಿಲುವಿನ ರಾಷ್ಟ್ರೀಯ ಸ್ವತಂತ್ರ ಪಾರ್ಟಿ(ಆರ್‌ಎಸ್‌ಪಿ) ಭಾರೀ



ಬಹುಮತ ಪಡೆದು ಅಧಿಕಾರಕ್ಕೇರಿದೆ. 35ರ ಹರಯದ ಬಾಲೇಂದ್ರ ಶಾ ನೂತನ ಪ್ರಧಾನಿಯಾಗಲಿದ್ದಾರೆ.

ನೇಪಾಳದ ಪ್ರತಿಯೊಂದು ಬೆಳವಣಿಗೆ ಕೂಡಾ ಭಾರತದ ಪಾಲಿಗೆ ಮಹತ್ವದ್ದಾಗುತ್ತದೆ. ನೇಪಾಳದೊಂದಿಗೆ 1,800 ಕಿ.ಮೀ.ಗಳ ಮುಕ್ತ ಗಡಿಯನ್ನು ಭಾರತವು ಹೊಂದಿದ್ದು, ಉಭಯದೇಶಗಳ ಮಧ್ಯೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಬಂಧವು ನಿಕಟವಾಗಿದೆ. ಉಭಯತ್ರರ ಆರ್ಥಿಕತೆಯೂ ಒಂದನ್ನೊಂದು ಆಧರಿಸಿದ್ದು, ಲಕ್ಷಾಂತರ ನೇಪಾಳಿಗಳು ಭಾರತದಲ್ಲಿ ವಾಸಿಸುತ್ತಿದ್ದಾರೆ. ಇದರ ಜತೆಗೇ ನೇಪಾಳವು ಭಾರತ ಮತ್ತು ಚೀನಾಗಳ ನಡುವೆ ಆಯಕಟ್ಟಿನ ಜಾಗದಲ್ಲಿ ಇರುವುದರಿಂದ ಭಾರತವು ಅಲ್ಲಿನ ಬೆಳವಣಿಗೆಯನ್ನು ಸದಾ ಗಮನಿಸುತ್ತಿರಬೇಕಾಗುತ್ತದೆ.

ಈ ಹಿಂದೆಲ್ಲ ನೇಪಾಳದ ರಾಜಕೀಯವನ್ನು ನಿರ್ದೇಶಿಸುವಲ್ಲಿ ಭಾರತದ ಪಾತ್ರವೂ ಇತ್ತು. ಆದರೆ ಬಳಿಕ ಚೀನಾವು ಅಲ್ಲಿನ ಕಮ್ಯುನಿಸ್ಟ್ ಪಕ್ಷದ ಮುಖಾಂತರವಾಗಿ ತನ್ನ ಪ್ರಭಾವ ಹೇರುವಲ್ಲಿ ಸಫಲವಾಗಿತ್ತು. ಕೆಲವು ಸಂದರ್ಭದಲ್ಲಿ ಭಾರತ ವಿರೋಧಿ ಭಾವನೆಯನ್ನು ಬಿತ್ತುವಲ್ಲೂ ಚೀನಾ ಹಾಗೂ ಕಮ್ಯುನಿಸ್ಟ್ ಪಕ್ಷಗಳು ಸಫಲವಾಗಿದ್ದವು. ಇನ್ನೀಗ ಭಾರತವು ನೇಪಾಳದ ರಾಜಕೀಯವನ್ನು ನಿರ್ದೇಶಿಸುವುದಕ್ಕಿಂತಲೂ ಅಲ್ಲಿನ ಬದಲಾದ ಪರಿಸ್ಥಿತಿಯನ್ನು ಹೊಂದಿಕೊಂಡು ಅದನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳುವ ರಾಜತಾಂತ್ರಿಕ ಚಾಣಾಕ್ಷತೆಯನ್ನು ಪ್ರದರ್ಶಿಸಬೇಕಾಗಿದೆ. ತಮಗೆ ಅಮೆರಿಕ, ಚೀನಾ, ಭಾರತ, ರಷ್ಯಾ ಯಾರೂ ಬೇಡ, ತಮ್ಮದು ಸ್ವತಂತ್ರ ನಡೆ ಎಂಬುದಾಗಿ ಪ್ರಧಾನಿಯಾಗಲಿರುವ ಬಾಲೇಂದ್ರ ಶಾ ಈ ಮೊದಲು ಹೇಳಿದ್ದರಾದರೂ, ಇನ್ನೀಗ ಅಧಿಕಾರಕ್ಕೇರಿದ ಬಳಿಕ ಅವರ ಸರಕಾರವು ಯಾವ ಧೋರಣೆಯನ್ನು ಪ್ರದರ್ಶಿಸುತ್ತದೆ ಎಂದು ಕಾದು ನೋಡಬೇಕು. ನೇಪಾಳಿ ಜನರ ಆದ್ಯತೆಯು ಈಗ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ನಿಗ್ರಹಿಸಿ, ಉತ್ತಮ ಮೂಲಸೌಕರ್ಯಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿದೆ. ಆ ನಿಟ್ಟಿನಲ್ಲಿ ಹೊಸ ಸರಕಾರದ ಮುಂದೆ ದೊಡ್ಡ ಸವಾಲು ಇರುವುದೂ ನಿಜ.

ಪರಶಿವನನ್ನು ನಿತ್ಯ ಧ್ಯಾನಿಸಬೇಕು

ಶ್ರೋತವ್ಯಃ ಸೌಗತೋ ಧರ್ಮಃ ಕರ್ತವ್ಯಃ ಪುನರಾರ್ಹತಃ ।
ವೈದಿಕೋ ವ್ಯವಹರ್ತವ್ಯಃ ಧ್ಯಾತವ್ಯಃ ಪರಮಃ ಶಿವಃ ॥

ಬೌದ್ಧ ಧರ್ಮವನ್ನು ಕೇಳಬೇಕು. ಜೈನಧರ್ಮವನ್ನು ನಡವಳಿಕೆಯಲ್ಲಿ ಇರಿಸಿಕೊಳ್ಳಬೇಕು. ವ್ಯವಹಾರದಲ್ಲಿ ವೈದಿಕ ಧರ್ಮವನ್ನು ಚಾಲ್ತಿಗೆ ತರಬೇಕು. ಪರಶಿವನನ್ನು ಧ್ಯಾನ ಮಾಡುತ್ತಿರಬೇಕು -ಎಂಬುದು ಶ್ಲೋಕಾರ್ಥ.

ಪ್ರಕೃತ ಶ್ಲೋಕ ನಮ್ಮ ದಿನನಿತ್ಯದ ಬದುಕು ಹೇಗಿರಬೇಕು ಎಂಬುದನ್ನು ತಿಳಿಸಿಕೊಡುತ್ತದೆ. ಬೌದ್ಧ ಎಂಬುದು ಧರ್ಮವಲ್ಲ, ಅದೊಂದು ಮತ. ಜೈನ ಧರ್ಮವಲ್ಲ; ಅದೊಂದು ಮತ. ವೈದಿಕ ಧರ್ಮವೆಂದರೆ ಸನಾತನ ಧರ್ಮ, ಹಿಂದೂ ಧರ್ಮ ಎಂದರ್ಥ. ಇದು ಮಾತ್ರ ಧರ್ಮ. ಉಳಿದವುಗಳು ಮತಗಳು. ಹೀಗೆ ಹೇಳುವುದಕ್ಕೆ ಜ್ಞಾನಿಗಳು ಕಾರಣವನ್ನೂ ನೀಡುತ್ತಾರೆ. ಯಾವುದೋ ಒಬ್ಬನ ಮತಿಯಿಂದ ಮೂಡಿ ಬಂದು ನಿರ್ದಿಷ್ಟ ಒಂದು ಗ್ರಂಥವನ್ನು ಮತಗಳು ಆಶ್ರಯಿಸುತ್ತೇವೆ.

ಶ್ಲೋಕ ಸಾಗರ



ಡಾ.ಸೋಂದಾ ಭಾಸ್ಕರ ಭಟ್

ಆದರೆ ಧರ್ಮ ಹಾಗಲ್ಲ. ಧರ್ಮ ಯಾವಾಗ ಹುಟ್ಟಿದೆ ಎಂಬುದು ಗೊತ್ತಿಲ್ಲ. ಯಾವುದೋ ಒಬ್ಬ ಮತಿಯ ಪಡಿಯಚ್ಚಲ್ಲ. ಯಾವುದೇ ಒಂದು ಗ್ರಂಥ ಎಂಬುದಿಲ್ಲ. ವೇದದಿಂದ ಆರಂಭಿಸಿ ವಚನ, ದಾಸವಾಣಿ, ಕಾವ್ಯವಾಣಿ ಎಲ್ಲವೂ ಧರ್ಮಕ್ಕೆ ಪೂರಕ ಹಾಗೂ ಪ್ರೇರಕ. ಕಾಲಬಾಹಿರವಾದುದನ್ನು ಬಿಟ್ಟು ಮನುಕುಲದ ಏಳ್ಗೆಗೆ ಬೇಕಾದುದೆಲ್ಲವನ್ನೂ ಜತೆಗಿರಿಸಿಕೊಂಡು ಮುಂದುವರಿಯುತ್ತದೆ. ವೈದಿಕಧರ್ಮ ಎಂದು ಕರೆಯುವ ಸನಾತನ ಹಿಂದೂ ಧರ್ಮ ಇವನ್ನು ಅಳವಡಿಸಿಕೊಂಡು ಸಾಗುತ್ತಿರುವುದರಿಂದ ಇದನ್ನು ಮಾತ್ರ ಜ್ಞಾನಿಗಳು ಧರ್ಮವೆಂದಿದ್ದಾರೆ.

ಹೀಗಂದ ಮಾತ್ರಕ್ಕೆ ಮತಗಳು ತ್ಯಾಜ್ಯವಲ್ಲ. ಅವುಗಳು ಬೋಧಿಸುವ ದಿವ್ಯ ತತ್ತ್ವಗಳ ಅನುಷ್ಠಾನವು ಮನುಕುಲವನ್ನು ಮೇಲೆತ್ತುತ್ತದೆ. ಬೌದ್ಧ ವಿಚಾರ ಬುದ್ಧನ ಅನುಭವಗಳ ಹಾಗೂ ಅವನು ಕಂಡುಕೊಂಡ ಶಾಶ್ವತ ಸತ್ಯದ ಪ್ರಕಟ ಸ್ವರೂಪ. ಬೌದ್ಧ ಧರ್ಮವನ್ನು ಕೇಳಬೇಕು. ಅದರಲ್ಲಿ ಕೇಳಲೇಬೇಕಾದ ಅಪೂರ್ವ ವಿಷಯಗಳಿವೆ. ಬೌದ್ಧಮತವು ದೇಹ ಅಶಾಶ್ವತ, ಭೋಗಭಾಗ್ಯಗಳು ಕ್ಷಣಿಕ, ಎಲ್ಲವೂ ನಶ್ವರ ಎಂಬುದನ್ನು ಸವಿಸ್ತಾರವಾಗಿ ತಿಳಿಸಿ, ಮತ್ತೆ ಮತ್ತೆ ಚಿಂತಿಸಿ, ಜೀವನದಲ್ಲಿ ಅಳವಡಿಸಿಕೊಂಡು ಶ್ರೇಷ್ಠಮಟ್ಟದ ಜೀವನ ನಡೆಸಬೇಕು ಎಂಬುದನ್ನು ಸಾರುತ್ತದೆ. ಆದ್ದರಿಂದ ಬೌದ್ಧ ಉಪದೇಶವನ್ನು ಕೇಳಿ ಅಳವಡಿಸಿಕೊಳ್ಳಬೇಕು. ಜೈನ ಮತದ ಬೋಧನೆ ನಮ್ಮ ನಡೆ-ನುಡಿಗಳಲ್ಲಿ ಅಭಿವ್ಯಕ್ತವಾಗಬೇಕು. ಹಸಿದವರಿಗೆ ಆಹಾರ ನೀಡುವುದು, ರೋಗಿಗಳ ಉಪಚಾರ, ಅಜ್ಞಾನಿಗಳಿಗೆ ಸಮ್ಯಕ್ ಜ್ಞಾನದ ಅರಿವು ಇವೆಲ್ಲ ಜೈನಮತ ತಿಳಿಸಿಕೊಡುವ ಶಾಶ್ವತವಾಗಿ ಅನುಷ್ಠಾನಿಸಬೇಕಾದ ತತ್ವಗಳು. ದೇವತಾ ಪೂಜೆ, ಮಾತಾ-ಪಿತೃ, ಅತಿಥಿಗಳ ಪೂಜೆ, ಜೀವನೋನ್ನತಿಗೆ ಬೇಕಾದ ಸಂಸ್ಕಾರಗಳನ್ನು ನಡೆಸುವುದು ಇವೆಲ್ಲವನ್ನೂ ವೈದಿಕಧರ್ಮ ಹೇಳುತ್ತದೆ.

ಹೀಗೆ ಕೇಳುವಿಕೆ, ನಡವಳಿಕೆ, ಅನುಷ್ಠಾನಗಳು ಮನುಷ್ಯನ ಬದುಕನ್ನು ಶ್ರೇಷ್ಠತೆಯತ್ತ ಕೊಂಡೊಯ್ಯುತ್ತದೆ. ಇವೆಲ್ಲವೂ ಹೇಗೇ ಇರಲಿ, ಬೋಧಿಸಲಿ, ಪರಶಿವನ ಧ್ಯಾನವನ್ನು ಮಾತ್ರ ಮರೆಯಬಾರದು. ಧ್ಯಾನವೇ ಬದುಕನ್ನು ಸುಂದರ ಹಾಗೂ ಸಮೃದ್ಧಿಗೊಳಿಸುತ್ತದೆ. ಜೀವನದಲ್ಲಿ ಭಗವಂತನನ್ನು ಆಧಾರವಾಗಿರಿಸಿ, ಧರ್ಮದ ಮಾರ್ಗದಲ್ಲಿ ಮುಂದುವರಿಯೋಣ.

ತತ್ವಾರದ ಸಮಯದಲ್ಲಿ ತತ್ತ್ವಾದರ್ಶ ಪಾಲಿಸೋಣ

ಖಾರಾ ಬಾತ್



• ವಿನಾಯಕ ಭಟ್ಟ ಮೂರೂರು
vakradanta@gmail.com

ನಮ್ಮ ದೇಶದ ತೈಲದ ವಿಷಯದಲ್ಲಿ ಬೇರೆ ಬೇರೆ ದೇಶಗಳನ್ನು ಅವಲಂಬಿಸಿರುವುದು ಗೊತ್ತೇ ಇದೆ. ದಿನಕ್ಕೆ 60 ಲಕ್ಷ ಬ್ಯಾರಲ್ ತೈಲ ಬಳಸುವ ನಾವು, ಹೆಚ್ಚಿನ ಪ್ರಮಾಣದ ತೈಲಕ್ಕಾಗಿ ವಿದೇಶಗಳನ್ನೇ ಅವಲಂಬಿಸಿದ್ದೇವೆ. ಇತ್ತೀಚೆಗೆ ರಷ್ಯಾದಿಂದ ಹೆಚ್ಚು ತೈಲ ಖರೀದಿಸುತ್ತಿದ್ದೇವಾದರೂ, ನಾವು ಇರಾನ್ ಹಾಗೂ ಅರಬ್ ದೇಶಗಳಿಂದಲೂ ತೈಲ ಆಮದು ಮಾಡಿಕೊಳ್ಳುತ್ತಿದ್ದೇವೆ. ಇರಾನ್ ಹಾಗೂ ಅರಬ್ ದೇಶಗಳಲ್ಲಿ ತೈಲ ಉತ್ಪಾದನೆ ಕುಸಿತಗೊಂಡಿದೆ. ಜತೆಗೆ ತೈಲ ಸಾಗಾಟ ಸಮಸ್ಯೆಯೂ ಉದ್ಭವಿಸಿದೆ. ಹರ್ಮೋಜ್ ಜಲಸಂಧಿಯಲ್ಲಿ ಚೀನಾ ಮತ್ತು ಭಾರತಕ್ಕೆ ಹೋಗುವ ಹಡಗುಗಳಿಗೆ ಅವಕಾಶ ನೀಡುವುದಾಗಿ ಇರಾನ್ ಈಗಾಗಲೇ ಹೇಳಿದೆಯಾದರೂ, ಅಲ್ಲಿ ಹಡಗುಗಳ ಟ್ರಾಫಿಕ್ ಜಾಂ ಆಗಿರುವುದರಿಂದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದರ ಅಲ್ಪ-ಸ್ವಲ್ಪ ಪರಿಣಾಮ ನಮ್ಮ ಮೇಲೆ ಆದರೂ ಆಗಬಹುದು. ಸಮಸ್ಯೆ ಆಗಬಹುದು ಎಂದು ಆತಂಕಪಡುತ್ತ ಇರುವ ಬದಲು ಸಮಸ್ಯೆ ಆಗದಂತೆ ನಾವೇ ಪ್ರಯತ್ನಿಸಲು ಸಾಧ್ಯವಿದೆಯಾ ಎಂದು ಯೋಚಿಸಬಹುದು.

ಎಲ್ಲವನ್ನೂ ಸರ್ಕಾರವೇ ಮಾಡಲಿ ಎಂದು ಯೋಚಿಸುವ ಬದಲು ನಾವಾಗೇ ಕೆಲವು ಪ್ರಯತ್ನಗಳ ಮೂಲಕ ಬಳಕೆ ಕಡಿಮೆ ಮಾಡಲು ಸಾಧ್ಯವಿದೆ. ಉದಾಹರಣೆಗೆ ಕಾರು ಬಳಸುವವರು ಸಾಧ್ಯವಾದಲ್ಲೆಲ್ಲ ಸ್ಕೂಟರ್ ಅಥವಾ ಬೈಕ್ ಬಳಸಬಹುದು. ಬೈಕ್‌ಗಳನ್ನು ಬಳಸುವವರು ಸಾಧ್ಯವಾದಷ್ಟು ಮೆಟ್ರೊ ಅಥವಾ ಬಸ್ ಬಳಸಬಹುದು. ತೀರಾ ಅಗತ್ಯವಿರುವ ಓಡಾಟಗಳನ್ನು ಮಾತ್ರ ಮಾಡಬಹುದು. ಎರಡು-ಮೂರು ಓಡಾಟಗಳ ಬದಲು ಒಂದೇ ಓಡಾಟದಲ್ಲಿ ಕೆಲಸ ಮುಗಿಸಲು ಸಾಧ್ಯವಿದೆಯೇ ಎಂದು ಯೋಚಿಸಬಹುದು.

ಇವೆಲ್ಲವೂ ತುಂಬಾ ಚಿಕ್ಕ ಚಿಕ್ಕ ಪ್ರಯತ್ನಗಳು. ನಾವು ಮಾಡಲಾಗದ ಪ್ರಯತ್ನಗಳೇನಲ್ಲ. ಈ ರೀತಿಯ ಪ್ರಯತ್ನಗಳನ್ನು ಸ್ವಲ್ಪ ಜನ ಅನುಸರಿಸಿದರೂ ದೇಶದ ತೈಲ ಬಳಕೆಯ ಮೇಲಿನ ಒತ್ತಡ ಗಣನೀಯವಾಗಿ ಕಡಿಮೆಯಾಗುತ್ತದೆ. ನಾವೊಬ್ಬರು ಹೀಗೆ ಮಾಡುವುದರಿಂದ ಏನುಪಯೋಗ ಎಂದು ಯೋಚಿಸುವ ಬದಲು, ಉಳಿದವರು ಮಾಡುತ್ತಾರೊ ಇಲ್ಲವೊ ನಾವು ಮಾಡೋಣ ಎಂದು ಯೋಚಿಸಿದರೆ ಹೆಚ್ಚು ಪರಿಣಾಮಕಾರಿಯಾಗಬಹುದು. ಇದ್ಯಾವುದೂ ಕಷ್ಟವಲ್ಲ. ಯಾಕೆಂದರೆ ಕೊರೋನಾ ಸಂದರ್ಭದಲ್ಲಿ ನಾವೆಲ್ಲ ಎಂತಹ ಸ್ಥಿತಿ ಎದುರಿಸಿದ್ದೇವೆ ಎಂಬುದನ್ನು ಒಮ್ಮೆ ನೆನಪಿಸಿಕೊಳ್ಳಿ. ವಾರಗಟ್ಟಲೆ ಮನೆಯಿಂದ ಹೊರಗೆ ಹೋಗದೆಯೂ ಜೀವನ ಸಾಗಿಸಿದ್ದೇವೆ. ಕಾರು-ಬೈಕು, ಪೆಟ್ರೋಲ್ ಇತ್ತಾದರೂ ಓಡಾಡುವ ಹಾಗೆ ಇರಲಿಲ್ಲ. ಈಗ ಪರಿಸ್ಥಿತಿ ಹಾಗಿಲ್ಲ. ಸ್ವಲ್ಪ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳಬೇಕಿದೆ ಅಷ್ಟೇ.

ಈಗ ಅಂತಹ ಅನಿವಾರ್ಯ ಸ್ಥಿತಿ ಏನಿದೆ ಈಗ ಎಂದು ಕೆಲವರು ಪ್ರಶ್ನಿಸಬಹುದು. ಖಂಡಿತ ಅನಿವಾರ್ಯ ಸ್ಥಿತಿ ಇಲ್ಲ. ಭಾರತಕ್ಕೆ ತೈಲದ ಕೊರತೆ ಆಗದ ಹಾಗೆ ಕಚ್ಚಾ ತೈಲ ನೀಡುವುದಾಗಿ ರಷ್ಯಾ ಈಗಾಗಲೇ ಹೇಳಿಕೆ ನೀಡಿದೆ. ದೇಶದಲ್ಲಿ ತೈಲ ಸಂಗ್ರಹವೂ ಇದೆ. ಆದರೆ ಯುದ್ಧ ಸ್ಥಿತಿ ಯಾವಾಗ



ತಿಳಿಯಾಗುತ್ತದೆ ಎಂಬ ಸ್ಪಷ್ಟತೆ ಈಗ ಸದ್ಯಕ್ಕಿಲ್ಲ. ಅಕಸ್ಮಾತ್ ಯುದ್ಧ ಒಂದು ಅಥವಾ ಎರಡು ತಿಂಗಳು ಮುಂದುವರಿದರೆ ಆಗೇನು ಕತೆ? ನಮ್ಮ ಸರ್ಕಾರ ಅದಕ್ಕೊಂದು ದಾರಿ ಖಂಡಿತ ಕಂಡುಕೊಳ್ಳುತ್ತದೆ ಎಂಬುದರಲ್ಲಿಯೂ ಅನುಮಾನವಿಲ್ಲ. ಆದರೆ ನಾವು ನಮ್ಮದೊಂದು ಕಿರುಪ್ರಯತ್ನದ ಮೂಲಕ ಸರ್ಕಾರದ ಮೇಲಿನ ಒತ್ತಡ ಕಡಿಮೆ ಮಾಡಬಹುದೆ? ದೇಶದ ಹಿತದೃಷ್ಟಿಯಿಂದ ನಾವು ಪ್ರಯತ್ನಿಸಬಹುದೆ ಎಂಬ ಯೋಚನೆ ಅಷ್ಟೆ. ಯಾಕೆಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ವಿಪರೀತ ಏರಿಕೆಯಾಗಿದೆ. ಈ ಸಮಯದಲ್ಲಿ ನಾವು ತೈಲ ಖರೀದಿ ಮಾಡಿದರೆ ಸಹಜವಾಗಿ ಹೆಚ್ಚು ಹಣ ನೀಡಿ ಖರೀದಿ ಮಾಡಬೇಕಾಗುತ್ತದೆ. ಆಗ ದೇಶದ ಆರ್ಥಿಕತೆಯ ಮೇಲೆ ಒತ್ತಡ ಬೀಳುತ್ತದೆ. ಸರ್ಕಾರ ಜನರ ಹಿತದೃಷ್ಟಿಯಿಂದ ಪೆಟ್ರೋಲ್- ಡೀಸೆಲ್ ಬೆಲೆ ಏರಿಕೆ ಮಾಡದೆ ಇರಬಹುದು ಅಥವಾ ಸ್ವಲ್ಪ ಮಾತ್ರ ಏರಿಕೆ ಮಾಡುವ ನಿರ್ಧಾರ ಕೈಗೊಳ್ಳಬಹುದು. ನಿರ್ಧಾರ ಯಾವುದೇ ಆದರೂ ನಮಗೆ ನಷ್ಟವೆ ಎಂಬುದರಲ್ಲಿ ಅನುಮಾನವಿಲ್ಲ. ಕೇಂದ್ರ ಸರ್ಕಾರ ಸುಮಾರು ವರ್ಷಗಳಿಂದ ಪೆಟ್ರೋಲ್ ಬೆಲೆ ಏರಿಕೆಯಾಗದಂತೆ ತನ್ನ ತೈಲ ಖರೀದಿ ನೀತಿಯನ್ನು ನಿಭಾಯಿಸಿದೆ. ಪರಿಸ್ಥಿತಿಯ ಅನಿವಾರ್ಯದಿಂದ ದರ ಹೆಚ್ಚಳ ಮಾಡುವಂತಾದರೆ ಅದರ ಪರಿಣಾಮ ನಮ್ಮೆಲ್ಲರ ಮೇಲೂ ಆಗುತ್ತದೆ. ಆ ಪರಿಣಾಮಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ನಾವು ಈಗಲೇ ಮುಂದಡಿ ಇಡಬಹುದೆ ಎಂಬದಷ್ಟೇ ಚಿಂತನೆ.

ಸದ್ಯಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಕಡಿಮೆ ಮಾಡುವಂತೆ ಸರ್ಕಾರವೇನೂ ಮನವಿ ಮಾಡಿಲ್ಲ. ಅಂತಹ ಸ್ಥಿತಿ ನಿರ್ಮಾಣವಾಗಲಿಕ್ಕೂ ಇಲ್ಲ. ಆದರೆ ದೇಶದ ಪ್ರಜೆಗಳಾಗಿ ನಾವೇನಾದರೂ ಕೊಡುಗೆ ನೀಡಬಹುದಾ? ಸರ್ಕಾರ ಅಥವಾ ಪ್ರಧಾನಿ ಕರೆ ನೀಡುವ ಮೊದಲೇ ನಾವು ಅಳಿಲುಸೇವೆ ಸಲ್ಲಿಸಬಹುದಾ? ಒಳ್ಳೆಯ ಪ್ರಜೆಗಳಾಗಿ ನಮ್ಮ ಕೆಲಸ ಮಾಡಬಹುದಾ? ಎಂಬುದಷ್ಟೇ ಇಲ್ಲಿನ ಚಿಂತನೆ.

ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂಬುದು ಹಳೆಯ ಮಾತು. ಕೆಲವೊಮ್ಮೆ ಇಬ್ಬರ ಜಗಳದಲ್ಲಿ ಸಂಬಂಧವೇ ಇಲ್ಲದ ಮೂರನೆಯವರಿಗೆ ನಷ್ಟವೂ ಆಗಬಹುದು. ಈ ಯುದ್ಧದಲ್ಲಿ ಭಾರತ ಯಾವ ರೀತಿಯಲ್ಲೂ ಭಾಗೀದಾರನಲ್ಲ. ಆದರೆ ಎಲ್ಲೋ ದೂರದಲ್ಲಿ ಯುದ್ಧ ನಡೆಯುತ್ತಿದೆ ಎಂದು ನಾವು ಹಾಯಾಗಿರುವುದು ಸಾಧ್ಯವಿಲ್ಲ. ಯಾಕೆಂದರೆ ಯುದ್ಧ ತುಂಬಾ ದೂರದಲ್ಲೇನೂ ನಡೆಯುತ್ತಿಲ್ಲ. ಯುದ್ಧ ನಡೆಯುತ್ತಿರುವ ದೇಶಗಳೂ ಸೇರಿದಂತೆ ಮಧ್ಯಪ್ರಾಚ್ಯದ ಎಲ್ಲ ದೇಶಗಳ ಜತೆ ಭಾರತ ಒಂದಲ್ಲ ಒಂದು ರೀತಿಯಲ್ಲಿ ಬಾಂಧವ್ಯ ಹೊಂದಿದೆ. ಅವರೆಲ್ಲ ಯುದ್ಧ ಪರಿಸ್ಥಿತಿಯಲ್ಲಿರುವಾಗ ಅದರ ಪರಿಣಾಮಗಳು ನಮ್ಮ ದೇಶದ ಮೇಲೂ ಆಗುವುದು ಸಹಜ. ವ್ಯಾಪಾರ, ರಫ್ತು- ಆಮದು ಎಲ್ಲವೂ ವ್ಯತ್ಯಯವಾಗಿದೆ. ಹಾಗಾಗಿ ನಾವೂ ಸ್ವಲ್ಪ ಜೀವನಶೈಲಿಯ ವ್ಯತ್ಯಾಸದ ಮೂಲಕ ಆ ನಿಟ್ಟಿನಲ್ಲಿ ಪ್ರಯತ್ನಿಸಬಹುದೇನೊ. ಎಲ್ಲದಕ್ಕೂ ಸರ್ಕಾರವನ್ನೇ ದೂಷಿಸುವವರು, ಸರ್ಕಾರವೇ ಎಲ್ಲವನ್ನೂ ಮಾಡಲಿ ಬಿಡಿ ಎನ್ನುವವರ, ನಮ್ಮೆಲ್ಲ ಸಮಸ್ಯೆಗೂ ಪರಿಹಾರ ನೀಡಬೇಕಾದ್ದು ಸರ್ಕಾರದ ಕೆಲಸ ಎನ್ನುವವರ ಬಗ್ಗೆ ಚರ್ಚೆ ಅನಗತ್ಯ. ಅವರು ಸಿಕ್ಕ ಅವಕಾಶವನ್ನು ಟೀಕೆಗೆ, ಜನರನ್ನು ಸರ್ಕಾರದ ವಿರುದ್ಧ ರೊಚ್ಚಿಗೆಬ್ಬಿಸಲು ಪ್ರಯತ್ನ ಮಾಡಬಹುದು. ಆದರೆ ಒಳ್ಳೆಯ ಯೋಚನೆಯ ಒಂದಷ್ಟು ಜನ ನಾವೇನು ಮಾಡಬಹುದು ಎಂದು ಯೋಚಿಸಲು ಇದು ಸಕಾಲ.

ನರಕಕ್ಕೆ ಕಾರಣವಾಗುವ ಆಸುರೀ ಸಂಪತ್ತು

ಪದಸಂಚಲನ



• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com

ಹಿಂದಿನ ಲೇಖನದಲ್ಲಿ ಗರುಡಪುರಾಣದಲ್ಲಿ ವಿವರಿಸಿರುವಂತೆ ನರಕಗಳ ವರ್ಣನೆಯನ್ನು ನೋಡಿದೆವು. ಭಾಗವತದಲ್ಲಿಯೂ ಇದೇ ರೀತಿಯಲ್ಲಿ ನರಕಗಳ ವರ್ಣನೆಯನ್ನು ಮತ್ತು ಅಂಥ ನರಕಗಳಿಗೆ ಹೋಗಲು ಕಾರಣವಾಗುವ ಅಕಾರ್ಯಗಳ ವಿವರಣೆಯನ್ನು ಕೊಡಲಾಗಿದೆ. ಶ್ರೀಮದ್ಭಗವದ್ಗೀತೆಯಲ್ಲಿ ನರಕದ ದ್ವಾರವನ್ನಾಗಿ ನಮ್ಮ ಕೆಲವು ಗುಣಗಳನ್ನು ತಿಳಿಸಲಾಗಿದೆ. **ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ । ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥** ಎಂಬುದಾಗಿ. ದೈವೀಸಂಪತ್ತು ಮತ್ತು ಆಸುರೀಸಂಪತ್ತೆಂಬುದಾಗಿ ಎರಡು ವಿಧದ ವ್ಯಕ್ತಿತ್ವವನ್ನು ತಿಳಿಸಿ, ಆಸುರೀಸಂಪತ್ತನ್ನು ಅತ್ಯಂತ ವಿಸ್ತೃತವಾಗಿ ವರ್ಣಿಸಲಾಗಿದೆ. ಇದರ ಸಂಕ್ಷೇಪವಾಗಿ ಈ ಮೇಲಿನ ಶ್ಲೋಕವನ್ನು ಹೇಳುತ್ತಾ, ಕಾಮ, ಕ್ರೋಧ ಮತ್ತು ಲೋಭಗಳೇ ನಮ್ಮನ್ನು ನರಕಕ್ಕೆ ದೂಡುವ ಕೆಟ್ಟಸ್ವಭಾವಗಳಾಗಿವೆ ಎಂಬುದಾಗಿ ಪರಮಾತ್ಮನು ತಿಳಿಸುತ್ತಾನೆ.

ದೈವೀಸಂಪತ್ತು ಮೋಕ್ಷಕ್ಕೆ ಕಾರಣವಾದರೆ, ಆಸುರೀಸಂಪತ್ತು ನಮ್ಮ ಅಧಃಪತನಕ್ಕೆ ಕಾರಣವಾಗುತ್ತವೆ. ವ್ಯಕ್ತಿಯ ಅಧೋಗತಿಗೆ ಕಾರಣವಾಗುವ ಗುಣಗಳು ಯಾವುವು ಎಂಬುದನ್ನು ಹದಿನಾರನೆಯ ದೈವಾಸುರ ಸಂಪದ್ವಿಭಾಗಯೋಗದಲ್ಲಿ ಪರಮಾತ್ಮನು ವಿಸ್ತೃತವಾಗಿ ತಿಳಿಸಿದ್ದಾನೆ. ಅಲ್ಲಿ ಮೊದಲು ದೈವೀಸಂಪತ್ತುಳ್ಳವರ ಗುಣಗಳನ್ನು ಪಟ್ಟಿಮಾಡುತ್ತಾನೆ. ಅಭಯ, ಮನಶ್ಶುದ್ಧಿ, ಆತ್ಮಜ್ಞಾನೋಪಾಯದಲ್ಲಿಯೇ ಸರ್ವದಾ ಆಸಕ್ತನಾಗಿರುವಿಕೆ, ದಾನ, ಬಾಹ್ಯೇಂದ್ರಿಯನಿಗ್ರಹ, ದ್ರವ್ಯಾದಿಯಜ್ಞಗಳು, ಸ್ವಾಧ್ಯಾಯ, ತಪಸ್ಸು, ಅಹಿಂಸೆ, ಸತ್ಯವಚನ, ಕ್ರೋಧರಾಹಿತ್ಯ, ತ್ಯಾಗಬುದ್ಧಿ, ಮನೋನಿಗ್ರಹ, ಚಾಡಿ ಹೇಳದಿರುವಿಕೆ, ಭೂತದಯೆ, ಲೋಲುಪತೆ ಇಲ್ಲದೇ ಇರುವಿಕೆ, ಮೃದುತ್ವ, ಲಜ್ಜಾ, ಕರ್ಮೇಂದ್ರಿಯಗಳನಿಗ್ರಹ, ಬಲ, ಕ್ಷಮಾಗುಣ, ಧೈರ್ಯ, ಹೊರಗಿನ ಮತ್ತು ಒಳಗಿನ ಶುಚಿತ್ವ, ತನ್ನ ಬಗ್ಗೆಯೇ ತನಗೆ ಅತಿಯಾದ ಪೂಜ್ಯಭಾವ ಇಲ್ಲದೇ ಇರುವಿಕೆ, ಇವೆಲ್ಲ ದೈವೀಸಂಪತ್ತಾಗಿವೆ. ಇಂಥ ಗುಣಗಳು ನಮ್ಮ ಅಭ್ಯುದಯ ಮತ್ತು ನಿಃಶ್ರೇಯಸ್ಸಿಗೆ ಕಾರಣವಾಗುತ್ತವೆ. ಆ ಮೂಲಕ ಮರಣದ ಅನಂತರ ಉತ್ತಮಜನ್ಮಕ್ಕೆ ಕಾರಣವಾಗಿ ಕ್ರಮೇಣ ಮೋಕ್ಷಮಾರ್ಗದಲ್ಲಿ ಮುನ್ನಡೆಯುವ ಇಚ್ಛೆಯನ್ನೂ, ಸಾಮರ್ಥ್ಯವನ್ನೂ ಉಂಟುಮಾಡುತ್ತವೆ.

ಇದಕ್ಕೆ ವಿರುದ್ಧವಾಗಿ ಆಸುರೀಸಂಪತ್ತು ನಮ್ಮ ನಮ್ಮ ಅಧೋಗತಿಗೆ ಕಾರಣವಾಗುತ್ತವೆ. ಅವು ಇಹದಲ್ಲೂ, ಪರದಲ್ಲೂ ಶ್ರೇಯಸ್ಸಿಗೆ ಪ್ರತಿಬಂಧಕವೇ ಆಗಿರುವುದರಿಂದ ಎಲ್ಲೂ ಸುಖಕ್ಕೆ ಕಾರಣವಾಗುವುದಿಲ್ಲ. ಅಂಥ ಗುಣಗಳು ನಮ್ಮಲ್ಲಿವೆಯೇ ಎಂದು ಪರಾಮರ್ಶಿಸಿಕೊಳ್ಳುವ ಸಲುವಾಗಿಯೇ ಭಗವದ್ಗೀತೆಯಲ್ಲಿ ಇವುಗಳ ವಿವರಣೆಯನ್ನು ಮಾಡಲಾಗಿದೆ. ಅವು ಯಾವವು ಎಂದರೆ, ದಂಭ. ದಂಭವನ್ನು ಧರ್ಮಧ್ವಜಿತ್ವ ಎಂಬುದಾಗಿ ಶಂಕರರು ತಮ್ಮ ಭಾಷ್ಯದಲ್ಲಿ ತಿಳಿಸಿದ್ದಾರೆ. ಅರ್ಥಾತ್ ತಾನು ಪರಮ ಧಾರ್ಮಿಕ ಎಂಬುದಾಗಿ ತಿಳಿಸಲು ಬೇಕಾದ ಬಾಹ್ಯವೇಷಗಳು. ಆತ ನಿಜವಾಗಿ ಎಷ್ಟು ಧರ್ಮಾಚರಣೆಯನ್ನು ಮಾಡುತ್ತಾನೋ ಇಲ್ಲವೋ, ಆದರೆ ಅದಕ್ಕಿಂತ ಹೆಚ್ಚು ತೋರಿಸಿಕೊಳ್ಳಲು ಬಯಸುತ್ತಾನೆ. ಎರಡನೆಯದು, ದರ್ಪ. ವಿದ್ಯೆ, ಧನ, ಯಶಸ್ಸು ಮೊದಲಾದ ನಿಮಿತ್ತದಿಂದ ಉಂಟಾಗುವ ಮದವಿದು. ಇವುಗಳ ಜೊತೆಗೆ ಕ್ರೋಧ, ಮತ್ತೊಬ್ಬರನ್ನು ನೋಯಿಸುವಂಥ ಕಠಿಣ ಮಾತುಗಳು, ಕರ್ತವ್ಯಾಕರ್ತವ್ಯ ಅವಿವೇಕ ಇವೆಲ್ಲ ಆಸುರೀಸಂಪತ್ತನ್ನುಳ್ಳವರಲ್ಲಿ ಕಾಣಬರುವ ದೋಷಗಳಾಗಿವೆ. ಹೀಗೆ ಈ ದೋಷಗಳು ವ್ಯಕ್ತಿಯನ್ನು ಕಟ್ಟಿಹಾಕಿ ನರಕಪ್ರಾಪ್ತಿಗೆ ಕಾರಣವಾಗುತ್ತವೆ. ಯಾಕೆ ಪರಮಾತ್ಮನು ಈ ಅಧ್ಯಾಯದಲ್ಲಿ ಈ ರೀತಿಯಲ್ಲಿ ವ್ಯಕ್ತಿತ್ವದ ವಿಭಾಗವನ್ನು ಮಾಡಿಕೊಟ್ಟಿದ್ದಾನೆಂದರೆ, ದೈವೀಸಂಪತ್ತು ನನ್ನಲ್ಲಿದೆಯೇ? ಎಂದು ನೋಡಿಕೊಂಡು, ಇಲ್ಲದಿದ್ದರೆ ಅದನ್ನು ಹೊಂದಲು ಪ್ರಯತ್ನಿಸಬೇಕು. ಒಂದು ವೇಳೆ ಆಸುರೀಸಂಪತ್ತು ಇದ್ದರೆ ಅದನ್ನು ನಿವಾರಿಸಿಕೊಳ್ಳಬೇಕು ಎಂಬ ಕಾರಣಕ್ಕೆ.

ಆಸುರೀಸಂಪತ್ತಿನವರು ಹೇಗೆಲ್ಲ ಯೋಚಿಸುತ್ತಾರೆ, ಹೇಗೆಲ್ಲ ವರ್ತಿಸುತ್ತಾರೆ ಎಂಬಿತ್ಯಾದಿಗಳನ್ನು ವಿಶದವಾಗಿ ತಿಳಿಸಿಕೊಡಬೇಕೆಂಬ ಕಾರಣಕ್ಕೆ ಇನ್ನೂ ವಿಸ್ತೃತವಾಗಿ ಪರಮಾತ್ಮನು ಆಸುರೀಸಂಪತ್ತಿನವರ ವರ್ಣನೆಯನ್ನೇ ಮುಂದುವರೆಸುತ್ತಾನೆ. ಅಸುರಸ್ವಭಾವದವರು ಹೇಗೆ ಯೋಚಿಸುತ್ತಾರೆಂದರೆ, ಈ ಜಗತ್ತೆಲ್ಲವೂ ಅಶಾಶ್ವತ ಮತ್ತು ಇದಕ್ಕೆ ಧರ್ಮವೆಂಬುದು ಈ ಜಗತ್ತಿಗೆ ಆಧಾರವಲ್ಲ. ಈ ಜಗತ್ತು ಸ್ವಭಾವತಃ ನಡೆದುಕೊಂಡು ಹೋಗುತ್ತಿದೆ. ಅದಕ್ಕೋಸ್ಕರ ಒಬ್ಬ ಈಶ್ವರನಾಗಲೀ, ಧರ್ಮವಾಗಲೀ ಬೇಕಾಗಿಲ್ಲ. ಗಂಡು-ಹೆಣ್ಣಿನ ಮೈಥುನ ಮಾತ್ರದಿಂದಲೇ ಈ ಜಗತ್ತು ಹುಟ್ಟಿದೆ ಮತ್ತು ಮುಂದುವರೆಯುತ್ತಿದೆ. ಹಾಗಾಗಿ ಧರ್ಮಕ್ಕಿಂತಲೂ ಕಾಮವೇ ಈ ಜಗತ್ತಿನ ಕೀಲಿಕೈ ಆಗಿದೆ ಎಂಬಿತ್ಯಾದಿಯಾಗಿ ರಮಣೀಯವಾದ ಮಾತಿನ ಮೂಲಕ ಜಗತ್ತನ್ನು ಮರುಳುಗೊಳಿಸುತ್ತಾರೆ. ಈ ದೃಷ್ಟಿಯನ್ನೇ ನಂಬಿಕೊಂಡ ಅಂಥವರೂ ಮತ್ತು ಅವರನ್ನು ನಂಬಿದ ಇತರರೂ ಸೇರಿ, ಪರಲೋಕವೆಂಬುದೇ ಇಲ್ಲವೆಂಬುದಾಗಿ ಭಾವಿಸಿ ಸ್ವೇಚ್ಛಾಚಾರದಲ್ಲಿ ತೊಡಗಿಕೊಂಡು ಕ್ರೂರಕರ್ಮಗಳನ್ನು ಮಾಡುತ್ತಾ ಜಗತ್ತಿಗೆ ಕಂಟಕರಾಗುತ್ತಾರೆ. ಆ ಮೂಲಕ ಜಗತ್ತಿಗೆ ಕಂಟಕರಾಗುತ್ತಾರೆ.

ಅಷ್ಟೇ ಅಲ್ಲ, ಅವರು ತಮ್ಮ ಇಚ್ಛೆಯನ್ನೆಲ್ಲ ತೀರಿಸಿಕೊಳ್ಳುವುದಕ್ಕಾಗಿಯೇ ತಮ್ಮ ಇಡೀ ಜೀವನವನ್ನು ಮುಡಿಪಾಗಿಡುತ್ತಾರೆ. ಅಂಥವರು ದಂಭ, ಅಭಿಮಾನ, ಮದವೇ ಮೊದಲಾದ ಎಲ್ಲ ದುರ್ಗುಣಗಳನ್ನೂ ತಮ್ಮೊಳಗೆ ಬಿಟ್ಟುಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಅವಿವೇಕದಿಂದ ಯಾವತ್ತೂ ನಕಾರಾತ್ಮಕ ಚಿಂತನೆಯಲ್ಲೇ ತಮ್ಮ ಸಮಯ ಕಳೆಯುತ್ತಾರೆ. ಅಷ್ಟೇ ಅಲ್ಲ, ಕಾಮೋಪಭೋಗವೇ ಶ್ರೇಷ್ಠವಾದದ್ದು ಎಂಬ ನಿಶ್ಚಯ ಅವರದ್ದು. ಹಾಗಾಗಿ ಯಾವ ಒಳ್ಳೆಯ ಗುಣಗಳಿಗೂ ಅವರ ವ್ಯಕ್ತಿತ್ವದಲ್ಲಿ ಜಾಗ ದೊರೆಯುವುದಿಲ್ಲ. ಆಶಾಪಾಶಕ್ಕೆ ಒಳಗಾಗಿ, ಕಾಮಕ್ರೋಧವನ್ನೇ ತಮ್ಮ ಸ್ವಭಾವವನ್ನಾಗಿಸಿಕೊಂಡು, ಅದನ್ನು ಪೂರೈಸಿಕೊಳ್ಳುವ ಸಲುವಾಗಿ ನಿಧಾನವಾಗಿ ಅವರು ಅನ್ಯಾಯದ ಮಾರ್ಗವನ್ನು ಹಿಡಿಯುತ್ತಾರೆ. ಒಮ್ಮೆ ಈ ಮಾರ್ಗಕ್ಕೆ ಇಳಿದರೆ ಮತ್ತೆ ಎದ್ದು ಬರುವುದು ಕಷ್ಟ. ಇದನ್ನೇ **ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ । ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಞ್ಚಯಾನ್ ॥** ಎಂಬುದಾಗಿ ಹೇಳಲಾಗಿದೆ.

ಎದುರುದಾರರ ಸಂಖ್ಯೆ: 4: ಶ್ರೀಮತಿ. ವರಲಕ್ಷ್ಮಿ ಕೋಂ. ಸುರೇಶ್, ಬಿನ್ ಲೇಟ್. ವಿ. ರಾಮಕೃಷ್ಣಯ್ಯ, ವಯಸ್ಕರು, ವಾಸ: ನಂ. 2273/ಡಿ, 2ನೇ ಕ್ರಾಸ್, ಗಾಂಧೀನಗರ, ಮಂಡ್ಯ ಸಿಟಿ, ಮಂಡ್ಯ.

ನೋಟಿಸು

ಈ ಮೂಲಕ ಎದುರುದಾರರ ಸಂಖ್ಯೆ: 2 ಮತ್ತು 4 ಆದ ನಿಮಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಈ ಪ್ರಕರಣದ ಮೇಲ್ಮನವಿದಾರರಾದ ವೆಂಕಟೇಶಪ್ಪರವರು ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಚಿಯಾಂಡಹಳ್ಳಿ ಗ್ರಾಮದ ಸರ್ವೆ ನಂ. 17/2 ರ ಜಮೀನಿಗೆ ಸಂಬಂಧಪಟ್ಟಂತೆ ಎದುರುದಾರರ ವಿರುದ್ಧ ಪ್ರಕರಣವನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ ಮಾನ್ಯ ನ್ಯಾಯಾಲಯದಿಂದ ಹಾಗೂ ನೊಂದಾಯಿತ ಅಂಚೆಯ ಮುಖಾಂತರ ಹಲವಾರು ಬಾರಿ ನೋಟಿಸು ನೀಡಿದ್ದರೂ ಸಹ ನೀವು ನೋಟಿಸನ್ನು ಸ್ವೀಕರಿಸದೆ ಇರುವುದರಿಂದ ನಿಮಗೆ ಈ ಪತ್ರಿಕಾ ಪ್ರಕಟಣೆಯ ಮುಖಾಂತರ ನೋಟಿಸು ನೀಡಲಾಗಿದೆ. ಹಾಗೂ ವಿಚಾರಣೆಯನ್ನು ದಿನಾಂಕ:09/04/2026ಕ್ಕೆ ನಿಗದಿಪಡಿಸಲಾಗಿದೆ. ಆದ್ದರಿಂದ ನೀವು ದಿನಾಂಕ:09/04/2026ರಂದು ಮಧ್ಯಾಹ್ನ 3-00 ಗಂಟೆಗೆ ತಮ್ಮಲ್ಲಿರುವ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ವಿಚಾರಣೆಯನ್ನು ಏಕಪಕ್ಷೀಯವಾಗಿ ಮುಂದುವರೆಸಿ ತೀರ್ಮಾನಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಸಹಾಯಕ ಕಮೀಷನರ್, ಕೋಲಾರ ಉಪ ವಿಭಾಗ ರವರ ನ್ಯಾಯಾಲಯ ಕೋಲಾರ.
ಮೇಲ್ಮನವಿದಾರರ ಪರ ವಕೀಲರು.
ಶ್ರೀ. ಜಿ.ಆರ್. ರಾಮಚಂದ್ರಮೂರ್ತಿ,
ಶ್ರೀ. ಪಿ.ಎನ್. ಜನಾರ್ಧನ್, ವಕೀಲರು, ಕೋಲಾರ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರ ಪರವಾಗಿ ಶ್ರೀ.ಮೊಹಮ್ಮದ್ ಮುಸ್ತಫ್ ಬಿನ್ ದಿವಂಗತ ಆರ್.ಅಬ್ದುಲ್ ಕರೀಂ ಹೇಳಿಕೆಯ ಮೇರೆಗೆ ದಿವಂಗತ ಆರ್ ಅಬ್ದುಲ್ ಕರೀಂ ರವರು ದಿನಾಂಕ: 23-10-1980 ರಂದು ರಜಾಕ್ ಸಾಬ್ ಪಾಳ್ಯ ಬಾಗಲೂರು ಪೋಸ್ಟ್, ಜಾಲ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಇಲ್ಲಿ ನಿಧನರಾಗಿರುವುದರಿಂದ ಸದರಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಮೇಲ್ಕಂಡ ಮಾನ್ಯ ನ್ಯಾಯಾಲಯದಲ್ಲಿ ಮೇಲ್ಕಂಡ ಪ್ರಕರಣದಂತೆ ಅರ್ಜಿ ಸಲ್ಲಿಸಿದ್ದು ಸದರಿ ಪ್ರಕರಣವು ದಿನಾಂಕ:10/4/2026 ರಂದು ವಿಚಾರಣೆಗಿರುತ್ತದೆ. ಸದರಿ ಅರ್ಜಿಯ ಬಗ್ಗೆ, ಯಾರಿಗಾದರೂ ಯಾವುದೇ ತಕರಾರುಗಳಿದ್ದಲ್ಲಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಸದರಿ ದಿನಾಂಕ:- 10/4/2026 ರಂದು ಬೆಳಗ್ಗೆ 11 ಗಂಟೆಗೆ ಹಾಜರಾಗಲು ಕೋರಲಾಗಿದೆ. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಸಹಿ/- ಚೀಫ್ ಮಿನಿಸ್ಟಿಯಲ್ ಆಫೀಸರ್, ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
ಶ್ರೀ ಸಿದ್ದಿಕ್ ಪಾಷಾ, ವಕೀಲರು

ಸಾರ್ವಜನಿಕ ಪ್ರಕಟಣೆ

ನನ್ನ ಅರ್ಜಿದಾರರಾದ ಶ್ರೀಮತಿ ಪ್ರೇಮ ರವರ ಹೇಳಿಕೆಯ ಮೇರೆಗೆ ಲಲಿತ ಬಿನ್ ತಮ್ಮಯ್ಯಣ್ಣ ಉರುಫ್ ತಮ್ಮಯ್ಯಪ್ಪ ರವರು ದಿನಾಂಕ: 22.07.2010 ರಂದು ಉಗನವಾಡಿ ಗ್ರಾಮ, ಕಸಬಾ ಹೋಬಳಿ, ದೇವಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ನಿಧನರಾಗಿರುತ್ತಾರೆ, ಸದರಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ದೇವನಹಳ್ಳಿ 2ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಿ.ಮಿಸ್ ನಂ.622/2025 ರಂತೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ದಿನಾಂಕ :04.05.2026 ರಂದು ಬೆಳಗೆ 11.00 ಗಂಟೆಗೆ ವಿಚಾರಣೆಯಲ್ಲಿರುತ್ತದೆ, ಸದರಿ ಅರ್ಜಿಯ ಬಗ್ಗೆ ಯಾವುದೇ ತಕರಾರು ಇದ್ದಲ್ಲಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಸದರಿ ದಿನದಂದು ಹಾಜರಾಗಲು ಸೂಚಿಸಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಸಹಿ/- ಚೀಫ್ ಮಿನಿಸ್ಟಿಯಲ್ ಆಫೀಸರ್, ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
ಶ್ರೀ ಮುನಿರಾಜ .ಎಂ, ವಕೀಲರು

ಮಾನ್ಯ ಗೌರವಾನ್ವಿತ 26ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು
ಸಿ. ಮಿಸ್. ನಂ. 1521/2026

ಅರ್ಜಿದಾರರು : 1. ವಿ. ಚಂದ್ರಶೇಖರ್, ಬಿನ್ ಕೆ ವೆಂಕಟೇಶ, 38 ವರ್ಷ, ವಾಸ ನಂ. 13, 1ನೇ ಮುಖ್ಯ, 10ನೇ ಸಿ ಕ್ರಾಸ್, ಸಂಜೀವಿನಿ ನಗರ, ಮೂಡಲಪಾಳ್ಯ ನಾಗರಭಾವಿ, ಬೆಂಗಳೂರು -560072
ಎದುರುದಾರರು : ಮಾನ್ಯ ಆಯುಕ್ತರು ಜನನ ಮತ್ತು ಮರಣ ನೊಂದಣಿ ಇಲಾಖೆ ಬೃ ಬೆಂ ಮ ಪಾಲಿಕೆ, ಬೆಂಗಳೂರು

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಮೇಲಿನ ಅರ್ಜಿದಾರರು ಮೃತ ಕೆಂಚಪ ಬಿನ್ ತಮ್ಮಯ್ಯ ರವರು ದಿನಾಂಕ 29-09-1989, ರಂದು ಸಾರಕ್ಕಿ, ಹಿಂಬಾಗ ಆಕ್ಸ್‌ಫರ್ಡ್ ಶಾಲೆ, ಜೆ ಪಿ ನಗರ, ಬೆಂಗಳೂರು 560078, ರಲ್ಲಿ ಮೃತಪಟ್ಟಿರುತ್ತಾರೆ ಮೃತರ ಪಮರಣ ಪ್ರಮಾಣ ಪತ್ರವನ್ನು ಪಡೆಯಲು ಮಾನ್ಯ 26ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿ ಅವರ ನ್ಯಾಯಾಲಯ ಬೆಂಗಳೂರು ರಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ನ್ಯಾಯಾಲಯವು ಪ್ರಕರಣವನ್ನು **ದಿನಾಂಕ 27/03/26 ರಂದು ಬೆಳಗ್ಗೆ 11-00 ಗಂಟೆಗೆ ನಿಗದಿಪಡಿಸಿದೆ.** ಸದರಿ ಮರಣ ಪ್ರಮಾಣ ಪತ್ರವು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಲು ಹಾಗೂ ದಸ್ತಾವೇಜು ತಯಾರಿಸಲು ಮತ್ತು ಕಾನೂನ ಉದ್ದೇಶಕ್ಕಾಗಿ ಹಾಗೂ ಸರ್ಕಾರದ ಇತರೆ ಸೌಲಭ್ಯಗಳಿಗಾಗಿ ಬೇಕಾಗಿರುತ್ತದೆ ಸದರಿ ಅರ್ಜಿಯ ಬಗ್ಗೆ ಯಾರಿಗಾದರೂ ತಂಟೆ ತಕರಾರುಗಳು ಇದ್ದಲ್ಲಿ ಅವರುಗಳು ನ್ಯಾಯಾಲಯದಲ್ಲಿ ತಮ್ಮ ಹಾಗದೆಯನ್ನು ಸಲ್ಲಿಸಬಹುದು ತಪ್ಪಿದಲ್ಲಿ ಆಯ್ತಾ ಏಕಪಕ್ಷಿಯ ವಾಗಿ ತೀರ್ಮಾನವ ತೆಗೆದುಕೊಳ್ಳಲಾಗುವುದು ನನ್ನ ಸಹಿಯೊಡನೇ ಹಾಗೂ ನ್ಯಾಯಾಲಯದ ಮಹಂನೊಂದಿಗೆ ದಿನಾಂಕ 9/3/26 ರಂದು ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ
ಸಹಿ/-ಶಿರಸ್ತೆದಾರರು
ಮಾನ್ಯ 26ನೇ ಅಪಾರ ಮುಖ್ಯ ನಾಯಕ ದಂಡಾಧಿಕಾಂಯವರ ನ್ಯಾಯಾಲಯ, ಬೆಂಗಳೂರು
ಅರ್ಜಿದಾರರ ಪರ ವಕೀಲರು ಶ್ರೀಮತಿ ಸೈಯದ್ ಫಿರೋಜ್ ವಕೀಲರು
ನಂ.28, 07ನೇ ಕ್ರಾಸ್, ಪೈಪ್ ಲೈನ್ ರಸ್ತೆ ವಿಜಯನಗರ, ಬೆಂಗಳೂರು 560023.

ಮಾನ್ಯ 38ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು
ಕ್ರಿ. ಮಿಸ್. ನಂ. 1896/2026

ಅರ್ಜಿದಾರರು : 1) ಶ್ರೀ ಬಿ. ಶಂಕರಪ್ಪ ಬಿನ್. ಬಸಪ್ಪ ವಯಸ್ಸು 64 ವರ್ಷ
2) ಶ್ರೀ. ದಿಲೀಪ್ ಕುಮಾರ್.ಎಸ್. ಬಿನ್. ಬಿ. ಶಂಕರಪ್ಪ ವಯಸ್ಸು : 28 ವರ್ಷ ಇಬ್ಬರ ವಾಸ : ನಂ. 1806, 1ನೇ ಮಹಡಿ, 3ನೇ ಕ್ರಾಸ್, 7ನೇ ಮುಖ್ಯರಸ್ತೆ, ಕೆಂಗೇರಿ ಉಪನಗರ ಬೆಂಗಳೂರು -560 060 ವಿರುದ್ಧ
ಪ್ರತಿವಾದಿ : ಮಾನ್ಯ ವೈದ್ಯಾಧಿಕಾರಿಗಳು ಜನನ ಮತ್ತು ಮರಣ ನೋಂದಣಿ ಇಲಾಖೆ ಕೆಂಗೇರಿ ವಿಭಾಗ, ಆರ್.ಆರ್. ನಗರ ವಲಯ, ಬೃ.ಬೆಂ.ಮ. ಪಾಲಿಕೆ ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ 1ನೇ ಅರ್ಜಿದಾರರಿಗೆ ತಾಯಿಯಾದ, 2ನೇ ಅರ್ಜಿದಾರರಿಗೆ ಅಜ್ಜಿಯಾದ ಮೃತ ಬೆಳ್ಳಮ್ಮ ಬಸಪ್ಪ ಕೋಂ. ಬಸಪ್ಪ ರವರು ದಿನಾಂಕ : 16/10/2024 ರಂದು ಹೃದಯಾಘಾತದಿಂದ ಮೃತಪಟ್ಟಿದ್ದು, ಸದರಿ ಮೃತರ ಮರಣವನ್ನು ಉಲ್ಲಾಸ್ ಕ್ಲಿನಿಕ್, ನಂ. 587, 2ನೇ ಕ್ರಾಸ್, 3ನೇ ಹಂತ, 15ನೇ ಮುಖ್ಯರಸ್ತೆ, 1ನೇ ಬ್ಲಾಕ್, ಯೂನಿವರ್ಸಿಟಿ ಲೇಔಟ್, ಹಾಲು ಜೇನು, ಬಸವೇಶ್ವರನಗರ, ಬೆಂಗಳೂರು-560 079 ರವರು ದೃಢೀಕರಿಸಿರುತ್ತಾರೆ.
ಸದರಿ ಮೃತರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಕೊಂಡ ಮರಣ ಪ್ರಮಾಣ ಪತ್ರ ಪಡೆಯಲು ಸದರಿ ನ್ಯಾಯಾಲಯದಲ್ಲಿ ಪ್ರಕರಣ ಹೂಡಿದ್ದು, ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸಿದ್ದಲ್ಲಿ **ದಿನಾಂಕ : 6/04/2026 ಬೆಳಗ್ಗೆ 11 ಗಂಟೆಗೆ** ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆ ಸಲ್ಲಿಸಬೇಕು. ಇಲ್ಲವಾದರೆ ಏಕಪಕ್ಷೀಯ ಪ್ರಕರಣವೆಂದು ತೀರ್ಮಾನಿಸಲಾಗುವುದು.
ದಿನಾಂಕ : 7/3/2026 ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದಂತೆ
ಶಿರಸ್ತೇದಾರರು,
38ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು
ಅರ್ಜಿದಾರರ ಪರ ವಕೀಲರು ಶ್ರೀ. ಚಂದ್ರಶೇಖರ್. ಎಸ್, ವಕೀಲರು
ನಂ.3, ಗೋಸಾಲ, ಕಾವೇರಿ ಬಡಾವಣೆ, ವಾಜರಹಳ್ಳಿ ನೆಲಮಂಗಲ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಮಾನ್ಯ 1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು [illegible]

[illegible]

ಮಾನ್ಯ ನ್ಯಾಯಾಲಯದ ಆದೇಶದಂತೆ
ಸಹಿ/- ಶಿರಸ್ತೆದಾರರು
1ನೇ ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು
ಅರ್ಜಿದಾರರ ಪರ ವಕೀಲರು ಶ್ರೀ. ಹೆಚ್.ಎಸ್. ಹನುಮಂತಪ್ಪ ವಕೀಲರು,
ನಂ.81, ಹಂಚರಹಳ್ಳಿ ಗ್ರಾಮ, ಮಂಡೂರು ಅಂಚೆ,
ಬಿದರಹಳ್ಳಿ ಹೋಬಳಿ, ಬೆಂಗಳೂರು -560049

IN THE COURT OF THE HON'BLE ASSISTANT COMMISSIONER KOLAR KOLAR DIST.
R.A. No. 187/2025

APPELLANTS : : Sri. Venkatashamappa & others V/S
RESPONDANTS : Sri. Ambrish & others

NOTICE TO RESPONDENT NO. 1 TO 4

1) Sri.Ambrish S/o. Late Muniyappa, Aged about 48 years, R/o.Talakunte village, Lakkuru hobli, MalurTaluk,Kolar district.
2) Smt. Mallika W/o. Late Thimmarayappa, Aged about 36 years, R/o.Talakunte village, Lakkuru hobli, MalurTaluk,Kolar district.
3) Sri. Ramanjinappa S/o. Late Muniyappa, Aged about 42 years, R/o.Talakunte village, Lakkuru hobli, MalurTaluk, Kolar district.
4) Sri.T.M. Govindaraju S/o. Late Muniyappa,Aged about 40 years, R/o.Talakunte village, Lakkuru hobli, MalurTaluk, Kolar district.

Whereas the appellants have instituted the above revenue appeal against you the addressees and other respondents challenging the M.R.No.H9/2024-2025 Dated 16-10-2024 in respect of the land bearing Sy No.35 Measuring 2 Acres, situated at Thalakunte Village, Lakkuru Hobli, Malur Taluk, Kolar District, on the file of Assistant Commissioner Court at Kolar in R.A. No.187/2025. Hence this notice published and intimating you to appear in the court in person or through advocate on dated 26/03/2026 at 3.00 PM. failing which case will be proceeded in your absence.

Given under my hand and seal of this court on 07th day of this March 2026.

By the order of
Sheristedar, Assistant Commissioner Office, Kolar

R.V. Narayana kumar, Advocate
1st floor, Annaiareddy Building, Near Bus Stand, Malur - 563130, Kolar district, Karnataka

---

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-1 ರವರ ಕಚೇರಿ, ಬೆಂಘತ್ಯಾನಿನಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560052

ಸಂಖ್ಯೆ: ಉಪ್ರವ್ಯ-1/ಬೆಂಘತ್ಯಾನಿನಿ/ಟೆಂಡ್/20/2025-26 ದಿನಾಂಕ: 10.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) 3ನೇ ಕರೆ

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕರು, ಬೆಂಘತ್ಯಾನಿನಿ ಬೆಂಗಳೂರಿನ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು-1, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಸೇವೆಗಳಿಗೆ ಅರ್ಹ ಬಿಡ್ಡರ್‌ಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಗುತ್ತಿಗೆ ಅವಧಿ
1	ಬೆಂಗಳೂರು ದಕ್ಷಿಣ-1 ವಿಭಾಗದಲ್ಲಿ ಪುರಸಭೆ ಘನ ತ್ಯಾಜ್ಯ [ಎಂಎಸ್‌ಡಬ್ಲ್ಯೂ] ಮತ್ತು ಬೀದಿ ಕಸ ಗುಡಿಸಿದ ತ್ಯಾಜ್ಯಗಳ ಪ್ರಾಥಮಿಕ ಸಂಗ್ರಹ ಹಾಗೂ ದ್ವಿತೀಯ ಹಂತದ ಸಾಗಾಣಿಕೆ ಮಾಡುವುದು. [ಪ್ಯಾಕೇಜ್-20] 3ನೇ ಕರೆ	1,438.14	ರೂ. 1,00,000/- ಗಳನ್ನು ಆನ್‌ಲೈನ್/ಎನ್‌ಇಎಫ್‌ಟಿ/ಓಟಿಸಿಯ ಅಡಿಯಲ್ಲಿ ವಿದ್ಯುನ್ಮಾನ ಮೂಲಕ ಪಾವತಿ ಮತ್ತು ಉಳಿಕೆ ರೂ.14,00,000/- ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ ಪಾವತಿಸುವುದು	84 ತಿಂಗಳು

1) ಬಿಡ್ ಪೂರ್ವ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:15.03.2026ರಂದು **5:30 ಗಂಟೆಯವರೆಗೆ.** 2) ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ:16.03.2026ರಂದು ಮಧ್ಯಾಹ್ನ **3:00 ಗಂಟೆಗೆ** ಮೇಲ್ಕಂಡ ಕಚೇರಿಯಲ್ಲಿ. 3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:25.03.2026 ರಂದು ಸಂಜೆ **5:30 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:26.04.2026ರಂದು ಸಂಜೆ **4:30 ಗಂಟೆಯ** ನಂತರ.
ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಡಿಐಪಿಆರ್/ಸಿಪಿ/6169/ಸಿಸಿಎಲ್/2025-26 ಉಪ ಪ್ರಧಾನ ವ್ಯವಸ್ಥಾಪಕರು-1, ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು

IN THE COURT OF THE ASSISTANT COMMISSIONER AT CHICKBALLAPUR
P.T.C.L.No.63/2006-07

Appellants : Sri. Anjinappa V/S
Respondent: Sri. Syed Rasool & another,

: PAPER PUBLICATION:

To, **Respondent No. 1: Syed Rasool,** s/o Ahmed Sab,
Respondent No.2: Smt. Rathnamma, W/o Muni Lakkappa, Both are R/at Mallur Village, Jangamakote Hobli, Sidlaghatta Taluk, Chickaballapur District.

Whereas, the Appellants have filed the above appeal against the Respondents in respect of the appeal property for re-grant of the property pertaining to the Sy.No.211/11, measuring 2-00 Acres, situated at Iddaluud Village, Hanumanthapura Hobli, Sidlaghatta Taluk. The Respondent No.1 and 2 mentioned above residing in the given address is evading to receive summons/notices issued by the Hon'ble Court.

Hence, you the Respondents No.1 and 2, if having any objections in prosecuting the above case is hereby directed to appear in the above case before the Court in person or through pleader duly instructed and able to answer all the material questions raising in the case or to accompanied by some person able to answer all such questions on the date of 16/3/2026 at 3:00 P.M. in the afternoon without fail. Failing which the petition will be disposed of ex-parte. Given under my hand and seal of the court on the day of 9/3/2026.

By order of the court
The Assistant Commissioner Chickaballapur
Advocate for Service: **K M Munegowda** Advocate, Chickaballapur

---

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಕಾನಿಇಂಹಾ/ಪಿಬಿ/ಗುತ್ತಿಗೆ/ಸಿಎಂಐಡಿಪಿ-5054/2025-26/5368 ದಿನಾಂಕ : 05-03-2026

ಇ-ಟೆಂಡರ್ ಪ್ರಕಟಣೆ

ದಿನಾಂಕ : 05-03-2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 29488-2ನೆ ಕರೆ ಮತ್ತು 30731-2ನೆ ಕರೆ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **16-03-2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/- (ಎನ್.ಎನ್.ಪಾಟೀಲ) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/790/2025-26

ಮಾನ್ಯ ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯ ನ್ಯಾಯಾಧೀಶರ ಸಮಕ್ಷಮಕ್ಕೆ ಶ್ರೀರಂಗಪಟ್ಟಣ.
Cr Misc No: 19/2026.

ಅರ್ಜಿದಾರರು : 1. ಶ್ರೀಮತಿ ರಾಜೇಶ್ವರಿ, ವಯಸ್ಸು 50 ವರ್ಷಗಳು ದಿವಂಗತ ಶ್ರೀ ದೊಡ್ಡರಾಜು ರವರ ಮೊದಲನೇ ಮಗ ಶ್ರೀ ರಾಜು ರವರ ಮರಣ ಹೊಂದಿದ್ದು ಹಾಗೂ ಅವರ ಪ್ರತಿನಿಧಿಯಾಗಿ ಅವರ ಧರ್ಮಪತ್ನಿ) ಹೊಸಹಟ್ಟಿ, ಶ್ರೀರಂಗಪಟ್ಟಣ ತಾಲೂಕು.
2. ಶ್ರೀಮತಿ ರಾಣಿ (ದಿವಂಗತ ಶ್ರೀ ದೊಡ್ಡರಾಜುರವರ ಎರಡನೇ ಮಗ ಶ್ರೀ ಶ್ರೀನಿವಾಸರವರ ಮರಣ ಹೊಂದಿದ್ದು ಹಾಗೂ ಅವರ ಪ್ರತಿನಿಧಿಯಾಗಿ ಅವರ ಧರ್ಮಪತ್ನಿ) ಕೆ.ಆರ್.ಎಸ್. ರಸ್ತೆ, ಮೊಗರಹಳ್ಳಿ, ಹೊಸಹಟ್ಟಿ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ-571438. 3. ಶ್ರೀ ಈಶ್ವರ ದಿವಂಗತ ಶ್ರೀ ದೊಡ್ಡ ರಾಜುರವರ ಮೂರನೇ ಮಗ ಹೊಸಹಟ್ಟಿ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ- 571438. 4. ಶ್ರೀ ಆರ್ಮುಗಂ ದಿವಂಗತ ಶ್ರೀ ದೊಡ್ಡರಾಜುರವರ ನಾಲ್ಕನೇ ಮಗ, ನಂ.94, ಕೆ.ಆರ್.ಎಸ್ ಮುಖ್ಯ ರಸ್ತೆ, ಹೊಸಹಟ್ಟಿ ಶ್ರೀರಂಗಪಟ್ಟಣ ತಾಲೂಕು, ಮಂಡ್ಯ- 571438.

// ವಿರುದ್ಧ //

ಎದುರುದಾರರು : ಪ್ರತಿವಾದಿ : ಜನನ ಮರಣ ನೋಂದಣಿ ಅಧಿಕಾರಿಗಳು, ತಾಲೂಕು ಕಚೇರಿ ಶ್ರೀರಂಗಪಟ್ಟಣ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

ಪತ್ರಿಕಾ ಪ್ರಕಟಣೆ

1, 2ನೇ ಅರ್ಜಿದಾರರು ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ಸೊಸೆಯಂದಿರಾಗಿರುತ್ತಾರೆ ಹಾಗೂ 3 ರಿಂದ 4ನೇ ಅರ್ಜಿದಾರರು ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ಮಕ್ಕಳಾಗಿರುತ್ತಾರೆ. ಹಾಗೂ ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. 1,2ನೇ ಅರ್ಜಿದಾರರು ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ಸೊಸೆಯಂದಿರಾಗಿರುತ್ತಾರೆ ಹಾಗೂ 3 ರಿಂದ 4ನೇ ಅರ್ಜಿದಾರರು ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ರವರ ಮಕ್ಕಳಾಗಿರುತ್ತಾರೆ. ಮೃತ ದೊಡ್ಡ ರಾಜು ಬಿನ್ ರಂಗಸ್ವಾಮಿ ದಿನಾಂಕ : 10.04.1980 ರಂದು ಮರಣ ಹೊಂದಿರುತ್ತಾರೆ. ಅರ್ಜಿದಾರರು ಮೃತರ ವಾರಸುದಾರರಾಗಿರುತ್ತಾರೆ. ಪ್ರಕರಣವು ದಿನಾಂಕ : 15.04.2026 ರಂದು ವಿಚಾರಣೆಗಾಗಿ ಇರುತ್ತದೆ. ಎದುರುದಾರರಾದ ನೀವು ಅಂದು ಅಪರಾಹ್ನ ಮಧ್ಯಾಹ್ನ 11-00 ಗಂಟೆಗೆ ಖುದ್ದಾಗಿ ತಾವುಗಳಾಗಲೀ, ತಮ್ಮ ವಕೀಲರ ಮುಖಾಂತರವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ಏನಾದರೂ ತಕರಾರುಗಳು ಇದ್ದರೆ ನ್ಯಾಯಾಲಯದ ಮುಂದೆ ತಿಳಿಸತಕ್ಕದ್ದು, ಒಂದುವೇಳೆ ಗೈರು ಹಾಜರಾದಲ್ಲಿ ತಮ್ಮ ವಿರುದ್ಧ ಏಕ ಪಕ್ಷೀಯ ಆದೇಶವನ್ನು ಹೊರಡಿಸಲಾಗುವುದು.
ದಿನಾಂಕ : 05.03.2026 ರಂದು ನ್ಯಾಯಾಲಯ ಆದೇಶದ ಮೇರೆಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
Sheristedar, Prl Civil Judge Srirangapatna.
ಅರ್ಜಿದಾರರ ಪರ ವಕೀಲರು : **ಚಿರಂತನ ಜಿ.ಅನಂತ,**
ಎಲ್‌ಎಲ್‌ಬಿ, ಎಂ.ಹೆಚ್.ಆರ್.ಎಂ.
ಸ್ಥಳ: ಶ್ರೀರಂಗಪಟ್ಟಣ, ದೂರವಾಣಿ: 9036024777.

ಮಾನ್ಯ ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯ ನ್ಯಾಯಾಧೀಶರ ಸಮಕ್ಷಮಕ್ಕೆ ಶ್ರೀರಂಗಪಟ್ಟಣ.
Cr Misc No: 19/2026.
ಅರ್ಜಿದಾರರು : 1. ಶ್ರೀಮತಿ ರಾಜೇಶ್ವರಿ, ವಯಸ್ಸು 50 ವರ್ಷಗಳು ದಿವಂಗತ ಶ್ರೀ ದೊಡ್ಡರಾಜು ರವರ ಮೊದಲನೇ ಮಗ ಶ್ರೀ ರಾಜು ರವರ ಮರಣ ಹೊಂದಿದ್ದು ಹಾಗೂ ಅವರ ಪ್ರತಿನಿಧಿಯಾಗಿ ಅವರ ಧರ್ಮಪತ್ನಿ) ಹೊಸಹಟ್ಟಿ, ಶ್ರೀರಂಗಪಟ್ಟಣ ತಾಲೂಕು.
2. ಶ್ರೀಮತಿ ರಾಣಿ (ದಿವಂಗತ ಶ್ರೀ ದೊಡ್ಡರಾಜುರವರ ಎರಡನೇ ಮಗ ಶ್ರೀ ಶ್ರೀನಿವಾಸರವರ ಮರಣ ಹೊಂದಿದ್ದು ಹಾಗೂ ಅವರ ಪ್ರತಿನಿಧಿಯಾಗಿ ಅವರ ಧರ್ಮಪತ್ನಿ) ಕೆ.ಆರ್.ಎಸ್. ರಸ್ತೆ, ಮೊಗರಹಳ್ಳಿ, ಹೊಸಹಟ್ಟಿ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ-571438. 3. ಶ್ರೀ ಈಶ್ವರ ದಿವಂಗತ ಶ್ರೀ ದೊಡ್ಡ ರಾಜುರವರ ಮೂರನೇ ಮಗ ಹೊಸಹಟ್ಟಿ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ- 571438. 4. ಶ್ರೀ ಆರ್ಮುಗಂ ದಿವಂಗತ ಶ್ರೀ ದೊಡ್ಡರಾಜುರವರ ನಾಲ್ಕನೇ ಮಗ, ನಂ.94, ಕೆ.ಆರ್.ಎಸ್ ಮುಖ್ಯ ರಸ್ತೆ, ಹೊಸಹಟ್ಟಿ ಶ್ರೀರಂಗಪಟ್ಟಣ ತಾಲೂಕು, ಮಂಡ್ಯ- 571438.
// ವಿರುದ್ಧ //
ಎದುರುದಾರರು : ಪ್ರತಿವಾದಿ : ಜನನ ಮರಣ ನೋಂದಣಿ ಅಧಿಕಾರಿಗಳು, ತಾಲೂಕು ಕಚೇರಿ ಶ್ರೀರಂಗಪಟ್ಟಣ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
ಪತ್ರಿಕಾ ಪ್ರಕಟಣೆ
1, 2ನೇ ಅರ್ಜಿದಾರರು ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ಸೊಸೆಯಂದಿರಾಗಿರುತ್ತಾರೆ ಹಾಗೂ 3 ರಿಂದ 4ನೇ ಅರ್ಜಿದಾರರು ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ಮಕ್ಕಳಾಗಿರುತ್ತಾರೆ. ಹಾಗೂ ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. 1,2ನೇ ಅರ್ಜಿದಾರರು ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ಸೊಸೆಯಂದಿರಾಗಿರುತ್ತಾರೆ ಹಾಗೂ 3 ರಿಂದ 4ನೇ ಅರ್ಜಿದಾರರು ಮೃತ ದೊಡ್ಡರಾಜು ಬಿನ್ ರಂಗಸ್ವಾಮಿ ರವರ ರವರ ಮಕ್ಕಳಾಗಿರುತ್ತಾರೆ. ಮೃತ ದೊಡ್ಡ ರಾಜು ಬಿನ್ ರಂಗಸ್ವಾಮಿ ದಿನಾಂಕ : 10.04.1980 ರಂದು ಮರಣ ಹೊಂದಿರುತ್ತಾರೆ. ಅರ್ಜಿದಾರರು ಮೃತರ ವಾರಸುದಾರರಾಗಿರುತ್ತಾರೆ. ಪ್ರಕರಣವು ದಿನಾಂಕ : 15.04.2026 ರಂದು ವಿಚಾರಣೆಗಾಗಿ ಇರುತ್ತದೆ. ಎದುರುದಾರರಾದ ನೀವು ಅಂದು ಅಪರಾಹ್ನ ಮಧ್ಯಾಹ್ನ 11-00 ಗಂಟೆಗೆ ಖುದ್ದಾಗಿ ತಾವುಗಳಾಗಲೀ, ತಮ್ಮ ವಕೀಲರ ಮುಖಾಂತರವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ಏನಾದರೂ ತಕರಾರುಗಳು ಇದ್ದರೆ ನ್ಯಾಯಾಲಯದ ಮುಂದೆ ತಿಳಿಸತಕ್ಕದ್ದು, ಒಂದುವೇಳೆ ಗೈರು ಹಾಜರಾದಲ್ಲಿ ತಮ್ಮ ವಿರುದ್ಧ ಏಕ ಪಕ್ಷೀಯ ಆದೇಶವನ್ನು ಹೊರಡಿಸಲಾಗುವುದು.
ದಿನಾಂಕ : 05.03.2026 ರಂದು ನ್ಯಾಯಾಲಯ ಆದೇಶದ ಮೇರೆಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
Sheristedar, Prl Civil Judge Srirangapatna.
ಅರ್ಜಿದಾರರ ಪರ ವಕೀಲರು : ಚಿರಂತನ ಜಿ.ಅನಂತ,
ಎಲ್‌ಎಲ್‌ಬಿ, ಎಂ.ಹೆಚ್.ಆರ್.ಎಂ.
ಸ್ಥಳ: ಶ್ರೀರಂಗಪಟ್ಟಣ, ದೂರವಾಣಿ: 9036024777.

ಕರ್ನಾಟಕ ಸರ್ಕಾರ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾನಿಲಯ ಮತ್ತು ಆಸ್ಪತ್ರೆ

ನ್ಯೂ ಸಯ್ಯಾಜಿ ರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಮೈಸೂರು-570001
ದೂರವಾಣಿ ನಂ: 0821-2443701,0821-2442205, ಫ್ಯಾಕ್ಸ್ ನಂ:0821-2443701
E-mail ID:gamcmysore@gmail.com

ಸಂಖ್ಯೆ: ಸಂಖ್ಯೆ:ಸಆಆ/09/ಸರಬ/2025-26 ದಿನಾಂಕ: 09.03.2026

ಇ-ಟೆಂಡರ್ ಪ್ರಕಟಣೆ

ವಿಷಯ: ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು ಇಲ್ಲಿಗೆ ಅವಶ್ಯಕವಾಗಿ ಬೇಕಾಗಿರುವ ಆಯುರ್ವೇದ ಔಷಧಿಗಳನ್ನು ಸರಬರಾಜು ಮಾಡಲು 3ನೇ ಬಾರಿ ಇ-ಟೆಂಡರ್.

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು ಇಲ್ಲಿಗೆ ಅವಶ್ಯವಾಗಿ ಬೇಕಾಗಿರುವ ಆಯುರ್ವೇದ ಔಷಧಿಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 - ನಿಯಮ 2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ನೋಂದಾಯಿತ ಅರ್ಹ ಟೆಂಡರ್ದಾರರಿಂದ 3ನೇ ಬಾರಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಪೂರ್ಣ ವಿವರಗಳನ್ನು ವೆಬ್‌ಸೈಟ್ **https://kppp.karnataka.govin/** ಇದರಲ್ಲಿ ಪಡೆಯುವುದು.

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ	09.03.2026ರ ಅಪರಾಹ್ನ 5.00 ಗಂಟೆಯಿಂದ
ಬಿಡ್ ಮಾಡುವ ಕೊನೆಯ ದಿನಾಂಕ	23.03.2026ರ ಅಪರಾಹ್ನ 5.00 ಗಂಟೆವರೆಗೆ
ಟೆಂಡರ್‌ಗಳನ್ನು ತೆರೆಯುವ ದಿನಾಂಕ	25.03.2026ರ ಅಪರಾಹ್ನ 12.00 ಗಂಟೆಗೆ
ಆಯುರ್ವೇದ ಔಷಧಿಗಳ ಟೆಂಡರ್ ಅಂದಾಜು ಮೌಲ್ಯ ರೂ.15.00 ಲಕ್ಷ	ಇ.ಎಂ.ಡಿ ಮೊತ್ತ ರೂ.37,500/-

ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮೈಸೂರು ಇವರನ್ನು ಸಂಪರ್ಕಿಸಬಹುದಾಗಿದೆ

ಸಹಿ/- ಪ್ರಾಚಾರ್ಯರು
ಸರ್ಕಾರಿ ಆಯುರ್ವೇದ ವೈದಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು.
ವಾಸಾಸಂಇ/ಮೈಸೂರು/ಶಿರಡಿಸಾಯಿ/1811/2025-26

ಕರ್ನಾಟಕ ಸರಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ವನ್ಯಜೀವಿ ಉಪ ವಿಭಾಗ ದಾಂಡೇಲಿ-581325
email: acfwldandeli@gmail.com

ಕ್ರಸಂ:ಸ.ಅ.ಸಂ/ದಾಂಡೇಲಿ/ಇ-ಟೆಂಡರ್/ಫೀಡ್&ಫೊಡರ್/2025-26 ದಿನಾಂಕ: 05/03/2026

ಸವಿವರ ಮರು ಟೆಂಡರು ಪ್ರಕಟಣೆ

ವಿಷಯ: 2026-27 ನೇ ಸಾಲಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗದ ದಾಂಡೇಲಿ ವ್ಯಾಪ್ತಿಯಲ್ಲಿನ ಫಣಸೋಲಿ ವನ್ಯಜೀವಿ ವಲಯದ ಐದು ಇಲಾಖಾ ಸಾಕಾನೆಗಳಿಗೆ ಆನೆ ಪಡಿತರಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ್ ಕರೆದಿರುವ ಬಗ್ಗೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗದ ದಾಂಡೇಲಿ ವ್ಯಾಪ್ತಿಯಲ್ಲಿನ ಫಣಸೋಲಿ ವನ್ಯಜೀವಿ ವಲಯದ ಐದು ಇಲಾಖಾ ಸಾಕಾನೆಗಳಿಗೆ ಒಂದು ವರ್ಷದ ಅವಧಿಗೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವ ಸಲುವಾಗಿ ಅಧಿಕೃತ ಏಜೆನ್ಸಿಗಳಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ದರಪಟ್ಟಿಯ ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ.

(1) ಟೆಂಡರ ನಡೆಯುವ ಸ್ಥಳ: (ಇ-ಟೆಂಡರ್), ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ದಾಂಡೇಲಿ-581325 ಉತ್ತರ ಕನ್ನಡ ಜಿಲ್ಲೆ. (2) ಟೆಂಡರ್ ಪ್ರಶ್ನೆಗಳು ಮತ್ತು ಸ್ಪಷ್ಟಿಕರಣ ಕೊನೆಯ ದಿನಾಂಕ: 12-03-2026 ರಂದು ಸಾಯಂಕಾಲ 4.00 ಘಂಟೆಯವರೆಗೆ (3) ಟೆಂಡರ ಹಾಕಲು ಅಂತಿಮ ದಿನಾಂಕ ಮತ್ತು ವೇಳೆ: ದಿನಾಂಕ: 13-03-2026 ರಂದು ಬೆಳಿಗ್ಗೆ 11:00 ಘಂಟೆಯವರೆಗೆ ಟೆಂಡರ ಸ್ವೀಕರಿಸಲಾಗುವದು. (ಇ-ಪೋರ್ಟಲ್‌ನಲ್ಲಿ) (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ: ದಿನಾಂಕ: 16-03-2026 ರಂದು ಬೆಳಿಗ್ಗೆ 11:00 ಘಂಟೆಯ ನಂತರ ತಾಂತ್ರೀಕ ಟೆಂಡರ್ ತೆರೆಯಲಾಗುವುದು. (ಷರತ್ತುಗಳನ್ನು ಪೂರೈಸದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ. ದಿನಾಂಕ: 17-03-2026 ರಂದು ಬೆಳಿಗ್ಗೆ 11.00 ಘಂಟೆಯ ನಂತರ ಆರ್ಥಿಕ ಟೆಂಡರ ತೆರೆಯಲಾಗುವುದು. (ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು) (6) ಟೆಂಡರ ಸ್ವೀಕರಿಸುವ ಅಧಿಕಾರಿಗಳು: (ಇ-ಟೆಂಡರ್), ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ದಾಂಡೇಲಿ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ಉಪ ವಿಭಾಗ ದಾಂಡೇಲಿ
DIPR/KWR/KSMCA/1188/25-26 Dt. 09.03.2026

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ,
ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು-560 015.
E-mail: dcf.buzp@yahoo.in Phone No: 080-29900992.

ಸಂಖ್ಯೆ: ಎ1/ಬಿಯುಡಿ/ಟೆಂಡರ್/ಸಿಆರ್-26/2025-26 ದಿನಾಂಕ: 10-03-2026

ಟೆಂಡರ್ ಪ್ರಕಟಣೆ

2026-27ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್, ಕಗ್ಗಲೀಪುರ ಮತ್ತು ಯಲಹಂಕ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಮಾನ್ಸೂನ್ ನೆಡುತೋಪು ನಿರ್ಮಾಣ ಮತ್ತು 3ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ 2025-26ನೇ ಸಾಲಿನಲ್ಲಿ ನೋಂದಾಯಿತರಾಗಿರುವ ಅರ್ಹ ಗುತ್ತಿಗೆದಾರರು ಹಾಗೂ 2026-27ನೇ ಸಾಲಿನಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಲು ಇಚ್ಛಿಸುವ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೋಕ್ ಪೋರ್ಟಲ್ (https://.kppp.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 24-03-2026 ಸಂಜೆ 4.00 ಗಂಟೆಗೆ** ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 25-03-2026 ರಂದು ಸಂಜೆ 4:10 ಗಂಟೆ.** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ **ದಿನಾಂಕ 27-03-2026 ಮಧ್ಯಾಹ್ನ 3.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದನೇ ಬಾರಿ ಇ-ಪೋರ್ಟಲ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ (Auto Extension) ಮರು-ಟೆಂಡರ್‌ಗೆ **ದಿನಾಂಕ 01-04-2026 ಸಂಜೆ 4.00 ಗಂಟೆಯವರೆಗೂ** ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಿ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **02-04-2026 ಸಂಜೆ 4.10 ಗಂಟೆಗೆ.** ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ **ದಿನಾಂಕ 06-04-2026 ಮಧ್ಯಾಹ್ನ 3.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಸರ್ಕಾರಿ ರಜಾ ದಿನಗಳನ್ನು ಹೊರತು ಪಡಿಸಿ ಕಛೇರಿ ವೇಳೆಯಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/6138/ಆಕಾರ್/2025-26

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು-2 ರವರ ಕಛೇರಿ, 2ನೇ ಮಹಡಿ, ಎಂ-115,116,117, 4ನೇ ಮುಖ್ಯರಸ್ತೆ, ಕೈಗಾರಿಕಾ ಪ್ರದೇಶ, ರಾಜಾಜಿನಗರ ಬೆಂಗಳೂರು-560010.
Email ID: ee2bbmpwest@kridl.net | Mob: 8217053524

No:KRIDL/WKS/TND/IFT-03/KPPP/2025-26/1075 Dated:10/03/2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ) (ದ್ವಿಲಕೋಟೆ ಪದ್ಧತಿಯಂತೆ)

ಕಾಪಾಅ-2, ಕೆಆರ್‌ಐಡಿಎಲ್, ಬೆಂಗಳೂರು ರವರು ಕೆಳಕಂಡ ಕಾಮಗಾರಿಗಳಿಗೆ KW-4 ನಂತೆ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪ್ರತಿ ಕಾಮಗಾರಿಯ ಅಂದಾಜು ಮೊತ್ತ 995.00 ಲಕ್ಷಗಳು. ಇಎಂಡಿ ಮೊತ್ತ ಪ್ರತಿ ಕಾಮಗಾರಿಗೆ ರೂ.11.40ಲಕ್ಷಗಳು. ರೂ.1.40 ಲಕ್ಷಗಳನ್ನು ನೇರವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಪಾವತಿಸುವುದು, ಇನ್ನುಳಿದ 10.00 ಲಕ್ಷಗಳು ಬಿ.ಜಿ ಮುಖೇನ ಸಲ್ಲಿಸುವುದು. ಕಾಮಗಾರಿಯನ್ನು ಪೂರ್ಣಗೊಳಿಸಲು ನೀಡಲಾದ ಸಮಯ : ಪ್ರತಿ ಕಾಮಗಾರಿಗೆ 9 ತಿಂಗಳು (ಮಳೆಗಾಲ ಸೇರಿದಂತೆ).

Indent No (1) KRIDL/2025-26/OW/WORK_INDENT31,(2) KRIDL/2025-26/OW/WORK_INDENT32, ಎರಡು ಕಾಮಗಾರಿಗಳ ಟೆಂಡರ್‌ಗೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆ 16/03/2026 ಸಂಜೆ 4:00 ಗಂಟೆಗೆ, ಟೆಂಡರ್‌ನ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ:- 24/03/2026ರ ಸಂಜೆ 4.00 ಗಂಟೆಗಳವರೆಗೆ, ಕೆಪಿಪಿ-ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27/03/2026ರ ಸಂಜೆ 4.00 ಗಂಟೆಗಳು, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30/03/2026ರ ಸಂಜೆ :4:00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ 04/04/2026ರ ಸಂಜೆ 4.00 ಗಂಟೆಗೆ, ರೂ.10.00ಲಕ್ಷಗಳು ಇಎಂಡಿ ಬಿ.ಜಿಯನ್ನು ಮೇಲಿನ ತಿಳಿಸಿರುವ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ: 30/03/2026ರ ಸಂಜೆ 4.00 ಗಂಟೆಗಳವರೆಗೆ.

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು-2, ಮೇಲಿನ ಕಛೇರಿಯಲ್ಲಿ ಅಥವಾ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಯಾವುದೇ ಟೆಂಡರ್‌ನ್ನು ಅಂಗೀಕರಿಸುವ /ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-
DIPR/CP/ 6132/NR/2025-26 ಕಾರ್ಯಪಾಲಕ ಅಭಿಯಂತರರು-2, ಕೆಆರ್‌ಐಡಿಎಲ್, ಬೆಂಗಳೂರು.

ಕರ್ನಾಟಕ ಸರ್ಕಾರ-ಜಿಲ್ಲಾ ಪಂಚಾಯತ್, ಮಂಡ್ಯ
ಉಪ ನಿರ್ದೇಶಕರ ಕಚೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ,
ಹೆಚ್.ಕೆ.ವೀರಣ್ಣಗೌಡ ರಸ್ತೆ, ದೂರವಾಣಿ ಸಂಖ್ಯೆ: 08232-227336
ಸಂ:ಉನಿಮಂ/ಆಡಳಿತ/ಟೆಂಡರ್ ಪ್ರಕಟಣೆ/2025-26
ದಿನಾಂಕ : 06-03-2026

ಟೆಂಡರ್ ಪ್ರಕಟಣೆ

ವಿಷಯ:- ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ ಇವರ ಕಚೇರಿ ಉಪಯೋಗಕ್ಕಾಗಿ ಒಂದು ಸ್ವಿಫ್ಟ್ ಡಿಸೈರ್/ ಬೊಲೆರೋ/ ಟೊಯೊಟಾ ಇಟಿಯಾಸ್/ಎರ್ಟಿಗಾ ವಾಹನವನ್ನು ಬಾಹ್ಯಮೂಲದಿಂದ ವಾಹನ ಮತ್ತು ಚಾಲಕರ ಸೇವೆಯನ್ನು ಪಡೆಯುವ ಬಗ್ಗೆ.

ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಮಂಡ್ಯ ಇವರ ಕಚೇರಿ ಉಪಯೋಗಕ್ಕಾಗಿ 2018 ರ ನಂತರದ ತಯಾರಿಕೆ ಒಂದು ಸ್ವಿಫ್ಟ್ ಡಿಸೈರ್/ ಬೊಲೆರೋ/ ಟೊಯೊಟಾ ಇಟಿಯಾಸ್/ ಎರ್ಟಿಗಾ ವಾಹನವನ್ನು ಚಾಲಕರನ್ನು ಒಳಗೊಂಡಂತೆ ಬಾಹ್ಯಮೂಲದಿಂದ ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಒದಗಿಸಲು ಅರ್ಹ ವ್ಯಕ್ತಿ / ಸಂಸ್ಥೆ/ ಏಜೆನ್ಸಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತುಗಳು ಹಾಗೂ ನಿಬಂಧನೆಗಳನ್ನು ಪೂರೈಸುವವರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

(1) ಟೆಂಡರ್ ಪ್ರಕಟಣೆ ದಿನಾಂಕ : 06-03-2026. (2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ : 27-03-2026ರ ಸಂಜೆ: 5.30 ಗಂಟೆವರೆಗೆ. (3) ಬಿಡ್‌ಗಳನ್ನು ತೆರೆಯುವ ಸ್ಥಳ ಮತ್ತು ದಿನಾಂಕ : ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30-03-2026 ರ ಬೆಳಿಗ್ಗೆ 11.30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : 30-03-2026 ರ ಬೆಳಿಗ್ಗೆ 12.30 ಗಂಟೆಗೆ. (ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಆರ್ಥಿಕ ಬಿಡ್‌ನ್ನು ಮಾತ್ರ ತೆರೆಯಲಾಗುವುದು). ಬಿಡ್ ತೆರೆಯುವ ಸ್ಥಳ : ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ. (4) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ : ರೂ.10,000/- ಗಳು. ಷರತ್ತುಗಳು, ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಉಪ ನಿರ್ದೇಸಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/872/2025-26

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080-22255210
ಸಂ: ಕಾಅ/ಕವಿ.1/ಎಇ-4/2025-26/82 ದಿನಾಂಕ: 07.03.2026

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರ್-ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. **ಕಾಮಗಾರಿ ಹೆಸರು: 1)** ತಿರುಪತಿಯ ತಿರುಚನೂರ್‌ನಲ್ಲಿರುವ ಮೈಸೂರು ಮಹಾರಾಜ ಚೌಲ್ಟ್ರಿಯ ನವೀಕರಣ ಕಾಮಗಾರಿ (ಇತರೆ ವರ್ಗಕ್ಕೆ ಮೀಸಲು) (ಟೆಂಡರ್ ಉಲ್ಲೇಖ: ಪಿಡಬ್ಲ್ಯೂಡಿ/2025-26/ಬಿಡಿ/ವರ್ಕ್-ಇಂಡೆಂಟ್33697) (1ನೇ ಕರೆ). ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.308.14 ಲಕ್ಷಗಳು.** ಇಎಂಡಿ: **ರೂ.4,62,300/-** (ರೂ.1,00,000/- ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ಉಳಿದ ಹಣ ರೂ.3,62,300/-ನ್ನು ಬಿಜಿ, ಎಫ್‌ಡಿಆರ್, ಬ್ಯಾಂಕರ್ಸ್ ಸರ್ಟಿಫಿಕೇಟ್ ಮೂಲಕ ಪಾವತಿಸುವುದು). ಕಾಲಾವಧಿ: **9 ತಿಂಗಳು (ಮಳೆಗಾಲ ಸೇರಿದಂತೆ). 2)** ಬೆಂಗಳೂರಿನ ಕುಮಾರ ಕೃಪ ರಸ್ತೆಯಲ್ಲಿರುವ ನೂತನ ಕುಮಾರ ಕೃಪ ಅತಿಥಿಗೃಹದಲ್ಲಿ ಗ್ರೌಟಿಂಗ್, ಕ್ರ್ಯಾಕ್ ಫಿಲ್ಲಿಂಗ್, ವಾಟರ್ ಪ್ರೂಫಿಂಗ್ ಒದಗಿಸುವ ಮೂಲಕ 4ನೇ ಮತ್ತು 7ನೇ ಮಹಡಿಯಲ್ಲಿನ ಟೆರೇಸ್‌ಗಳಿಂದ ಮತ್ತು 4ನೇ ಮಹಡಿಯಲ್ಲಿನ ಎಕ್ಸ್‌ಪಾನ್ಷನ್ ಜಾಯಿಂಟ್‌ಗಳಿಂದ ಸೋರಿಕೆಯನ್ನು ತಡೆಯುವುದು ಮತ್ತು ಇತರ ಸಂಬಂಧಿತ ಕೆಲಸಗಳು (IIA ವರ್ಗಕ್ಕೆ ಮೀಸಲು). (ಟೆಂಡರ್ ಉಲ್ಲೇಖ: ಪಿಡಬ್ಲ್ಯೂಡಿ/2025-26/ಬಿಡಿ/ವರ್ಕ್-ಇಂಡೆಂಟ್30266/ಕರೆ-2) (2ನೇ ಕರೆ). ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.40.70 ಲಕ್ಷಗಳು.** ಇಎಂಡಿ: **ರೂ.40,710/-.** ಕಾಲಾವಧಿ: **2 ತಿಂಗಳು.** ಪ್ರತೀ ಕಾಮಗಾರಿಯ ದಸ್ತಾವೇಜು ಬೆಲೆ: ಇ-ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **16.03.2026, ಸಂಜೆ 4.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರಗಳು, ಮೀಸಲಾತಿ, ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ ಉನಿ-ಸಿ.ಪಿ/ 6122/ ಕೆಎಸ್‌ಎಂಸಿಎ/ 2025-26

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/171/2025-26/3402 ದಿನಾಂಕ : 09.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ವೇಮುಲ ಸತ್ಯ ನಾರಾಯಣ ಬಿನ್ ವೆಂಕಟೇಶ್ವರರಾವ್	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	201/1	0-37.04	ವ್ಯವಸಾಯ	ವಸತಿ
2.	Sri B H Mohamad Dawood ಬಿನ್ Sri .Hanief Sahib	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	201/3	0-7.12	ವ್ಯವಸಾಯ	ವಸತಿ
3.	Mathew Abraham ಬಿನ್ Late Sri. Chacko Abraham	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	205/3	1-3.04	ವ್ಯವಸಾಯ	ವಸತಿ
4.	ಶ್ರೀ ಅಲ್ಲೂರಿ ಇಂದಿರಾ ಕೋಂ ಲೇ॥ ಎ.ಗಂಗರಾಜು	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	205/4	0-28	ವ್ಯವಸಾಯ	ವಸತಿ
5.	ಶ್ರೀ ವೈ.ಜಿ. ವಸಂತಕುಮಾರ್ ಬಿನ್ ವೈ.ಎಂ. ಗೋಪಾಲಪ್ಪ	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	205/5	0-16	ವ್ಯವಸಾಯ	ವಸತಿ
6.	ಶ್ರೀ ಬುದ್ಧರಾಜು ಚಂದ್ರಶೇಖರ್ ರಾಜು ಬಿನ್ ಬುದ್ಧರಾಜು ವೆಂಕಟಬಂಗಾರರಾಜು	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	205/6	0-15	ವ್ಯವಸಾಯ	ವಸತಿ
7.	Smt Amala penupolu ಕೋಂ P.Anoop	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	205/7	0-7.12	ವ್ಯವಸಾಯ	ವಸತಿ
8.	Smt G.Visalakshi ಕೋಂ Rajashekar	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	205/8	0-07	ವ್ಯವಸಾಯ	ವಸತಿ
9.	Sri Alla Avanash reddy ಬಿನ್ A Gopinath reddy	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	205/9	0-06	ವ್ಯವಸಾಯ	ವಸತಿ
10.	Sri Alla Akash reddy ಬಿನ್ A Gopinath reddy	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	205/10	0-06	ವ್ಯವಸಾಯ	ವಸತಿ
11.	ಶ್ರೀಮತಿ ಅಲ್ಲೂರಿ ಇಂದಿರಾ ಕೋಂ ಲೇ॥ ಎ ಗಂಗರಾಜು	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	206/1	0-23	ವ್ಯವಸಾಯ	ವಸತಿ
12.	ಶ್ರೀ ವೇಮುಲ ಸತ್ಯನಾರಾಯಣ ಬಿನ್ ವೆಂಕಟೇಶ್ವರ ರಾವ್	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	206/3	0-27	ವ್ಯವಸಾಯ	ವಸತಿ
13.	ಶ್ರೀಮತಿ ಅಲ್ಲೂರಿ ಇಂದಿರಾ ಕೋಂ ಲೇ॥ ಎ ಗಂಗರಾಜು	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	206/4	0-13.12	ವ್ಯವಸಾಯ	ವಸತಿ
14.	ಶ್ರೀ ಅಲ್ಲೂರಿ ಇಂದಿರಾ ಕೋಂ ಲೇ॥ ಎ ಗಂಗರಾಜು, Sri Bala Krishnam Raju Kothapalli ಬಿನ್ Rangaraju, Sri Lakshmipathi Raju Penmesta ಬಿನ್ Ramakrishnam Raju & Deepa ಕೋಂ Raj,	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	207/1	1-30	ವ್ಯವಸಾಯ	ವಸತಿ
15.	Sri Giridhar A G ಬಿನ್ A Govindaswamy Naidu,	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	207/2	0-14	ವ್ಯವಸಾಯ	ವಸತಿ
16.	ಶ್ರೀಮತಿ ಅಲ್ಲೂರಿ ಇಂದಿರಾ ಕೋಂ ಲೇ॥ ಎ ಗಂಗರಾಜು	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	208/1	1-03	ವ್ಯವಸಾಯ	ವಸತಿ
17.	ಶ್ರೀ ವೈ.ಜಿ ವಸಂತಕುಮಾರ್ ಬಿನ್ ವೈ.ಎಂ ಗೋಪಾಲಪ್ಪ & ಶ್ರೀಮತಿ ಬಿ.ವಿ ಸೌಮ್ಯ ಕೋಂ ವೆಂಕಟೇಶ ಕೆ	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	213/2	1-27	ವ್ಯವಸಾಯ	ವಸತಿ
18.	ಶ್ರೀಮತಿ ವನಿತ ಸಿ ಕೋಂ ರುದ್ರೇಶ್ ಜೆ ಆರ್ & ಶ್ರೀಮತಿ ಕೆ.ಶೋಭಾ ಕೋಂ ಹೆಚ್ ದಿವಾಕರ್	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	213/3	0-5.08	ವ್ಯವಸಾಯ	ವಸತಿ
19.	ಶ್ರೀಮತಿ ವಿದ್ಯಾಶ್ರೀ ಕೆ.ಟಿ ಕೋಂ ಶಿವಕುಮಾರ್ ಜಿ	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	213/4	0-05.08	ವ್ಯವಸಾಯ	ವಸತಿ
20.	ಶ್ರೀ ವೇಮುಲ ಸತ್ಯನಾರಾಯಣ ಬಿನ್ ವೆಂಕಟೇಶ್ವರರಾವ್	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	214/1	1-03.08	ವ್ಯವಸಾಯ	ವಸತಿ
21.	ಶ್ರೀ ಆರ್.ಹರಿನಾಥ್ ಬಿನ್ ಕೆ.ರಂಗಪ್ಪ & Chekuri Bhimaraju ಬಿನ್ Chekuri Venkat Raju	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	214/2	2-26	ವ್ಯವಸಾಯ	ವಸತಿ
22.	ಶ್ರೀಮತಿ ಪರಿಮಳಾ ಶೇಲ್ಲಿಕೇರಿ ಕೋಂ ಲೇ॥ ಅಜಿತ್ ಶೇಲ್ಲಿಕೇರಿ	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	214/3	0-05.08	ವ್ಯವಸಾಯ	ವಸತಿ

ಷರಾ :- ಪ್ರಸ್ತಾವನೆಯಲ್ಲಿನ ಅರ್ಜಿದಾರರುಗಳು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಪಿ.ಎ, ದೇವನಹಳ್ಳಿ.
ವಾ.ಸಾ.ಸಂ.ಇ/ವಾಪ್ರ/6142/ಸಾಯಿ/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸುವರ್ಣ ಮಹೋತ್ಸವ

ಧ್ಯೇಯವಾಕ್ಯ, ಲೋಗೋ ಆಹ್ವಾನ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ತನ್ನ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದೆ. ಈ ವಿಶೇಷ ಸಂದರ್ಭಕ್ಕಾಗಿ ಆಕರ್ಷಕ ಲೋಗೋ ಮತ್ತು ಧ್ಯೇಯವಾಕ್ಯ'(ಟ್ಯಾಗ್ ಲೈನ್) ಸಿದ್ಧಪಡಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶ ನೀಡಿದೆ.

ಬಿಡಿಎ ಸ್ಥಾಪನೆಯಾಗಿ ಈಗ 50 ವರ್ಷ ಪೂರೈಸುತ್ತಿದೆ. ಈ ಐತಿಹಾಸಿಕ ಮೈಲಿಗಲ್ಲನ್ನು ಸ್ಮರಿಸಲು ಪ್ರಾಧಿಕಾರವು ವಿಶೇಷ ಸ್ಪರ್ಧೆಯೊಂದನ್ನು ಏರ್ಪಡಿಸಿದ್ದು, ಸಾರ್ವಜನಿಕರಿಂದ ಸೃಜನಾತ್ಮಕ ಲೋಗೋ ಮತ್ತು ಧ್ಯೇಯವಾಕ್ಯಗಳನ್ನು ಆಹ್ವಾನಿಸಿದೆ.

ನಗರದ ಯೋಜಿತ ಬೆಳವಣಿಗೆ ಮತ್ತು ಮೂಲ ಸೌಕರ್ಯಕ್ಕೆ ಬಿಡಿಎ ನೀಡಿದ ಕೊಡುಗೆಯನ್ನು ಪ್ರತಿಬಿಂಬಿಸುವಂತಿರಬೇಕು ಎಂಬುದು ಈ ಸ್ಪರ್ಧೆಯ ಆಶಯವಾಗಿದೆ. ಆಯ್ದ ಅತ್ಯುತ್ತಮ ವಿನ್ಯಾಸಗಳಿಗೆ ಆಕರ್ಷಕ ನಗದು ಬಹುಮಾನವನ್ನು ಘೋಷಿಸಲಾಗಿದ್ದು, ವಿಜೇತ ಲೋಗೋ ಮತ್ತು ಟ್ಯಾಗ್ ಲೈನ್ ಅನ್ನು ಪ್ರಾಧಿಕಾರದ ಅಧಿಕೃತ ಸುವರ್ಣ ಮಹೋತ್ಸವದ ಲಾಂಛನವನ್ನಾಗಿ ಬಳಸಲಾಗುವುದು ಎಂದು ತಿಳಿಸಿದೆ.



ಅತ್ಯುತ್ತಮ ಲೋಗೋ ವಿನ್ಯಾಸ ಮತ್ತು ಟ್ಯಾಗ್ ಲೈನ್ ವಿಜೇತರು ಒಂದು ಲಕ್ಷ ರೂ. ನಗದು ಬಹುಮಾನ ಪಡೆಯಲಿದೆ. 18 ವರ್ಷ ಮೇಲ್ಪಟ್ಟ ಕನ್ನಡಿಗರು ಇದರಲ್ಲಿ ಭಾಗವಹಿಸಬಹುದು. ಕಲಾವಿದರು, ವಿದ್ಯಾರ್ಥಿಗಳು, ಹವ್ಯಾಸಿ ವಿನ್ಯಾಸಕರು, ವೃತ್ತಿಪರರು, ಸೃಜನಾತ್ಮಕ ಸಂಸ್ಥೆಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಒಬ್ಬರು ಒಂದು ಲೋಗೋ, ಒಂದು ಟ್ಯಾಗ್ ಲೈನ್ ಮಾತ್ರ ಸಲ್ಲಿಸಬಹುದು. ಕನ್ನಡ, ಇಂಗ್ಲಿಷ್ ಅಥವಾ ಎರಡೂ ಭಾಷೆಗಳಲ್ಲಿ ಟ್ಯಾಗ್ ಲೈನ್‌ಗಳಿರಬಹುದು. ಆಸಕ್ತರು ತಮ್ಮ ವಿನ್ಯಾಸಗಳನ್ನು ಡಿಜಿಟಲ್ ರೂಪದಲ್ಲಿ ಬಿಡಿಎ ಅಧಿಕೃತ ವೆಬ್‌ಸೈಟ್ https://bdakarnataka.in/ನಲ್ಲಿ ಪ್ರವೇಶ ಪತ್ರವನ್ನು ಸಲ್ಲಿಸಬೇಕಾಗಿದ್ದು, ಮತ್ತಷ್ಟು ವಿವರಗಳನ್ನು ಪಡೆಯಬಹುದಾಗಿದೆ. ಪ್ರವೇಶಪತ್ರ ಸಲ್ಲಿಸಲು ಮಾರ್ಚ್ 24, ರಾತ್ರಿ 11:59 ಗಂಟೆ ಕೊನೆಯ ದಿನವಾಗಿದೆ.

ಸರಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಮಾಹಿತಿ ನಿರ್ಬಂಧಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಸಹಯೋಗ್ ಪೋರ್ಟಲ್ ಆರಂಭಿಸಿರುವುದನ್ನು ಎತ್ತಿಹಿಡಿದಿರುವ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಎಕ್ಸ್ ಕಾರ್ಪ್ ಸಲ್ಲಿಸಿರುವ ಅರ್ಜಿ ಸಂಬಂಧ ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಮಂಗಳವಾರ ನೋಟಿಸ್ ಜಾರಿಗೊಳಿಸಿದೆ.

ಪೋರ್ಟಲ್ ಆರಂಭ ಎತ್ತಿ ಹಿಡಿದ ಏಕಸದಸ್ಯ ಪೀಠ


ಏಕಸದಸ್ಯ ಪೀಠದ ಆದೇಶ ಬದಿಗೆ ಸರಿಸುವಂತೆ ಕೋರಿ ಎಕ್ಸ್ ಕಾರ್ಪ್ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ.ಪೂಣಚ್ಚ ಅವರ ವಿಭಾಗೀಯ ಪೀಠ ನಡೆಸಿತು.

ವಿಚಾರಣೆ ಆರಂಭವಾಗುತ್ತಿದ್ದಂತೆ ಎಕ್ಸ್ ಕಾರ್ಪ್ ಪ್ರತಿನಿಧಿಸಿದ್ದ ಹಿರಿಯ ವಕೀಲ ಕೆ.ಜಿ. ರಾಘವನ್ ಅವರು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್‌ಗಳಾದ 69ಎ ಮತ್ತು 79 ಅನ್ನು ಪ್ರಶ್ನಿಸಲಾಗಿದೆ. ಸೆಕ್ಷನ್ 79 ಅಧಿಕಾರದ ಮೂಲವಲ್ಲ. 69ಎ ಮತ್ತು 79 ಎರಡನ್ನೂ ಒಟ್ಟಿಗೆ ಓದಬೇಕು. ಸೆಕ್ಷನ್ 79ಅಧಿಕಾರ ಹೊಂದಿರುವ ನಿಬಂಧನೆಯಲ್ಲ ಎಂದರು.

ಕೆಲ ಕಾಲ ವಾದ ಆಲಿಸಿದ ಪೀಠವು ಇದನ್ನು ಪರಿಶೀಲಿಸಬೇಕಿದೆ. ಎಷ್ಟು ಸಮಯಬೇಕಾಗುತ್ತದೆ. ಈ ಪ್ರಕರಣಕ್ಕೆ ಎಷ್ಟು ಸಮಯ ನಿಗದಿಪಡಿಸಬೇಕು? ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತು. ಆಗ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ. ಅರವಿಂದ್ ಕಾಮತ್ ಅವರು ಒಂದು ತಿಂಗಳು ಸಮಯಬೇಕು. ಈ ಪ್ರಕರಣದಲ್ಲಿ ಸಾಲಿಸಿಟರ್ ಜನರಲ್ ವಾದಿಸಲಿದ್ದಾರೆ ಎಂದರು.

ಇದನ್ನು ಆಲಿಸಿದ ಪೀಠವು ಕೇಂದ್ರ ಕಾನೂನು, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ, ಗೃಹ, ಹಣಕಾಸು, ರಕ್ಷಣೆ, ರೈಲ್ವೆ, ಬೃಹತ್ ಕೈಗಾರಿಕೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳಿಗೆ ನೋಟಿಸ್ ಜಾರಿಗೊಳಿಸಿ, ವಿಚಾರಣೆಯನ್ನು ಜೂ.11ಕ್ಕೆ ಮುಂದೂಡಿತು.

ಲಾಂಛನ ಲೋಕಾರ್ಪಣೆ



ರಾಜ್ಯ ಚುನಾವಣಾ ಆಯೋಗದ ನೂತನ ಲಾಂಛನವನ್ನು ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ಲೋಕಾರ್ಪಣೆಗೊಳಿಸಿದರು. ಉಪಲೋಕಾಯುಕ್ತ ನ್ಯಾ.ಬಿ.ವೀರಪ್ಪ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

ಕಿರುಸುದ್ದಿ

ಮಾ.15ರಂದು ಲೈವ್ ಆರ್ಟ್ ಪ್ರದರ್ಶನ

ಬೆಂಗಳೂರು : ವೆಂಕಟಪ್ಪ ಚಿತ್ರಶಾಲೆಯ (ಆರ್ಟ್ ಗ್ಯಾಲರಿ) 50ವರ್ಷ ಮತ್ತು ವೆಂಕಟಪ್ಪ ಆರ್ಟ್ ಗ್ಯಾಲರಿ ಫೋರಮ್‌ನ ಹತ್ತು ವರ್ಷಗಳ ಸಂಭ್ರಮಾಚರಣೆಯ ಪ್ರಯುಕ್ತ ಮಾ.15ರವರೆಗೆ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಲೈವ್ ಆರ್ಟ್ ಪ್ರದರ್ಶನ ಮತ್ತು ವಿಚಾರ ಸಂಕಿರಣ ಸೇರಿದಂತೆ ವಿವಿಧ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಲಾಪ್ರದರ್ಶನ, ಪ್ರಾತ್ಯಕ್ಷಿಕೆ, ಪ್ರಾದೇಶಿಕ ಕಲಾವಲಯ ಕುರಿತಂತೆ ಪ್ರಸ್ತುತಿ, ಲೈವ್ ಆರ್ಟ್ ಪ್ರದರ್ಶನ ಮತ್ತು ವಿಚಾರ ಸಂಕಿರಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರವು ಮಾ7 ರಿಂದ ಆರಂಭಗೊಂಡಿದ್ದು, ಪ್ರದರ್ಶನವು ಮಾ.15 ರವರೆಗೆ ಮಧ್ಯಾಹ್ನ 12 ರಿಂದ ಸಂಜೆ 7ರವರೆಗೆ. ಮುಂದುವರೆಯುತ್ತದೆ.

ಮನೆಯಲ್ಲಿ ಚಿನ್ನಾಭರಣ ಕಳವು: ಐವರ ಬಂಧನ



ಬೆಂಗಳೂರು: ಬನಶಂಕರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಬೃಹತ್ ಮನೆ ಕಳ್ಳತನ ಪ್ರಕರಣವನ್ನು ಭೇದಿಸಿ, ಐವರು ಆರೋಪಿಗಳನ್ನು ಬಂಧಿಸಿ ಅವರಿಂದ ಸುಮಾರು 1.26 ಕೋಟಿ ರೂ. ಮೌಲ್ಯದ ಚಿನ್ನಾಭರಣ ಹಾಗೂ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ವಜ್ರಮುನಿ ಅಲಿಯಾಸ್ ಪಪ್ಪಿ (25), ಮಿಥುನ್ ಅಲಿಯಾಸ್ ಮಿಲ್ಲಿ (22), ಆಂಧ್ರಪ್ರದೇಶದ ಲಿವಿತ್ ಅಲಿಯಾಸ್ ಕಡ್ಡಿ (23) ಎಂಬವರನ್ನು ಬಂಧಿಸಿದ್ದಾರೆ. ಇವರ ಜತೆಗೆ ಕಳ್ಳತನದ ಮಾಲು ಸ್ವೀಕರಿಸಿದ್ದ ಬನಶಂಕರಿ 1ನೇ ಹಂತದ ಪುನೀತ್ (34), ಇವರಿಗೆ ಸಹಕರಿಸಿದ್ದ ಪುನೀತ್ ಅಲಿಯಾಸ್ ನಂದಿ (19) ಬಂಧಿತರು. ಬನಶಂಕರಿ 2ನೇ ಹಂತದಲ್ಲಿ ವಾಸವಿರುವ ಸಾಫ್ಟ್‌ವೇರ್ ಇಂಜಿನಿಯರ್ ಗೋಪಿ ರವಿಚಂದ್ರನ್ ಅವರ ಮನೆಯಲ್ಲಿ ಈ ಕಳ್ಳತನ ನಡೆದಿತ್ತು. ಜ.25ರಂದು ಇಡೀ ಕುಟುಂಬ ಸಮೇತ ತಮಿಳುನಾಡಿನಗೆ ತೆರಳಿದ್ದಾಗ, ಕಿಡಿಗೇಡಿಗಳು ಮನೆಯ ಬೀಗ ಮುರಿದು ಒಳನುಗ್ಗಿದ್ದರು. ಬೀರುವಿನಲ್ಲಿದ್ದ 900 ಗ್ರಾಂ ಚಿನ್ನಾಭರಣ, 2 ವಜ್ರದ ನೆಕ್ಲೇಸ್ ಹಾಗೂ 110 ಗ್ರಾಂ ಪ್ಲಾಟಿನಂ ಆಭರಣಗಳನ್ನು ದೋಚಲಾಗಿತ್ತು. ಈ ಬಗ್ಗೆ ಬನಶಂಕರಿ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಫೆ.5ರಂದು ಯಲಹಂಕ ರೈಲ್ವೆ ನಿಲ್ದಾಣದ ಬಳಿ ಓರ್ವ ಆರೋಪಿಯನ್ನು ದ್ವಿಚಕ್ರ ವಾಹನ ಸಮೇತ ವಶಕ್ಕೆ ಪಡೆದಿದ್ದರು. ಆತನ ನೀಡಿದ ಮಾಹಿತಿಯ ಮೇರೆಗೆ ಬನಶಂಕರಿ 1ನೇ ಹಂತದಲ್ಲಿ ಮಾಲು ಸ್ವೀಕರಿಸಿದ್ದ ವ್ಯಕ್ತಿಯನ್ನು, ಕೋಣನಕುಂಟೆ ಮೆಟ್ರೋ ನಿಲ್ದಾಣದ ಬಳಿ ಮತ್ತೊಬ್ಬ ಸಹಚರನನ್ನು ಹಾಗೂ ತಲಕಾಡಿನ ಕಲಿಯೂರು ಗ್ರಾಮದಲ್ಲಿ ಉಳಿದಿಬ್ಬರನ್ನು ಬಂಧಿಸಲಾಗಿದೆ.

ಆರೋಪಿಗಳಿಂದ ಒಟ್ಟು 589 ಗ್ರಾಂ ಚಿನ್ನಾಭರಣ, 1.126 ಕೆ.ಜಿ ಬೆಳ್ಳಿಯ ವಸ್ತುಗಳು ಹಾಗೂ 9.50 ಲಕ್ಷ ನಗದನ್ನು ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ, ಚಿನ್ನಾಭರಣ ಮಾರಿ ಖರೀದಿಸಿದ್ದ ಒಂದು ಕಾರು ಮತ್ತು ಕೃತ್ಯಕ್ಕೆ ಬಳಸಿದ್ದ ಮೂರು ದ್ವಿಚಕ್ರ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ ಬಿ.ಜಗಲಾಸರ್' ಮಾರ್ಗದರ್ಶನದಲ್ಲಿ, ಎಸಿಪಿ ವಿ. ನಾರಾಯಣಸ್ವಾಮಿ, ಇನ್ಸ್‌ಪೆಕ್ಟರ್ ಕೊಟ್ರೇಶಿ ಇದ್ದರು.

ಡ್ರೋನ್ ಸರ್ವೆ ಮೂಲಕ ಹೆಚ್ಚುವರಿ ತೆರಿಗೆ ಮತ್ತು ದಂಡ: ಡಿಸಿಎಂ ಡಿ.ಕೆ.ಶಿವಕುಮಾರ್

ಆಕ್ಷೇಪವಿದ್ದಲ್ಲಿ ಭೌತಿಕ ಸರ್ವೆಗೂ ಅವಕಾಶ

ವಿಧಾನಸಭೆ: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ವ್ಯಾಪ್ತಿಯಲ್ಲಿ ಡ್ರೋನ್ ಸರ್ವೆ ಮೂಲಕ ಹೆಚ್ಚುವರಿ ತೆರಿಗೆ ಮತ್ತು ದಂಡ ವಿಧಿಸಲಾಗುತ್ತಿದೆ. ಆಕ್ಷೇಪವಿದ್ದರೆ ಅರ್ಜಿ ಕೊಡಲಿ. ಭೌತಿಕ ಸರ್ವೆ ಮಾಡಲಾಗುತ್ತದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಹೇಳಿದರು.



ತೆರಿಗೆ ಮತ್ತು ದಂಡ ವಿಧಿಸಲು ಬಿಜೆಪಿ ಆಕ್ಷೇಪ

ಪ್ರಶ್ನೋತ್ತರ ಕಲಾಪದಲ್ಲಿ ನಗರದಲ್ಲಿ ಡ್ರೋನ್ ಸರ್ವೆ ಮೂಲಕ ಮನೆಗಳಿಗೆ ಬಾಕಿ ಹೆಚ್ಚುವರಿ ತೆರಿಗೆ, ದಂಡ ವಿಧಿಸುತ್ತಿರುವ ವಿಚಾರದ ಬಗ್ಗೆ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಪ್ರಸ್ತಾಪಿಸಿದರು. ಜಿಬಿಎ ವ್ಯಾಪ್ತಿಯಲ್ಲಿ ಸಾರ್ವಜನಿಕ ನಿವೇಶನ, ಕಟ್ಟಡವನ್ನು ಡ್ರೋನ್ ಕ್ಯಾಮೆರಾ ಮೂಲಕ ಸರ್ವೇ ನಡೆಸಿ ಹೆಚ್ಚುವರಿ ತೆರಿಗೆ ಮತ್ತು ದಂಡ ವಿಧಿಸಿ ಶೋಕಾಸ್ ನೋಟಿಸ್‌ಗಳನ್ನು ನೀಡಲಾಗುತ್ತಿದೆ. ಒಂದೊಂದು ಮನೆಗೆ 7-8 ಲಕ್ಷ ರೂ.ನಿಂದ 30 ಲಕ್ಷ ರೂ.ವರೆಗೆ ತೆರಿಗೆ, ದಂಡ ಹಾಕುತ್ತಿದ್ದಾರೆ ಎಂದು ಆಕ್ಷೇಪಿಸಿದರು.

> ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024ರ ಪ್ರಕರಣ 150ರನ್ವಯ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಿ ವ್ಯತ್ಯಾಸದ ಮೊತ್ತ, ಅದಕ್ಕೆ ಸಮನಾದ ದಂಡ ಮತ್ತು ಪಾವತಿಸುವ ದಿನಾಂಕದವರೆಗೆ ಅನ್ವಯವಾಗುವ ಬಡ್ಡಿ ವಿಧಿಸಲಾಗು ತ್ತಿದೆ. ಹೆಚ್ಚುವರಿ ತೆರಿಗೆ ಮತ್ತು ದಂಡವನ್ನು ವಿಧಿಸು ತ್ತಿಲ್ಲ. ಭೌತಿಕ ಸರ್ವೆಯನ್ನೂ ಮಾಡುತ್ತೇವೆ. ಡ್ರೋನ್ ಸರ್ವೆಯಲ್ಲಿ ಲೋಪಗಳಾಗಿದ್ದರೆ, ಸಮಾಧಾನವಿಲ್ಲದಿದ್ದರೆ ಅಂಥವರು ಬಂದು ಅರ್ಜಿ ಕೊಡಲಿ.
> ■ ಡಿ.ಕೆ.ಶಿವಕುಮಾರ್, ಡಿಸಿಎಂ



ಇದಕ್ಕೆ ದನಿಗೂಡಿಸಿದ ಬಿಜೆಪಿ ಶಾಸಕ ಸುರೇಶ್‌ಕುಮಾರ್, ಇದು ಆಸ್ತಿ ತೆರಿಗೆ ಭಯೋತ್ಪಾದನೆ. ಈಗಾಗಲೇ ಬೆಂಗಳೂರಿನ ನಾಗರಿಕರು ಹಲವು ಸ್ವರೂಪದ ತೆರಿಗೆಗಳಿಂದ ಬಸವಳಿದಿದ್ದಾರೆ. ಈ ತೆರಿಗೆ ನೋಟಿಸ್ ವಾಪಸು ತೆಗೆದುಕೊಳ್ಳಿ ಎಂದು ಒತ್ತಾಯಿಸಿದರು.

24,874 ಸ್ವತ್ತಿಗೆ ಶೋಕಾಸ್ ನೋಟಿಸ್

ಜಿಬಿಎ ವ್ಯಾಪ್ತಿಯಲ್ಲಿ 24,874 ಸ್ವತ್ತುಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ. ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 1,760 ಶೋಕಾಸ್ ನೋಟಿಸ್, ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ 895 ನೋಟಿಸ್, ಪಶ್ಚಿಮ ನಗರ ಪಾಲಿಕೆಯಲ್ಲಿ 10,662 ನೋಟಿಸ್, ಉತ್ತರ ನಗರ ಪಾಲಿಕೆಯಲ್ಲಿ 3,352 ಮತ್ತು ದಕ್ಷಿಣ ನಗರ ಪಾಲಿಕೆಯಲ್ಲಿ 8,205 ನೋಟಿಸ್ ನೀಡಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಇದಕ್ಕೆ ಉತ್ತರಿಸಿದ ಡಿ.ಕೆ.ಶಿವಕುಮಾರ್, ಮೊದಲು ಸ್ವಯಂ ಮೌಲ್ಯಮಾಪನ ಯೋಜನೆ ತಂದವನು ನಾನು. ಬ್ಯಾಟರಾಯನಪುರ ಕ್ಷೇತ್ರದಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿತ್ತು. ನಂತರ ಒಂದು ಬಾರಿ ಇತ್ಯರ್ಥಗೊಳಿಸುವ ಅವಕಾಶವನ್ನೂ ಕೊಡುತ್ತಿದ್ದೇವೆ. 2020ರ ಕಾನೂನನ್ನೇ ಜಿಬಿಎಗೆ ಅನ್ವಯಿಸಲಾಗಿದೆ. ಅದರಲ್ಲಿದ್ದ ಶೇ.100 ದಂಡವನ್ನು ಶೇ.50ಕ್ಕೆ ಇಳಿಸಲಾಗಿದೆ. ನಮ್ಮ ಸರ್ಕಾರವು ದಂಡದ ಪ್ರಮಾಣ ಕಡಿಮೆ ಮಾಡಿದೆ. ಯಾರಿಗಾದರೂ ಸಮಸ್ಯೆ ಇದ್ದರೆ ಅರ್ಜಿ ಕೊಡಲಿ, ಸಮಸ್ಯೆ ಇದ್ದವರಿಗೆ ಸರಿಪಡಿಸುತ್ತೇವೆ ಎಂದು ಭರವಸೆ ನೀಡಿದರು.

ಪ್ರತಿಪಕ್ಷ ನಾಯಕ ಆರ್.ಅಶೋಕ ಮಧ್ಯಪ್ರವೇಶಿಸಿ, ಇದು ತುಘಲಕ್ ದರ್ಬಾರ್ ಆಯಿತು. ಐದು ಪಾಲಿಕೆ ಮಾಡಿ ಐದು ಹೊಸ ತೆರಿಗೆ ತಂದಿದ್ದಾರೆ. ಹಳೆಯ ತೆರಿಗೆ ಪದ್ಧತಿ ತಂದವರೂ ಇವರೇ, ಹೊಸ ಪದ್ಧತಿ ತಂದಿರುವವರೂ ಇವರೇ. ಇದು ಅನಾಗರೀಕ ನೀತಿ, ಡ್ರೋನ್ ಮೂಲಕ ಸರ್ವೆಯಲ್ಲಿ ವ್ಯತ್ಯಾಸ ಆಗಿಯೇ ಆಗುತ್ತದೆ. ಇದು ಒಳ್ಳೆಯದಲ್ಲ, ಭೌತಿಕವಾಗಿ ಬಂದು ಸರ್ವೆ ಮಾಡಿ, ಡ್ರೋನ್ ಸರ್ವೆ ಸ್ಥಗಿತ ಮಾಡಿ. ಭೌತಿಕ ಸರ್ವೆ ಮಾಡಿ ತೆರಿಗೆ ಸಂಗ್ರಹಿಸಿ, ಸಂಪನ್ಮೂಲ ಸಂಗ್ರಹಕ್ಕೆ ಬೇರೆ ದಾರಿ ಹುಡುಕಿ. ಇದನ್ನು ಬಿಡಿ ಎಂದು ಆಗ್ರಹಿಸಿದರು. ಇಲ್ಲದಿದ್ದರೆ ಬೆಂಗಳೂರು ಜನತೆಯ ಶಾಪಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇಂದು ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಿಗಾಗಿ ಕೌನ್ಸೆಲಿಂಗ್

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಸಂಬಂಧಿಸಿದಂತೆ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ನಂತರ ಇನ್ನೂ 783 ಸೀಟು ಉಳಿದಿವೆ. ಅವುಗಳ ಹಂಚಿಕೆಗೆ ಮಾ.11ರಂದು ಮತ್ತೊಂದು ಸುತ್ತಿನ ಕೌನ್ಸೆಲಿಂಗ್ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ.

ಈವರೆಗೂ ಯಾವುದೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗದವರು ಈ ಉಪಯೋಗಪಡೆಯಬಹುದು ಎಂದು ಹೇಳಿದ್ದಾರೆ. ಯಾವ ಕಾಲೇಜಿನಲ್ಲಿ, ಯಾವ ಕೋರ್ಸ್‌ನ ಸೀಟು ಉಳಿದಿವೆ ಹಾಗೂ ಅದರ ಶುಲ್ಕ ಎಷ್ಟು ಎನ್ನುವುದನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ತಮಗೆ ಯಾವ ಕೋರ್ಸ್ ಇಷ್ಟವೋ, ಅದರ ಪೂರ್ಣ ಶುಲ್ಕದ ಡಿಡಿ ಅಥವಾ ಚೆಕ್ ಸಮೇತ ಮಾ.11ರಂದು ಮಧ್ಯಾಹ್ನ 3 ಗಂಟೆ ಒಳಗೆ ಮಲ್ಲೇಶ್ವರದ ಕೆಇಎ ಕಚೇರಿಗೆ ಬಂದು ಸಲ್ಲಿಸಬೇಕು. ಡಿಡಿ ಅಥವಾ ಚೆಕ್ ಅನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರ, ಬೆಂಗಳೂರು ಹೆಸರಿನಲ್ಲಿ ಪಡೆಯಬೇಕು ಎಂದು ಸಲಹೆ ನೀಡಿದ್ದಾರೆ.

ಡಿಡಿ ಜತೆಗೆ ಎಲ್ಲ ಮೂಲ ದಾಖಲೆಗಳನ್ನು ಸಲ್ಲಿಸಿದವರಿಗೆ ಮಾತ್ರ ಮಾ.11ರಂದು ಮಧ್ಯಾಹ್ನ 12.30 ರಿಂದ ಸಂಜೆ 4 ಗಂಟೆವರೆಗೆ ಆಪ್ಷನ್ಸ್ ದಾಖಲಿಸಲು ಅವಕಾಶ ನೀಡಲಾಗುತ್ತದೆ. ಅದೇ ದಿನ ಸಂಜೆ 7 ಗಂಟೆಗೆ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುತ್ತದೆ. ಸೀಟು ಹಂಚಿಕೆಯಾದವರು ಮಾ.12 ರಂದು ಸಂಜೆ 5.30 ರ ಒಳಗೆ ಸಂಬಂಧಪಟ್ಟ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು. ಇದುವರೆಗೂ ಅರ್ಜಿ ಸಲ್ಲಿಸದಿರುವ ಹಾಗೂ ನೀಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವವರು ಕೂಡ ಬಂದು, ಅರ್ಜಿ ಸಲ್ಲಿಸಿ, ಡಿಡಿ ಕೊಟ್ಟು ಆಪ್ಷನ್ಸ್ ಎಂಟ್ರಿ ಮಾಡಬಹುದು ಎಂದು ವಿವರಿಸಿದ್ದಾರೆ.



ಐಡಿಬಿಐ ಬ್ಯಾಂಕ್ ಮೈಕೋ ಲೇಔಟ್ ಶಾಖೆಯು ತನ್ನ ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಚಟುವಟಿಕೆಯಲ್ಲಿ ನಗರದ ಯಳ್ಳುಂಕುಂಟೆ ಹಿರಿಯ ಪ್ರಾಥಮಿಕ ಶಾಲೆಗೆ ನೀರು ಶುದ್ಧೀಕರಣ ಯಂತ್ರ (ವಾಟರ್ ಪ್ಯೂರಿಫೈಯರ್), ಅಡುಗೆ ಪಾತ್ರೆ ದೇಣಿಗೆ ನೀಡಿತು. ಐಡಿಬಿಐ ಬ್ಯಾಂಕಿನ ಅಧಿಕಾರಿಗಳಾದ ಎಂ.ಮಹೇಶ್ವರನ್ ಮತ್ತು ಪ್ರಾಗ್ಯತ್ರಿಪಾಠಿಯವರು ಶಾಲೆ ಮುಖ್ಯೋಪಾಧ್ಯಾಯ ಎಂ.ಶ್ರೀನಾಥ್ ಅವರಿಗೆ ಹಸ್ತಾಂತರಿಸಿದರು.

ಸಾಮಾನ್ಯ ಮನಸ್ಸಿನಾಚೆಗೆ ಉಪನಿಷತ್ತಿನ ದೃಷ್ಟಿಕೋನ ಕುರಿತು ಉಪನ್ಯಾಸ

ಆತ್ಮಾವಲೋಕನಕ್ಕೆ ಸಮಯ ಮೀಸಲಿಡಲಿ

ಬೆಂಗಳೂರು: ಮೊದಲು ಮನುಷ್ಯನು ಸೀಮಿತ ಇಂದ್ರಿಯಗಳ ಚೌಕಟ್ಟಿನಿಂದ ಹೊರಬರಬೇಕು. ದಿನವೂ ಇಂತಿಷ್ಟು ಸಮಯ ತನ್ನ ಆತ್ಮಾವಲೋಕನಕ್ಕೆ ಮೀಸಲಿಡಬೇಕು ಎಂದು ಆಧ್ಯಾತ್ಮ ಚಿಂತಕ ಯೋಗಿ ಎಂ ಹೇಳಿದರು.

ಸಾಮಾನ್ಯ ಮನಸ್ಸಿನಾಚೆಗೆ ಉಪನಿಷತ್ತಿನ ದೃಷ್ಟಿಕೋನ ಎಂಬ ವಿಷಯದ ಕುರಿತು ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಹಮ್ಮಿಕೊಂಡ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊದಲು ಮನುಷ್ಯನು ಸೀಮಿತ ಇಂದ್ರಿಯಗಳ ಚೌಕಟ್ಟಿನಿಂದ ಹೊರಬರಬೇಕು. ದಿನವೂ ಇಂತಿಷ್ಟು ಸಮಯ ತನ್ನ ಆತ್ಮಾವಲೋಕನಕ್ಕೆ ಮೀಸಲಿಡಬೇಕು. ಸದಾ ನನ್ನ ಆಲೋಚನೆಗಳು ಎತ್ತ ಸಾಗುತ್ತಿದೆ? ನಾನು ಏನು ಮಾಡುತ್ತಿದ್ದೇನೆ? ನನ್ನ ಆಲೋಚನೆ ಹಾಗೂ ಕೃತಿಗಳು ಸ್ವಾರ್ಥದಿಂದ ಕೂಡಿವೆಯೇ? ಎಂಬ ಸ್ವವಿಮರ್ಶೆಯಿಂದ ತನಗೂ, ಲೋಕಕ್ಕೂ ಹಿತವಾಗುವ ದಾರಿಯಲ್ಲಿ ನಡೆಯಲು ಸಾಧ್ಯ, ಆ ಮೂಲಕ ಆತನ ಆಧ್ಯಾತ್ಮಿಕ ಔನ್ನತ್ಯವೂ ಸಾಧ್ಯ ಎಂದು ಹೇಳಿದರು.



ಮತ್ತೊಬ್ಬರ ಕಷ್ಟಕ್ಕೆ ಮರುಗದೇ, ಸದಾ ತಾನಾಯಿತು, ತನ್ನ ಸುಖಸಂತೋಷವಾಯಿತು ಎಂದು ಬದುಕುವವರಿಂದ ಪರಮಸತ್ಯವು ದೂರವೇ ಉಳಿದು ಬಿಡುತ್ತದೆ, ಕರುಣೆ ಮತ್ತು ಪ್ರೀತಿಗಳನ್ನು ಪ್ರತಿಯೊಬ್ಬರೂ ಅಭ್ಯಾಸ ಮಾಡಬೇಕು ಹೇಳಿದರು.

ಈ ವೇಳೆ ಎಂ. ಅವರ ಪದ್ಮಸ್ಥಿತ ಅಮೂಲ್ಯ ಮಣಿ ಹಾಗೂ ಯೋಗ ನಾಸ್ತಿಕರಿಗೂ ಸಹ ಎಂಬ ಎರಡು ಕನ್ನಡ ಅನುವಾದಿತ ಕೃತಿ ಲೋಕಾರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ಡಿಜಿಪಿ ಅಜಯ್ ಕುಮಾರ್ ಸಿಂಗ್, ಬ್ರೈನ್ಸ್ ಹಾಸ್ಪಿಟಲ್‌ನ ನ್ಯೂರೋ ಸರ್ಜನ್ ಡಾ.ವೆಂಕಟರಮಣ ಎನ್.ಕೆ. ಉಪಸ್ಥಿತರಿದ್ದರು.

47ನೇ ಮಹಿಳಾ ಸಬಲೀಕರಣ ಕೇಂದ್ರ ಉದ್ಘಾಟನೆ

ಮಹಿಳೆಯರಿಗೆ ಕೌಶಲ ತರಬೇತಿಯ ಗುರಿ

ಬೆಂಗಳೂರು: ಮಹಿಳಾ ಸಬಲೀಕರಣ ಕೇಂದ್ರ ಮೂಲಕ, ಮಹಿಳೆಯರು ತಮ್ಮದೇ ಜೀವನೋಪಾಯದ ಅವಕಾಶವನ್ನು ಸೃಷ್ಟಿಸಲು ಮತ್ತು ತಮ್ಮ ಕುಟುಂಬವನ್ನು ಗೌರವದಿಂದ ಬೆಂಬಲಿಸಲು ಸಹಾಯ ಮಾಡುವ ಪ್ರಾಯೋಗಿಕ ಕೌಶಲವನ್ನು ನೀಡು ವುದು ನಮ್ಮ ಗುರಿಯಾಗಿದೆ ಎಂದು ಆಹ್ವಾಹನ್ ಫೌಂಡೇಶನ್ ಸಿಇಒ ಬ್ರಿಜ್ ಕಿಶೋರ್ ಪ್ರಧಾನ್ ಅಭಿಪ್ರಾಯಪಟ್ಟರು.



ಮಹಿಳಾ ಸಬಲೀಕರಣ ಮತ್ತು ಜೀವನೋಪಾಯ ಅವಕಾಶವನ್ನು ಉತ್ತೇಜಿಸುವ ಮಹತ್ವದ ಹೆಜ್ಜೆಯಾಗಿ, ಆಹ್ವಾಹನ್ ಫೌಂಡೇಷನ್ ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಜಿಗಣಿ ಪ್ರದೇಶದ ಬಂದೆನಲ್ಲ ಸಂದ್ರದಲ್ಲಿ ಪ್ರಾರಂಭಿಸಿರುವ 47ನೇ ಮಹಿಳಾ ಸಬಲೀಕರಣ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ಹೊಸದಾಗಿ ಪ್ರಾರಂಭಗೊಂಡ ಈ ಕೇಂದ್ರದಲ್ಲಿ ಹೊಲಿಗೆ ಕೆಲಸ ಮತ್ತು ಬಟ್ಟೆ ಉತ್ಪಾದನೆ ಕ್ಷೇತ್ರಗಳಲ್ಲಿ ವ್ಯವಸ್ಥಿತ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತದೆಂದು ತಿಳಿಸಿದರು.

ಈ ತರಬೇತಿಯಲ್ಲಿ ಭಾಗವಹಿಸುವ ಮಹಿಳೆಯರು ಪ್ರಾಯೋಗಿಕ ಅನುಭವವನ್ನು ಪಡೆದು ಮನೆಯಲ್ಲೇ ಸಣ್ಣ ಉದ್ಯಮಗಳನ್ನು ಆರಂಭಿಸುವುದು, ಟೈಲರಿಂಗ್ ಘಟಕಗಳನ್ನು ಸ್ಥಾಪಿಸುವುದು ಅಥವಾ ಸ್ವಯಂ ಉದ್ಯೋಗ ಅವಕಾಶಗಳನ್ನು ನಿರ್ಮಿಸುವುದು ಸಾಧ್ಯ ವಾಗುತ್ತದೆ ಎಂದರು.

ಈ ಕೇಂದ್ರದಲ್ಲಿ 1000 ಕ್ಕೂ ಹೆಚ್ಚು ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಉಚಿತ ಹೊಲಿಗೆ ತರಬೇತಿ ನೀಡಲಾಗುತ್ತದೆ. ಮಹಿಳೆಯರು ಪ್ರಾಯೋಗಿಕ ವೃತ್ತಿಪರ ಕೌಶಲಗಳನ್ನು ಕಲಿತು ಆರ್ಥಿಕ ಸ್ವಾವಲಂಬನೆ ಸಾಧಿಸಲು ಸಹಾಯ ಮಾಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ ಎಂದು ವಿವರಿಸಿದರು.

ಈ ಮಹಿಳಾ ಸಭಾಲಿಕರಣ ಕೇಂದ್ರವನ್ನು ರಿಸರ್ವ್ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ಪ್ರೈ.ಲಿ.(ರಿಬಿಟ್) ಸಂಸ್ಥೆಯ ಸಿಎಸ್‌ಆರ್ ಸಹಭಾಗಿತ್ವದ ಮೂಲಕ ಸ್ಥಾಪಿಸ ಲಾಗಿದೆ. ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಮಹಿಳೆಯರಿಗೆ ವ್ಯವಸ್ಥಿತ ತರಬೇತಿಯನ್ನು ನೀಡುವ ಮೂಲಕ ಸ್ಥಿರವಾದ ಜೀವನೋಪಾಯವನ್ನು ನಿರ್ಮಿಸಲು ಈ ಯೋಜನೆ ಸಹಾಯ ಮಾಡಲಿದೆ.

ಜೆ.ಪಿ.ನಗರದ ಧನ್ವಂತರಿ ಉದ್ಯಾನವನದಲ್ಲಿ ಸಿದ್ಧತೆ

ಸಾರ್ವಜನಿಕರಿಗಾಗಿ ಪರಮ್ ಸೈನ್ಸ್ ಸಿಟಿ

ಬೆಂಗಳೂರು: ಜೆ.ಪಿ. ನಗರದ ಧನ್ವಂತರಿ ಉದ್ಯಾನವನದಲ್ಲಿ ಪರಮ್ ಸೈನ್ಸ್ ಸಿಟಿ ಸಾರ್ವಜನಿಕರ ಪ್ರವೇಶಕ್ಕೆ ಸಿದ್ಧಗೊಳ್ಳುತ್ತಿದೆ. ಕೇವಲ ಪುಸ್ತಕಗಳಲ್ಲಿ ಓದುತ್ತಿದ್ದ ವಿಜ್ಞಾನದ ಸಂಕೀರ್ಣ ಪ್ರಯೋಗವನ್ನು ಇಲ್ಲಿ ನೇರವಾಗಿ ನೋಡಿ, ಸ್ಪರ್ಶಿಸಿ ಕಲಿಯುವ ಅವಕಾಶ ಕಲ್ಪಿಸಲಾಗುತ್ತಿದೆ. ಪರಮ್ ಸೈನ್ಸ್ ಸಿಟಿ ಕೇವಲ ಪ್ರದರ್ಶನ ಕೇಂದ್ರವಲ್ಲ, ಇದು ವಿಜ್ಞಾನವನ್ನು ಜನಸಾಮಾನ್ಯರ ಹತ್ತಿರಕ್ಕೆ ತರುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ.

ಜಿಬಿಎ ಮತ್ತು ಪರಮ್ ಫೌಂಡೇಷನ್ ನಡುವಿನ ಒಪ್ಪಂದದ ಫಲವಾಗಿ ಈ ಯೋಜನೆ ರೂಪುಗೊಳ್ಳುತ್ತಿದೆ. ಸೈನ್ಸ್ ಪಾರ್ಕ್ ಜಾಗದಲ್ಲಿ ವಿಜ್ಞಾನ ಕೇಂದ್ರವನ್ನು ಅಭಿವೃದ್ಧಿಪಡಿಸಿ, ಅದರ ಸಮಗ್ರ ನಿರ್ವಹಣೆಯನ್ನು ಪರಮ್ ಫೌಂಡೇಷನ್ ವಹಿಸಿಕೊಳ್ಳುತ್ತಿದೆ. ಸಾರ್ವಜನಿಕ ಆಸ್ತಿಯಾದ ಉದ್ಯಾನವನವನ್ನು ಸುಸ್ಥಿರ ಕಲಿಕಾ ಕೇಂದ್ರವನ್ನಾಗಿ ಮಾಡುವ ಮೂಲಕ ನಾಗರಿಕರಿಗೆ ಉಪಯುಕ್ತ ಮಾಹಿತಿ ನೀಡುವುದು ಇದರ ಮೂಲ ಉದ್ದೇಶವಾಗಿದೆ.

ಉದ್ಯಾನವನದೊಳಗೆ ಪ್ರವೇಶಿಸುತ್ತಿದ್ದಂತೆ ವಿಜ್ಞಾನದ ವಿಶಿಷ್ಟ ಜಗತ್ತು ಅನಾವರಣಗೊಳ್ಳುತ್ತದೆ. ಇಲ್ಲಿ ಮುಕ್ತ ಪರಿಸರದಲ್ಲಿ ವಿಜ್ಞಾನದ ಸೌಂದರ್ಯವನ್ನು ಸಾರುವ ನಾಲ್ಕು ಅದ್ಭುತ ಕಲಾಕೃತಿಗಳು ಮತ್ತು ಒಂದು ಬೃಹತ್ ಗೋಡೆ ನೋಡುಗರನ್ನು ಸ್ವಾಗತಿಸುತ್ತವೆ. ಉದಾಹರಣೆಗೆ, ಇಲ್ಲಿನ ಕ್ವಾಂಟಮ್ ಆಸ್ಟ್ರೋನಾಟ್ ಶಿಲ್ಪವು ಕ್ವಾಂಟಮ್ ವಿಜ್ಞಾನದ ಸಂಕೀರ್ಣತೆಯನ್ನು ಸರಳವಾಗಿ ವಿವರಿಸುತ್ತದೆ. ಗಣಿತ, ಭೌತಶಾಸ್ತ್ರ ಹಾಗೂ ಪರಿಸರ ಪ್ರಜ್ಞೆಯಂತಹ ವಿಷಯಗಳನ್ನು ಕಲಾತ್ಮಕವಾಗಿ ಬಿಂಬಿಸುವ ಈ ಪ್ರದರ್ಶಿಕೆಗಳು ಧನ್ವಂತರಿ ಪಾರ್ಕ್ ಶಾಂತಿಯುತ ಪರಿಸರದಲ್ಲಿ ಅನ್ವೇಷಣೆಯ ಹೊಸ ಅನುಭವವನ್ನು ನೀಡಲಿವೆ. ಈಗಾಗಲೇ ಧನ್ವಂತರಿ ಉದ್ಯಾನವನದಲ್ಲಿ ಸೈನ್ ಸಿಟಿ ನಿರ್ಮಾಣದ ಕಾರ್ಯ ಭರದಿಂದ ಸಾಗುತ್ತಿದ್ದು, ಕೊನೆ ಹಂತದಲ್ಲಿದೆ. ಇನ್ನು ಕೆಲವೇ ದಿನಗಳಲ್ಲಿ ಉದ್ಘಾಟನೆಗೊಳ್ಳಲಿದ್ದು, ಸಾರ್ವಜನಿಕರಿಗೆ ಮುಕ್ತವಾಗಲಿದೆ.



ಬಿಜೆಪಿ ಮಹಿಳಾ ಮೋರ್ಚಾದಿಂದ ವಿಶ್ವ ಮಹಿಳಾ ದಿನಾಚರಣೆ


ದೇಶಾಭಿವೃದ್ಧಿಗೆ ಮಹಿಳೆ ಪಾತ್ರ ಅಪಾರ

ಬೆಂಗಳೂರು: ಭಾರತ- 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲೂ ಪುರುಷರ ಜತೆ ಜತೆಯಲ್ಲಿ ಮಹಿಳೆಯರ ಪಾತ್ರವೂ ಬಹಳ ಮಹತ್ವವನ್ನು ಹೊಂದಿದೆ ಎಂಬ ನಂಬಿಕೆ ಪ್ರಧಾನಿ ನರೇಂದ್ರ ಮೋದಿ ಅವರದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಬೆಂಗಳೂರು ಮಹಾನಗರ ಮಹಿಳಾ ಮೋರ್ಚಾ ವತಿಯಿಂದ ಮಂಗಳವಾರ ಹವ್ಯಕ ಭವನದಲ್ಲಿ ಹಮ್ಮಿಕೊಂಡ ವಿಶ್ವ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಯಂದಿರು ಕೇವಲ ಅಡುಗೆಮನೆಗೆ ಸೀಮಿತಾಗಿ ಇರಬಾರದು, ಸಮಾಜದ ಮುಂಚೂಣಿಯಲ್ಲಿ ಬರಬೇಕೆಂಬ ಇಚ್ಛಾಶಕ್ತಿ ಮಹಿಳೆಯರಲ್ಲಿದೆ. ಅದರ ಪರಿಣಾಮವೇ ರಾಜಕೀಯ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ನೇತೃತ್ವವಹಿಸುವಂಥ ಸಾಧನೆ ಆಗುತ್ತಿದೆ ಎಂದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದೇಶಾದ್ಯಂತ ಮತ್ತು ವಿವಿಧ ದೇಶಗಳಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ಈ ವೇಳೆ ಮಹಿಳೆಯರು ಮಾಡಿದ ಸಾಧನೆಯನ್ನು ಗೌರವಿಸುವುದು ಒಂದು ಕಡೆ ನಡೆದರೆ, ಲಿಂಗ ಸಮಾನತೆಗೆ ಒತ್ತು ಕೊಡುವುದು, ಮಹಿಳಾ ಹಕ್ಕುಗಳ ಜಾಗೃತಿಯ ಕೆಲಸವೂ ಈ ದಿನ ನಡೆಯುತ್ತದೆ ಎಂದು ವಿವರಿಸಿದರು.

ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಮಾತನಾಡಿ, ಸದೃಢ, ಬಲಿಷ್ಠ ಹಾಗೂ ಆರೋಗ್ಯಕರವಾದ ಸಮಾಜವನ್ನು ನಿರ್ಮಾಣ ಮಾಡುವ ದೆಸೆಯಲ್ಲಿ ಪ್ರಮಾಣಿಕವಾದ ಪ್ರಯತ್ನ ಮಾಡುವ ಕಾರ್ಯ ಮಾಡಬೇಕು ಎಂದು ಹೇಳಿದರು.



ಸಬಲೀಕರಣ ಆಗಬೇಕೆಂದರೆ ಕೇವಲ ಆಸ್ತಿ ಹಾಗೂ ಅಂತಸ್ತು ಮಾತ್ರವಿದ್ದರೆ ಸಾಲದು , ಅದರೊಂದಿಗೆ ಜ್ಞಾನವು ಅತ್ಯಗತ್ಯವಾಗಿದೆ. ಆದರಿಂದ ಪ್ರತಿಯೊಬ್ಬರಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ, ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ಕುವೆಂಪು ಭಾಷಾ ಭಾರತಿ ಪ್ರಾಕಾರದಿಂದ ತೆಲುಗು ಕನ್ನಡ ಅನುವಾದ ಕಥಾ ಕಮ್ಮಟ. ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಕಾರ ಕಚೇರಿ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಮಯ: ಬೆಳಗ್ಗೆ 10.30ಕ್ಕೆ
- ಇಂಚರ ಪ್ರಕಾಶನದ ಗೆಳೆತನ ಮಕ್ಕಳ ಕಥೆ ಪುಸ್ತಕ ಲೋಕಾರ್ಪಣೆ . ಸ್ಥಳ: ಕಲ್ಕೆರೆ ಸರ್ಕಾರಿ ಪ್ರೌಢ ಶಾಲೆ ಆವರಣ, ಕೆ.ಆರ್.ಪುರ., ಸಮಯ: ಮಧ್ಯಾಹ್ನ 3.30ಕ್ಕೆ
- ದಿವ್ಯ ಚೇತನ ಚಾರಿಟಬಲ್ ಟ್ರಸ್ಟ್‌ನ ವಾರ್ಷಿಕೋತ್ಸವ, ಮತ್ತು ದಿವ್ಯಚೇತನ ಪ್ರಶಸ್ತಿ ಪ್ರದಾನ. ಸ್ಥಳ:ನಯನ ಸಭಾಂಗಣ, ಕನ್ನಡ ಭವನ, ಸಮಯ: ಸಂಜೆ 5.30ಕ್ಕೆ.
- ತುಳಸಿ ರಾಮಾಯಣ ಸುಂದರಕಾಂಡ ಉಪನ್ಯಾಸ, ಸ್ಥಳ: ರಾಗೀಗುಡ್ಡ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, ಸಮಯ: ಸಂಜೆ 6.30ಕ್ಕೆ

ಐಟಿಎಫ್ ಟೆನಿಸ್ ಟೂರ್ನಿ ಸಿಂಗಲ್ಸ್, ಡಬಲ್ಸ್ ಫೈನಲ್ ಗೆದ್ದ ಬಳಿಕ ಹೊಸ ದಿಗಂತದೊಂದಿಗೆ ವೈಷ್ಣವಿ ಅಡ್ಕರ್ ಮಾತು

ವೈಷ್ಣವಿ ಅಡ್ಕರ್‌ಗೆ ಜೋಡಿ ಕಿರೀಟದ ಖುಷಿ

▸ ರಾಚಪ್ಪಾ ಜಂಬಗಿ

ಕಲಬುರಗಿ: ಬಿಸಿಲು ನಾಡು ಕಲಬುರಗಿಯಲ್ಲಿ ಆಯೋಜಿಸಿದ್ದ ಐಟಿಎಫ್ ಡಬ್ಲ್ಯು 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ಚಾಂಪಿಯನ್ ಪಟ್ಟ ಗೆದ್ದು ಗಮನ ಸೆಳೆದ ಭಾರತದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್, ಅನುಭವಿ ಭಾರತೀಯ ಆಟಗಾರ್ತಿ ಅಂಕಿತಾ ವಿರುದ್ಧದ ಜಯವನ್ನು ಹೆಮ್ಮೆಯ ಕ್ಷಣವೆಂದು ಬಣ್ಣಿಸಿದರು. ತಮ್ಮ ಗೆಲುವಿನ ಯಶಸ್ಸಿನ ಹಿಂದಿನ ಪರಿಶ್ರಮ, ಪಂದ್ಯಕ್ಕಾಗಿ ನಡೆಸಿದ ಸಿದ್ಧತೆ ಸೇರಿದಂತೆ ಹಲವು ಸಂಗತಿಗಳನ್ನು ಗೆಲುವಿನ ಬಳಿಕ ಹೊಸದಿಂಗದೊಂದಿಗೆ ಮಾತುಕತೆ ಮೂಲಕ ಹಂಚಿಕೊಂಡಿದ್ದಾರೆ.

★ ಇದು ನಿಮ್ಮ ಎರಡನೇ ಐಟಿಎಫ್ ಟೈಟಲ್. ಈ ಗೆಲುವಿನ ಅನುಭವ ನೀವು ಹೇಗೆ ವಿವರಿಸುತ್ತೀರಿ?

ಈ ಗೆಲುವು ನನಗೆ ತುಂಬಾ ಸಂತೋಷ ತಂದಿದೆ. ಕಳೆದ ವಾರವೇ ಫೈನಲ್‌ಗೆ ತಲುಪಿದ್ದರೂ ಆಗ ಜಯ ಸಾಧಿಸಲು ಸಾಧ್ಯವಾಗಿರಲಿಲ್ಲ. ಆದರೆ, ಆ ಅನುಭವದಿಂದ ಪಾಠ ಕಲಿತು, ನನ್ನ ಆಟದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡೆ. ಈ ಬಾರಿ ಕೋರ್ಟ್‌ನಲ್ಲಿ ಆತ್ಮವಿಶ್ವಾಸದಿಂದ ಆಟ ಆಡಲು ಸಾಧ್ಯವಾಯಿತು. ಜೊತೆಗೆ ಅಂಕಿತಾ ರೈನಾ ಅವರೊಂದಿಗೆ



ಡಬಲ್ಸ್‌ನಲ್ಲಿ ಆಡಿದ ಅನುಭವವೂ ಫೈನಲ್ ಪಂದ್ಯದಲ್ಲಿ ನನಗೆ ಸಹಾಯವಾಯಿತು ಎಂದು ಅನಿಸುತ್ತದೆ.

> **2009 ಬಳಿಕ ಸಾನಿಯಾ ಮಿರ್ಜಾ ನಂತರ ಡಬ್ಲ್ಯು100 ಅಥವಾ ಅದಕ್ಕಿಂತ ಮೇಲಿನ ಮಟ್ಟದ ಟೂರ್ನಿಯಲ್ಲಿ ಫೈನಲ್ ತಲುಪಿದ ಮೊದಲ ಭಾರತೀಯ ಮಹಿಳೆಯಾಗಿದ್ದು ನನಗೆ ಹೆಮ್ಮೆ. ಈ ಸಾಧನೆಯಿಂದ ರ‍್ಯಾಂಕಿಂಗ್ 690ರಿಂದ ಏರಿಕೆ ಕಂಡು 466ಕ್ಕೆ ತಲುಪಿದ್ದು ಮತ್ತೊಂದು ಮೈಲಿಗಲ್ಲು. ನನಗೆ ವೈಲ್ಡ್‌ಕಾರ್ಡ್ ಅವಕಾಶ ನೀಡಿದ ಕೆ.ಎಸ್.ಎಲ್.ಟಿ.ಎ.ಗೆ ತುಂಬಾ ಕೃತಜ್ಞೆ.**
>
> ■ ವೈಷ್ಣವಿ ಅಡ್ಕರ್, ಭಾರತದ ಟೆನಿಸ್ ಆಟಗಾರ್ತಿ

★ ಅನುಭವಿ,ಹಿರಿಯ ಆಟಗಾರ್ತಿ ಅಂಕಿತಾಗೆ ಎದುರಿಸುವಾಗ ನಿಮ್ಮ ಪ್ಲಾನ್ ಏನಿತ್ತು?

ಅಂಕಿತಾ ರೈನಾ ಭಾರತೀಯ ಟೆನಿಸ್‌ನ ಪ್ರಮುಖ ಆಟಗಾರ್ತಿಯರಲ್ಲಿ ಒಬ್ಬರು. ಅವರ ಆಟ ನೋಡುತ್ತಲೇ ನಾನು ಬೆಳೆದಿದ್ದೇವೆ. ತುಂಬಾ ಹೋರಾಟ ಮನೋಭಾವದ ಆಟಗಾರ್ತಿ. ಕೊನೆಯ ಕ್ಷಣದವರೆಗೂ ಪಂದ್ಯ ಬಿಡುವುದಿಲ್ಲ. ಆದ್ದರಿಂದ ಪಂದ್ಯಕ್ಕೆ ಇಳಿಯುವ ಮೊದಲು ಫಲಿತಾಂಶದ ಬಗ್ಗೆ ಹೆಚ್ಚು ಯೋಚಿಸದೆ, ನನ್ನ ಆಟದ ಮೇಲೆ ಗಮನ ಕೇಂದ್ರೀಕರಿಸಬೇಕೆಂದು ತೀರ್ಮಾನಿಸಿದ್ದೆ. ಪ್ರತಿಯೊಂದು ಪಾಯಿಂಟ್‌ಗಾಗಿ ಹೋರಾಟ ನಡೆಸಿ, ಅವಕಾಶ ಸಿಕ್ಕಾಗ ಅದನ್ನು ಬಳಸಿಕೊಳ್ಳಲು ಪ್ರಯತ್ನಿಸಿದೆ.

★ ಮೊಣಕಾಲಿನ ಶಸ್ತ್ರಚಿಕಿತ್ಸೆಯ ನಂತರ ಕೋರ್ಟ್‌ಗೆ ಹೇಗೆ ಕಂಬ್ಯಾಕ್ ಸಾಧಿಸಿದ್ದೀರಿ?

ಸುಮಾರು ನಾಲ್ಕು ವರ್ಷಗಳ ಹಿಂದೆ ನನಗೆ ಮೊಣಕಾಲಿನ ಶಸ್ತ್ರಚಿಕಿತ್ಸೆ ಆಗಿತ್ತು. ಅದರ ನಂತರ ಸುಮಾರು ಎಂಟು ತಿಂಗಳು ಕೋರ್ಟ್‌ನಿಂದ ದೂರ ಉಳಿಯಬೇಕಾಯಿತು. ಅದು ನನ್ನ ಕರಿಯರ್‌ನಲ್ಲಿ ಸವಾಲಿನ ಸಮಯವಾಗಿತ್ತು. ಆದರೆ, ಪುನಃಶ್ರಮಪಟ್ಟು ತರಬೇತಿ ಮುಂದುವರಿಸಿ, ಜೂನಿಯರ್ ಮಟ್ಟದಲ್ಲಿ ಮತ್ತೆ ಉತ್ತಮ ಪ್ರದರ್ಶನ ನೀಡುವ ಮೂಲಕ ಟೆನಿಸ್‌ಗೆ ಮರಳಿ ಬಂದೆ. ಈಗ ಶಾರೀರಿಕವಾಗಿ ಸಂಪೂರ್ಣವಾಗಿ ಫಿಟ್ ಆಗಿದ್ದೇನೆ.

“ದಿಗಂತ ಸಂದರ್ಶನ”

★ ಒಂದೇ ಟೂರ್ನಿಯಲ್ಲಿ 2 ಟೈಟಲ್ ಗೆದ್ದಿರುವುದು ಎಂತಹ ಭಾವನೆ ನೀಡುತ್ತಿದೆ?

ಕಲಬುರಗಿಯಲ್ಲಿ ಈ ಸಮಯದಲ್ಲಿ ಬಿಸಿಲಿನ ತಾಪಮಾನ ಹೆಚ್ಚು ಇರುವುದರಿಂದ ಅದಕ್ಕೆ ಹೊಂದಿಕೊಳ್ಳುವುದು ಸ್ವಲ್ಪ ಕಷ್ಟವಾಗಿತ್ತು. ಒಂದೇ ದಿನದಲ್ಲಿ ಎರಡು ಪಂದ್ಯಗಳನ್ನು ಆಡಬೇಕಾಗಿದ್ದುದರಿಂದ ಅದು ಇನ್ನಷ್ಟು ಸವಾಲಾಗಿತ್ತು.ಆದರೂ ಕೋರ್ಟ್‌ನಲ್ಲಿ ಕೊನೆಯವರೆಗೂ ಗಮನ ಕೇಂದ್ರೀಕರಿಸಿ ಆಡಲು ಸಾಧ್ಯವಾಯಿತು. ಪ್ರತಿಯೊಂದು ಎದುರಾಳಿಯ ವಿರುದ್ಧವೂ ಪರಿಸ್ಥಿತಿಗೆ ತಕ್ಕಂತೆ ಗೇಮ್ ಪ್ಲಾನ್ ಬದಲಾಯಿಸುತ್ತಾ ಮುಂದೆ ಬಂದೆ. ಈ ಟೂರ್ನಿಯನ್ನು ಅತ್ಯುತ್ತಮವಾಗಿ ಆಯೋಜಿಸಿದ್ದು, ಆಟಗಾರರಿಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಚೆನ್ನಾಗಿ ಮಾಡಲಾಗಿತ್ತು.

★ ಮುಂದಿನ ಟೂರ್ನಿಗಳಿಗಾಗಿ ನಿಮ್ಮ ತಯಾರಿ ಮತ್ತು ಗುರಿ ಏನು?

ಮುಂದಿನ ದಿನಗಳಲ್ಲಿ ಹಲವಾರು ಪ್ರಮುಖ ಟೂರ್ನಿಗಳಿವೆ. ಅದರಲ್ಲೂ ಬಿಲ್ಲಿ ಜೀನ್ ಕಿಂಗ್ ಕಪ್ ಸೇರಿದಂತೆ ಹಲವು ಸ್ಪರ್ಧೆಗಳಿದ್ದು, ಅದಕ್ಕಾಗಿ ಈಗಿನಿಂದಲೇ ತಯಾರಿ ಆರಂಭವಾಗಿದೆ. ನಿರಂತರವಾಗಿ ಟೂರ್ನಿಗಳಲ್ಲಿ ಭಾಗವಹಿಸುವುದು ಮತ್ತು ನಿಯಮಿತ ತರಬೇತಿ ನಡೆಸುವುದು ನನ್ನ ಪ್ರಮುಖ ಗಮನ. ಮುಂದಿನ ದಿನಗಳಲ್ಲಿ ಭಾರತವನ್ನು ಪ್ರತಿನಿಧಿಸುವ ಉತ್ತಮ ಆಟಗಾರ್ತಿಯಾಗಿ ಹೊರಹೊಮ್ಮಿ, ಟೆನಿಸ್ ಕ್ಷೇತ್ರಕ್ಕೆ ನನ್ನಿಂದ ಸಾಧ್ಯವಾದಷ್ಟು ಕೊಡುಗೆ ನೀಡಲು ಪ್ರಯತ್ನಿಸುತ್ತೇನೆ.

ಕಿರುಸುದ್ದಿ

ಅರ್ಶದೀಪ್‌ಗೆ ಐಸಿಸಿ ದಂಡ

ಅಹಮದಾಬಾದ್ ಟಿ20 ವಿಶ್ವಕಪ್ ಫೈನಲ್ ಪಂದ್ಯದ ವೇಳೆ ಆಕ್ರಮಣಕಾರಿ ವರ್ತನೆಗೈದಿರುವ ಭಾರತದ ವೇಗಿ ಅರ್ಶದೀಪ್ ಸಿಂಗ್ ಅವರಿಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ(ಐಸಿಸಿ) ದಂಡ ವಿಧಿಸಿದೆ. ವಿಶ್ವಕಪ್ ಮುಡಿಗೇರಿಸಿಕೊಂಡ ಭಾರತ ತಂಡದ ಭಾಗವಾಗಿದ್ದ ಅರ್ಶದೀಪ್ ಪಂದ್ಯದ ವೇಳೆ ನ್ಯೂಜಿಲೆಂಡ್‌ನ ಡ್ಯಾರೆಲ್ ಮಿಚೆಲ್ ಮೇಲೆ ಆಕ್ರಮಣಕಾರಿಯಾಗಿ ಚೆಂಡೆಸೆದಿದ್ದರು. ಪರಿಣಾಮ ಫೈನಲ್ ಪಂದ್ಯದ ಶೇಕಡಾ 15 ರಷ್ಟು ದಂಡ ವಿಧಿಸಲಾಗಿದೆ. ಜೊತೆಗೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ. ನ್ಯೂಜಿಲೆಂಡ್ ಇನ್ನಿಂಗ್ಸ್‌ನ 11 ನೇ ಓವರ್ ನಲ್ಲಿ ಮಿಚೆಲ್, ಅರ್ಶದೀಪ್ ಸಿಂಗ್ ಅವರ ಓವರ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಬಾರಿಸಿದರು. ಎರಡು ಸಿಕ್ಸರ್ ಗಳನ್ನು ಹೊಡೆಸಿಕೊಂಡ ನಂತರ ಅರ್ಶದೀಪ್ ಕೊಂಚ ತಾಳ್ಮೆ ಕಳೆದುಕೊಂಡವರಂತೆ ವರ್ತಿಸಿದರು. ಅರ್ಶದೀಪ್ ಅವರ ಐದನೇ ಎಸೆತದಲ್ಲಿ, ಡ್ಯಾರಿಲ್ ಮಿಚೆಲ್ ಶಾಟ್ ಆಡಲು ಪ್ರಯತ್ನಿಸಿದರು, ಆದರೆ ಚೆಂಡು ನೇರವಾಗಿ ಅರ್ಶದೀಪ್ ಕಡೆಗೆ ಹೋಯಿತು. ನಂತರ ಅರ್ಶದೀಪ್ ಚೆಂಡನ್ನು ಹಿಡಿದು ಡ್ಯಾರಿಲ್ ಮಿಚೆಲ್ ಕಡೆಗೆ ಎಸೆದರು.

ಭೂತಾನ್ ಫುಟ್ಬಾಲ್ ಹೈ ಪರ್ಫಾರ್ಮೆನ್ಸ್ ನಿರ್ದೇಶಕರಾಗಿ ಕೊಡಗಿನ ಜೀತ್

ಮಡಿಕೇರಿ: ಕೊಡಗು ಮೂಲದ ಕುಲ್ಲೇಟಿರ ಜೀತ್ ದೇವಯ್ಯ ಅವರನ್ನು ಭೂತಾನ್ ಫುಟ್ಬಾಲ್ ಫೆಡರೇಷನ್, ಹೈ ಪರ್ಫಾರ್ಮೆನ್ಸ್ ನಿರ್ದೇಶಕರನ್ನಾಗಿ ನೇಮಿಸಿದೆ. ದೇವಯ್ಯ ಅವರು ಗಣ್ಯ ಕ್ರೀಡಾ ಪ್ರದರ್ಶನದಲ್ಲಿ ಎರಡು ದಶಕಗಳಿಗೂ ಹೆಚ್ಚಿನ ಮತ್ತು ಕ್ರೀಡಾ ಆಡಳಿತದಲ್ಲಿ ಸುಮಾರು 29 ವರ್ಷಗಳ ಅನುಭವವನ್ನು ಹೊಂದಿದ್ದು, ಉನ್ನತ-ಕಾರ್ಯಕ್ಷಮತೆಯ ವ್ಯವಸ್ಥೆಗಳು, ಕ್ರೀಡಾಪಟುಗಳ ಅಭಿವೃದ್ಧಿ ಮತ್ತು ಕ್ರೀಡಾ ವಿಜ್ಞಾನದಲ್ಲಿ ವ್ಯಾಪಕ ಪರಿಣತಿಯನ್ನು ಹೊಂದಿದ್ದಾರೆ. ನಾನು ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಸ್ಪೆಷಲಿಸ್ಟ್ ಮತ್ತು ಈ ಹಿಂದೆ ಫುಟ್‌ಬಾಲ್, ಕ್ರಿಕೆಟ್ ಮತ್ತು ಹಾಕಿ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಹಲವಾರು ವೃತ್ತಿಪರ ತಂಡಗಳು ಮತ್ತು ಸಂಸ್ಥೆಗಳೊಂದಿಗೆ ಕೆಲಸ ಮಾಡಿದ್ದೇನೆ.



ಡೆನ್ಮಾರ್ಕ್‌ನಲ್ಲಿ ಎಸ್ಬ್ಜರ್ಗ್ ಎಫ್ ಸಿಯೊಂದಿಗೆ ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಕೋಚ್ ಆಗಿ ಕೆಲಸ ಮಾಡಿದ ಅಂತಾರಾಷ್ಟ್ರೀಯ ಅನುಭವವನ್ನು ಹೊಂದಿದ್ದೇನೆ. ನಾನು ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸಿಗಳಾದ ರಾಜಸ್ಥಾನ್ ರಾಯಲ್ಸ್ ಮತ್ತು ದೆಹಲಿ ಡೇರ್‌ಡೆವಿಲ್ಸ್ (ಈಗ ದೆಹಲಿ ಕ್ಯಾಪಿಟಲ್ಸ್) ನೊಂದಿಗೆ ಸಹ ಕೆಲಸ ಮಾಡಿದ್ದೇನೆ ಎಂದು ಹೇಳಿದರು.

ಫುಟ್ಬಾಲ್: ಸೋಲಿನೊಂದಿಗೆ ಭಾರತ ಅಭಿಯಾನ ಅಂತ್ಯ

ಹೊಸದಿಲ್ಲಿ: ಗುಂಪು ಹಂತದ ಕೊನೆಯ ಪಂದ್ಯದಲ್ಲಿ ತೈವಾನ್ ತಂಡದೊಂದಿಗೆ ಸೋತ ಭಾರತ ಮಹಿಳಾ ತಂಡವು ಫುಟ್‌ಬಾಲ್ ಏಷ್ಯನ್‌ಕಪ್ ಪಂದ್ಯಾವಳಿಯಲ್ಲಿ ಲೀಗ್ ಹಂತದಲ್ಲೇ ಹೊರಬಿದ್ದಿತು. ಮಂಗಳವಾರ ನಡೆದ ತಮ್ಮ ಕೊನೆಯ ಪಂದ್ಯದಲ್ಲಿ ಬ್ಲ್ಯು ಟೈಗರ್ಸ್ ತೈವಾನ್ ನೊಂದಿಗೆ 1-3ರ ಸೋಲು ಕಂಡಿದೆ. ತೈವಾನ್ ಪರ ಯ ಸು 12ನೇ ನಿಮಿಷದಲ್ಲಿ, ಚೇನ್ 77ನೇ ನಿಮಿಷದಲ್ಲಿ ಗೋಲು ಗಳಿಸಿದರು. ಭಾರತ ಒಂದೇ ಗೋಲು ಗಳಿಸಿತು. ಈ ಸೋಲಿನೊಂದಿಗೆ ಭಾರತದ ವಿಶ್ವಕಪ್ ಅರ್ಹತೆ ಕನಸು ಭಗ್ನವಾಗಿದೆ. ವಿಶ್ವಕಪ್ ಪ್ರವೇಶಕ್ಕೆ ಈಗ ಅರ್ಹತಾ ಸುತ್ತು ಒಂದೇ ದಾರಿಯಾಗಿದೆ .

ಗುರುವಾರದಂದು ಮೊದಲ ಹಂತದ ವೇಳಾಪಟ್ಟಿ | ಮಾ.28 ರಿಂದ ಐಪಿಎಲ್ | ಪಂದ್ಯ ಸಂಖ್ಯೆ ಹೆಚ್ಚಳ ಸಾಧ್ಯತೆ

ಐಪಿಎಲ್‌ನಲ್ಲಿ ಈ ಬಾರಿ 84 ಪಂದ್ಯ?

ಮುಂಬೈ: ವಿಶ್ವ ಕ್ರಿಕೆಟ್‌ನ ಮದಗಜವಾಗಿ ಬೆಳೆದು ನಿಂತ ನಂತರ ಅತಿ ಶ್ರೀಮಂತ ಮತ್ತು ಅತಿ ದೊಡ್ಡ ಲೀಗ್ ಎಂಬ ಹೆಸರು ಪಡೆದ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್) ಪಂದ್ಯಾವಳಿಯು ಈಗ ಇನ್ನಷ್ಟು ವಿಸ್ತಾರವಾಗಲಿದ್ದು, 19ನೇ ಆವೃತ್ತಿಯಲ್ಲಿ 84 ಪಂದ್ಯಗಳು ನಡೆಯುವ ಸಾಧ್ಯತೆ ಇದೆ.

ಸುಮಾರು 2 ತಿಂಗಳಿಗೂ ಹೆಚ್ಚು ಕಾಲ ನಡೆದು ಜನರನ್ನು ರಂಜಿಸುವ ಐಪಿಎಲ್ ಟೂರ್ನಿ ಈಗ ಇನ್ನಷ್ಟು ಹಿಗ್ಗಲಿದೆ. ಇದೇ ಮೊದಲ ಬಾರಿಗೆ ಪಂದ್ಯದ ಸಂಖ್ಯೆಯನ್ನು 84ಕ್ಕೇರಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಾಗಿದೆ. ಎಲ್ಲಾ ಹತ್ತೂ ತಂಡಗಳಿಗೆ 8 ತವರು, 8 ಹೊರಪ್ರದೇಶ ಪಂದ್ಯಗಳು ಸಿಗಬೇಕೆಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

2008ರಲ್ಲಿ ಪಂದ್ಯಾವಳಿ ಆರಂಭವಾಗಿತ್ತು. ಮೊದಲಿಗೆ 8 ತಂಡಗಳಿದ್ದವು, ಕೊಚ್ಚಿ ಅಂತಹ ತಂಡಗಳು ಐಪಿಎಲ್ ನಿಂದ ಹೊರನಡೆದವು. 2016-17ರಲ್ಲಿ ಎರಡು ತಂಡಗಳನ್ನು ನಿಷೇಧಿಸಲಾಗಿತ್ತು. ಆಗ ಎರಡು ಬೇರೆ ತಂಡಗಳನ್ನು ಸೇರಿಸಲಾಗಿತ್ತು. ಇಷ್ಟಾದರೂ ಬಿಸಿಸಿಐ ಹೆಚ್ಚು ಪಂದ್ಯಗಳನ್ನಾಡಿಸಲು ಮುಂದಾಗಿರಲಿಲ್ಲ. ಆದರೆ ಇದೇ ಮೊದಲ ಬಾರಿಗೆ 80ಕ್ಕೂ ಅಧಿಕ ಪಂದ್ಯಗಳನ್ನಾಡಿಸುವ ಉದ್ದೇಶ ಹೊಂದಿದೆ.

ಬರೋಬ್ಬರಿ 84 ಪಂದ್ಯಗಳು: ಕಳೆದ ಬಾರಿ ಅಂದರೆ 18ನೇ ಆವೃತ್ತಿಯ ಐಪಿಎಲ್‌ನಲ್ಲಿ 74 ಪಂದ್ಯಗಳನ್ನಾಡಿಸಲಾಗಿತ್ತು. ಒಂದು ತಂಡ 14ರಂತೆ ಲೀಗ್ ಪಂದ್ಯಗಳಲ್ಲಿ ಆಡುತ್ತಿತ್ತು. ಆದರೆ ಎಲ್ಲಾ 10 ತಂಡಗಳು ಎರಡು ಬಾರಿ ಎದುರಾಗುತ್ತಿರಲಿಲ್ಲ. ಎರಡು ತಂಡಗಳು ಒಂದೇ ಬಾರಿ ಎದುರಾಗಬೇಕಾದ ಅನಿವಾರ್ಯತೆ ಇತ್ತು. ಉದಾಹರಣೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಎಲ್ಲಾ 9 ಎದುರಾಳಿಗಳೊಂದಿಗೆ 2 ಪಂದ್ಯಗಳನ್ನಾಡುತ್ತಿರಲಿಲ್ಲ. 2 ತಂಡಗಳ ಎದುರಿಗೆ ಕೇವಲ ಒಂದು ಪಂದ್ಯ ಆಡಬೇಕಾಗಿತ್ತು. ಈ ಬಗ್ಗೆ ಕಾಳಜಿ ವಹಿಸಿರುವ ಬಿಸಿಸಿಐ ಪಂದ್ಯಾವಳಿಯನ್ನೇ ವಿಸ್ತರಿಸುವ ಯೋಜನೆ ಹಾಕಿಕೊಂಡಿದೆ. 80 ಲೀಗ್ ಪಂದ್ಯಗಳು ಇರಲಿದ್ದು, ನಾಲ್ಕು ಪ್ಲೇಆಫ್ ಪಂದ್ಯಗಳು ನಡೆಯಲಿವೆ.



ಎಷ್ಟು ತಂಡಗಳಿದ್ದಾಗ ಎಷ್ಟು ಪಂದ್ಯಗಳು?

8 ತಂಡಗಳು	60 ಪಂದ್ಯಗಳು
9 ತಂಡಗಳು	76 ಪಂದ್ಯಗಳು
10 ತಂಡಗಳು	74 ಪಂದ್ಯಗಳು (ಸಾಮಾನ್ಯ ಮಾದರಿ)
10 ತಂಡಗಳು	84 ಪಂದ್ಯಗಳು (ಈ ಬಾರಿಯ ವಿಸ್ತಾರ)

ಕಳೆದ ಬಾರಿ ಇದ್ದದ್ದು 74 ಪಂದ್ಯ: ಐಪಿಎಲ್ ಆರಂಭಿಕ ಆವೃತ್ತಿಯಲ್ಲಿ 59 ಪಂದ್ಯಗಳನ್ನು ಮಾತ್ರ ಆಡಿಸಲಾಗಿತ್ತು. ನಂತರ ಎರಡು ಬಾರಿ ಬದಲಾವಣೆಯಾಗಿ ಹಲವು ಬಾರಿ 60 ಮತ್ತು 76 ಪಂದ್ಯಗಳನ್ನಾಡಿಸಿತ್ತು. ಐಪಿಎಲ್‌ನಲ್ಲಿ ಹೆಚ್ಚು ಬಾರಿ 60 ಪಂದ್ಯಗಳನ್ನೇ ಆಡಿಸಲಾಗಿದೆ. 2021ರಲ್ಲಿ 60 ಪಂದ್ಯಗಳನ್ನೇ ಆಡಿಸಲಾಗಿತ್ತು. 2023ರಲ್ಲಿ ಎರಡು ಹೊಸ ತಂಡಗಳು ಸೇರ್ಪಡೆಯಾದವು. ಹೀಗಾಗಿ ಪಂದ್ಯದ ಸಂಖ್ಯೆ 74ಕ್ಕೆ ವಿಸ್ತಾರವಾಗಿತ್ತು. 2022ರಿಂದ 18ನೇ ಆವೃತ್ತಿವರೆಗೂ 74 ಪಂದ್ಯಗಳನ್ನೇ ಆಡಿಸಲಾಗಿತ್ತು.

ಬದಲಾಗಿದ್ದು ಏನು? ಐಪಿಎಲ್‌ನಲ್ಲಿ ಮೊದಲಿಗೆ 8 ತಂಡಗಳು ಮಾತ್ರ ಇದ್ದವು. ಹೀಗಾಗಿ ಎಲ್ಲಾ ತಂಡಗಳು ಎಲ್ಲಾ ತಂಡಗಳನ್ನು ತಲಾ ಎರಡು ಬಾರಿ ಎದುರಿಸುತ್ತಿದ್ದವು. ಆದರೆ 10 ತಂಡಗಳಿಗೆ ಕೂಟ ಬದಲಾಯಿತು. ಆದಾಗ್ಯೂ ಪಂದ್ಯಗಳ ಸಂಖ್ಯೆ ಏರಿಸಲಾಗಿರಲಿಲ್ಲ. ಅಂದರೆ ಒಂದು ತಂಡ 14 ಮಾತ್ರ ಲೀಗ್ ಪಂದ್ಯಗಳನ್ನಾಡುತ್ತಿತ್ತು. ಇದನ್ನು ಈಗ 16ಕ್ಕೇರಿಸಲಾಗುತ್ತದೆ. ಅಂದರೆ ಪ್ರತಿಯೊಂದು ತಂಡವೂ 8 ತವರು ಮತ್ತು 8 ಹೊರಪ್ರದೇಶದ ಪಂದ್ಯಗಳನ್ನಾಡಲಿವೆ. ವಾಸ್ತವವಾಗಿ ಎಲ್ಲಾ ತಂಡಗಳು ಎರಡು ಬಾರಿ ಎದುರಾದರೆ ಒಂದು ತಂಡ 18 ಪಂದ್ಯಗಳನ್ನಾಡಬೇಕಾಗುತ್ತದೆ. ಆದರೆ ಈ ಬಾರಿ ಅಂತಹ ಯೋಜನೆಗಳನ್ನು ಹಾಕಿಕೊಂಡಿಲ್ಲ ಎಂದು ಹೇಳಲಾಗುತ್ತಿದೆ.

2 ಹಂತದಲ್ಲಿ ವೇಳಾಪಟ್ಟಿ: ದೇವಜೀತ್ ಸೈಕಿಯಾ

ಮಾರ್ಚ್ 28ರಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ವೇಳಾಪಟ್ಟಿ ಗುರುವಾರದಂದು ಬಿಡುಗಡೆಯಾಗಲಿದೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ. ಭಾನುವಾರದಂದು ಐಪಿಎಲ್ ಶುರುವಾಗುವ ದಿನಾಂಕಗಳನ್ನು ಘೋಷಿಸಲಾಗಿದೆ. ಮೊದಲ ಪಂದ್ಯ ಮಾರ್ಚ್ 28ಕ್ಕೆ ನಡೆಯಲಿದೆ. ಫೈನಲ್ ಪಂದ್ಯ ಮೇ 31ರಂದು ನಡೆಯಲಿದೆ. ಈ ಬಗ್ಗೆ ಮಾತನಾಡಿರುವ ಸೈಕಿಯಾ, ಹಲವು ರಾಜ್ಯಗಳಲ್ಲಿ ಚುನಾವಣೆಗಳಿರುವುದರಿಂದ ವೇಳಾಪಟ್ಟಿ ತಡವಾಗಿದೆ. 5 ರಾಜ್ಯಗಳಲ್ಲಿ ಚುನಾವಣೆ ನಡೆಯಲಿದೆ. ಈ ಬೆನ್ನಲ್ಲೇ ನಾವು ವೇಳಾಪಟ್ಟಿಯನ್ನು ಎರಡು ಹಂತದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದ್ದೇವೆ. ಮೊದಲ ಹಂತದ ವೇಳಾಪಟ್ಟಿ ಗುರುವಾರದಂದು ಬಿಡುಗಡೆ ಮಾಡುತ್ತೇವೆ. ಎರಡನೇ ಹಂತದ ವೇಳಾಪಟ್ಟಿಯನ್ನು ಚುನಾವಣೆಯ ಆಧಾರದ ಮೇಲೆ ಬಿಡುಗಡೆ ಮಾಡುತ್ತೇವೆ ಎಂದಿದ್ದಾರೆ.

ವಿಶ್ವಕಪ್ ಅರ್ಹತಾ ಸುತ್ತು: ಭಾರತ ಪಂದ್ಯ ಡ್ರಾ

ಹೈದರಾಬಾದ್: ಎಫ್‌ಐಎಚ್ ಮಹಿಳಾ ವಿಶ್ವಕಪ್ ಅರ್ಹತಾ ಸ್ಪರ್ಧೆಯಲ್ಲಿ ಉರುಗ್ವೆಯನ್ನು ಸುಲಭವಾಗಿ ಸೋಲಿಸಿದ ನಂತರ ಭಾರತಕ್ಕೆ ಸ್ಕಾಟ್ಲೆಂಡ್ ವಿರುದ್ಧ ಕಠಿಣ ಸವಾಲು ಎದುರಾಯಿತು. ಎರಡೂ ತಂಡಗಳ ನಿರಂತರ ಪರಿಶ್ರಮ ಹಾಗೂ ಕರಾರುವಾಕ್ ಆಟದೊಂದಿಗೆ ಪಂದ್ಯ ಡ್ರಾದಲ್ಲಿ ಅಂತ್ಯವಾಗಿದೆ.

ಜಿ.ಎಂ.ಸಿ ಬಾಲಯೋಗಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ಆರಂಭದಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಕಂಬ್ಯಾಕ್ ಮಾಡಿತ್ತು. ಡಿಫೆನ್ಸ್ ಮೂಲಕ ಭಾರತ ಮುನ್ನಡೆ ಕೂಡ ಪಡೆಯಿತು. ಆದರೆ ಸ್ಕಾಟ್ಲೆಂಡ್ ಹೋರಾಟದಿಂದ ಮರಳಿ ಬಂದು ಪಂದ್ಯವನ್ನು 2-2 ಸಮಬಲದಲ್ಲಿ ಮುಗಿಸಿತು.



ಆರಂಭದಲ್ಲೇ ಗೋಲು!: ಆರನೇ ನಿಮಿಷದಲ್ಲಿ ಸ್ಕಾಟ್ಲೆಂಡ್ ಪೆನಾಲ್ಟಿ ಕಾರ್ನರ್ ಗಳಿಸಿ ಮುನ್ನಡೆ ಪಡೆದಿತು. ಜೆನ್ನಿಫರ್ ಈಡಿ ಅವರ ಡ್ರಾಗ್‌ಫ್ಲಿಕ್ ಅನ್ನು ಹೀದರ್ ಮೆಕ್‌ಇವನ್ ಡಿಫ್ಲೆಕ್ಷನ್ ಮೂಲಕ ಗೋಲಾಗಿ ಪರಿವರ್ತಿಸಿದರು. ಮೂರನೇ ಕ್ವಾರ್ಟರ್ ಆರಂಭವಾದ ಮೂರು ನಿಮಿಷಗಳಲ್ಲೇ ಭಾರತ ಸಮಬಲ ಸಾಧಿಸಿತು. ಪೆನಾಲ್ಟಿ ಕಾರ್ನರ್ ಅನ್ನು ನವ್ನೀತ್ ಕೌರ್-ಸುಶೀಲಾ ಚಾನು ಭಾರತಕ್ಕೆ ಮೊದಲ ಗೋಲು ತಂದುಕೊಟ್ಟರು. ಮೊದಲಾರ್ಧ ಮುಕ್ತಾಯಕ್ಕೂ ಮೊದಲು ಭಾರತ ಮುನ್ನಡೆ ಪಡೆದಿತು. ರುತುಜಾ ಪಿಸಾಲ್ ಗಳಿಸಿದ ಪೆನಾಲ್ಟಿ ಕಾರ್ನರ್ ಬಳಿಕ ಉಂಟಾದ ಗೊಂದಲದಲ್ಲಿ ಸುನೆಲಿತಾ ಟೊಪ್ಪೊ ಗೋಲು ಗಳಿಸಿದರು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಫಿಯೋನಾ ಬರ್ನೆಟ್ ಗೋಲು ಬಾರಿಸಿ ಸ್ಕಾಟ್ಲೆಂಡ್ ಸಮಬಲ ಸಾಧಿಸಿತು. ನಂತರ ಎರಡೂ ತಂಡಗಳು ಅವಕಾಶಗಳನ್ನು ಸೃಷ್ಟಿಸಿದರೂ ಗೋಲು ಸಾಧ್ಯವಾಗದೆ ಪಂದ್ಯ 2-2 ಡ್ರಾ ಆಗಿ ಮುಕ್ತಾಯವಾಯಿತು.

24 ಕ್ರೀಡಾಪಟುಗಳಿಗೆ ನಿವೇಶನ ಭರವಸೆ

ಬೆಂಗಳೂರು: ಏಷ್ಯನ್ ಗೇಮ್ಸ್, ಒಲಿಂಪಿಕ್ಸ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ರಾಷ್ಟ್ರವನು ಪ್ರತಿನಿಧಿಸಿ ಪದಕ ಪಡೆದಿರುವ ರಾಜ್ಯದ ಹಲವು ಕ್ರೀಡಾ ಪಟುಗಳಿಗೆ ನಿವೇಶನ ಹಂಚಿಕೆ ಮಾಡುವಂತೆ ರಾಜ್ಯ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಡಾ. ಕೆ. ಗೋವಿಂದರಾಜು ಅವರು ರಾಜ್ಯ ಗೃಹ ಮಂಡಳಿಗೆ ಮನವಿ ಸಲ್ಲಿಸಿದ್ದಾರೆ. ಮನವಿ ಸ್ವೀಕರಿಸಿರುವ ಸಚಿವ ಜಮೀರ್ ಅಹ್ಮದ್, ಎಲ್ಲರಿಗೂ ನಿವೇಶನ ನೀಡುವುದಾಗಿ ಭರವಸೆ ನೀಡಿದ್ದು, ತಕ್ಷಣದಿಂದಲೇ ಕ್ರಮ ಕೈಗೊಳ್ಳುವಂತೆ ಸೂಚಿಸುವುದಾಗಿ ಹೇಳಿದ್ದಾರೆ. ಒಟ್ಟು 24 ಕ್ರೀಡಾಪಟುಗಳಿಗೆ ನಿವೇಶನ ಸಿಕ್ಕಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ನೀಡಲಾಗಿದೆ.



ವಿಶ್ವಕಪ್ ಗೆದ್ದ ಬೆನ್ನಲ್ಲೇ ಬಹುಮಾನ ಘೋಷಿಸಿದ ಬಿಸಿಸಿಐ

ಭಾರತ ತಂಡಕ್ಕೆ ₹131 ಕೋಟಿ!

ಮುಂಬೈ: ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತನ್ನದೇ ದಾಖಲೆ ಮುರಿದು, 2026ರ ಟಿ20 ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ ಭರ್ಜರಿ 131 ಕೋಟಿ ರೂ. ನಗದು ಬಹುಮಾನ ಘೋಷಿಸಿದೆ.

2024ರಲ್ಲಿ ರೋಹಿತ್ ಶರ್ಮ ನಾಯಕತ್ವದಲ್ಲಿ ಬಾರ್ಬಡೋಸ್‌ನಲ್ಲಿ ಭಾರತ ವಿಶ್ವಕಪ್ ಗೆದ್ದಾಗ ಬಿಸಿಸಿಐ 125 ಕೋಟಿ ರೂ. ಬಹುಮಾನ ನೀಡಿತ್ತು. ಇದೀಗ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಜಯ ಸಾಧಿಸಿದ ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡ ಕ್ಕೆ ಬಹುಮಾನ ನೀಡುವುದರಲ್ಲಿ ಇತಿಹಾಸ ನಿರ್ಮಿಸಿದೆ.

ಈ ಜಯದೊಂದಿಗೆ ಭಾರತ ಟಿ20 ವಿಶ್ವಕಪ್ ಅನ್ನು ಸರಿಯಾಗಿ ಎರಡನೇ ಬಾರಿ ಉಳಿಸಿಕೊಂಡ ಮೊದಲ ತಂಡವಾಗಿದ್ದು, ಒಟ್ಟಾರೆ ಮೂರು ಬಾರಿ ಈ ಪ್ರಶಸ್ತಿ ಗೆದ್ದ ಮೊದಲ ತಂಡ ಎಂಬ ದಾಖಲೆ ಕೂಡ ನಿರ್ಮಿಸಿದೆ. ಬಿಸಿಸಿಐ ಪ್ರಕಟಣೆಯಲ್ಲಿ ಆಟಗಾರರು, ತರಬೇತಿ ಸಿಬ್ಬಂದಿ ಹಾಗೂ ಆಯ್ಕೆ ಸಮಿತಿಗೆ ಅಭಿನಂದನೆ ತಿಳಿಸಿ, ಈ ಐತಿಹಾಸಿಕ ಸಾಧನೆ ಭಾರತೀಯ ಕ್ರಿಕೆಟ್‌ಗೆ ಹೆಮ್ಮೆ ತರುತ್ತದೆ ಎಂದು ಹೇಳಿದೆ.

ಐಸಿಸಿಯಿಂದಲೂ ಭರ್ಜರಿ ಬಹುಮಾನ: ಇದರ ಜೊತೆಗೆ ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಕೂಡ ಭಾರತಕ್ಕೆ 3



ಮಿಲಿಯನ್ ಅಮೆರಿಕನ್ ಡಾಲರ್ (ಸುಮಾರು 27.48 ಕೋಟಿ ರೂಪಾಯಿ) ಬಹುಮಾನ ನೀಡಿದೆ. ಈ ಬಾರಿ ವಿಶ್ವಕಪ್ ಟೂರ್ನಿಯ ಒಟ್ಟು ಬಹುಮಾನ ಮೊತ್ತ 13.5 ಮಿಲಿಯನ್ ಡಾಲರ್ ಆಗಿದ್ದು, ಹಿಂದಿನ ಆವೃತ್ತಿಗಿಂತ ಸುಮಾರು 20 ಶೇಕಡಾ ಹೆಚ್ಚಳ ಕಂಡಿದೆ. ಗುಂಪು ಹಂತ ಮತ್ತು ಸೂಪರ್ ಎಂಟು ಹಂತಗಳಲ್ಲಿ ಪ್ರತಿ ಪಂದ್ಯ ಜಯಿಸಿದಾಗಲೂ ತಂಡಕ್ಕೆ ಸುಮಾರು 31,154 ಡಾಲರ್ (ಸುಮಾರು 28.6 ಲಕ್ಷ ರೂಪಾಯಿ) ಹೆಚ್ಚುವರಿ ಬಹುಮಾನ ನೀಡಲಾಗಿದೆ.

ಯಾರ‍್ಯಾರಿಗೆ ಸೇರಲಿದೆ ಬಹುಮಾನ? ವಿಶ್ವಕಪ್ ತಂಡದ ಭಾಗವಾಗಿರುವ ಪ್ರತಿಯೊಬ್ಬ ಆಟಗಾರರಿಗೂ ಸಮಾನ ಬಹುಮಾನ ಸೇರಲಿದೆ. ಇದಲ್ಲದೆ, ಪ್ರಧಾನ ಕೋಚ್, ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಕೋಚ್ ಸೇರಿದಂತೆ ಎಲ್ಲಾ ತರಬೇತಿ ಸಿಬ್ಬಂದಿ ಮತ್ತು ತಂಡದ ವೈದಕೀಯ ಹಾಗೂ ಬೆಂಬಲ ಸಿಬ್ಬಂದಿಗೂ ಹಂಚಿಕೆಯಾಗಲಿದೆ.

ದಾಖಲೆಯ ಬಹುಮಾನ

ಇಲ್ಲಿಯವರೆಗೂ ಯಾವುದೇ ತಂಡ ಯಾವುದೇ ವಿಶ್ವಕಪ್ ಗೆದ್ದರೂ ಇಷ್ಟೊಂದು ಬಹುಮಾನ ಈವರೆಗೂ ಯಾವುದೇ ಸಂಸ್ಥೆ ನೀಡಿರಲಿಲ್ಲ. 2024ರಲ್ಲೇ ಭಾರತ ಅತಿ ಹೆಚ್ಚು ಮೊತ್ತದ ನಗದು ಬಹುಮಾನ ನೀಡಿದ ಸಂಸ್ಥೆ ಅನಿಸಿಕೊಂಡಿತ್ತು. ಈ ದಾಖಲೆಯನ್ನೇ ಮುರಿದಿರುವ ಬಿಸಿಸಿಐ, 133 ಕೋಟಿ ರೂ. ಘೋಷಿಸಿದೆ.

3 ವರ್ಷದಲ್ಲಿ ಬಿಸಿಸಿಐ ಕೊಟ್ಟಿದ್ದು 335 ಕೋಟಿ

ಬಿಸಿಸಿಐ ಮೂರು ವರ್ಷಗಳಲ್ಲಿ ಬರೋಬ್ಬರಿ 335 ಕೋಟಿ ರೂ. ಬಹುಮಾನ ನೀಡಿದೆ. 2024ರಲ್ಲಿ ಭಾರತ ಟಿ20 ವಿಶ್ವಕಪ್, 2025ರಲ್ಲಿ ಚಾಂಪಿಯನ್ಸ್ ಟ್ರೋಫಿ ಹಾಗೂ ಈ ಬಾರಿ ಮತ್ತೊಮ್ಮೆ ಟಿ20 ವಿಶ್ವಕಪ್ ಗೆದ್ದಿರುವ ಭಾರತಕ್ಕೆ ಭಾರೀ ಬಹುಮಾನ ನೀಡಲಾಗಿದೆ. ಅಲ್ಲದೆ ಕಳೆದ ಬಾರಿ ಏಷ್ಯಾಕಪ್ ಕೂಡ ಭಾರತ ಗೆದ್ದುಕೊಂಡಿದೆ. ಆಗಲೂ ಬಿಸಿಸಿಐ ಭರ್ಜರಿ ಬಹುಮಾನ ನೀಡಿತ್ತು.

ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟ್

ಕನ್ನಡಗರಿಗೆ 11 ಪದಕ



ಬೆಂಗಳೂರು: 7ನೇ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರರು ಅತ್ಯುತ್ತಮ ಪ್ರದರ್ಶನ ನೀಡಿ ಒಟ್ಟು 11 ಪದಕಗಳನ್ನು ಗೆದ್ದಿದ್ದಾರೆ. ರಾಜ್ಯದ ತಂಡವು 2 ಚಿನ್ನ, 4 ಬೆಳ್ಳಿ ಹಾಗೂ 5 ಕಂಚಿನ ಪದಕಗಳನ್ನು ಗಳಿಸಿ ಗಮನಾರ್ಹ ಸಾಧನೆ ಮಾಡಿದೆ. ಚಾಂಪಿಯನ್‌ಶಿಪ್‌ನಲ್ಲಿ ಕನ್ನಡತಿ ಪಲ್ಲವಿ ಕೆ.ಎಂ ಅವರ ಪ್ರದರ್ಶನ ವಿಶೇಷವಾಗಿತ್ತು. ಅವರು ಮಹಿಳಾ ಸಿಂಗಲ್ಸ್ ವಿಭಾಗ ಮತ್ತು ಮಹಿಳಾ ಡಬಲ್ಸ್ ವಿಭಾಗಗಳಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದರು. ಜೊತೆಗೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಪಡೆದು ಶ್ರೇಷ್ಠ ಸಾಧನೆ ಮಾಡಿದ್ದಾರೆ.

ಯಾರ‍್ಯಾರಿಗೆ ಯಾವ್ಯಾವ ಪದಕ?

ಅಮ್ಮು ಮೋಹನ್ ಕೂಡ ಉತ್ತಮ ಪ್ರದರ್ಶನ ನೀಡಿದರು. ಅವರು ಮಹಿಳಾ ಡಬಲ್ಸ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಮತ್ತು ಮಹಿಳಾ ಸಿಂಗಲ್ಸ್ ಹಾಗೂ ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದರು. ಶಾರ್ಟ್ ಹೈಟ್ ವಿಭಾಗದಲ್ಲಿ ಧನೇಶ್ವರಿ ಅವರು ಮಹಿಳಾ ಡಬಲ್ಸ್‌ನಲ್ಲಿ ಬೆಳ್ಳಿ ಪದಕ ಮತ್ತು ಮಹಿಳಾ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು. ಇದೇ ವಿಭಾಗದಲ್ಲಿ ಜನನಿ ಆರ್ ಅವರು ಮಹಿಳಾ ಡಬಲ್ಸ್‌ನಲ್ಲಿ ಒಂದು ಬೆಳ್ಳಿ ಪದಕ ಪಡೆದರು. ಪುರುಷರ ವಿಭಾಗದಲ್ಲಿ ಸಿದ್ದಣ್ಣ ಸಾಹುಕಾರ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಜಮ್ಯಾದ್ ಎಂ ಇ ಅವರು ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ, ಹಾಗೂ ಮಂಜುನಾಥ್ ಸಿ ಅವರು ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು.

ರಾಷ್ಟ್ರೀಯ ಶೂಟಿಂಗ್: ಮನುಗೆ ಮೊದಲ ಸ್ಥಾನ

ಹೊಸದಿಲ್ಲಿ: ಒಲಿಂಪಿಯನ್ ಮನು ಭಾಕರ್ ರಾಷ್ಟ್ರೀಯ ಆಯ್ಕೆ ಪರೀಕ್ಷೆಗಳ ಟಿ3 (ಗುಂಪು ಎ) ಸ್ಪರ್ಧೆಯ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಫೈನಲ್‌ನಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ಇಲ್ಲಿನ ಡಾ. ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಮಂಗಳವಾರ ಸ್ಪರ್ಧೆ ಮುಕ್ತಾಯಗೊಂಡಿತು.

ಫೈನಲ್‌ಗೆ ಕೊನೆಯ ಅರ್ಹತೆಯಾಗಿ ಪ್ರವೇಶಿಸಿದ್ದ ಮನು ಭಾಕರ್ ಎರಡನೇ ಸರಣಿಯ ಅಂತ್ಯದಿಂದಲೇ ಮುನ್ನಡೆ ಕಾಯ್ದುಕೊಂಡು 246.1 ಅಂಕಗಳೊಂದಿಗೆ ಪ್ರಶಸ್ತಿ ಗೆದ್ದರು. ವಿಶ್ವಕಪ್ ಫೈನಲ್ ಬೆಳ್ಳಿ ಪದಕ ವಿಜೇತೆ ಸೈನ್ಯಮ್ 241.9 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದರು. ಏಷ್ಯನ್ ಚಾಂಪಿಯನ್‌ಶಿಪ್ ಚಿನ್ನ ಹಾಗೂ ವಿಶ್ವ ಚಾಂಪಿಯನ್‌ಶಿಪ್ ಕಂಚು ಪದಕ ವಿಜೇತೆ ಈಶಾ ಸಿಂಗ್ 220.6 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಪಾಲಕ್ ಗುಲಿಯಾ 200.2 ಅಂಕಗಳೊಂದಿಗೆ ನಾಲ್ಕನೇ



ಸ್ಥಾನ ಪಡೆದರು. ನಂತರ ಅಂಜಲಿ ಚೌಧರಿ 179.8, ಸುರ್ಬಿ ರಾವ್ 158.2 ಅಂಕಗಳೊಂದಿಗೆ ಕ್ರಮವಾಗಿ ಐದನೇ ಹಾಗೂ ಆರನೇ ಸ್ಥಾನ ಪಡೆದರು. ಪ್ರಾಂಜಲಿ ಪ್ರಶಾಂತ್ ಧುಮಾಲ್ 138.7 ಮತ್ತು ಮುಸ್ಕಾನ್ 117.0 ಅಂಕಗಳೊಂದಿಗೆ ಮೊದಲ ಎಂಟು ಸ್ಥಾನಗಳನ್ನು ಪೂರ್ಣಗೊಳಿಸಿದರು.

ಇತರ ಫಲಿತಾಂಶಗಳು

ಪುರುಷರ 50 ಮೀಟರ್ ರೈಫಲ್ ಪ್ರೋನ್
1. ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ 628.3
2. ನಿರಾಜ್ ಕುಮಾರ್ 622.6
3. ಗೋಲ್ಡಿ ಗುರ್ಜರ್ 622.2

ಮಹಿಳೆಯರ 50 ಮೀಟರ್ ರೈಫಲ್ ಪ್ರೋನ್
1. ಸಿಫ್ಟ್ ಕೌರ್ ಸಮ್ರಾ 628.3
2. ಆಕೃತಿ ದಹಿಯಾ 627.0
3. ಮನಿನಿ ಕೌಶಿಕ್ 626.6

ಅರ್ಹತಾ ಸುತ್ತಿನಲ್ಲಿ ಈಶಾ ಸಿಂಗ್ 58021 ಎಕ್ಸ್ ಅಂಕಗಳೊಂದಿಗೆ ಅಗ್ರಸ್ಥಾನ ಪಡೆದಿದ್ದರು. ಸುರ್ಬಿ ರಾವ್ 578-12 ಎಕ್ಸ್ ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರು. ಈ ಶೂಟರ್‌ಗಳು ಮಾರ್ಚ್ 11 ರಿಂದ ಮಾರ್ಚ್ 21ರವರೆಗೆ ನವದೆಹಲಿಯಲ್ಲಿ ನಡೆಯುವ ತರಬೇತಿ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5920

5919 ಉತ್ತರ

ಎಡದಿಂದ ಬಲಕ್ಕೆ:
1.ಬಯಲುಸೀಮೆ
3.ಹಂಬಲ 4.ಹಗಲು
5.ವಾಣಿ 6.ತನು
7.ಭಾಜನ 8.ಆರಡಿ
10.ಜಟಿಲ 12.ಆದಾಯ
13.ಲಿಪಿ 14.ರಾಮ
15.ತಾಂಡವ 16.ಶಂಕಿಸು
17.ಗಿಡಮೂಲಿಕೆ

ಮೇಲಿನಿಂದ ಕೆಳಕ್ಕೆ
: 1.ಬಲವಾನ
2.ಮೆಲುನುಡಿ 7.ಭಾವಜ
9.ಆಶಯ 11.ಲಲಿತಾಂಗಿ
12.ಆಮಶಂಕೆ

ಎಡದಿಂದ ಬಲಕ್ಕೆ
1.ಈ ಸಲ ಬರುವೆನೆಂದ ಶಕ್ತಿವಂತ (3)
4.ಪೂರ್ಣವಾಗಿ ಬಲಿತ ಬಣ್ಣಗೆಟ್ಟ ಪತ್ರೆ (3)
5.ಆಗಸದಲ್ಲಿ ಮೂಡುವ ಬಣ್ಣದ ಕಮಾನು (5)
6.ಕರ್ನಾಟಕ-ತಮಿಳುನಾಡಿನ ಸಾಂಪ್ರದಾಯಿಕ ಸಿಹಿತಿಂಡಿ (4)
8.ಮನದ ನಡುವೆ ಅಡಗಿದ ವಂಶ (4)
10.ಜಪ-ದನ ಸೇರಿ ಮಾನವ ಜನಾಂಗವಾಯ್ತು (4)
12.ಹೊಳೆಯುವಿಕೆ ದ್ವಿರುಕ್ತಿಯಲ್ಲಿದೆ (4)
15.ಅಭ್ರಕವನ್ನು ಹೀಗೂ ಹೇಳುತ್ತೇವೆ (5)
16.ಸರ ಧರಿಸಿದರೂ ಉಂಟಾದ ಬೇಜಾರು (3)
17.ವನದ ನಡುವೆ ಸಿಕ್ಕ ಜಹಗೀರು (3)

ಮೇಲಿನಿಂದ ಕೆಳಕ್ಕೆ
2.ಸೂಟಿಯ ದಿನಗಳು ತಲೆಕೆಳಗಾಗಿವೆ (4)
3.ಅನ್ಯವಲ್ಲದ, ಅದ್ವಿತೀಯ (3)
4.ದಂತಕ್ಕೆ ಬಂದ ನೋವು (4)
6.ಅಗ್ರಜನೊಂದಿಗೆ ಇರುವ ತಮ್ಮ (3)
7.ಕಾಳು-ಕಡ್ಡಿಗಳು ತಲೆಕೆಳಗಾಗಿವೆ (3)
8.ಆ ಕೂಡಲೆ ಎಂಬರ್ಥದ ಶಬ್ದ (3)
9.ಭೂಮಿಯ ಒಡೆಯನಾಗಿ ರಾಜ (3)
11.ಇದು ಪುಟ್ಟ ಹುಡುಗಿಯ ಲಂಗ (4)
13.ಕರವನ್ನು ಹಿಡಿದವಗೆ ಕೇಳಿದ ಮಧುರ ಧ್ವನಿ (4)
14.ಕೂಷ್ಮಾಂಡ-ತರಕಾರಿ ಕಾಯಿಯಿದು (3)

ಮಾರ್ನಿಂಗ್ ಶೋ

ಚೀತಾ ಮಾರ್ಕೆಟ್ ಮಾಫಿಯಾ ವಿರುದ್ಧ ನಾಯಕನ ಹೋರಾಟ





ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಮಾರುಕಟ್ಟೆಯಲ್ಲಿ ನಡೆಯುವ ಅನ್ಯಾಯ, ಅವ್ಯವಹಾರಗಳ ವಿರುದ್ಧ ಹೋರಾಡುವ ಯುವಕನಾಗಿ ಕಾಣಿಸಿಕೊಂಡಿರುವ ಚಿತ್ರ ಚೀತಾ. ರಾಜಲಕ್ಷ್ಮಿ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಪ್ರತಿಭಾ ನರೇಶ್ ಅವರು ನಿರ್ಮಿಸಿರುವ ಈ ಚಿತ್ರಕ್ಕೆ ನೃತ್ಯನಿರ್ದೇಶಕ ರಾಜ ಕಲೈಕುಮಾರ್ ಅವರು ಪ್ರಥಮ ಬಾರಿಗೆ ನಿರ್ದೇಶನ ಮಾಡಿದ್ದಾರೆ.

ಪ್ರಜ್ವಲ್ ದೇವರಾಜ್, ಮೇಘಾ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳೆಲ್ಲ ಮುಗಿದಿದ್ದು, ಚಿತ್ರತಂಡವೀಗ ಚಿತ್ರದ ಪ್ರಚಾರದ ಜತೆಗೆ ಸಿನಿಮಾ ರಿಲೀಸ್‌ಗೆ ಸಿದ್ದತೆ ಮಾಡಿಕೊಳ್ಳುತ್ತಿದೆ. ಈ ಚಿತ್ರಕ್ಕಾಗಿಯೇ ಬೆಂಗಳೂರಿನ ಹೆಚ್.ಎಂ.ಟಿ. ಫ್ಯಾಕ್ಟರಿ ಆವರಣದಲ್ಲಿ ಲಕ್ಷಾಂತರ ರೂ.ಗಳ ದೊಡ್ಡ ಬಜೆಟ್‌ನಲ್ಲಿ ಬೃಹತ್ ಪ್ರಮಾಣದ ಮಾರ್ಕೆಟ್ ಸೆಟ್‌ವೊಂದನ್ನು ಹಾಕಲಾಗಿತ್ತು. ಅದರಲ್ಲಿ ಮಟನ್ ಮಾರ್ಕೆಟ್. ಹಳೇ ಮಾರ್ಕೆಟ್, ಮುಲ್ಲಾ ಅಡ್ಡಾ ಹೀಗೆ ಐದಾರು ರೀತಿಯ ಮಾರ್ಕೆಟ್ ಸೆಟ್‌ಗಳನ್ನು ಹಾಕಿ ಶೂಟಿಂಗ್ ಮಾಡಲಾಗಿದೆ. ಮಾರ್ಕೆಟ್ ಎಂದರೆ ಅದೊಂದು ಸಂಪೂರ್ಣ ಬೇರೆಯದೇ ಪ್ರಪಂಚವಾಗಿರುತ್ತದೆ, ಹಾಗಾಗಿ ಒಂದು ಕೃತಕ ಮಾರ್ಕೆಟ್‌ಅನ್ನೇ ಅಲ್ಲಿ ಮರುಸೃಷ್ಟಿ ಮಾಡಲಾಗಿತ್ತು. ಅದೇ ಸೆಟ್‌ನಲ್ಲಿ ಚಿತ್ರದ ಬಹು ಮುಖ್ಯ ದೃಶ್ಯಗಳನ್ನು ಸೆರೆಹಿಡಿಯಲಾಗಿದೆ.

ಕಳೆದ 23 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಡ್ಯಾನ್ಸರ್ ನಂತರ ಡ್ಯಾನ್ಸ್ ಮಾಸ್ಟರ್ ಆಗಿ ಕೆಲಸ ಮಾಡಿರುವ ರಾಜ ಕಲೈಕುಮಾರ್ ಅವರು ಚೀತಾ ಚಿತ್ರದ ಮೂಲಕ ಇದೇ ಮೊದಲಬಾರಿಗೆ ನಿರ್ದೇಶನಕ್ಕೆ ಕೈ ಹಾಕಿದ್ದಾರೆ. ಚೀತಾ, ಬಹುತೇಕ ಮಾರ್ಕೆಟ್ ಏರಿಯಾದಲ್ಲೇ ನಡೆಯುವಂಥ ಕಥೆಯಾಗಿದ್ದು, ಮಾರುಕಟ್ಟೆಯಲ್ಲೇ ಹುಟ್ಟಿ ಬೆಳೆದ ಹುಡುಗನೊಬ್ಬನ ಕಥೆಯೂ ಹೌದು. ದೊಡ್ಡ ಮಾರ್ಕೆಟ್‌ಗೆ ತರಕಾರಿ ಬೆಳೆಗಳು ಹೇಗೆ ಬರುತ್ತದೆ, ಅದು ಎಲ್ಲಿಂದ ಬಂದು, ಎಲ್ಲೆಲ್ಲಿಗೆ ತಲುಪುತ್ತದೆ ಎಂಬುದರ ಮೇಲೆ ಚೀತಾ ಚಿತ್ರದ ಕಥೆ ಸಾಗುತ್ತದೆ. ಲವ್, ತಂದೆ ತಾಯಿ ಸೆಂಟಿಮೆಂಟ್, ಆಕ್ಷನ್‌ನಂಥ ಎಲ್ಲಾ ರೀತಿಯ ಮನರಂಜನಾತ್ಮಕ ಅಂಶಗಳು ಈ ಚಿತ್ರದಲ್ಲಿವೆ. ಜೊತೆಗೆ ಹಿಂದೂ ಮುಸ್ಲಿಮರ ನಡುವೆ ಭಾವೈಕ್ಯತೆಯನ್ನು ಮೂಡಿಸುವಂಥ ಅದ್ಭುತವಾದ ಮೆಸೇಜ್ ಕೂಡ ಚಿತ್ರದಲ್ಲಿದೆ. ಮಾರುಕಟ್ಟೆಯಲ್ಲಿ ನಡೆಯುವ ಅವ್ಯವಹಾರಗಳ ವಿರುದ್ಧ ಹೋರಾಡುವ ಹುಡುಗನಾಗಿ ನಾಯಕನಟ ಪ್ರಜ್ವಲ್ ದೇವರಾಜ್ ಅವರು ಕಾಣಿಸಿಕೊಂಡಿದ್ದಾರೆ, ಮಾರ್ಕೆಟ್‌ನಲ್ಲೇ ಬೆಳೆದು, ಅಲ್ಲೇ ವಾಸಿಸುವ ಹುಡುಗನಾಗಿ ಪಾತ್ರವನ್ನು ನಟ ಪ್ರಜ್ವಲ್ ಅವರು ನಿಭಾಯಿಸಿದ್ದಾರೆ.

ಶಿವಕುಮಾರ್ ಅವರು ಈ ಬೃಹತ್ ಮಾರುಕಟ್ಟೆ ಸೆಟ್‌ನ್ನು ಹಾಕಿದ್ದರು. ಸುಮಾರು ಎರಡು ತಿಂಗಳಿಗೂ ಹೆಚ್ಚು ಕಾಲ ಇನ್ನೂರಕ್ಕೂ ಅಧಿಕ ಕಾರ್ಮಿಕರು ಈ ಸೆಟ್ ಹಾಕಲು ಶ್ರಮಿಸಿದ್ದಾರೆ, ಹಿರಿಯ ನೃತ್ಯ ನಿರ್ದೇಶಕ ಚಿನ್ನಿಪ್ರಕಾಶ್ ಅವರು ಈ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸುವ ಮೂಲಕ ಬಹಳ ದಿನಗಳ ನಂತರ ಅದೂ ಕನ್ನಡ ಚಿತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ಇನ್ನು ಈ ಚಿತ್ರದ ನಾಯಕಿಯಾಗಿ ತ್ರಿಬಲ್ ರೈಡಿಂಗ್, ಕೈವ ಖ್ಯಾತಿಯ ನಟಿ ಮೇಘ ಶೆಟ್ಟಿ ಅವರು ಕಾಣಿಸಿಕೊಂಡಿದ್ದಾರೆ. ಇವರ ಜೊತೆಗೆ ಗುರುರಾಜ್ ಜಗ್ಗೇಶ್, ಶೃತಿ ಹರಿಹರನ್, ರಂಗಾಯಣ ರಘು, ಶಿವರಾಜ್ ಕೆ. ಆರ್. ಪೇಟೆ, ಸಿದ್ಲಿಂಗು ಶ್ರೀಧರ್, ಟೆನ್ನಿಸ್ ಕೃಷ್ಣ, ವಾಮನ ನಿರ್ದೇಶಕ ಶಂಕರ್ ಹಾಗೂ ಇತರರು ತಾರಾಬಳಗದಲ್ಲಿದ್ದಾರೆ. ನಿರ್ಮಾಪಕಿ ಪ್ರತಿಭಾ ನರೇಶ್ ಅವರು ಯಾವುದಕ್ಕೂ ಕೊರತೆ ಬಾರದ ಚಿತ್ರಕ್ಕೆ ಧಾರಾಳವಾಗಿ ಖರ್ಚು ಮಾಡಿದ್ದಾರೆ.



ನಾಯಕ ಪ್ರಜ್ವಲ್ ದೇವರಾಜ್ ತನ್ನ ಪಾತ್ರದ ಕುರಿತು ಮಾತನಾಡುತ್ತ ಮಾರ್ಕೆಟ್‌ನಲ್ಲೇ ಬೆಳೆದ ಹುಡುಗನ ಪಾತ್ರ ನನ್ನದು. ಮಾರ್ಕೆಟ್‌ನಲ್ಲಿ ಎಲ್ಲಾ ಕೆಲಸಗಳು ವೇಗವಾಗಿ ನಡೆಯುತ್ತಿರುತ್ತದೆ. ಆ ಮಾರ್ಕೆಟ್‌ನಲ್ಲಿ ಎಲ್ಲರಿಗೂ ಗೊತ್ತಿರುವ ಒಂದು ಸಮಸ್ಯೆಯಿದ್ದು, ಅದನ್ನು ಯಾರೂ ಸಹ ಗಮನಿಸಿರಲ್ಲ, ಅದು ಗೊತ್ತಾಗದ ಸಮಯದಲ್ಲಿ ಮಾರ್ಕೆಟ್‌ಗೆ ಬಂದು ನಂತರ ಅದರ ವಿರುದ್ಧ ಹೋರಾಡುವಂಥ ಯುವಕನ ಪಾತ್ರ ನನ್ನದು ಎಂದು ಹೇಳಿದ್ದಾರೆ,

ನಾಯಕಿ ಮೇಘ ಶೆಟ್ಟಿ ಅವರ ಪಾತ್ರಕ್ಕೆ ಎರಡು ಮೂರು ಶೇಡ್ಸ್ ಇದೆ.

ಉಳಿದ ಪಾತ್ರಗಳಲ್ಲಿ ಶಿವರಾಜ್ ಕೆ.ಆರ್. ಪೇಟೆ, ಸಿದ್ಲಿಂಗು ಶ್ರೀಧರ್, ಟೆನ್ನಿಸ್ ಕೃಷ್ಣ, ಶಂಕರ್, ಬೇಬಿ ಲೇಖನ ನಟಿಸಿದ್ದಾರೆ. ಇನ್ನು ಈ ಚಿತ್ರಕ್ಕೆ ಗುರುಪ್ರಸಾದ್ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದಾರೆ.

ಶ್ರೀಕಾಂತ್ ನಿರ್ಮಾಣದ ಚಿತ್ರದಲ್ಲಿ ಪ್ರಮೋದ್ ಸಾಯಿಕುಮಾರ್ ಫ್ಯಾನ್

ಹಲ್ಕಾ ಡಾನ್ ಮಂಗಳೂರು ಭಾಗದಲ್ಲಿ ನಡೆಯುವ ಒಂದು ಅದ್ಭುತ ಕಥೆಯಾಗಿದ್ದು, ಪ್ರೇಕ್ಷಕರಿಗೆ ಒಂದು ಹೊಸ ಅನುಭವವನ್ನು ನೀಡಲಿದೆ. ಈ ಚಿತ್ರದಲ್ಲಿ ನಾಯಕ ಪ್ರಮೋದ್ ಅವರು ಡೈಲಾಗ್ ಕಿಂಗ್ ಸಾಯಿಕುಮಾರ್ ಅವರ ಫ್ಯಾನ್ ಆಗಿ ಕಾಣಿಸಿಕೊಂಡಿದ್ದಾರೆ. ಅದಕ್ಕೇ ಚಿತ್ರದ ಟ್ಯಾಗ್‌ಲೈನ್ ಸಾಯಿಕುಮಾರ ಫ್ಯಾನ್ ಅಂತಿರುತ್ತದೆ.

ಈ ಹಿಂದೆ ಮೈಲಾರಿ, ಟಗರು, ಸಲಗ ಹಾಗೂ ಯುಐನಂಥ ಸೂಪರ್ ಹಿಟ್ ಚಿತ್ರಗಳನ್ನು ನಿರ್ಮಿಸಿದ ಕೆಪಿ.ಶ್ರೀಕಾಂತ್ ಅವರು ತಮ್ಮ ವೀನಸ್ ಎಂಟರ್‌ಟೈನರ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡುತ್ತಿರುವ ಮತ್ತೊಂದು ಚಿತ್ರ ಹಲ್ಕಾ ಡಾನ್. ಚಲಾ ಅವರ ಕಥೆ ಚಿತ್ರಕಥೆ ಹಾಗೂ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರ ವೀನಸ್ ಎಂಟರ್‌ಟೈನರ್ ಬ್ಯಾನರ್‌ನ ನಾಲ್ಕನೇ ಕೊಡುಗೆಯಾಗಿದೆ, .



ಈ ಚಿತ್ರದಲ್ಲಿ ರತ್ನನ್ ಪ್ರಪಂಚ ಖ್ಯಾತಿಯ ಪ್ರಮೋದ್ ಪಂಜು ನಾಯಕ ನಟನಾಗಿ ನಟಿಸುತ್ತಿದ್ದು, ನಟಿ ಅಮೃತಾ ಅಯ್ಯಂಗಾರ್ ನಾಯಕಿಯ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ಹಿರಿಯ ಬಹುಭಾಷಾ ನಟ ಡೈಲಾಗ್‌ಕಿಂಗ್ ಸಾಯಿಕುಮಾರ್ ಅವರು ಪ್ರಮುಖ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ರಮೇಶ್ ಇಂದಿರಾ, ಜ್ಯೋತಿ ರೈ ಉಳಿದ ತಾರಾಬಳಗದಲ್ಲಿದ್ದಾರೆ.

ಚಿತ್ರದ ನಿರ್ಮಾಪಕ ಕೆಪಿ. ಶ್ರೀಕಾಂತ್ ಮಾತನಾಡುತ್ತ ನಮ್ಮ ವೀನಸ್ ಎಂಟರ್ ಪ್ರೈಸಸ್ ನಿರ್ಮಾಣದ ಮತ್ತೊಂದು ಅದ್ದೂರಿ ಚಿತ್ರ ಹಲ್ಕಾ ಡಾನ್. ಹಲ್ಕಾ ಡಾನ್ ಚಿತ್ರಕ್ಕೆ ಬೆಂಗಳೂರು ಹಾಗೂ ಕರಾವಳಿಯ ಮಂಗಳೂರು ಸುತ್ತಮುತ್ತ ಹಾಗೂ ಹೈದರಾಬಾದ್‌ನಲ್ಲಿ ಚಿತ್ರೀಕರಣ ನಡೆಯುತ್ತಿದೆ. ಹಲ್ಕಾ ಡಾನ್ ಮಂಗಳೂರು ಭಾಗದಲ್ಲಿ ನಡೆಯುವ ಒಂದು ಅದ್ಭುತ ಕಥೆಯಾಗಿದ್ದು, ಪ್ರೇಕ್ಷಕರಿಗೆ ಒಂದು ಹೊಸ ಅನುಭವವನ್ನು ನೀಡಲಿದೆ.

ಈ ಚಿತ್ರದಲ್ಲಿ ನಾಯಕ ಪ್ರಮೋದ್ ಅವರು ಡೈಲಾಗ್ ಕಿಂಗ್ ಸಾಯಿಕುಮಾರ್ ಅವರ ಫ್ಯಾನ್ ಆಗಿ ಕಾಣಿಸಿಕೊಂಡಿದ್ದಾರೆ. ಅದಕ್ಕೇ ಚಿತ್ರದ ಟ್ಯಾಗ್‌ಲೈನ್ ಸಾಯಿಕುಮಾರ ಫ್ಯಾನ್ ಅಂತಿರುತ್ತದೆ. ಇದರ ನಂತರ ಮುಂದೆ ಶಿವಣ್ಣ ಹಾಗೂ ದುನಿಯಾ ವಿಜಯ್ ಅವರ ಜೊತೆ ಬಿಗ್ ಬಜೆಟ್‌ನಲ್ಲಿ ಕನ್ನಡ ಚಿತ್ರೋದ್ಯಮವೇ ಹಿಂತಿರುಗಿ ನೋಡುವಂಥ ಚಿತ್ರ ನಿರ್ಮಾಣ ಮಾಡುವ ಯೋಜನೆಯಿದೆ. ಅವರಜೊತೆ ಹರಿಕೃಷ್ಣ ಅವರ ಮ್ಯೂಸಿಕ್ ಕೂಡ ಇರಲಿದೆ.



ನನ್ನ ಜೊತೆ ಒಂದೊಳ್ಳೆಯ ಚಿತ್ರತಂಡ ಇದೆ. ಎಲ್ಲರ ಆಶೀರ್ವಾದದಿಂದ ಈ ಸಿನಿಮಾ ಚೆನ್ನಾಗಿ ಮೂಡಿಬರಲಿದೆ. ಹಲ್ಕಾ ಡಾನ್ ಎಂಬುದು ಆಡುಭಾಷೆ, ಅಲ್ಲದೆ ನಾಯಕನ ನಿಕ್ ನೇಮ್ ಎಂದರು.



ನಾಯಕ ಪ್ರಮೋದ್ ಮಾತನಾಡಿ, ನಾನು ಈ ಚಿತ್ರದ ಪಾತ್ರಕ್ಕಾಗಿ ತುಂಬಾ ತಯಾರಿ ಮಾಡಿಕೊಂಡಿದ್ದೇನೆ. ನಾನು ಈಗಾಗಲೇ ಐದಾರು ಬಾರಿ ಈ ಸಿನಿಮಾದ ಕಥೆಯನ್ನು ಕೇಳಿದ್ದೇನೆ. ಡೈರೆಕ್ಟರ್ ತುಂಬಾ ಚೆನ್ನಾಗಿ ಕಥೆಯನ್ನು ಬರೆದಿದ್ದಾರೆ. ನನ್ನ ಸಿನಿಮಾ ಜರ್ನಿಗೆ ಈ ಸಿನಿಮಾ ದೊಡ್ಡ ಸಪೋರ್ಟ್ ಆಗಲಿದೆ ಎಂದು ಹೇಳಿದ್ದಾರೆ. ಕನ್ನಡ ಹಾಗೂ ತೆಲುಗು ಸೇರಿದಂತೆ ಎರಡು ಭಾಷೆಗಳಲ್ಲಿ ಏಕಕಾಲಕ್ಕೆ 'ಹಲ್ಕಾ ಡಾನ್' ಚಿತ್ರವು ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಈ ಚಿತ್ರಕ್ಕೆ ಚಲಾ ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ವಿ.ಹರಿಕೃಷ್ಣ ಅವರ ಸಂಗೀತ ಸಂಯೋಜನೆ, ಸತ್ಯಾ ಹೆಗಡೆ ಅವರ ಛಾಯಾಗ್ರಹಣ ಹಲ್ಕಾ ಡಾನ್ ಚಿತ್ರಕ್ಕಿದೆ.

ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್

ದ್ವಿಪಾತ್ರದಲ್ಲಿ ನಾಯಕ ಕೋಮಲ್



ಸೆನ್ಸೇಶನಲ್ ಸ್ಟಾರ್ ಕೋಮಲ್‌ಕುಮಾರ್, ಮೇಘನಾರಾಜ್, ಅನುಷಾ ರೈ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿರುವ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಚಿತ್ರದ ಚಿತ್ರೀಕರಣ ಇತ್ತೀಚೆಗೆ ಪೂರ್ಣಗೊಂಡಿದೆ. ಈ ಚಿತ್ರಕ್ಕೆ ಸಂದೇಶ್ ಶೆಟ್ಟಿ ಆಜ್ರಿ ಆಕ್ಷನ್-ಕಟ್ ಹೇಳುತ್ತಿದ್ದು, ವಿಕಾಸ್ ಶೆಟ್ಟಿ ಬಂಡವಾಳ ಹೂಡಿ ನಿರ್ಮಾಣ ಮಾಡುತ್ತಿದ್ದಾರೆ. ಈ ಚಿತ್ರಕ್ಕೆ ಕುಂದಾಪುರ, ಶಿವಮೊಗ್ಗ, ತೀರ್ಥಹಳ್ಳಿ ಸೇರಿದಂತೆ ಕರಾವಳಿ ಮಲೆನಾಡು ಭಾಗದಲ್ಲಿ ಎರಡು ಹಂತಗಳಲ್ಲಿ 75 ದಿನಗಳವೆಗೆ ಚಿತ್ರೀಕರಿಸಲಾಗಿದೆ.

ಈ ಚಿತ್ರಕ್ಕಾಗಿಯೇ ಕುಂದಾಪುರದ ಅಂಪಾರಿನ ವಾಲ್ತೂರು ಗ್ರಾಮದಲ್ಲಿ ಏಳು ವಿಭಿನ್ನ ವಿನ್ಯಾಸದ ಬೃಹತ್ ಸೆಟ್‌ಗಳನ್ನು ನಿರ್ಮಿಸಿ, ಅಲ್ಲಿಯೇ ಬಹುತೇಕ ಚಿತ್ರೀಕರಣ ನಡೆಸಲಾಗಿರುವುದು ವಿಶೇಷ. ಕಥೆಯ ಬೇಡಿಕೆಗೆ ತಕ್ಕಂತೆ, ಸುಮಾರು ಎರಡು ಎಕರೆ ವಿಸ್ತೀರ್ಣದ ವಿಶಾಲವಾದ ಜಾಗದಲ್ಲಿ ಏಳು ವೈವಿಧ್ಯಮಯ ಸೆಟ್‌ಗಳನ್ನು ಹಾಕಿ, ಚಿತ್ರದ ಶೇಕಡಾ 90ರಷ್ಟು ಚಿತ್ರೀಕರಣವನ್ನು ಮಾಡಲಾಗಿದೆ.





ಅಂದಹಾಗೆ, ಚಿತ್ರದ ಹೆಸರು ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಅಂತಿದ್ದರೂ, ಒಂದೇ ಸಿನಿಮಾದಲ್ಲಿ ಎರಡು ಟೈಟಲ್‌ಗಳಿವೆ ಎನ್ನುತ್ತಾರೆ ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ. ಅದಕ್ಕೆ ಕಾರಣ ಚಿತ್ರದ ಕಥಾಹಂದರ. ಚಿತ್ರದ ಮೊದಲಾರ್ಧ ಬಾರ್‌ನಲ್ಲಿ ಶುರುವಾಗಿ, ಬಾರ್ ಸುತ್ತ ಸಾಗಿದರೆ, ದ್ವಿತೀಯಾರ್ಧ ದೇವರ ತಾಣದಲ್ಲಿ ಶುರುವಾಗಿ ಅಲ್ಲೇ ಮುಗಿಯುತ್ತದೆ. ಹಾಗಾಗಿ ಚಿತ್ರದ ಮೊದಲಾರ್ಧ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಆಗಿದ್ದರೆ, ದ್ವಿತೀಯಾರ್ಧ ದೇವರತಾಣ ಅಂತಿದೆ. ಈ ಎರಡೂ ಹೆಸರುಗಳು ಕೂಡ ನಮ್ಮ ಸಿನಿಮಾದ ಟೈಟಲ್‌ಗಳು, ಆದರೆ ಸೆನ್ಸಾರ್ ನಿಯಮದಂತೆ, ಒಂದು ಸಿನಿಮಾಕ್ಕೆ ಒಂದೇ ಹೆಸರು ಇಡಬೇಕಾಗಿರುವುದರಿಂದ, ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಹೆಸರಿನಲ್ಲಿ ಚಿತ್ರವನ್ನ ಥಿಯೇಟರಿಗೆ ತರುತ್ತಿದ್ದೇವೆ ಎನ್ನುವುದು ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ ನೀಡುವ ವಿವರಣೆ.

ಇದೇ ಮೊದಲಬಾರಿಗೆ ನಾಯಕನಟ ಕೋಮಲ್ ಅವರು ಎರಡು ಪಾತ್ರಗಳಲ್ಲಿ(ಡಬಲ್ ರೋಲ್) ಕಾಣಿಸಿಕೊಳ್ಳುತ್ತಿದ್ದಾರೆ. ಒಂದರಲ್ಲಿ ಆಸ್ಥಾನವೊಂದರ ವರ್ಣಚಿತ್ರ ಕಲಾವಿದನಾಗಿ ಕಾಣಿಸಿಕೊಂಡರೆ, ಮತ್ತೊಂದರಲ್ಲಿ ಸಿನಿಮಾ ನಿರ್ದೇಶಕನ ಪಾತ್ರವನ್ನು ಪ್ಲೇ ಮಾಡುತ್ತಿದ್ದಾರೆ. ಇನ್ನು ಮೇಘನಾರಾಜ್ ಅವರು ದೇವರ ತಾಣದಲ್ಲಿ ರಾಣಿಯಾಗಿ ಕಾಣಿಸಿಕೊಂಡರೆ, ಸಂಗೀತ ಬಾರ್‌ನಲ್ಲಿ ನಾಯಕಿಯಾಗಿ ಜೊತೆಯಾಗುತ್ತಾರೆ. ಉಳಿದಂತೆ ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮ್ಮಿನಾಡ್, ವಜ್ರಧೀರ್‌ಜೈನ್, ಉತ್ಸವ್, ಕಾರ್ತಿಕ್‌ರಾವ್, ರಾಘು ರಾಮನಕೊಪ್ಪ, ಸಿರಿಜಾ, ವರ್ಧನ್, ಕರಣ್, ರಾಧಿಕರಾವ್ ದಿವ್ಯಶ್ರೀ, ಅಕ್ಷತಾ, ಅರಸು, ಮಹೇಶ್, ನಾಗರಾಜ್, ಚಿತ್ರಕಲಾ, ಉಮೇಶ್ ಕಿನ್ನಾಳ್, ಮನೀಶ್ ಶೆಟ್ಟಿ, ಎಂ.ಕೆ.ಮಠ, ಪ್ರಶಾಂತ್ ಸಿದ್ದಿ, ರಾಧಾಕೃಷ್ಣ, ಮಹಾಬಲೇಶ್ವರ ಭಟ್ ಹೀಗೆ ಕಲಾವಿದರ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ ಕೂಡ ಚಿತ್ರದ ಪಾತ್ರವೊಂದಕ್ಕೆ ಬಣ್ಣ ಹಚ್ಚಿದ್ದಾರೆ. ಚಿತ್ರದಲ್ಲಿ ನಾಲ್ಕು ವಿಭಿನ್ನ ಹಾಡುಗಳು, ಫೈಟ್ಸ್, ಕಾಮಿಡಿ, ಎಮೋಶನ್, ಜೊತೆಗೊಂದು ಸ್ಪಿರಿಚುಯಲ್ ಸ್ಟೋರಿ. ಹೀಗೆ ಒಂದು ಕಂಪ್ಲೀಟ್ ಎಂಟರ್‌ಟೈನ್ಮೆಂಟ್ ಚಿತ್ರಕ್ಕೆ ಏನೇನೂ ಇರಬೇಕೋ, ಅದೆಲ್ಲವೂ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಸಿಗುತ್ತದೆ ಎಂಬುದು ಚಿತ್ರತಂಡದ ಮಾತು.



ಒಬ್ಬ ನಿರ್ದೇಶಕನಾಗಿ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ನನಗೆ ಒಂದು ವಿಭಿನ್ನ ಅನುಭವ ನೀಡಿರುವ. ನಾನು ನಿರ್ದೇಶಕರಾಗಿ ಕಂಡ ಕನಸಿಗೆ ನಿರ್ಮಾಪಕ ವಿಕಾಸ್ ಶೆಟ್ಟಿ ಅವರು ಕೇವಲ ಹಣವಲ್ಲದೆ ತನು-ಮನ ಕೂಡ ನನ್ನ ಜೊತೆಗೆ ಧಾರೆ ಎರೆದಿದ್ದಾರೆ. ಇಲ್ಲಿಯವರೆಗೆ ನಾನು ಮಾಡಿದ ಸಿನಿಮಾಗಳು ಒಂದು ಥರದ ಅನುಭವ ನೀಡಿದರೆ, ಈ ಸಿನಿಮಾ ಅವೆಲ್ಲಕ್ಕಿಂತ ಮಿಗಿಲಾದ ಬೇರೊಂದು ಅನುಭವ ನೀಡಿದೆ. ಅದಕ್ಕೆ ಕಾರಣ ಚಿತ್ರದ ಕಥಾಹಂದರ, ಕಲಾವಿದರು ಮತ್ತು ತಂತ್ರಜ್ಞರು. ಒಂದು ವಿಭಿನ್ನ ಕಥೆಯ ನಿರೂಪಣೆಗೆ ದೊಡ್ಡ ಕ್ಯಾನ್ವಾಸ್ ಬೆಂಬಲವಿದ್ದರೆ, ಅದು ಎಷ್ಟು ಚೆನ್ನಾಗಿ ಮೂಡಿಬರಬಹುದು ಎಂಬುದಕ್ಕೆ ಖಂಡಿತವಾಗಿ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ನಿದರ್ಶನವಾಗಿ ನಿಲ್ಲುತ್ತದೆ.

■ **ಸಂದೇಶ್ ಶೆಟ್ಟಿ ಆಜ್ರಿ, ನಿರ್ದೇಶಕ**

ಮಹಾಕಾಳಿಪುತ್ರ ರೈತನಿಂದ ಸೈನಿಕನವರೆಗೆ ಸಾಗುವ ಕಥೆ...



ತಿರುಪತಿ ತಿರುಮಲ ಪ್ರೊಡಕ್ಷನ್ಸ್ ಅಡಿ ಗಿರೀಶ್ ಎಸ್.ಎಂ. ಅವರು ನಿರ್ಮಿಸುತ್ತಿರುವ ನೂತನ ಚಿತ್ರ ಮಹಾಕಾಳಿ ಪುತ್ರ. ಗಿರೀಶ್ ಅವರೇ ಕಥೆ ಬರೆದು ನಿರ್ದೇಶಿಸುತ್ತಿರುವ ಈ ಚಿತ್ರದ ಟೈಟಲ್ ಲಾಂಚ್ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಗಿರೀಶ್ ಗೌಡ ಈ ಚಿತ್ರಕ್ಕೆ ಚಿತ್ರಕಥೆ ಬರೆದು ನಿರ್ದೇಶನದಲ್ಲಿ ಸಹಕಾರ ನೀಡುತ್ತಿದ್ದಾರೆ.

ಈ ಚಿತ್ರದ ನಾಯಕ, ನಿರ್ಮಾಪಕ, ನಿರ್ದೇಶಕ ಗಿರೀಶ್ ಎಸ್.ಎಂ. ಮಾತನಾಡಿ ಮೂಲತಃ ನಾನೊಬ್ಬ ರೈತ. ಆ ರೈತನ ಬಗ್ಗೆ ಸಿನಿಮಾ ಮಾಡಲು ಬಂದಿದ್ದೇನೆ. ಇದು ನನ್ನ ಮೊದಲ ಪ್ರಯತ್ನ. ಚಿತ್ರದ ಟೈಟಲ್ ಬಗ್ಗೆ ಹೇಳಬೇಕೆಂದರೆ, ಮಹಾಕಾಳಿಪುತ್ರ ಎಂದರೆ ದೈವರ ಆರಾಧಕ, ರೈತರು ಪ್ರತಿದಿನ ಮಹಾಕಾಳಿ ದೇವಿಯ ಪೂಜೆಯನ್ನು ಮಾಡಿಕೊಂಡೇ ತಮ್ಮ ಕಾಯಕಕ್ಕೆ ಹೊರಡುತ್ತಿದ್ದರು. ಆ ರೈತನನ್ನು ದೇವಿ ಪುತ್ರ ಅಂತ ಚಿತ್ರದಲ್ಲಿ ತೋರಿಸ್ತಿದ್ದೇವೆ.

ರೈತರ ಬಗ್ಗೆ ಒಂದೊಳ್ಳೆ ಮೆಸೇಜ್ ಇಟ್ಕೊಂಡು ಈ ಸಿನಿಮಾ ಮಾಡ್ತಿದ್ದೇವೆ. ಹಿಂದಿನ ಕಾಲದಲ್ಲಿ ರೈತರು ಪ್ರಾಮಾಣಿಕವಾಗಿ ನಿಯತ್ತಿಂದ ದುಡಿದು ಇಡೀ ದೇಶಕ್ಕೆ ಅನ್ನ ಹಾಕ್ತಿದ್ದರು. ಇವತ್ತು ಆ ರೈತನಿಗೆ ಸಮಾಜದಿಂದ ಸಿಗಬೇಕಾದ ಗೌರವ, ಬೆಳೆಗೆ ತಕ್ಕ ಬೆಲೆ ಸಿಗ್ತಿಲ್ಲ. ಮಣ್ಣನ್ನು ನಂಬಿ ದುಡಿಯುವ ರೈತನಿಂದ ಹಿಡಿದು ದೇಶ ಕಾಯೋ ಸೈನಿಕನಿಗೆ ಲಿಂಕ್ ಕೊಟ್ಟು ಈ ಕಾನ್ಸೆಪ್ಟ್ ಮಾಡಿದ್ದೇವೆ. ನಮ್ಮ ರೈತ ಆಗ, ಇವಾಗ್ಲೂ ವ್ಯವಸಾಯ ಮಾಡ್ತಿದ್ದಾರೆ. ಆದರೆ ಶೈಲಿ ಟೆಕ್ನಿಕಲಿ ಬದಲಾಗಿದೆ. ಎತ್ತುಗಳನ್ನು ಶೋಕಿಗೋಸ್ಕರ ಸಾಕೋದಲ್ಲ, ವ್ಯವಸಾಯಕ್ಕೋಸ್ಕರ ಸಾಕಿ, ನಂತರ ಅವನ್ನು ರೇಸ್ಗೂ ಬಳಸಬಹುದು ಅಂತ ಚಿತ್ರದ ಮೂಲಕ ತೋರಿಸಿದ್ದೇವೆ. ನಮ್ಮ ಚಿತ್ರದಲ್ಲೂ ರೇಸ್ ಇರುತ್ತದೆ. ಆರಂಭದಿಂದ ಕೊನೇವರೆಗೂ ಸಿನಿಮಾ ಹೊಸದಾಗಿ ಕಾಣಬೇಕು ಅಂತ ಪ್ರಯತ್ನಿಸುತ್ತಿದ್ದೇವೆ. ರೈತರ ಬಗ್ಗೆ ಈವರೆಗೆ ಬಂದ ಎಲ್ಲಾ ಸಿನಿಮಾಗಳಿಗಿಂತ ಇದರಲ್ಲಿ ಬೇರೆಯದೇ ಕಾನ್ಸೆಪ್ಟ್ ಇರುತ್ತದೆ. ಇದೇ ತಿಂಗಳ 15ರಿಂದ ಆರಂಭಿಸಿ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸುವ ಯೋಜನೆಯಿದೆ, ಇದು ಪ್ಯಾನ್ ಇಂಡಿಯಾ ಚಿತ್ರವಾಗಿರೋದ್ರಿಂದ ಬೇರೆ, ಬೇರೆ ಭಾಷೆಗಳ ಕಲಾವಿದರೂ ಸಹ ಚಿತ್ರದಲ್ಲಿ ನಟಿಸುತ್ತಿದ್ದಾರೆ ಎಂದರು.





ಚಿತ್ರಕಥೆ ಬರೆದಿರುವ ಗಿರೀಶ್‌ಗೌಡ ಮಾತನಾಡಿ ಗಿರೀಶ್ ನನ್ನ ಬಳಿ ಅಸಿಸ್ಟೆಂಟ್ ಆಗಿ ಕೆಲಸ ಮಾಡ್ತಿದ್ದ, ನಾನೀಗ ಮದ್ದೂರು ವಡೆ ಎಂಬ ಸಿನಿಮಾ ಮಾಡ್ತಿದ್ದೇನೆ. ಇದು ನಮ್ಮ ಮಣ್ಣಿನ ಕಥೆ. ಇದೇ ಮಣ್ಣು ಹೇಗೆ ಆರ್ಮಿಗೆ ಸೇರುತ್ತೆ, ನಮ್ಮ ಮಣ್ಣಿಂದ ಗನ್ ಪೌಡರ್ ತಯಾರು ಮಾಡಬಹುದು. ಅದರ ಮೈನಿಂಗ್‌ನ ಸಣ್ಣ ಬೇಸ್ ಇಟ್ಕೊಂಡು ಈ ಸಿನಿಮಾ ಮಾಡ್ತಿದ್ದೇವೆ, ನಮ್ಮ ಮಣ್ಣಿನ ಬೆಲೆ ಏನು ಅಂತ ಚಿತ್ರದ ಮೂಲಕ ತೋರಿಸ್ತಿದ್ದೇವೆ. ಚಿತ್ರದ ನಾಯಕಿಯನ್ನು ಶೀಘ್ರದಲ್ಲೇ ಪರಿಚಯಿಸುತ್ತೇವೆ. ದಸರಾ ವೇಳೆಗೆ ಸಿನಿಮಾನ ತೆರೆಗೆ ತರಬೇಕೆಂಬ ಪ್ಲಾನಿದೆ. ಶಿವಮೊಗ್ಗದಲ್ಲಿ ನಡೆಯುವ ಜಾತ್ರೆಯನ್ನು ರಿಯಲ್ ಆಗಿ ಶೂಟ್ ಮಾಡ್ತಿದ್ದೇವೆ. ಮಂಡ್ಯ, ಮದ್ದೂರು ಸುತ್ತಮುತ್ತ ನಡೆಯೋ ಕಥೆಯಿದು. ಚಿತ್ರದಲ್ಲಿ ಒಂದೇ ಒಂದು ಹಾಡಿದೆ. ರಾಹುಲ್ ವಸ್ತಾರ ಅವರು ಮ್ಯೂಸಿಕ್ ಕಂಪೋಜ್ ಮಾಡ್ತಿದ್ದಾರೆ. ಚೆನ್ನೈನಲ್ಲಿ ಬಿಜಿಎಂ ಮಾಡಿಸ್ತಿದ್ದೇವೆ. ಕೀರ್ತನ್ ಪೂಜಾರಿ ಕ್ಯಾಮೆರಾ ವರ್ಕ್ ಮಾಡ್ತಿದ್ದಾರೆ. ರವಿವರ್ಮ ಬಳಿ ಕೆಲಸ ಮಾಡ್ತಿದ್ದ ವಿಷ್ಣು ಅವರು ಆ್ಯಕ್ಷನ್ ಮಾಡ್ತಿದ್ದಾರೆ. ತಿಥಿ ಥರದ ಕಾನ್ಸೆಪ್ಟ್ ಇದು ಎಂದು ಹೇಳಿದರು. ಸಾಧ್ಯವಾದಷ್ಟು ಜನರಿಗೆ ಇಷ್ಟವಾಗವಂಥ ಚಿತ್ರವನ್ನೇ ಮಾಡ್ತಿದ್ದೇವೆ. ಆದರೂ ಏಳು ಬೀಳು ಸಹಜ. ಅದನ್ನು ಎದುರಿಸಲೂ ಸಿದ್ದರಿದ್ದೇವೆ ಎಂಬುದು ನಿರ್ಮಾಪಕ ಗಿರೀಶ್ ಅವರ ಅಭಿಪ್ರಾಯ. ರಾಜನಿವಾಸ, ಪ್ಯಾರ್ ಚಿತ್ರದಲ್ಲಿ ಕೆಲಸ ಮಾಡಿದ ವೆಂಕಟೇಶ್ ಈ ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ. ತಂಡದ ಸ್ನೇಹಿತ ಸಕಲೇಶಪುರದ ಮನಿಶ್ ಉಪಾಧ್ಯ, ಮಾತನಾಡಿ, ಗಿರಿ ಒಂದೊಳ್ಳೆ ಮೆಸೇಜ್ ಇಟ್ಕೊಂಡು ಈ ಸಿನಿಮಾ ಮಾಡ್ತಿದ್ದಾರೆ. ನಾವೆಲ್ಲ ಅವರ ಜತೆಗಿರುತ್ತೇವೆ ಎಂದು ಶುಭ ಹಾರೈಸಿದರು.

ಏಪ್ರಿಲ್‌ನಲ್ಲಿ ರುದ್ರಾಭಿಷೇಕಂ

ವೀರಗಾಸೆ ಕಲಾವಿದನಾಗಿ 2 ಪಾತ್ರಗಳಲ್ಲಿ ಚಿನ್ನಾರಿಮುತ್ತ ವಿಜಯ ರಾಘವೇಂದ್ರ

ಇದೊಂದು ಟ್ರೆಡಿಷನಲ್ ಸಬ್ಜೆಕ್ಟ್, ನಮ್ಮ ನಾಡಿನ ಅತ್ಯಂತ ಪುರಾತನ ಇತಿಹಾಸ ಇರುವ ವೀರಗಾಸೆ ಕಲೆಯನ್ನು, ಅದರ ಇತಿಹಾಸವನ್ನು ಈ ಚಿತ್ರದ ಮೂಲಕ ಹೇಳೋ ಪ್ರಯತ್ನ ಮಾಡುತ್ತಿದ್ದೇನೆ, ವೀರಗಾಸೆ ಕಲೆಯ ಬಗ್ಗೆ ಸಾಕಷ್ಟು ರೀಸರ್ಚ್ ಮಾಡಿ, ಅದರ ಬಗ್ಗೆ ತಿಳಿದುಕೊಂಡು ಕಥೆಯನ್ನು ಸಿದ್ದಪಡಿಸಿ ಶೂಟಿಂಗ್ ಮಾಡಿದ್ದೇನೆ. ಈ ಕಥೆಯ ಮೂಲಹಂದರ ವೀರಭದ್ರ ದೇವರು. ಆತ ಹೇಗೆ ಬಂದ, ಆತ ಬರಲು ಕಾರಣವೇನು ಎಂಬುದನ್ನು ಚಿತ್ರದಲ್ಲಿ ಹೇಳುತ್ತಿದ್ದೇನೆ.



ಹಲವಾರು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಹನಿರ್ದೇಶಕನಾಗಿ ಅಲ್ಲದೆ ಸಾಹಿತಿಯಾಗಿ ಕಥೆ, ಚಿತ್ರಕಥೆ ಸಹ ಬರೆದಿರುವ ವಸಂತಕುಮಾರ್ ಅವರು ಮೊದಲಬಾರಿಗೆ ನಿರ್ದೇಶನ ಮಾಡಿರುವ ಚಿತ್ರ ರುದ್ರಾಭಿಷೇಕಂ. ನಮ್ಮ ಕರುನಾಡಿನ ಸಾಂಸ್ಕೃತಿಕ ಇತಿಹಾಸ, ಆಚರಣೆಗಳು, ದೇಸೀಕಲೆಯನ್ನು ಪ್ರತಿಬಿಂಬಿಸುವ ಕೆಲವೇ ಚಲನಚಿತ್ರಗಳು ಆಗಾಗ ಪ್ರೇಕ್ಷಕರನ್ನು ರಂಜಿಸುತ್ತ ಬಂದಿವೆ. ಬಹಳ ದಿನಗಳ ನಂತರ ನಮ್ಮ ನಾಡಿನ ವಿಶಿಷ್ಠ ಕಲೆಯನ್ನು ಪರಿಚಯಿಸುವ, ಅದರ ಇತಿಹಾಸವನ್ನು ತೆರೆದಿಡುವ ಚಿತ್ರವಾಗಿ ರುದ್ರಾಭಿಷೇಕಂ ನಿರ್ಮಾಣವಾಗಿದ್ದು ಸದ್ಯದಲ್ಲೇ ತೆರೆಗೆ ಬರಲು ಸಿದ್ದವಾಗುತ್ತಿದೆ, ಕನ್ನಡದ ಪ್ರತಿಭಾವಂತ ಕಲಾವಿದ ವಿಜಯ ರಾಘವೇಂದ್ರ ಅವರು ಈ ಚಿತ್ರದಲ್ಲಿ ಒಬ್ಬ ವೀರಗಾಸೆ ಕಲಾವಿದನಾಗಿ ಕಾಣಿಸಿಕೊಳ್ಳುತ್ತಿದ್ದಾರೆ, 'ರುದ್ರಾಭಿಷೇಕಂ' ಫ್ಯಾನ್ ಇಂಡಿಯಾ ಸಂಸ್ಥೆಯ ಮೊದಲ ಚಿತ್ರವಾಗಿದ್ದು, ಈ ಚಿತ್ರ ನಿರ್ಮಾಣದಲ್ಲಿ ಹಲವಾರು ಸ್ನೇಹಿತರುಗಳು ಕೈಜೋಡಿಸಿದ್ದಾರೆ.

ಚಿತ್ರದ ಕುರಿತು ನಿರ್ದೇಶಕ ವಸಂತ್‌ಕುಮಾರ್ ಮಾತನಾಡುತ್ತ ದೈವದ ಹಿನ್ನೆಲೆ ಇರುವ ವೀರಗಾಸೆ ಕಲೆಯನ್ನು ನಾಡಿನ ಮನೆ ಮನೆಗೂ ತಲುಪಿಸಬೇಕು ಎನ್ನುವುದೇ ನಮ್ಮ ಉದ್ದೇಶ. ಇದೊಂದು ಟ್ರೆಡಿಷನಲ್ ಸಬ್ಜೆಕ್ಟ್, ನಮ್ಮ ನಾಡಿನ ಅತ್ಯಂತ ಪುರಾತನ ಇತಿಹಾಸ ಇರುವ ವೀರಗಾಸೆ ಕಲೆಯನ್ನು, ಅದರ ಇತಿಹಾಸವನ್ನು ಈ ಚಿತ್ರದ ಮೂಲಕ ಹೇಳೋ ಪ್ರಯತ್ನ ಮಾಡುತ್ತಿದ್ದೇನೆ, ವೀರಗಾಸೆ ಕಲೆಯ ಬಗ್ಗೆ ಸಾಕಷ್ಟು ರೀಸರ್ಚ್ ಮಾಡಿ, ಅದರ ಬಗ್ಗೆ ತಿಳಿದುಕೊಂಡು ಕಥೆಯನ್ನು ಸಿದ್ದಪಡಿಸಿ ಶೂಟಿಂಗ್ ಮಾಡಿದ್ದೇನೆ. ಈ ಕಥೆಯ ಮೂಲಹಂದರ ವೀರಭದ್ರ ದೇವರು. ಆತ ಹೇಗೆ ಬಂದ, ಆತ ಬರಲು ಕಾರಣವೇನು ಎಂಬುದನ್ನು ಚಿತ್ರದಲ್ಲಿ ಹೇಳುತ್ತಿದ್ದೇನೆ. ನಾನು ಕಥೆ ಮಾಡುವಾಗಲೇ ವಿಜಯ ರಾಘವೇಂದ್ರ ಅವರನ್ನು ವೀರಗಾಸೆ ಗೆಟಪ್‌ನಲ್ಲಿ ಕಲ್ಪಿಸಿಕೊಂಡಿದ್ದೆ, ಅವರು ಕೂಡ ನಮಗೆ ತುಂಬಾ ಸಹಕಾರ ಕೊಟ್ಟಿದ್ದಾರೆ. ತಂಡದ ಜತೆ ಸ್ನೇಹಿತನಂತೆ ಬೆರೆತು ಕೈಜೋಡಿಸಿದ್ದಾರೆ. ನಾನು ಏನು ನಿರೀಕ್ಷೆ ಇಟ್ಟುಕೊಂಡಿದ್ದೆನೋ ಅದಕ್ಕಿಂತ ಹೆಚ್ಚಾಗಿಯೇ ತಮ್ಮ ಪಾತ್ರಕ್ಕೆ ಜೀವ ತುಂಬಿದ್ದಾರೆ. ವೀರಗಾಸೆ ಕಲಾವಿದ ಅಲ್ಲದೆ, ತಂದೆ, ಮಗನಾಗಿ, ಎರಡೂ ಪಾತ್ರಗಳಿಗೆ ನಟ ವಿಜಯ ರಾಘವೇಂದ್ರ ಅವರು ಜೀವ ತುಂಬಿ ಅಭಿನಯಿಸಿದ್ದಾರೆ ಎಂದರು.

ಊರತುಂಬ ಆಲದಮರ, ಹಿಂದುಳಿದವರೇ ಇರುವಂಥ ಲೊಕೇಶನ್ ಹುಡುಕಿದಾಗ ಸಿಕ್ಕಿದ್ದೇ ಚಿಕ್ಕತದಮಂಗಲ. ಅಲ್ಲಿ ವೀರಭದ್ರದೇವರ ಒಕ್ಕಲಿನವರೇ ಹೆಚ್ಚಾಗಿದ್ದು, ಅಲ್ಲಿ ಚಿತ್ರದ ಬಹುತೇಕ ಶೂಟಿಂಗ್ ಮಾಡಿದ್ದೇವೆ, ಅಲ್ಲದೆ ದೇವನಹಳ್ಳಿಯ ಸುತ್ತಮುತ್ತ ಹಾಗೂ ಕರಾವಳಿಯ ಗೋಕರ್ಣ, ಹೊನ್ನಾವರ, ಕುಮಟಾ, ಅಬ್ಬಕ್ಕ ಫೋರ್ಟ್ ಅಲ್ಲದೆ ಅಘನಾಶಿನಿ ಹಿನ್ನೀರಿನ, ಈವರೆಗೆ ಯಾರೂ ಶೂಟ್ ಮಾಡದಂಥ ಲೊಕೇಶನ್‌ನಲ್ಲಿ ಚಿತ್ರೀಕರಣ ನಡೆಸಿದ್ದೇವೆ, ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಅಂತಿಮ ಹಂತದಲ್ಲಿದ್ದು, ಭರದಿಂದ ವರ್ಕ್ ನಡೆಯುತ್ತಿದೆ, ಇದೇ ತಿಂಗಳ 24ಕ್ಕೆ ಚಿತ್ರದ ಸಾಂಗ್ ರಿಲೀಸ್ ಮಾಡುವ ಪ್ಲಾನಿದೆ, ಅಲ್ಲದೆ ಏಪ್ರಿಲ್ ಅಂತ್ಯದಲ್ಲಿ ರಿಲೀಸ್ ಮಾಡುವ ಯೋಜನೆಯೂ ಇದೆ ಎಂದೂ ಅವರು ಹೇಳಿದರು.

ವೀರಗಾಸೆ ಕಲೆ ಹಾಗೂ ವೀರಭದ್ರ ದೇವರ ಇತಿಹಾಸವನ್ನು ಹೇಳುವ ಚಿತ್ರ ರುದ್ರಾಭಿಷೇಕಂ. ಈ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ನಾಡಿನ ನೂರಾರು ವೀರಗಾಸೆ ಕಲಾವಿದರನ್ನು ಕರೆಸಿ ಚಿತ್ರೀಕರಿಸಿದ ದಾಖಲೆ ಈ ಚಿತ್ರದ್ದು, ನಟ ವಿಜಯ ರಾಘವೇಂದ್ರ ಅವರು ಮೊದಲಬಾರಿಗೆ ವೀರಗಾಸೆ ಕಲಾವಿದನಾಗಿ ನಟಿಸಿರೋ ಈ ಚಿತ್ರದಲ್ಲಿ ಬಿಗ್‌ಬಾಸ್ ಬೆಡಗಿ ಪ್ರಿಯಾಂಕ ತಿಮ್ಮೇಶ್ ನಾಯಕಿಯಾಗಿ ನಟಿಸಿದ್ದಾರೆ. ನಮ್ಮ ನಾಡಿನ ಜನಪದ ಹಿನ್ನೆಲೆ ಇಟ್ಟುಕೊಂಡು, ನೂರಾರು ವರ್ಷಗಳ ಇತಿಹಾಸ ಇರುವ ವೀರಗಾಸೆ ಕಲೆಯ ಮಹತ್ವ, ಇತಿಹಾಸವನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಈ ಕಥೆಯ ಮೂಲ ಹಂದರ ವೀರಭದ್ರ ದೇವರು. ಆತ ಹೇಗೆ ಬಂದ, ಆತ ಬರಲು ಕಾರಣವೇನು ಎಂಬುದನ್ನು ರುದ್ರಾಭಿಷೇಕಂ ಚಿತ್ರ ಹೇಳುತ್ತದೆ. ವೀರಗಾಸೆ ಕಲಾವಿದ ಅಲ್ಲದೆ, ಇದೇ ಮೊದಲ ಬಾರಿಗೆ ತಂದೆ, ಮಗನಾಗಿ, ದ್ವಿಪಾತ್ರದಲ್ಲಿ ನಟ ವಿಜಯ ರಾಘವೇಂದ್ರ ಅವರು ಕಾಣಿಸಿಕೊಂಡಿದ್ದಾರೆ. ವಿ.ಮನೋಹರ್ ಅವರ ಸಂಗೀತ ಸಂಯೋಜನೆ, ಮುತ್ತುರಾಜ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಸನ್ಮಾನ...



ಮೈಸೂರು ನಗರದ ಕೃಷ್ಣಮೂರ್ತಿಪುರಂನ ಬಲ್ಲಾಳ್ ವೃತ್ತದ ಬಳಿಯ ಬುದ್ಧವಿಹಾರ್ ಮಂದಿರದ ಸಭಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸಾಧನೆ ಮಹಿಳೆಯರನ್ನು ಸನ್ಮಾನಿಸಲಾಯಿತು.

ಕಿರುಸುದ್ದಿ

ಅರಿಲಮ್ಮನ ದೇವಸ್ಥಾನದಲ್ಲಿ ವಿಶೇಷ ಪೂಜೆ

ಮೈಸೂರು: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗಾಗಿ ಪ್ರಾರ್ಥಿಸಿ ಮಂಗಳವಾರ ಮಂಚೇಗೌಡ ಕೊಪ್ಪಲಿನ ಗ್ರಾಮ ದೇವತೆ ಅರಿಲಮ್ಮನ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಜಗತ್ತಿನಲ್ಲಿ ಪ್ರಸ್ತುತ ನಡೆಯುತ್ತಿರುವ ಯುದ್ಧ ನಿಲ್ಲಬೇಕು, ವಿಶ್ವದಲ್ಲಿ ಶಾಂತಿ ನೆಲೆಸಬೇಕು, ಯುದ್ಧವನ್ನು ನಿಲ್ಲಿಸುವಂತೆ ದೇವರಲ್ಲಿ ಪ್ರಾರ್ಥಿಸಿ ಶಕ್ತಿ ದೇವತೆ ಅರಿಲಮ್ಮ ಪೂಜೆ ಸಲ್ಲಿಸಲಾಯಿತು. ಜಾಗತಿಕ ಯುದ್ಧದಿಂದ ಇಡೀ ಜಗತ್ತಿನ ಇತರೆ ರಾಷ್ಟ್ರಗಳ ವ್ಯವಹಾರಗಳಲ್ಲಿ ಏರುಪೇರು ಉಂಟಾಗಿ, ಜನಜೀವನ ಅಸ್ಥವ್ಯಸ್ತ ವಾಗಲಿದೆ. ಆದ್ದರಿಂದ ಜಗತ್ತಿನಲ್ಲಿ ಶಾಂತಿ ನೆಲಸಬೇಕು ಎಂದು ದೇವರಲ್ಲಿ ಪ್ರಾರ್ಥಿಸಲಾಯಿತು. ಇದೇ ಸಂದರ್ಭದಲ್ಲಿ ಮುಖಂಡರುಗಳಾದ ಮಂಚೇಗೌಡನ ಕೊಪ್ಪಲು ರವಿ, ಮಂಜುನಾಥ, ನಾಗೇಂದ್ರ, ದೇವರಾಜು, ಮಂಚೆಗೌಡನ ಕೊಪ್ಪಲು ವಾರ್ಡ್ ಅಧ್ಯಕ್ಷ ಆರ್.ಶ್ರೀಧರ್ ಹಾಗೂ ಇನ್ನಿತರರು ಹಾಜರಿದ್ದರು.

ಪೆಟ್ರೋಲ್ ಬಂಕ್‌ನಲ್ಲಿ ದರೋಡೆ: ಮೂವರ ಬಂಧನ

ಮೈಸೂರು: ಜಿಲ್ಲೆಯ ಹುಣಸೂರು ತಾಲ್ಲೂಕಿನ ಕರಿಮುದ್ದನಹಳ್ಳಿ ಗ್ರಾಮದ ಪೆಟ್ರೋಲ್‌ಬಂಕ್‌ನಲ್ಲಿ ದರೋಡೆ ಮಾಡಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಹಾಸನ ಮೂಲದ ಕಿರಣ್ (30), ಮಂಡ್ಯದ ಲಕ್ಷ್ಮಣ (32) ಹಾಗೂ ಹುಣಸೂರು ತಾಲ್ಲೂಕಿನ ಕಿರಿಜಾಜಿ ಗ್ರಾಮದ ಉಮೇಶ (32) ಬಂಧಿತರು. ಕಳೆದ ಫೆ.12ರಂದು ರಾತ್ರಿ ಐದು ಜನರ ಗುಂಪು ನಂಬರ್ ಪ್ಲೇಟ್ ಇಲ್ಲದ ಕಾರಿನಲ್ಲಿ ಹುಣಸೂರು ತಾಲ್ಲೂಕಿನ ಕರಿಮುದ್ದನಹಳ್ಳಿ ಗ್ರಾಮದಲ್ಲಿರುವ ಸ್ವಾಮಿ ಸರ್ವೀಸ್ ಸ್ಟೇಷನ್ ಇಂಡಿಯನ್ ಪೆಟ್ರೋಲ್ ಬಂಕ್‌ಗೆ ನುಗ್ಗಿ, ಅಲ್ಲಿದ್ದ ಇಬ್ಬರು ಸಿಬ್ಬಂದಿಗಳ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, 15,300 ರೂ. ದರೋಡೆ ಮಾಡಿತ್ತು. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಿಳಿಕೆರೆ ಠಾಣೆ ಇನ್‌ಸ್ಪೆಕ್ಟರ್ ಟಿ.ಎಂ.ಪುನೀತ್ ನೇತೃತ್ವದ ತಂಡವು ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಮೈಸೂರಿನ ಹಿನಕಲ್ ಫ್ಲೈ ಓವರ್ ಬಳಿಯ ಗೌಡ್ರು ಫೋರ್ಕ್ ಹೋಟೆಲ್ ಕಟ್ಟಡದಲ್ಲಿದ್ದ ಮೂವರು ಆರೋಪಿಗಳನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಸ್ಕೋಡಾ ಕಾರು, 3,200ರೂ ನಗದು ಮತ್ತು ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪ್ರಕರಣದಲ್ಲಿ ಭಾಗಿಯಾಗಿದ್ದ ಇನ್ನುಳಿದ ಇಬ್ಬರು ಆರೋಪಿಗಳಾದ ಚನ್ನಪಟ್ಟಣ ಮೂಲದ ರಕ್ಷಿತ್ ಅಲಿಯಾಸ್ ರಕ್ಷಿ ಹಾಗೂ ಜಯಂತ್ ಈಗಾಗಲೇ ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿ ಠಾಣೆಯ ಪ್ರಕರಣವೊಂದರಲ್ಲಿ ಬಂಧಿಸಲ್ಪಟ್ಟಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಬಿಳಿಕೆರೆ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಇಷರತ್ ಬೇಗಂ, ಸಿಬ್ಬಂದಿಗಳಾದ ಪ್ರತಾಪ್, ಶಶಿಕುಮಾರ್, ಜಯರಾಮ, ನಾಗಾರ್ಜುನ, ಅಶೋಕ್ ಕುಮಾರ್, ಶಿವಕುಮಾರ, ಪ್ರಸಾದ್ ಧರ್ಮಾಪುರ, ಜಿಲ್ಲಾ ಟೆಕ್ನಿಕಲ್ ಶಾಖೆಯ ವಸಂತ್‌ಕುಮಾರ್, ಸುನೀತಾ ಹಾಗೂ ಜೀಪ್ ಚಾಲಕ ಗೋವಿಂದ ಭಾಗವಹಿಸಿದ್ದರು.

ಬಾಳ ಸಂಜೆಯಲ್ಲಿ ಬದುಕಿಗೊಂದು ಅರ್ಥ ಕೃತಿ ಬಿಡುಗಡೆ ನಾಳೆ

ಮೈಸೂರು: ಸ್ವಸ್ತಿ ಪ್ರಕಾಶನವು ಹಿರಿಯ ಲೇಖಕ ಡಿ.ಕೆ.ಶ್ರೀನಿವಾಸನ್ ಅವರ ಬಾಳ ಸಂಜೆಯಲ್ಲಿ ಬದುಕಿಗೊಂದು ಅರ್ಥ ಕೃತಿ ಬಿಡುಗಡೆ ಸಮಾರಂಭವನ್ನು ಮಾಚ್.12ರಂದು ಸಿದ್ಧಾರ್ಥನಗರದ ವಿನಯ ಮಾರ್ಗದ ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ ಹತ್ತಿರದ ಬೃಂದಾವನ ಮಹಲಿನ ಆವರಣದಲ್ಲಿ ಏರ್ಪಡಿಸಿದೆ ಎಂದು ಲೇಖಕ ಗಣೇಶ ಅಮೀನಗಡ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಸ್ರೇಲಿನ ಹೈಫಾ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ.ಡೇವಿಡ್ ಗುಟ್ ಮನ್ ಅವರ ಮೂಲ ಇಂಗ್ಲಿಷ್ ಕೃತಿಯನ್ನು ಡಿ.ಕೆ.ಶ್ರೀನಿವಾಸನ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದನ್ನು ಅಂದು ಬೆಳಿಗ್ಗೆ 10.30 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಹಿರಿಯ ಅನುವಾದಕರಾದ ಡಾ.ಪ್ರಧಾನ್ ಗುರುದತ್ತ ಬಿಡುಗಡೆಗೊಳಿಸುವರು. ಕೃತಿಯನ್ನು ಹಿರಿಯ ಲೇಖಕ ಓ.ಎಲ್.ನಾಗಭೂಷಣ ಸ್ವಾಮಿ, ಜಿ..ಎಸ್.ಜಯದೇವ್, ಕೃಷ್ಣಮೂರ್ತಿ ಹನೂರು, ಪ್ರೊ.ಕೆ.ಕಿರಣಕುಮಾರ್ ಹಾಗೂ ಡಾ.ಎಚ್.ಎಲ್.ಚಂದ್ರಶೇಖರ್ ಮಾತನಾಡುವರು. ಪ್ರೊ. ಶಿವಾಜಿ ಜೋಯಿಸ್ ಎಸ್. ಉಪಸ್ಥಿತರಿರುವರು .

ಸರ್ಕಾರಿ ಜಮೀನುಗಳನ್ನು ಮಾರಾಟ ಮಾಡಿದವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿ, ಬಂಧಿಸುವಂತೆ ಒತ್ತಾಯ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಶಾಸಕ ಶ್ರೀವತ್ಸ ಆಗ್ರಹ

ಮೈಸೂರು: ಮೈಸೂರಲ್ಲಿ ಸಾವಿರಾರು ಕೋಟಿ ರೂ. ಮೌಲ್ಯದ ಹಲವು ಸರ್ಕಾರಿ ಜಮೀನಿನನ್ನು ಕೆಲವರು ಅಕ್ರಮವಾಗಿ ಮಾರಾಟ ಮಾಡಿರುವ ಪ್ರಕರಣಗಳು ನಡೆದಿದ್ದರೂ, ಇದುವರಿಗೂ ಜಿಲ್ಲಾಡಳಿತ, ಸರ್ಕಾರ ಆರೋಪಿಗಳ ವಿರುದ್ಧ ಯಾವ ಕಾನೂನು ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದೆ ಎಂದು ಮೈಸೂರಿನ ಕೆ.ಆರ್. ಕ್ಷೇತ್ರದ ಶಾಸಕ ಶ್ರೀವತ್ಸ ಆರೋಪಿಸಿದರು.

ಮಂಗಳವಾರ ಅಗ್ರಹಾರದಲ್ಲಿರುವ ತಮ್ಮ ಕಚೇರಿಯ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದಲ್ಲಿ ಕೆರೆ ಒತ್ತುವರಿ, ಮೈಸೂರು-ನಂಜನಗೂಡು ರಸ್ತೆಯಲ್ಲಿ ಒತ್ತುವರಿ ಹಾಗೂ ಇದೀಗ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸರ್ವೆ ನಂ 4ರ 24.10 ಎಕರೆ ಸರ್ಕಾರಿ ಜಮೀನುಗಳನ್ನು ಕೆಲವು ವ್ಯಕ್ತಿಗಳು ತಮ್ಮ ಖಾಸಗಿ ಸ್ವತ್ತು ಎಂಬಂತೆ ಬೇರೆಯವರಿಗೆ ಮಾರಾಟ ಮಾಡಿದ್ದಾರೆ.

ಇದನ್ನು ನಾನು ಪತ್ತೆ ಹಚ್ಚಿ, ಬಯಲಿಗೆ ತಂದ ಬಳಿಕ ಎಚ್ಚೆತ್ತುಕೊಂಡ ಜಿಲ್ಲಾಡಳಿತ, ಅಕ್ರಮ ಒತ್ತುವರಿಗಳನ್ನು ತೆರವುಗೊಳಿಸಿದೆ, ಜಮೀನು ಮಾರಾಟವನ್ನು ರದ್ದು ಮಾಡಿದೆ. ಆದರೆ ಈ ಕೃತ್ಯವನ್ನು ಎಸಗಿರುವ ಆರೋಪಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಕೇಸ್ ದಾಖಲಿಸಿಲ್ಲ, ಅಲ್ಲದೇ ಒತ್ತುವರಿ ತೆರವುಗೊಳಿಸಿ, ಜಮೀನಿನ ಮಾರಾಟ ರದ್ದು ಮಾಡಿದ ಬಳಿಕ ಅವುಗಳನ್ನು ಸರ್ಕಾರದ ಸ್ವಾಧೀನಕ್ಕೆ ಸಂಪೂರ್ಣವಾಗಿ ಪಡೆಯಬೇಕು. ಆ ಸ್ಥಳದಲ್ಲಿ ಸರ್ಕಾರಿ ಸ್ವತ್ತು ಎಂದು ಬೋರ್ಡ್‌ಗಳನ್ನು ಹಾಕಬೇಕು. ಸಂಬಂಧಿಸಿದ ಜಾಗಗಳಲ್ಲಿನ ಆರ್‌ಟಿಸಿಗಳಲ್ಲಿ ಸರ್ಕಾರಿ ಜಮೀನು ಎಂದು ನಮೂದು ಮಾಡಬೇಕು.



ಸರ್ವೇ ನಂಬರ್ 4ರಲ್ಲಿ 24 ಎಕರೆ 10 ಗುಂಟೆ ಜಮೀನನ್ನು ಪ್ರಶಾಂತ್ ಎಂ ಉಚ್ಚಿಲ್ ಅವರ ಹೆಸರಿಗೆ ರಿಜಿಸ್ಟರ್ ಮಾಡಲಾಗಿತ್ತು. ಆದರೆ ಇದು ಸರಕಾರಿ ಜಾಗ ಎಂದು ನಾನು ಈ ಪ್ರಕರಣವನ್ನು ನಾನು ಬಹಿರಂಗಪಡಿಸಿದ 24 ಗಂಟೆಯೊಳಗೆ ಅಂದರೆ ಮಾ.6ರಂದು ಸದರಿ ಜಮೀನಿನ ಸೇಲ್ ಡೀಡ್ ರದ್ದಾಗಿದೆ.

24 ಎಕರೆ ಪ್ರದೇಶದ ಸೇಲ್ ಡೀಡ್ ಆಗುವಾಗ ಹಲವು ಮಂದಿ ಬಂದು ಸಹಿ ಹಾಕಿದ್ದಾರೆ. ಆದರೆ ಸೇಲ್ ಡೀಡ್ ರದ್ದತಿ ವೇಳೆ ಒಬ್ಬ ವ್ಯಕ್ತಿ ಮಾತ್ರ ಸಹಿ ಹಾಕಿದ್ದಾರೆ. ಇದನ್ನು ಹೇಗೆ ಸ್ವೀಕರಿಸಿದರು. ಅಲ್ಲದೆ ನಾಲ್ಕು ಕೋಟಿ , 70 ಲಕ್ಷರೂ. ಹಣವನ್ನು ಪಡೆಯಲಾಗಿದೆ ಎಂದು ಹೇಳಲಾಗಿದೆ. ಇಷ್ಟು ದೊಡ್ಡ ಮೊತ್ತದ ಹಣವನ್ನು ಹೇಗೆ ನೀಡಿದ್ದಾರೆ ಎಂಬುದರ ಬಗ್ಗೆ ಪ್ರಸ್ತಾಪವಿಲ್ಲ. ಸೇಲ್ ಡೀಡ್ ಮಾಡುವಾಗ ಎಷ್ಟೆಷ್ಟು ಹಣವನ್ನು ಯಾವ ರೀತಿ ಪಡೆಯಲಾಗಿದೆ ಎಂದು ದಾಖಲಿಸಲಾಗಿದೆ. ಆದರೆ ಸೇಲ್ ಡೀಡ್ ರದ್ದತಿ ವೇಳೆ ನಾಲ್ಕು ಕೋಟಿ ಹಣವನ್ನು ಪಡೆಯಲಾಗಿದೆ ಎಂದು ಮಾತ್ರ ಪ್ರಸ್ತಾಪಿಸಲಾಗಿದೆ ಎಂದು ಹೇಳಿದರು.

ಆರೋಪಿ ಮೈಸೂರಿಗೆ ಬಂದು ಜಾಗದ ಸೇಲ್ ಡೀಡ್ ರದ್ದು ಮಾಡಿದ್ದಾರೆ. ಆದರೆ ಆತನನ್ನು ಇದಕ್ಕಾಗಿ ಕರೆಯಿಸಿದ ಅಧಿಕಾರಿಗಳು, ಯಾಕೇ ಆತನನ್ನು ಕೂಡಲೇ ಬಂಧಿಸಿಲ್ಲ, ಆತನ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿಲ್ಲ. ಹಾಗಾಗಿ ಇದರ ಬಗ್ಗೆ ನಮಗೆ ಅನುಮಾನವಿದೆ. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಇದಕ್ಕಾಗಿ ಕಮಿಟಿಯೊಂದನ್ನು ಜಿಲ್ಲಾಡಳಿತ ರಚಿಸಬೇಕು.

ಸರ್ಕಾರಿ ಜಾಗವನ್ನು ಖಾಸಗಿ ವ್ಯಕ್ತಿಗೆ ರಿಜಿಸ್ಟರ್ ಮಾಡಿಕೊಟ್ಟ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ಹಿಂದೆ ಮುಡಾದಲ್ಲಿ ನಡೆದಿರುವ ನಿವೇಶನ ಹಂಚಿಕೆ ಹಗರಣವನ್ನು ಬಯಲಿಗೆ ಎಳೆದಿದ್ದಾಗ 14 ಸೈಟ್ ಗಳನ್ನು ವಾಪಸ್ ಮಾಡಲಾಗಿತ್ತು.

> **ತಪ್ಪಿತಸ್ಥರನ್ನು ಬಂಧಿಸಿ**
>
> ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ, ಅವರನ್ನು ಕೂಡಲೇ ಬಂಧಿಸಬೇಕಾಗಿತ್ತು. ಪ್ರಕರಣಗಳ ಬಗ್ಗೆ ಸಮಗ್ರವಾಗಿ ತನಿಖೆಯನ್ನು ನಡೆಸಿ, ಇದರಲ್ಲಿ ಯಾರ್‍ಯಾರ ಕೈವಾಡವಿದೆ. ಯಾರೆಲ್ಲಾ ಭಾಗಿಯಾಗಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ, ಅವರುಗಳ ವಿರುದ್ಧ ಮೂ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ಈ ಮೂರೂ ಪ್ರಕರಣದಲ್ಲಿ ಯಾವೊಬ್ಬ ತಪ್ಪಿತಸ್ಥರನ್ನು ಸರ್ಕಾರವಾಗಲೀ, ಜಿಲ್ಲಾಡಳಿತವಾಗಲೀ ಬಂಧಿಸಿಲ್ಲ.

ಆ ಪ್ರಕರಣದಲ್ಲೂ ಯಾರ ವಿರುದ್ಧವು ಕ್ರಮ ತೆಗೆದುಕೊಂಡಿಲ್ಲ,ಈಗ ಮತ್ತೆ ಈ ಮೂರು ಪ್ರಕರಣಗಳಲ್ಲಿಯೂ ಹಾಗೆಯೇ ಆಗಿದೆ. 14 ಸೈಟ್ ಗಳನ್ನು ವಾಪಸ್ ಕೊಟ್ಟಿದ್ದು, ಸರ್ಕಾರಿ ಜಮೀನುಗಳ ಒತ್ತುವರಿಗೆ, ಮಾರಾಟಕ್ಕೆ ಮಾದರಿಯೇ ಎಂದು ಖಾರವಾಗಿ ಪ್ರಶ್ನಿಸಿದರು.

ಈ ವಿಷಯವನ್ನು ನಾನು ವಿಧಾನಸಭೆಯ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇನೆ, ಹೋರಾಟವನ್ನು ನಡೆಸುತ್ತೇನೆ ಎಂದು ತಿಳಿಸಿದರು.

ಟಿ. ನರಸೀಪುರದ ಕೆಎಸ್‌ಐಸಿ ಫಿಲೇಚರ್ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಜನವಿರೋಧಿ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಕೈಬಿಟ್ಟಿದೆ ಎಂದು ರೇಷ್ಮೆ ಸಚಿವ ವೆಂಕಟೇಶ್ ಅವರು ತಿಳಿಸಿದ್ದಾರೆ. .

ಇದರಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ ಕರ್ನಾಟಕದ ಅಸ್ಮಿತೆ ಕೆಎಸ್‌ಐಸಿ

> ಇದೇ ಮಾರ್ಚ್ 5ರಂದು ನಾನು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಕುರುಬಾರಹಳ್ಳಿ ಗ್ರಾಮದ ಸರ್ವೆ ನಂ 4 ರಲ್ಲಿನ 24.10 ಎಕರೆ ಸರ್ಕಾರಿ ಜಾಗವನ್ನು ಒಂದು ಕುಟುಂಬದವರು ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾರೆ. ಎಕರೆಗೆ 40 ಕೋಟಿ ರೂ.ನಂತೆ ಒಟ್ಟು 900 ಕೋಟಿ ರೂ. ಮಾರಾಟದ ವ್ಯವಹಾರ ನಡೆದು, 4.75 ಕೋಟಿ ರೂಗಳನ್ನು ಆ ಕುಟುಂಬದವರು ಪಡೆದುಕೊಂಡಿದ್ದಾರೆ.
>
> ■ ಟಿ.ಎಸ್.ಶ್ರೀವತ್ಸ, ಶಾಸಕ

ಮೈಸೂರು ಸಿಲ್ಕ್ ಉದ್ದಿಮೆಯನ್ನು ಉಳಿಸುವ ನಮ್ಮ ಹೋರಾಟಕ್ಕೆ ಜಯ ಸಿಕ್ಕಿದಂತಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಲ್. ನಾಗೇಂದ್ರ, ನಗರಪಾಲಿಕೆಯ ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ನಗರ ವಕ್ತಾರ ಮೋಹನ್, ಮಂಡಲ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ನಗರಪ್ರಧಾನಕಾರ್ಯದರ್ಶಿ ಸೋಮಸುಂದರ್, ನಗರ ಉಪಾಧ್ಯಕ್ಷ ವಿಶ್ವೇಶ್ವರಯ್ಯ, ಮಾಧ್ಯಮ ನಗರ ಸಂಚಾಲಕರಾದ ಮಹೇಶ್ ರಾಜೇ ಅರಸ್, ಮಾಧ್ಯಮ ಸಹ ಸಂಚಾಲಕರಾದ ಸಂತೋಷ್ ಕುಮಾರ್ ಬಿ ಎಂ, ಮುಖಂಡರಾದ ಬಿಲ್ಲಯ್ಯ, ನಗರ ಪ್ರಕೋಷ್ಟ ಸಂಯೋಜಕರಾದ ಗೋಕುಲ್ ಗೋವರ್ಧನ್, ಕೃಷ್ಣರಾಜ ಮಂಡಲ ಪ್ರಧಾನಕಾರ್ಯದರ್ಶಿಗಳಾದ ಜೈ ಶಂಕರ್, ಜಯರಾಮ್ ಮತ್ತಿತರರು ಉಪಸ್ಥಿತರಿದ್ದರು.

ಸಮಸ್ತ ಸೃಷ್ಟಿಯ ಮೂಲ ಹೆಣ್ಣು



ಮೈಸೂರು: ನಗರದ ವಿದ್ಯಾರಣ್ಯಪುರಂನಲ್ಲಿರುವಸುಬ್ಬಣ್ಣಹಾಸ್ಟೆಲ್‌ನವಿದ್ಯಾರ್ಥಿ ಬಂಧುಗಳಿಗೆ ಎಸ್ ಪ್ರಕಾಶ್ ಪ್ರಿಯಾದರ್ಶನ ಸ್ನೇಹ ಬಳಗದ ವತಿಯಿಂದ ಡ್ರೈ ಫ್ರೂಟ್ಸ್, ಹಣ್ಣು ಹಂಪಲ, ವಿತರಿಸುವ ಸೇವಾ ಕಾರ್ಯದೊಂದಿಗೆ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಮಾಜ ಸೇವಕಿ ವಿದ್ಯಾ, ಸಮಸ್ತ ಸೃಷ್ಟಿಯ ಮೂಲ ಹೆಣ್ಣು.ಹೆಣ್ಣು ಸಂಸಾರದ ಕಣ್ಣು ಎಂಬ ನಾಣ್ಣುಡಿಯಂತೆ ಪ್ರತಿ ಕುಟುಂಬದಲ್ಲೂ ಹೆಣ್ಣಿನ ಪಾತ್ರ ಮಹತ್ವದ ಆಗಿ ರುತ್ತದೆ. ತಾಯಿಯಾಗಿ, ಮಡದಿಯಾಗಿ, ಮಗಳಾಗಿ ಸಹೋದರಿಯಾಗಿ, ಸ್ನೇಹಿತೆಯಾಗಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಈ ಹೆಣ್ಣಿನ ಬಗ್ಗೆ ಇಂದಿನ ಯುವ ಪೀಳಿಗೆಗೆ ತಿಳಿಸುವ ಜವಾಬ್ದಾರಿ ನಮ್ಮೆಲ್ಲರ ಕರ್ತವ್ಯ ಎಂದರು.

ಪ್ರತಿ ಮನೆಯಲ್ಲೂ ಹೆಣ್ಣು ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣವನ್ನು ಕೊಡಿಸುವ ಜವಾಬ್ದಾರಿ ಕೂಡ ಪೋಷ ಕರಿಗೆ ಇರುತ್ತದೆ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂದರು.

ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯಾದರ್ಶನ್ ಮಾತನಾಡಿ, ಪ್ರತಿಯೊಬ್ಬ ಗಂಡಿನ ಜೀವನದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಚೈತನ್ಯ ತುಂಬುವ ಸ್ತ್ರೀ ಬಗ್ಗೆ ಎಷ್ಟು ಹೇಳಿದರು ಸಾಲದು, ಪ್ರತಿ ಗಂಡಿನ ಜೀವನ ಬೆಳಗುವವಳೆ ಹೆಣ್ಣು ಎಲ್ಲದಕ್ಕೂ ಮಿಗಿಲಾಗಿ ನಮಗೆ ಜನ್ಮ ಕೊಟ್ಟವಳು. ಹೆಣ್ಣಿಂದ ಸಿಗುವ ಸಣ್ಣ ಪುಟ್ಟ ಸಂತೋಷವೇ ಬದುಕಿಗೆ ಬಹುದೊಡ್ಡ ಸ್ಫೂರ್ತಿಯಾಗಿರುತ್ತದೆ. ತಂದೆ, ತಾಯಿ, ಶಿಕ್ಷಕರನ್ನು ಗೌರವಿಸ ಬೇಕು. ಚೆನ್ನಾಗಿ ಓದಿ ದೊಡ್ಡವರಾದ ಮೇಲೆ, ತಂದೆ- ತಾಯಿಯನ್ನು ನೋಡಿಕೊಳ್ಳುವುದರ ಜೊತೆ ಯಲ್ಲಿ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಗುಣವನ್ನು ಬೆಳೆಸಿಕೊಳ್ಳಿ. ಯಾವುದಾದರೂ ಕ್ಷೇತ್ರ ದಲ್ಲಿ ಸಾಧನೆಯನ್ನ ಮಾಡುವ ಮೂಲಕ ಆಶ್ರಯ ನೀಡಿರುವ ಸುಬ್ಬಣ್ಣ ಹಾಸ್ಟಲ್ ಹಾಗೂ ತಮ್ಮ ಪೋಷಕರಿಗೆ ಒಳ್ಳೆಯ ಹೆಸರನ್ನು ತರುವಂತವರಾಗಿ ಎಂದು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಗಂಧದಗುಡಿ ಸಂಸ್ಥೆಯ ಆರ್ಯನ್, ಚಂದನ್, ಬಾಲಾಜಿ, ಸಿಂಚನಗೌಡ, ಹಿರಿಯಕ್ರೀಡಾಪಟುಮಹದೇವ್, ಛಾಯಾಗ್ರಾಹಕ ಯಶ್ವಂತ್ ಕುಮಾರ್, ಕ್ರೀಡಾ ತರಬೇತಿದಾರ ಜಗದೀಶ್, ಅಮಿತ್,ರಾಜೇಶ್ ಕುಮಾರ್, ಮಹೇಶ, ಶ್ರೀಧರ್, ದತ್ತ ಇದ್ದರು.

ಕನ್ನಂಬಾಡಿ ಅಮ್ಮನವರ ಬ್ರಹ್ಮರಥೋತ್ಸವ

ಪಿರಿಯಾಪಟ್ಟಣ: ಇತಿಹಾಸ ಪ್ರಸಿದ್ಧ ಪಿರಿಯಾಪಟ್ಟಣ ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀ ಕನ್ನಂಬಾಡಿ ಅಮ್ಮನವರ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತಾಧಿಗಳ ನಡುವೆ ಮಂಗಳವಾರ ವಿಜೃಂಭಣೆಯಿಂದ ನೆರವೇರಿತು.

ಬೆಳಗ್ಗೆಯಿಂದಲೇದೇವಾಲಯದಲ್ಲಿದೇವರಿಗೆ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನಡೆದಿದ್ದು, 10 ಗಂಟೆಯಿಂದಲೇ ಪೂಜಾ ಕಾರ್ಯಕ್ರಮವನ್ನು ನೆರವೇರಿಸಿ ಅಮ್ಮನವರಿಗೆ ಕಳಸಾರೋಹಣವನ್ನು ನೆರವೇರಿಸಲಾಯಿತು. ತದ ನಂತರದಲ್ಲಿ ದೇವಿಗೆ ಬಲಿಪೂಜೆ ನಡೆಯಿತು. ಇದಾದ ನಂತರ ಕನ್ನಂಬಾಡಿ ಅಮ್ಮನವರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಮಾಡಿ ನಂತರ ಕೊಂಬು ಕಹಳೆ ಬ್ಯಾಂಡ್ ಸಟ್, ಕೇರಳ ಚಂಡೆ ವಾದ್ಯ, ಮಂಗಳ ವಾದ್ಯಗಳ ಸಮೇತ ಬಗೆಬಗೆಯ ಹೂವಿನಿಂದ ಸಿಂಗಾರಗೊಂಡ ರಥಕ್ಕೆ ದೇವಿಯನ್ನು ಕೂರಿಸಿ ಭಕ್ತಾದಿಗಳ ಘೋಷಣೆಯ ನಡುವೆ ಮದ್ಯಾಹ್ನ 12.00 ರೊಳಗೆ ಸಲ್ಲುವ ವೃಷಭ ಲಗ್ನದಲ್ಲಿ



ರಥೋತ್ಸವ ಜರುಗಿತು. ದೇವಸ್ಥಾನದಿಂದ ಬಿ.ಎಂ.ರಸ್ತೆ ವರೆಗೆ ರಥವನ್ನು ಎಳೆಯುವ ಹಾಗೂ ರಥಕ್ಕೆ ಹಣ್ಣು ದವನ ಎಸೆಯುವ ಮೂಲಕ ಭಕ್ತಾದಿಗಳು ದೇವರಿಗೆ ಭಕ್ತಿ ಸಮರ್ಪಿಸಿದರು. ನೂರಾರು ನವ ಜೋಡಿ ದಂಪತಿಗಳು ರಥೋತ್ಸವದಲ್ಲಿ ಭಾಗವಹಿಸಿದ್ದರು.

ಜಾತ್ರಾ ಮಹೋತ್ಸವಕ್ಕೆ ಪಿರಿಯಾಪಟ್ಟಣ ತಾಲೂಕಿನ ನೂರಾರು ಗ್ರಾಮಗಳ ಜನತೆ ಸೇರಿದಂತೆ ಮೈಸೂರು ಹಾಗೂ ಕೊಡಗು ಜಿಲ್ಲೆಯ ಸಾವಿರಾರು ಭಕ್ತರು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು. ರಥೋತ್ಸವದ ನಿಮಿತ್ತ ಪಟ್ಟಣದ ಬಿ.ಎಂ. ರಸ್ತೆಯ ಬದಿಗಳಲ್ಲಿ ಹಲವು ಸಂಘ ಸಂಸ್ಥೆಗಳು ಬೆಳಗ್ಗಿನಿಂದಲೇ ಜಾತ್ರೆಗೆ ಆಗಮಿಸಿದ್ದ ಭಕ್ತಾದಿಗಳಿಗಾಗಿ ಬಾತು ಮೊಸರನ್ನ, ಪಾನಕ, ಮಜ್ಜಿಗೆ, ನೀರು, ಹಣ್ಣುಗಳು ಸೇರಿದಂತೆ ಅನ್ನಸಂತರ್ಪಣೆ ಏರ್ಪಡಿಸಿದ್ದು ವಿಶೇಷವಾಗಿತ್ತು.

ಮನೆಗೆ ನುಗ್ಗಿ ಸರ ಕಿತ್ತುಕೊಂಡು ಪರಾರಿಯಾದ ಕಳ್ಳರು

ಮೈಸೂರು: ಮನೆಯೊಂದಕ್ಕೆ ನುಗ್ಗಿದ ದುಷ್ಕರ್ಮಿಯೊಬ್ಬ ಟಿವಿ ನೋಡುತ್ತಾ ಕುಳಿತಿದ್ದ ಮಹಿಳೆಯ ಮೇಲೆ ದಾಳಿ ನಡೆಸಿ, ಆಕೆಯ ಕುತ್ತಿಗೆಯಲ್ಲಿದ್ದ ಸುಮಾರು 4 ಲಕ್ಷ ರೂ. ಮೌಲ್ಯದ 30 ಗ್ರಾಂ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ನಗರದ ಚಾಮರಾಜ ಮೊಹಲ್ಲಾ ನಿವಾಸಿ ಇಂದ್ರಾಣಿ ದುಷ್ಕರ್ಮಿಯ ದಾಳಿಗೆ ಒಳಗಾಗಿ ಚಿನ್ನದ ಸರ ಕಳೆದುಕೊಂಡವರು.

ಇವರು ಬೇಸಿಗೆ ಸೆಕೆ ಹೆಚ್ಚಿದ್ದ ಕಾರಣ ರಾತ್ರಿ 9.45ರ ಸುಮಾರಿನಲ್ಲಿ ಮನೆಯ ಮುಂಬಾಗಿಲನ್ನು ತೆರೆದಿಟ್ಟು ಟಿವಿ ನೋಡುತ್ತಿದ್ದರು. ಈ ವೇಳೆ ಇದ್ದಕ್ಕಿದ್ದಂತೆ ಮನೆಯ ಒಳಗೆ ಪ್ರವೇಶಿಸಿದ ದುಷ್ಕರ್ಮಿ, ಇಂದ್ರಾಣಿ ಅವರ ಮುಖ ಹಾಗೂ ಕಣ್ಣಿಗೆ ರಾಸಾಯನಿಕ ಪುಡಿಯನ್ನು ಉಜ್ಜಿದ್ದಾನೆ. ಇದರಿಂದ ಅವರ ಕಣ್ಣು ಉರಿಯಲಾರಂಭಿಸಿದೆ. ಇದೇ ಸಮಯವನ್ನು ಬಳಸಿಕೊಂಡ ಆತ ಆಕೆಯ ಕುತ್ತಿಗೆಯಲ್ಲಿದ್ದ ಸರವನ್ನು ಕಸಿದುಕೊಂಡು ಓಡಿ ಹೋಗಿದ್ದಾನೆ. ನಂತರ ಆಕೆ ಅಡುಗೆ ಮನೆಗೆ ತೆರಳಿ ಕಣ್ಣಿಗೆ ನೀರು ಹಾಕಿಕೊಂಡು ಹೊರಗೆ ಬಂದಿದ್ದಾರೆ. ಈ ಘಟನೆ ಸಂಬಂಧ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಪಿಸಿಸಿ ಅಧ್ಯಕ್ಷರಾಗಿ ಡಿಕೆಶಿ ಆರು ವರ್ಷ: ಸಂಭ್ರಮಾಚರಣೆ

ಮೈಸೂರು: ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಯಶಸ್ವಿ 6 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅಭಿಮಾನಿಗಳಿಂದ ಮಂಗಳವಾರ ನಗರದಲ್ಲಿ ಸಂಭ್ರಮಾಚರಣೆಯನ್ನು ನಡೆಸಲಾಯಿತು.



ನಗರದ ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ಡಿಕೆ ಶಿವಕುಮಾರ್ ಅಭಿಮಾನಿ ಬಳಗದ ವತಿಯಿಂದ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಈಡಿಗಾಯಿ ಹೊಡೆದು, ಸಿಹಿ ಹಂಚಿ ಮುಂದಿನ ಮುಖ್ಯಮಂತ್ರಿ, ಡಿಕೆ ಶಿವಕುಮಾರ್ ಎಂದು ಘೋಷಣೆ ಕೂಗಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್ ಮೂರ್ತಿ, ಮುಖಂಡರಾದ ಜಿ.ಶ್ರೀನಾಥ್ ಬಾಬು, ಅಖಿಲ ಕರ್ನಾಟಕ ಡಿಕೆ ಶಿವಕುಮಾರ್ ಅಭಿಮಾನಿ ಸಂಘದ ನಗರ ಅಧ್ಯಕ್ಷ ಜಿ.ರಾಘವೇಂದ್ರ, ನಗರ ಪಾಲಿಕೆ ಮಾಜಿ ಸದಸ್ಯ ರಾಜಶೇಖರ್ ಮೂರ್ತಿ, ಕೆಪಿಸಿಸಿ ಸದಸ್ಯ ನಟರಾಜ್, ಎಸ್.ಎನ್. ರಾಜೇಶ್, ಮಂಜೇಶ್, ಜಿ.ಕಿರಣ, ರಮೇಶ, ರಾಕೇಶ್ ಹಾಜರಿದ್ದರು.

ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಮೋಹನಕುಮಾರಿ ಮನವಿ

ಚಿಕ್ಕದೇವಮ್ಮನ ಜಾತ್ರೆಗೆ ಸಹಕಾರ ಅಗತ್ಯ

ಸರಗೂರು: ನಾಡಿನ ಅದಿದೇವತೆ ಚಿಕ್ಕದೇವಮ್ಮನ ಹಾಲುಗಡ, ಇಟ್ನ ಜಾತ್ರಾ ಮಹೋತ್ಸವ ಮಾ.19ರಿಂದ ಮೂರು ದಿನಗಳು ನಡೆಯಲಿದ್ದು, ಜಾತ್ರಾ ಮಹೋತ್ಸವದ ಯಶಸ್ವಿಗೆ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಎಲ್ಲರೂ ಒಗ್ಗೂಡಿ ವಿಜೃಂಭಣೆಯ ಜಾತ್ರಾಗೆ ಮುಂದಾಗಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪ್ರತಿ ವರ್ಷದಂತೆ ಈ ವರ್ಷವೂ ಜಾತ್ರೆಯು ವಿಜೃಂಭಣೆಯಿಂದನಡೆಯಲಿದೆ. ಇದಕ್ಕಾಗಿಇಟ್ನ ಗ್ರಾಮಸ್ಥರು ಸಕಲ ಸಿದ್ಧತೆ ಮಾಡಿಕೊಂಡಿದ್ದು, ಚಂದ್ರಮಾನ ಯುಗಾದಿಯಂದು ಜಾತ್ರಾ ಮಹೋತ್ಸವ ನಡೆಯಲಿರುವ ಹಿನ್ನೆಲೆಯಲ್ಲಿ ಮುಂಜಾಗ್ರತ ಕ್ರಮವಾಗಿ ಭಕ್ತರಿಗೆ ತೊಂದರೆಯಾಗದಂತೆ ಕಟ್ಟು ನಿಟ್ಟಿನ ಕ್ರಮವಹಿಸುವಂತೆ ತಹಸೀಲ್ದಾರ್ ಕಚೇರಿಯಲ್ಲಿ ತಹಸೀಲ್ದಾರ್ ಮೋಹನಕುಮಾರಿ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಯಿತು.

ಜಾತ್ರಾ ಕಮಿಟಿ ಅಧ್ಯಕ್ಷ ದೊಡ್ಡವೀರನಾಯಕ ಮಾತನಾಡಿ, ಈ ವರ್ಷದ ಜಾತ್ರೆಯಲ್ಲಿ ಹೆಚ್ಚಿನ ಭಕ್ತರು ಬರುವ ನಿರೀಕ್ಷೆಯಿದೆ. ಬೆಟ್ಟದಿಂದ ದೇವಿಯ



ಉತ್ಸವಮೂರ್ತಿಯನ್ನು ಕಪಿಲ ನದಿಯ ಜಪದಕಟ್ಟೆಯಲ್ಲಿ ಪ್ರತಿಷ್ಠಾಪಿಸಿ, ವಿಶೇಷ ಪೂಜೆ ನಡೆಸಲಾಗುವುದು. ಭಕ್ತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮವಹಿಸಲಾಗುವುದು ಎಂದು ಹೇಳಿದರು.

ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿ, ಭಕ್ತರು ಜಪದಕಟ್ಟೆಗೆ ಬರಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ವಾಹನಗಳಿಗೆ ಪ್ರತ್ಯೇಕವಾಗಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು. ಇದಲ್ಲದೆ ಭಕ್ತರು ಸುಗಮವಾಗಿ ದೇವಿಯ ದರ್ಶನ ಪಡೆಯಲು ಸಕಲ ವ್ಯವಸ್ಥೆ ಕಲ್ಪಿಸಲಾಗುವುದು. ಈ ಬಗ್ಗೆ ಯಾವುದೇ ಗೊಂದಲ ಬೇಡ. ಎಲ್ಲರೂ ಒಗ್ಗೂಡಿ ಎಂದಿನಂತೆ ಜಾತ್ರೆಯ ಯಶಸ್ವಿಯಾಗಲು ಶ್ರಮಿಸೋಣ ಎಂದು ಹೇಳಿದರು. ದೇವಸ್ಥಾನದ ಇಒ ರಘು ಕ್ರೈಮ್ ವಿಭಾಗದ ಪಿಎಐ ಗೋಪಾಲ್, ಮಾತನಾಡಿದರು. ಪಾರುಪತ್ತೇದಾರ ಶಾಂತಿಪುರ ಮಹದೇವಸ್ವಾಮಿ, ಚಿಕ್ಕದೇವಮ್ಮನ ಜಾತ್ರೆ ಕಮಿಟಿ ಟ್ರಸ್ಟ್‌ನ ಅಧ್ಯಕ್ಷ ದೊಡ್ಡವೀರನಾಯಕ, ತಾಲ್ಲೂಕು ನಾಯಕ ಸಮಾಜದ ಅಧ್ಯಕ್ಷ ಪುರದಕಟ್ಟೆ ಬಸವರಾಜು, ಎನ್. ಬಸವನಾಯಕ, ಯಜಮಾನರಾದ ಬಿ.ಬೆಟ್ಟನಾಯಕ, ಚಿನ್ನನಾಯಕ, ತಮ್ಮರಾಜು, ಡೈರಿಬೆಟ್ಟನಾಯಕ, ಅನಿಲ್ ನಾಯಕ, ಕಾಳಿಂಗನಾಯಕ, ಸಣ್ಣಸ್ವಾಮಿ ನಾಯಕ, ಐಬಿ ರವಿಕುಮಾರ್, ಜಯರಾಮ್, ನಾಗೇಂದ್ರ, ಸೋಮಣ್ಣ, ಚಿಕ್ಕಣ್ಣ, ಬಿ,ಬಸವರಾಜು, ಹಾಲುಗಡ, ಇಟ್ನ ಗ್ರಾಮಸ್ಥರು ಹಾಜರಿದ್ದರು.

ಸರ್ಕಾರಿ ಶಾಲೆಯಲ್ಲಿ ವಿಜ್ಞಾನ ಮೇಳ ಸಂಪನ್ನ: ಸತೀಶ್ ಜವರೇಗೌಡ ಸಲಹೆ

ವಿದ್ಯಾರ್ಥಿಗಳೇ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಿ

ಮೈಸೂರು: ತಾಲ್ಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಜ್ಞಾನ ಸಂಘ, ಸ್ಟೆಮ್ ಲ್ಯಾಬ್ ಹಾಗೂ ಅಗಸ್ತ್ಯ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಪ್ರಸಕ್ತ ಸಾಲಿನ ವಿಜ್ಞಾನ ಮೇಳವು ಶಾಲೆಯ ಆವರಣದಲ್ಲಿ ಯಶಸ್ವಿಯಾಗಿ ನಡೆದು ಸಂಪನ್ನಗೊಂಡಿತು.

ವಿಜ್ಞಾನ ಮೇಳದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದ ಸ್ಟೆಮ್ ಲ್ಯಾಬ್‌ನ ಮಾರ್ಗದರ್ಶಕ ಹನುಮಂತು ಮಾತನಾಡಿ, ವಿದ್ಯಾರ್ಥಿಗಳು ವಿಜ್ಞಾನ ವಿಷಯದ ಸಾಮಗ್ರಿಗಳನ್ನು ನೇರವಾಗಿ ನೋಡಿ, ಅವನ್ನು ಸ್ಪರ್ಶಿಸಿ, ಆ ಮೂಲಕ ಕಲಿಕೆಯನ್ನು ಅನುಭವಿಸಬೇಕು. ಆಗ ವಿಷಯ ಜ್ಞಾನ ಹೆಚ್ಚುತ್ತದೆ ಎಂದರು.

ಸಾಹಿತಿ ಹಾಗೂ ಶಿಕ್ಷಕ ಟಿ. ಸತೀಶ್ ಜವರೇಗೌಡ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪರಿಣಾಮಕಾರಿ ಕಲಿಕೆಯಪ್ರಗತಿಸಾಧಿತವಾಗಬೇಕಾದರೆ, ವಿಜ್ಞಾನ ಪಠ್ಯದಲ್ಲಿನ ಸಂಗತಿಗಳನ್ನು ಅರಿಯುವ ಕುತೂಹಲ ಬೆಳೆಸಿಕೊಳ್ಳಬೇಕು. ಇಂತಹ ಕುತೂಹಲ ಮನೋಭಾವಕ್ಕೆ ಶಿಕ್ಷಕರು ಉತ್ತೇಜನ ನೀಡುವ ಮೂಲಕ ವೈಜ್ಞಾನಿಕ ಮನೋಭಾವ ಬೆಳೆಸಬೇಕು



ಎಂದು ತಿಳಿಸಿದರು.

ಶಾಲೆಯ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವಿಧ ತರಗತಿಗಳ ವಿದ್ಯಾರ್ಥಿಗಳು ಸುಮಾರು 59 ವಿಜ್ಞಾನ ಮತ್ತು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ಮಾದರಿಗಳು ಮತ್ತು ಪ್ರತಿಕೃತಿಗಳನ್ನು ತಯಾರಿಸಿ ಪ್ರದರ್ಶಿಸಿದರು. ವೀಕ್ಷಣೆಗೆ ಬಂದಿದ್ದ ಅಕ್ಕಪಕ್ಕದ ಶಾಲೆಯ ವಿದ್ಯಾರ್ಥಿಗಳಿಗೆ ಈ ವಿಜ್ಞಾನ ಮಾದರಿಗಳ ಬಗ್ಗೆ ಅತ್ಯುತ್ಸಾಹದಿಂದ ಮಾಹಿತಿ ನೀಡಿದರು. ವಿಜ್ಞಾನ ಮೇಳದಲ್ಲಿ ನವೀನ ರೀತಿಯ ವಿಶೇಷವಾದ ಅತ್ಯುತ್ತಮ ಮಾದರಿಗಳನ್ನು ತಯಾರಿಸಿದ್ದ ಕನ್ನಡ ಮಾಧ್ಯಮದ ಎನ್. ವಿಜಯಲಕ್ಷ್ಮಿ (ಪ್ರಥಮ), ನವೀನ್ (ದ್ವಿತೀಯ), ಸಮೃದ್ಧ್ (ತೃತೀಯ) ಹಾಗೂ ಆಂಗ್ಲ ಮಾಧ್ಯಮದ ಎಲ್. ಶ್ರೇಯಸ್ (ಪ್ರಥಮ), ಸಿದ್ದಪ್ಪ (ದ್ವಿತೀಯ), ಎಂ.ಎಸ್. ವರುಣ (ತೃತೀಯ) ಅವರಿಗೆ ಬಹುಮಾನ ವಿತರಿಸಲಾಯಿತು.

ವಿಜ್ಞಾನ ಮೇಳವನ್ನು ಶಿಕ್ಷಣ ಸಂಯೋಜಕ ವಿ. ಶಂಕರ್ ಉದ್ಘಾಟನೆ ಮಾಡಿ, ಬಳಿಕ ವೀಕ್ಷಿಸಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಕ್ರಿಯಾಶೀಲತೆಯ ಮೆಚ್ಚುಗೆ ವ್ಯಕ್ತಪಡಿಸಿದರು. ಮೆಲ್ಲಹಳ್ಳಿ ವಲಯದ ಸಂಪನ್ಮೂಲ ವ್ಯಕ್ತಿ ಜಿ.ಪಿ. ಮಂಜುನಾಥ್, ಮುಖ್ಯ ಶಿಕ್ಷಕಿ ಎನ್. ವೀಣಾ ಅಧ್ಯಕ್ಷತೆ ವಹಿಸಿದ್ದರು.

ಕಿರುಸುದ್ದಿ

ಜೀವವೈವಿಧ್ಯ ಕಾರ್ಯಕ್ರಮ

ಗುಂಡ್ಲುಪೇಟೆ: ತಾಲೂಕಿನ ಕೋಡಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇದೇ 10ರಂದು ಜೀವ ವೈವಿಧ್ಯ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಪಟ್ಟಣದ ವನ್ಯಜೀವಿ ಛಾಯಾಗ್ರಾಹಕ ಆರ್ ಕೆ ಮಧುರವರು ಉದ್ಘಾಟಿಸಿದರು. ತಾವೇ ಸೆರೆಹಿಡಿದ ವನ್ಯಜೀವಿ ಛಾಯಾಚಿತ್ರ ಪ್ರದರ್ಶಿಸಿದರು. ಪರಿಸರದಲ್ಲಿ ಜೀವ ವೈವಿಧ್ಯದ ವಿಶೇಷ ಮಹತ್ವವ ವಿವರಿಸಿ ವಿಧ್ಯಾರ್ಥಿಗಳ ಕುತೂಹಲ ತಣಿಸಿದರು. ಭಾರತದ ಹಲವು ವನ್ಯಜೀವಿ ಧಾಮಗಳ ಹಲವು ವಿಶೇಷ ವಿವರಿಸಿ ಕರ್ನಾಟಕಹಲವು ವಿಶೇಷ ವನ್ಯಜೀವಿ ಧಾಮಕ್ಕೆಹೆಸರು ವಾಸಿಯಾಗಿದ್ದು ಸಿಂಗಲೀಕಕ್ಕೆ ಸೋಮೆಶ್ವರ ವನ್ಯಜೀವಿ ಧಾಮವಿದ್ದರೆ ರಣಹದ್ದುಗಳಿಗಾಗಿ ರಾಮದೇವರ ಬೆಟ್ಟ, ಕರಡಿಗಳಿಗಾಗಿ ಧರೋಜಿ ವಿಶೇಷವಾಗಿದ್ದು ಪರಿಸರ ಸಮತೋಲನಕ್ಕೆ ಕೊಡುಗೆ ನೀಡಿವೆ ಎಂದರು. ಪರಿಸಿರ ನಾಶಕ್ಕೆ ಕಾರಣವಾಗುವ ಸುರಂಗಮಾರ್ಗ ಕಾಡಿನ ಅವನತಿಗೆ ಮಾನವ ಪ್ರಾಣಿ ಸಂಗರ್ಷಕ್ಕೆ ಕಾರಣವಾಗುವ ಆತಂಕ ವ್ಯಕ್ತಪಡಿಸಿದರು. ಶಾಲೆಯ ಮುಖ್ಯಶಿಕ್ಷಕಿಯಾದ ಶ್ರೀಮತಿ ಲೀಲಾವತಿ ರವರು ಮಾತನಾಡಿ ಪರಿಸರದಲ್ಲಿ ಎಲ್ಲ ಜೀವಿಗಳಿಗೂ ಬಾಳುವ ಹಕ್ಕಿದ್ದು ಅವುಗಳ ರಕ್ಷಣೆ ಮಾಡಬೇಕು ಮಕ್ಕಳು ಪ್ಲಾಸ್ಟಿಕ್ ಬಳಕೆಕಡಿಮೆ ಮಾಡಿ ಗಿಡಮರ ಬೆಳೆಸಿ ಪರಿಸರ ಪ್ರೇಮಿಗಳಾಗಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಮಕ್ಕಳೂ ಹಾಜರಿದ್ದರು.

ಅವಧಿ ಮೀರಿದ ಬಿಯರ್ ನಾಶ



ಚಾಮರಾಜನಗರ: ಅವಧಿ ಮೀರಿದ 15.30 ಲಕ್ಷ ರೂ. ಮೌಲ್ಯದ 6269.690 ಬಲ್ಕ್ ಲೀಟರ್ ಬಿಯರ್ ಅನ್ನು ನಾಶ ಪಡಿಸಲಾಯಿತು. ನಗರದ ಹೊರ ವಲಯದ ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪಾನೀಯ ನಿಗಮದಲ್ಲಿ ಅಬಕಾರಿ ಉಪ ಅಧೀಕ್ಷಕ ವಿಜಯಕುಮಾರ್ ಸಮ್ಮುಖದಲ್ಲಿ ಅವಧಿ ಮೀರಿದ ಬಲ್ಕ್ ಲೀಟರ್ ಬಿಯರ್ ದಾಸ್ತಾನುಗಳನ್ನು ನೆಲಕ್ಕೆ ಸುರಿಯುವ ಮೂಲಕ ನಾಶ ಪಡಿಸಲಾಯಿತು. ಇದರ ಮೌಲ್ಯ 15.30 ಲಕ್ಷ ರೂ. ಎಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಅಬಕಾರಿ ನಿರೀಕ್ಷ ತನ್ವೀರ್ ಕೆ, ಕೆಎಸ್‌ಬಿಸಿಎಲ್‌ನ ವ್ಯವಸ್ಥಾಪಕ ಪ್ರಸಾದ್, ತಾಲೂಕು ಕಚೇರಿಯ ಸಿಬ್ಬಂದಿ ಅವಿನಾಶ್ ಮತ್ತು ನವೀನ್ ಇದ್ದರು.

ಸಿಲಿಂಡರ್ ಸ್ಫೋಟ : ದಂಪತಿಗೆ ಗಾಯ

ಚಾಮರಾಜನಗರ: ಅಡುಗೆ ಅನಿಲ ಸೋರಿಕೆಯಿಂದ ಸಿಲಿಂಡರ್ ಸ್ಫೋಟಗೊಂಡು ದಂಪತಿ ಗಾಯಗೊಂಡಿರುವ ಘಟನೆ ನಗರದ ರೈಲ್ವೆ ಬಡಾವಣೆಯಲ್ಲಿ ನಡೆದಿದೆ. ನಗರದ ರೈಲ್ವೆ ಬಡಾವಣೆಯ ಪರಮೇಶ್(45) ಹಾಗೂ ಅವರ ಪತ್ನಿ ಜ್ಯೋತಿ(35) ಗಾಯಗೊಂಡವರು.

ಘಟನೆ ವಿವರ: ನಗರದ ರೈಲ್ವೆ ಬಡಾವಣೆಯಲ್ಲಿರುವ ಪರಮೇಶ್ ಎಂಬುವವರ ಮನೆಯಲ್ಲಿ ಬೆಳಗ್ಗೆ ಅಡುಗೆ ಅನಿಲ ಸೋರಿಕೆಯಾಗಿ ಸಿಲಿಂಡರ್ ಸ್ಫೋಟಗೊಂಡಿದೆ. ಈ ವೇಳೆ ಮನೆಯಲ್ಲಿದ್ದ ಪರಮೇಶ್ ಹಾಗೂ ಜ್ಯೋತಿ ಗಾಯಗೊಂಡಿದ್ದು, ತಕ್ಷಣವೇ ನೆರೆಹೊರೆಯವರು ಧಾವಿಸಿ ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗೆ ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಂಕಿಯ ಜ್ವಾಲೆಯಿಂದಾಗಿ ಮನೆಯಲ್ಲಿದ್ದ ಸಾಮಗ್ರಿಗಳು, ಧವಸಧಾನ್ಯ ಸೇರಿದಂತೆ ಲಕ್ಷಾಂತರ ರೂ.ಗಳ ಪರಿಕರಗಳು ಸುಟ್ಟು ಹೋಗಿವೆ. ವಿಷಯ ತಿಳಿದು ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಆಗಮಿಸಿ, ಬೆಂಕಿಯನ್ನು ನಂದಿಸುವ ಮೂಲಕ ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ. ಸ್ಥಳಕ್ಕೆ ಪಟ್ಟಣ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ಸರ್ಕಲ್ ಇನ್‌ಸ್ಪೆಕ್ಟರ್ ಕಚೇರಿ ಬೆಂಕಿ

ಕೊಳ್ಳೇಗಾಲ: ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಸರ್ಕಲ್ ಇನ್‌ಸ್ಪೆಕ್ಟರ್ ಕಚೇರಿ ಬೆಂಕಿ ಹೊತ್ತಿ ಉರಿದ ಘಟನೆ ಜರುಗಿದೆ. ಪಟ್ಟಣದ ವೃತ್ತ ನಿರೀಕ್ಷಕ ಕಚೇರಿಯಲ್ಲಿ ಮುಂಜಾನೆ ಬೆಂಕಿ ಹೊತ್ತುಕೊಂಡು ಸುಮಾರು ಎರಡೂವರೆ ಲಕ್ಷದಷ್ಟು ನಷ್ಟ ಉಂಟಾಗಿದೆ. ಬೆಂಕಿ ಉರಿಯುವುದನ್ನು ಕಂಡ ಸ್ಥಳೀಯರು ಬೆಂಕಿ ನಂದಿಸಲು ಅಗ್ನಿಶಾಮಕ ದಳದವರನ್ನು ಕರೆಯಿಸಿ ಬೆಂಕಿ ಹಾರಿಸಿದರು. ಈ ಘಟನೆಯಿಂದ ಕಚೇರಿಯಲ್ಲಿದ್ದ ಕಂಪ್ಯೂಟರ್, ಜೆರಾಕ್ಸ್ ಪ್ರಿಂಟರ್ ಮಿಷಿನ್, ಪೀಠೋಪಕರಣಗಳು ಸುಟ್ಟು ಕರಕಲಾಗಿವೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಅವರು ಭೇಟಿ ನೀಡಿ ಪರಿಶೀಲಿಸಿದರು. ಡಿವೈಎಸ್ಪಿ ಧರ್ಮೇಂದ್ರ, ವೃತ್ತ ನಿರೀಕ್ಷಕ ಶಿವಮಾದಯ್ಯ, ಎಸ್‌ಐ ವರ್ಷ, ಸುಪ್ರೀತ್ ಸ್ಥಳಕ್ಕೆ ಭೇಟಿ ನೀಡಿದರು.ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಕೊಳ್ಳೇಗಾಲ ತಾಲೂಕು ಕಚೇರಿಯಲ್ಲಿ ಶ್ರೀ ಸಂತ ಸೇವಾಲಾಲ್ ಜಯಂತಿಯನ್ನು ಆಚರಣೆ ಮಾಡಲಾಯಿತು.

ಮಾರಮ್ಮದೇವಿ ವಾರ್ಷಿಕೋತ್ಸವ

ಕೆ.ಆರ್.ನಗರ : ಪಟ್ಟಣದ ಆಂಜನೇಯ ಬಡಾವಣೆಯ ಶ್ರೀಆದಿಶಕ್ತಿ ಮಾರಮ್ಮದೇವಿಯ 35ನೇ ವಾರ್ಷಿಕೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಬಡಾವಣೆಯ ಶ್ರೀಕೌಮರೇಶ್ವರಿ ಯುವಕರ ಸಂಘದ ವತಿಯಿಂದ ಅದ್ದೂರಿಯಾಗಿ ಶ್ರೀಆದಿಶಕ್ತಿ ಮಾರಮ್ಮದೇವಿಯ 35ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಅರ್ಚಕರಾದ ಶಿವಪ್ರಸಾದ್‌ಶರ್ಮ ಮತ್ತ ದತ್ತಪ್ರಸಾದ್ ಶರ್ಮ ನೇತೃತ್ವದಲ್ಲಿ ಮುಂಜಾನೆಯಿಂದಲೇ ದೇವಿಯ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಕುಂಕುಮಾರ್ಚನೆ ನೇರವೇರಿಸಲಾಯಿತು. ದೇವಸ್ಥಾನ ಹೂವಿನ ಅಲಂಕಾರದೊಂದಿಗೆ ಕಂಗೊಳಿಸುತ್ತಿತು ಬರುವ ಮಹಿಳೆಯ ಶ್ರೀಮಾರಮ್ಮದೇವಿಗೆ ತೊಬಿಟ್ಟಿನ ಆರತಿ ತಂದು ಪೂಜಿಸಿ ಪ್ರಾರ್ಥಿಸಿದರು. ಮಹಿಳೆಯರು ಮತ್ತು ಮಕ್ಕಳು ದೇವಿ ದರ್ಶನ ಪಡೆದು ಮಂಗಳಾರತಿ ಮತ್ತು ಪ್ರಸಾದ ಸ್ವೀಕರಿಸಿದರು. ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ದೇವಿಯ ವಾರ್ಷಿಕೋತ್ಸವದ ಪ್ರಯುಕ್ತ ಅದ್ದೂರಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು ಬರುವ ಭಕ್ತಾದಿಗಳಿಗೆ ಪ್ರಸಾದ ಮತ್ತು ಲಾಡು ವಿತರಿಸಲಾಯಿತು. ಮಾ.11ರ ಬುಧವಾರ 35ನೇ ವರ್ಷ ಮಾರಮ್ಮದೇವಿಯ ವಾರ್ಷಿಕೋತ್ಸವದ ಅಂಗವಾಗಿ ಮದ್ಯಾಹ್ನ 12 ಗಂಟೆಗೆ ದೇವಸ್ಥಾನದ ಮುಂಭಾಗದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕುಮಾರ್(ಪುಟ್ಟಚಾರಿ) ತಿಳಿಸಿದರು. ಪೂಜಾ ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ಪ್ರಕಾಶ್, ಮಹೇಂದ್ರ, ಅಭಿ, ಯುವ ಕಾಂಗ್ರೆಸ್ ಮುಖಂಡ ಪುನೀತ್‌ಕುಮಾರ್, ಪವನ್, ವಿನಯ್ ಇದ್ದರು.



ಕೆ.ಆರ್.ನಗರ ಪಟ್ಟಣದ ಆಂಜನೇಯ ಬಡಾವಣೆಯ ಶ್ರೀಆದಿಶಕ್ತಿ ಮಾರಮ್ಮದೇವಿಯ 35ನೇ ವಾರ್ಷಿಕೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪ

ಅನುದಾನ ದುರ್ಬಳಕೆ: ದೂರು

ಚಾಮರಾಜನಗರ: ರಾಜ್ಯ ಸರ್ಕಾರವು ಈ ಬಾರಿಯೂ ಸಹ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳುವ ಮೂಲಕ ದಲಿತ ಸಮುದಾಯಕ್ಕೆ ಅನ್ಯಾಯ ಮಾಡಿದ್ದು, ಸಿಎಂ ಸಿದ್ದರಾಮಯ್ಯ ದಲಿತರ ವಿರೋಧಿಯಾಗಿದದಾರೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ದೂರಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಸಾಲಿನ ಬಜೆಟ್‌ನಲ್ಲಿ ಎಸ್‌ಇಪಿ, ಟಿಎಸ್‌ಪಿಗೆ ಸರ್ಕಾರವು 44 ಸಾವಿರ ಕೋಟಿ ರೂ.ಗಳನ್ನು ಮೀಸಲಿಟ್ಟಿದೆ. ಇದರದಲ್ಲಿ 14 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿದೆ. ಸಮಾಜ ಕಲ್ಯಾಣ ಇಲಾಖೆಗೆ ಕೇವಲ 7 ಸಾವಿರ ಕೋಟಿ ರೂ.ಗಳನ್ನು ಮಾತ್ರ ನೀಡಲಾಗಿದೆ. ದಲಿತ ಸಮುದಾಯದ ಡಾ. ಎಚ್.ಸಿ. ಮಹದೇವಪ್ಪ ಅವರು ಈ ಇಲಾಖೆಯ ಸಚಿವರಾಗಿದ್ದು, ಇವರು ಪರಿಶಿಷ್ಟ ಜಾತಿ ಯ ಕಲ್ಯಾಣ ಯೋಜನೆಗಳನ್ನು ಅನುದಾನವನ್ನು ನಿಯೋಗಿಸುವ ಬದಲು ಸಿದ್ದರಾಮಯ್ಯ ಅವರ ಗ್ಯಾರಂಟಿ ಯೋಜನೆಗೆ ಅನುದಾನವನ್ನು ಬಳಕೆ ಮಾಡಿಕೊಳ್ಳಲು ಅನುಮತಿಯನ್ನು ನೀಡುವ ಮೂಲಕ ದಲಿತರ ವಿರೋಧಿಯಾಗಿದ್ದಾರೆ. ಅಂಬೇಡ್ಕರ್ ಅವರು ಆಶಯಗಳಿಗೆ ವಿರುದ್ಧವಾಗಿದ್ದಾರೆ ಎಂದರು.

ಎಸ್‌ಇಪಿ ಮತ್ತು ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳಬೇಡಿ ಎಂದುದಲಿತಸಮುದಾಯದಶಾಸಕರುಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪರಿ ಪರಿಯಾಗಿ ಬೇಡಿಕೊಂಡಿದ್ದರು. ಇದ್ಯಾವುದಕ್ಕೂ ಗ್ಯಾರೆ ಅನ್ನದೇ ಸಿದ್ದರಾಮಯ್ಯ ಈ ಬಾರಿಯು ಗ್ಯಾರಂಟಿ ಯೋಜನೆಗೆ ಹಣದನ್ನು ದುಬರ್ಳಕೆ ಮಾಡಿಕೊಂಡಿದ್ದಾರೆ. ಹೀಗಾಗಿ ನಮಗೆ ಅನುಮಾನ ಬರುತ್ತಿರುವುದು ಸಮಾಜ ಕಲ್ಯಾಣ ಇಲಾಖೆಯನ್ನು ಸಹ ಮಹದೇವಪ್ಪ ಸಿಎಂ. ಸಿದ್ದರಾಮಯ್ಯ ಹಾಗೂ ಅವರ ಮಗ ಯತೀಂದ್ರ ಸಿದ್ದರಾಮಯ್ಯ ಅವರಿಗೆ ವಹಿಸಿಕೊಟ್ಟು ಬಿಟ್ಟಿದ್ದಾರೆ. ಕಳೆದ ಮೂರು ವರ್ಷಗಳಿಂದ ದಲಿತ ಸಮುದಾಯಗಳ ಕಲ್ಯಾಣಕ್ಕಾಗಿ ಬಳಕೆ ಮಾಡಿಕೊಳ್ಳಬೇಕಾಗಿದ್ದ ಸಾವಿರಾರು ಕೋಟಿ ರೂ. ಗ್ಯಾರಂಟಿ ಯೋಜನೆಯ ಪಾಲಾಗುತ್ತಿದೆ. ಇದರಿಂದ ಸಮುದಾಯದ ಬಂಧುಗಳಿಗೆ ಬಾರಿ ನಷ್ಟವಾಗುತ್ತಿದೆ. ವಿದ್ಯಾರ್ಥಿಗಳಿಗೆ, ಸ್ವಾವಲಂಬಿ ದಲಿತ ರೈತರಿಗೆ,ಸ್ವ ಉದ್ಯೋಗಿಗಳಿಗೆ, ವಿದೇಶದಲ್ಲಿ ವ್ಯಾಸಂಗ ಮಾಡಲು ಅನುದಾನ ಕೋರಿರುವವರಿಗೆ, ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅನುದಾನದ ಅಲಭ್ಯತೆಯಿಂದ ನಿಗಮ ಹಾಗೂ ಇಲಾಖೆಯಿಂದ ಅರ್ಜಿಗಳನ್ನೇ ಅಹ್ವಾನಿಸುತ್ತಿಲ್ಲ ಎಂದರು.

ಮುಖಂಡ ಮಂಜುಕೋಡಿ ಉಗನೆ, ಕಾರ್ಯದರ್ಶಿ ಮೂಡಹಳ್ಳಿ ಮೂರ್ತಿ, ಜಿಲ್ಲಾ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪರಮೇಶ್ ಇದ್ದರು.



ಎಚ್ಚರಿಕೆ ನಡೆ ಅನುಸರಿಸಿ

ದಲಿತ ಸಮುದಾಯಗಳ ಕಲ್ಯಾಣಕ್ಕೆ ಬಳಕೆಯಾಗಬೇಕಾಗಿದ್ದ 1,56,701 ಕೋಟಿ ರೂ.ಗಳ ಅನುದಾನದ ಪೈಕಿ 53,500 ಕೋಟಿ ರೂ.ಗಳು ದುರ್ಬಳಕೆಯಾಗಿದೆ. ಸಿದ್ದರಾಮಯ್ಯ ಅವರನ್ನು ದಲಿತ ರಾಮಯ್ಯ ಎಂದು ಹೇಳುವ, ಬಿರುದು ನೀಡಿರುವ ನಮ್ಮ ಸಮುದಾಯ ಜನ ಈ ಬಗ್ಗೆ ಜಾಗೃತರಾಗಬೇಕಾಗಿದೆ. ಸಿದ್ದರಾಮಯ್ಯ ದಲಿತ ವಿರೋಧಿ ನಡೆಯ ಬಗ್ಗೆ ಎಚ್ಚರಿಕೆಯ ನಡೆಯನ್ನು ಅನುಸರಿಸಬೇಕು ಎಂದು ಮೂಡ್ನಾಕೂಡು ಪ್ರಕಾಶ್ ಮನವಿ ಮಾಡಿದರು.

ನೀರಿನ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಿ: ಶ್ರೀರೂಪಾ

ಹನೂರು: ಕಾಡಂಚಿನ ಗ್ರಾಮವಾದ ಆಲಂಬಡಿ ಗ್ರಾಮಕ್ಕೆ ತುರ್ತಾಗಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾಧಿಕಾರಿ ಶ್ರೀ ರೂಪಾ ತಿಳಿಸಿದರು.

ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಹನೂರು ತಾಲೂಕು ಘಟಕದ ಸದಸ್ಯರೊಡನೆ ಚರ್ಚೆ ನಡೆಸಿ ನಂತರ ಮಾತನಾಡಿ, ಕಾಡಂಚಿನ ಗ್ರಾಮಗಳಾದ ಹಾಗೂ ಗೋಪಿನಾಥಂ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರು ವಿದ್ಯುತ್ ರಸ್ತೆ ಹೀಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಈಗಾಗಲೇ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಅಹವಾಲು ಸ್ವೀಕರಿಸಿದ್ದು, ತಕ್ಷಣಕ್ಕೆ ಜನರಿಗೆ ಸಹಾಯಕವಾಗುವಂತಹ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ ತದನಂತರ ಮುಂದಿನ ದಿನಗಳಲ್ಲಿ ವಿದ್ಯುತ್ ರಸ್ತೆ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ವಹಿಸಲಾಗುತ್ತದೆ ಎಂದರು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಗೌಡೇ ಗೌಡ ಮಾತನಾಡಿ , ನಮ್ಮ ಹನೂರು ತಾಲೂಕು ವ್ಯಾಪ್ತಿಯ ಅದರಲ್ಲೂ ಗೋಪಿನಾಥಂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಿಗೆ ಇಂದಿಗೂ ಸಹ ಜನರು ಬಹಳ ಕಷ್ಟ ಪಡಬೇಕಾದ ಪರಿಸ್ಥಿತಿ ಇದ್ದು, ತುರ್ತಾಗಿ ಸಮಸ್ಯೆಗಳನ್ನು ಬಗೆಹರಿಸುವಂತೆ ಸಾಕಷ್ಟು ಬಾರಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಮನವಿಯನ್ನು ಸಲ್ಲಿಸಿದ್ದೇವೆ. ಮುಂದಿನ ದಿನಗಳಲ್ಲಿ ಮೂಲಭೂತ ಸೌಲಭ್ಯಕಲ್ಪಿಸದಲ್ಲಿಉಗ್ರಹೋರಾಟವನ್ನು ಸಹ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಹನೂರು ತಹಸೀಲ್ದಾರ್ ಚೈತ್ರ, ರಾಜ್ಯ ಖಾಯಂ ಸದಸ್ಯ ಹೆಬ್ಬಸೂರು ಬಸವಣ್ಣ, ಜಿಲ್ಲಾ ಖಾಯಂ ಸದಸ್ಯ ರವಿ ನಾಯ್ದು, ಶಿವಮಲ್ಲೇ ಗೌಡ, ಪರಮೇಶ್, ಶಿವರಾಜು ಇದ್ದರು.



ಆರೋಗ್ಯದ ಪರಿಕರ ನೀಡಿ

ಬನ್ನೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನ ನೇತೃತ್ವದಲ್ಲಿರುವ ಸರ್ಕಾರ ಜನರಿಗೆ ವಿವಿಧ ಭಾಗ್ಯ ನೀಡಿ, ಆರೋಗ್ಯ ಇಲಾಖೆಯ ಕಡೆ ನಿರ್ಲಕ್ಷ್ಯ ಮಾಡುತ್ತಿರುವುದನ್ನು ಖಂಡಿಸಿ, ಗ್ಯಾರಂಟಿ ಬೇಡ ಸ್ವಾಮಿ ಆರೋಗ್ಯ ಪರಿಕರ ನೀಡಿ ಎಂದು ಬನ್ನೂರು ಸಾರ್ವಜನಿಕ ಆಸ್ಪತ್ರೆಯ ಬಳಿಯಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಬನ್ನೂರು ಹೋಬಳಿ ಅಧ್ಯಕ್ಷ ಅರುಣ್‌ಕುಮಾರ್ ತಿಳಿಸಿದರು.

ಆಸ್ಪತ್ರೆಯ ಮುಂಭಾಗ ಹಮ್ಮಿಕೊಳ್ಳಲಾದ ಸುದ್ದಗೋಷ್ಠಿಯಲ್ಲಿ ಮಾತನಾಡಿ, 58 ಸಾವಿರ ಜನಸಂಖ್ಯೆಯನ್ನು ಹೊಂದಿರುವ ಬನ್ನೂರು ಹೋಬಳಿಯಲ್ಲಿ ಮೂಲಭೂತವಾಗಿ ಅಗತ್ಯ ವಿರುವ ಮಾತ್ರೆಗಳನ್ನಾಗಿ, ಚುಚ್ಚುಮದ್ದಾಗಲಿ ಸರ್ಕಾರದಿಂದ ಪೂರೈಕೆಯಾಗದ ಹಿನ್ನೆಲೆ ಯಲ್ಲಿ ಬರುವ ರೋಗಿಗಳನ್ನು ಬೇರೆಡೆ ಕಳುಹಿಸುತ್ತಿರುವುದು ಅವರ ಜೀವಕ್ಕೆ ಅಪಾಯವನ್ನುಂಟು ಮಾಡುವ ಸನ್ನಿವೇಶ ನಿರ್ಮಾಣವಾದಂತೆ ಆಗಿದೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ2 ವರ್ಷಗಳಿಂದಈಚೆಗೆಮಾತ್ರೆಗಳಾಗಲಿ ಅಗತ್ಯ ಚುಚ್ಚುಮದ್ದು ಆಗಲಿ ಬೇಡಿಕೆಯಷ್ಟು ಪೂರೈಕೆಯಾಗುತ್ತಿಲ್ಲ ಎಂಬುದಾಗಿ ಇಲ್ಲಿನ ವೈದ್ಯರೇ ತಿಳಿಸಿದ್ದಾರೆಂದ ಅವರು ಹಾವು ಕಡಿತಕ್ಕೆ ಬಂದ ರೋಗಿಯನ್ನು ಮೈಸೂರಿಗೆ ಕಳುಹಿಸಿದರೆ ಅಲ್ಲಿಯವರೆಗೂ ಏನಾದರೂ ಪ್ರಾಣಾಪಾಯ ಸಂಭವಿಸಿದರೆ ಏನು ಗತಿ? ಇದಕ್ಕೆ ರಾಜ್ಯ ಸರ್ಕಾರ ಹೊಣೆಯಾಗುವುದ ಎಂದು ಪ್ರಶ್ನಿಸಿದರು.

ಇಲ್ಲಿನ ವೈದ್ಯರು ಸ್ವತಃ ತಮ್ಮ ಹಣವನ್ನು ವ್ಯಯಮಾಡಿ ಅಗತ್ಯವಿರುವ ಮಾತ್ರೆಯನ್ನು ಖರೀದಿ ಮಾಡಿ ನೀಡುತ್ತಿದ್ದಾರೆ. ಮಾತ್ರೆಗಳ ದಾಸ್ತಾನು, ಕೈಗವಸು ಇಲ್ಲದೇ ವೈದ್ಯರು ವಿಧಿ ಇಲ್ಲದೇ ಔಷಧಿಗಳನ್ನು ಹೊರಗೆ ಬರೆದು ನೀಡುವ ಸನ್ನೀವೇಶ ನಿರ್ಮಾಣವಾಗಿದೆ. ಸರ್ಕಾರ ಖಾಸಗಿ ಮೆಡಿಕಲ್ ಶಾಪ್‌ಗಳಿಂದ ಏನಾದರೂ ವಂತಿಗೆ ಸ್ವೀಕರಿಸಿ ಅಲ್ಲಿ ಮಾತ್ರೆಯನ್ನು ಕೊಳ್ಳುವಂತೆ ಮಾಡುತ್ತಿದ್ದಾರೆಯೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಂದಿನ ದಿನಗಳಲ್ಲಿ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಅತ್ತಹಳ್ಳಿ ಸೋಮಶೇಖರ್, ರಾಮು, ಮಧು, ರಘು, ಚೇತನ್, ಬನ್ನೂರು ಸೂರಿ, ಶ್ರೀಧರ್ ಮೊದಲಾದವರು ಇದ್ದರು.



ಸಂವಿಧಾನಕ್ಕಿಂತ ಯಾರೂ ದೊಡ್ಡವರಲ್ಲ: ರಾಮಕೃಷ್ಣ

ಕೆ.ಆರ್.ನಗರ: ಒಳಮೀಸಲಾತಿ ವಿಚಾರದಲ್ಲಿ ಏನೇ ಗೊಂದಲ ಸಮಸ್ಯೆ ಇದ್ದರು ಸೀಮಿತ ಜಾತಿಗಳ ಮಂತ್ರಿಗಳ ಹೆಸರಿಗೆ ಕಟ್ಟುವುದು ಬೇಡ, ಸಾಮ್ರಾಟ್ ಅಶೋಕ್ ವಂಶದ ಮೂಲದವರಾಗಿರುವ ಬಲಗೈ ಸಮುದಾಯದ ನಾವುಗಳು ಒಳ ಮೀಸಲಾತಿ ವಿರುದ್ಧ ಹೋರಾಟ ಮಾಡುತ್ತಿರುವುದು ಹೊರತು ಇತರೆ ಸಮುದಾಯದ ವಿರುದ್ಧ ಇಲ್ಲ ಎಂದು ಬಲಗೈ ಸಮುದಾಯದ ನಿವೃತ್ತ ನೌಕರರ ಮುಖ್ಯ ಶಿಕ್ಷಕ ಹೊಸ ಅಗ್ರಹಾರ ಎಚ್.ಎಸ್. ಸ್ವಾಮಿ ಹಾಗೂ ನಿವೃತ್ತ ಮುಖ್ಯ ಶಿಕ್ಷಕ ರಾಮಕೃಷ್ಣ ಜಂಟಿಯಾಗಿ ಹೇಳಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಬಲಗೈ ಸಮುದಾಯದ ನಿವೃತ್ತ ನೌಕರರ ಸಂಘದಿಂದ ಕರೆಯಲಾಗಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ದಲಿತ ಸಮುದಾಯಕ್ಕೆ ಒಳ ಮೀಸಲಾತಿ ವಿಚಾರದಲ್ಲಿ ಪ್ರಸ್ತಾಪ ಮಾಡಿಲ್ಲ. ಈಗಿದ್ದರು ಸರ್ಕಾರ ನಾಗ ಮೋಹನ್ ದಾಸ್ ಆಯೋಗದ ವರದಿಯನ್ನು ಏಕೆ ಜಾರಿ ಮಾಡಬೇಕು ಎಂದರು.

ಬಳಿಕ ನಿವೃತ್ತ ಮುಖ್ಯ ಶಿಕ್ಷಕ ರಾಮಕೃಷ್ಣ ಮಾತನಾಡಿ ಸಾಮ್ರಾಟ್ ಅಶೋಕನ ವಂಶದ ಮೂಲದವರಾಗಿರುವ ಬಲಗೈ ಸಮುದಾಯದ ನಾವುಗಳು ಒಳ ಮೀಸಲಾತಿ ವಿರುದ್ಧ ಹೋರಾಟ ಮಾಡುತ್ತಿರುವುದುಹೊರತುಇತರೆಸಮುದಾಯದ ವಿರುದ್ಧ ಇಲ್ಲ. ಆದ್ದರಿಂದ ನಾವೆಲ್ಲರೂ ಬುದ್ಧನ ಅನುಯಾಯಿಗಳು ಆಗಿದ್ದರಿಂದ ಅನುಸರಿಕೊಂಡು ಹೋಗೋಣ, ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿರುವ ಮಾತನ್ನು ತಪ್ಪದೇ ನಾವೆಲ್ಲ ಪಾಲಿಸೋಣ, ನಾಗಮೋಹನ್ ದಾಸ್ ವರದಿ ತಿರಸ್ಕರಿಸಿದ್ದೇವೆ ಹಾಗಾಗಿ ಸರ್ಕಾರ ಕೂಡ ಈ ಅವೈಜ್ಞಾನಿಕ ವರದಿಯನ್ನು ಕೈಬಿಡ ಬೇಕೆಂದು ಮನವಿ ಮಾಡಿದರು. ದಲಿತ ಬಲಗೈ ಸಮುದಾಯದ ನಿವೃತ್ತ ನೌಕರರ ಸಂಘದ ದೊರೆಸ್ವಾಮಿ, ದೊಡ್ಡಯ್ಯ ಸಿದ್ದರಾಜು, ಭೀಮ್ ಆರ್ಮಿ ಅಧ್ಯಕ್ಷ ಗುರುಸ್ವಾಮಿ , ದಲಿತ ಮುಖಂಡ ನಂಜಯ್ಯ ಇದ್ದರು.



ಒಳ ಮೀಸಲಾತಿಗೆ ಆಗ್ರಹಿಸಿ ನಾಳೆ ಪ್ರತಿಭಟನೆ

ಎಚ್.ಡಿ.ಕೋಟೆ: ಒಳ ಮೀಸಲಾತಿಗೆ ಆಗ್ರಹಿಸಿ ಇದೇ ತಿಂಗಳ 12ನೇ ತಾರೀಕು ಫ್ರೀಡಂ ಪಾರ್ಕ್ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು ತಾಲೂಕಿನಿಂದ ಸಾವಿರಾರು ಜನರು ಭಾಗವಹಿಸಬೇಕು ಎಂದು ಡಾ.ಬಾಬು ಜಗಜೀವನರಾಂ ವಿಚಾರ ವೇದಿಕೆ ಮಾಜಿ ಅಧ್ಯಕ್ಷ ಪಿ.ನಾಗರಾಜು ಕರೆ ನೀಡಿದರು.

ನಂತರ ಮಾತನಾಡಿದ ಅವರು ಮಾದಿಗ ಸಮುದಾಯ ಸುಮಾರು 35 ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡಿಕೊಂಡು ಬರುತ್ತಿದೆ. ಸರ್ಕಾರ ನೂರಾರು ಕೋಟಿ ಖರ್ಚು ಮಾಡಿ ಆಯೋಗಗಳನ್ನು ರಚನೆ ಮಾಡಿದೆ. ಕಾಂಗ್ರೆಸ್ ಸರ್ಕಾರ ಪ್ರಣಾಳಿಕೆಯಲ್ಲೂ ಕೂಡ ಒಳ ಮೀಸಲಾತಿ ಜಾರಿ ಮಾಡುತ್ತೇವೆ ಎಂದು ಹೇಳಿ ಆಯೋಗ ರಚನೆ ಮಾಡಿ ಅದರಂತೆ ಮೀಸಲಾತಿ ಹಂಚಿಕೆ ಮಾಡಿ ರಾಜ್ಯಪಾಲರ ಅಂಕಿತವೂ ಕೂಡ ಹಾಗಿದೆ. ಆದರೆ ಸರ್ಕಾರ ಇದನ್ನು ಜಾರಿ ಮಾಡುವಲ್ಲಿ ವಿಫಲವಾಗಿದೆ. ಈಗಾಗಲೇ ಸರ್ಕಾರ 56432 ಹುದ್ದೆಗಳನ್ನು ಕರೆದಿದ್ದು ಆ ಹುದ್ದೆಗಳಿಗೆ ಒಳ ಮೀಸಲಾತಿಯನ್ನು ಅಳವಡಿಸದೆ ಹುದ್ದೆಗಳನ್ನು ಭರ್ತಿ ಮಾಡುತ್ತಿರುವುದು ಮಾದಿಗ ಸಮುದಾಯಕ್ಕೆ ಮಾಡಿದ ದ್ರೋಹವಾಗಿದೆ ಇದನ್ನು ವಿರೋಧಿಸಿ ಮಾದಿಗ ಸಮುದಾಯ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾರ್ಚ್ 12ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಹೇಳಿದರು.



ಗರ್ಭಕಂಠ ಕ್ಯಾನ್ಸರ್ ನಿರೋಧಕ ಲಸಿಕಾ ಅಭಿಯಾನಕ್ಕೆ ಚಾಲನೆ

ಕಾಯಿಲೆ ತಡೆಗಟ್ಟಲು ಎಚ್‌ಪಿವಿ ಸಹಕಾರಿ

ಮೈಸೂರು: ಎಚ್‌ಪಿವಿ ಲಸಿಕೆಯು ಹ್ಯೂಮನ್ ಪ್ಯಾಪಿಲೋಮವೈರಸ್ ಸೋಂಕುಗಳಿಂದ ಉಂಟಾಗುವ ಗರ್ಭಕಂಠದ ಕ್ಯಾನ್ಸರ್, ಇತರ ಕೆಲವು ಕ್ಯಾನ್ಸರ್‌ಗಳಿಂದ ರಕ್ಷಿಸುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಕುಮಾರಸ್ವಾಮಿ ಪಿ.ಸಿ. ತಿಳಿಸಿದರು.

14 ವರ್ಷದ ಹೆಣ್ಣು ಮಕ್ಕಳಿಗೆ ಗರ್ಭಕಂಠ ಕ್ಯಾನ್ಸರ್ ನಿರೋಧಕ (ಎಚ್‌ಪಿವಿ) ಲಸಿಕಾ ಅಭಿಯಾನಕ್ಕೆ ಮಂಗಳವಾರ ನಗರದಲ್ಲಿ ಚಾಲನೆ ನೀಡಿ ಮಾತನಾಡಿ, ಎಚ್‌ಪಿವಿ ಲಸಿಕೆಯು ಹ್ಯೂಮನ್ ಪ್ಯಾಪಿಲೋಮವೈರಸ್ ಎಂಬ ವೈರಸ್‌ನಿಂದ ಉಂಟಾಗುವ ಕೆಲವು ಗಂಭೀರ ಕಾಯಿಲೆಗಳನ್ನು ತಡೆಗಟ್ಟಲು ಸಹಾಯ ಮಾಡುತ್ತದೆ. ಈ ಕಾಯಿಲೆಗಳಲ್ಲಿ ಗರ್ಭಕಂಠದ ಕ್ಯಾನ್ಸರ್, ಯೋನಿ, ಶಿಶ್ನ, ಗುದ ಮತ್ತು ಗಂಟಲು ಕ್ಯಾನ್ಸರ್ ಎಂಬ ವಿವಿಧ ಭಾಗದ ಕ್ಯಾನ್ಸರ್‌ಗಳಿದ್ದು ಎಚ್‌ಪಿವಿ ಲಸಿಕೆಯಿಂದ ತಡೆಗಟ್ಟಬಹುದಾಗಿದೆ. ಇದರಿಂದ ನಮ್ಮ ಹೆಣ್ಣುಮಕ್ಕಳ ಆರೋಗ್ಯ, ಈ ನಾಡಿ ಸುಭದ್ರೆತಯ ಭವಿಷ್ಯದ ಬೂನಾದಿಯಾಗಿದೆ ಎಂದರು. ಪ್ರಸ್ತುತ ಸದರಿ ಲಸಿಕೆಯನ್ನು14 ವರ್ಷ ತುಂಬಿದ ಹಾಗೂ 15 ವರ್ಷ ವಯಸ್ಸಿನ ಒಳಗಿನ ಹೆಣ್ಣು ಮಕ್ಕಳಿಗೆ ಭಾರತ ಸರ್ಕಾರದ ಮಾರ್ಗಸೂಚಿ ಅನುಸಾರ ನೀಡಲಾಗುವುದು ಹಾಗೂ ಸದರಿ ಲಸಿಕಾಕರಣವನ್ನು ರಾಷ್ಟ್ರೀಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಮಾರ್ಗಸೂಚಿ ಅನುಸಾರ ಆಯೋಜನೆ ಮಾಡಲಾಗುತ್ತಿದೆ. ಸದರಿ ಲಸಿಕೆಯ ಪ್ರಮುಖ ಫಲಾನುಭವಿಗಳು 14 ವರ್ಷದ ಎಲ್ಲಾ ಹೆಣ್ಣು ಮಕ್ಕಳಾಗಿದ್ದು. ಲಸಿಕಾಕರಣವನ್ನು ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ತಜ್ಞ ವೈದ್ಯರ ಮೂಲಕ ಲಸಿಕೆಯನ್ನು ನೀಡಲಾಗುವುದು ಎಂದರು. ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಮಹಮ್ಮದ್ ಸಿರಾಜ್ ಅಹಮ್ಮದ್, ಮೈಸೂರು ತಾಲ್ಲೂಕು ಆರೋಗ್ಯಾಧಿಕಾರಿ, ಡಾ. ಅರುಣಕುಮಾರ, ಆಡಳಿತ ವೈದ್ಯಾಧಿಕಾರಿ ಡಾ. ಅನುರಾಧ, ಹಾಗೂ ಎಸ್.ಎಂ.ಟಿ ಆಸ್ಪತ್ರೆ ತಜ್ಞ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ಇದ್ದರು.



ವಿದ್ಯಾರ್ಥಿಗಳಿಗೆ ಭರವಸೆ ತುಂಬುವ ಹಾಗೂ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ

ಏಕಾಗ್ರತೆಯಿಂದ ಓದಿದರೆ ಯಶಸ್ಸು ಸಾಧ್ಯ

ಚಾಮರಾಜನಗರ: ವಿದ್ಯಾರ್ಥಿಗಳು ಏಕಾಗ್ರತೆಯಿಂದ ವ್ಯಾಸಂಗ ಮಾಡಿದರೆ ಯಶಸ್ಸು ನಿಮ್ಮದಾಗುತ್ತದೆ. ಅತ್ಮವಿಶ್ವಾಸದಿಂದ ಕಠಿಣ ಅಭ್ಯಾಸ ಮಾಡಬೇಕು ಪರೀಕ್ಷೆ ಮಾಡುವ ಮೂಲಕ ಉನ್ನತ ಹುದ್ದೆಗಳಿಗೆ ಹೋಗುವ ಅವಕಾಶ ನಿಮ್ಮದಾಗುತ್ತದೆ ಎಂದು ದೀನಬಂಧು ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ. ಜಿ.ಎಸ್. ಜಯದೇವ್ ತಿಳಿಸಿದರು.

ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದಲ್ಲಿ ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆ ವತಿಯಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಭರವಸೆ ತುಂಬುವ ಹಾಗೂ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕಳೆದ ಒಂದು ವರ್ಷಗಳ ಕಾಲ ಓದಿ, ಶಿಕ್ಷಕರ ಪಾಠ ಪ್ರವಚನಗಳನ್ನು ಕೇಳುವ ಜೊತೆಗೆ ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸಬೇಕು. ಸದಾ ಕಾಲ ಓದುವ ಮತ್ತು ತಿಳಿದು ಕೊಳ್ಳುವ ಜಾಣ್ಮೆ ಮಾಡಬೇಕು. ಇಷ್ಟೊಂದು ಪ್ರಮಾಣದಲ್ಲಿ ಪರಿಶ್ರಮ ಇದ್ದರೆ ಯಶಸ್ಸು ಕಂಡಿತ ದೊರೆಯುತ್ತದೆ. ನಮಗೆ ನಾವೇ ಮೋಸ ಮಾಡಿಕೊಳ್ಳಬಾರದು. ನಮ್ಮ ಮನಸಾಕ್ಷಿಯನ್ನು ಪ್ರಶ್ನೆ ಮಾಡಿಕೊಳ್ಳಬೇಕು. ಅತ್ಮಸಾಕ್ಷಿ ವಿರುದ್ದವಾಗಿ ಏನೇ ಕೆಲಸ ಮಾಡಿದರು ಅಪರಾಧವಾಗುತ್ತದೆ ಎಂದರು.



ಮನುಷ್ಯ ನಿಗೆ ದುರಾಸೆ ಇದೆ ಅನೇಕ ಮತ್ತೊಬ್ಬರಿಗೆ ತೊಂದರೆ ಅಗುತ್ತದೆ. ದೇಷದ ಭಾವನೆ ಬಂದರೆ ಎಲ್ಲವು ಪ್ರತೀಕಾರ ಮಾಡಬಾರದು ದ್ವೇಷದಿಂದ ಏನು ಸಾಧ್ಯವಿಲ್ಲ ಬುದ್ಧ ಜಗತ್ತಿಗೆ ಪ್ರೀತಿ ಹಂಚಿದೆ. ಪ್ರೀತಿಯಿಂದ ಮಾತ್ರ ಪ್ರಪಂಚ ಗೆಲ್ಲಲು ಸಾಧ್ಯ ಏಕಾಗ್ರತೆ ಇರಬೇಕು ಮನಸ್ಸು ನಿರ್ಮಲವಾಗಿರಬೇಕು. ಉತ್ತಮ ವಾತಾವರಣ ನಿರ್ಮಿಸಿಕೊಳ್ಳಬೇಕು ಎಂದರು.

ಯಾವುದೇ ಧರ್ಮ ದ್ವೇಷ ಮಾಡು, ಕೊಲ್ಲು ಎಂದು ಹೇಳುವುದಿಲ್ಲ, ದಯವೇ ಧರ್ಮದ ಮೂಲವಾಗಿದೆ. ಎಲ್ಲಾ ಧರ್ಮಗಳು ಜಗತ್ತಿಗೆ ಒಳ್ಳೆಯದನ್ನೇ ಸಾರಿಯುತ್ತವೆ. ಈಗ ನಡೆಯುತ್ತಿರುವ ಯುದ್ಧ ನೋಡಿದರೆ ಮನುಕುಲವೇ ಭಯ ಪಡುವಂತಾಗಿದೆ. ಸ್ವಾರ್ಥ ತುಂಬಿ ಹೋಗಿದೆ. ಹೀಗಾಗಿ ಇಂಥ ಯುದ್ಧ ನೋಡಿದರೆ ಅರ್ಥವಾಗುತ್ತದೆ. ಇದೆಲ್ಲಕ್ಕು ಮೀರಿ ಪ್ರೀತಿಯಿಂದ ಮಾತ್ರ ಗೆಲ್ಲಲು ಸಾಧ್ಯವಿದೆ ಎಂದರು.

ಡಯಟ್ ಕಾಲೇಜಿನ ಪ್ರಾಂಶುಪಾಲ ಕಾಶಿನಾಥ್ ಮಾತನಾಡಿ, ವಿದ್ಯಾರ್ಥಿಗಳು ಶಿಸ್ತಿನಿಂದ ಓದುವ ಜತೆಗೆ ಉನ್ನದ ದರ್ಜೆಯಲ್ಲಿ ವ್ಯಾಸಂಗ ಮಾಡಬೇಕು. ಎಸ್‌ಎಸ್‌ಎಲ್‌ಸಿ ಯಲ್ಲಿ ಉತ್ತಮ ಅಂಕವನ್ನು ಪಡೆದು ಮುಂದೆ ಭವಿಷ್ಯವನ್ನು ರೂಪಿಸಿಕೊಳ್ಳಲು ಮುಂದಾಗಬೇಕು. ಇಂಥ ಅವಕಾಶಗಳು ಒಮ್ಮೆ ಬರುವುದು. ಸಮರ್ಥವಾಗಿ ನಿಭಾಯಿಸಿ, ಯಶಸ್ವಿಯಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪ ಪ್ರಾಂಶುಪಾಲರಾದ ಶೀಲಾ ರಾಣಿ, ಜೆಎಸ್‌ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸಿದ್ದರಾಜು, ಹಾಗೂ ಶಿಕ್ಷಕ ವೃಂದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಆನಂದ ಅನುಭೂತಿ ಶಿಬಿರ ನಾಳೆ



• **ಮಂಡ್ಯ:** ಆರ್ಟ್ ಆಫ್ ಲೀವಿಂಗ್ ಬೆಂಗಳೂರು ವತಿಯಿಂದ ಮಾ. 12ರಿಂದ 15ರವರೆಗೆ ನಿತ್ಯ ಬೆಳಗ್ಗೆ 6 ರಿಂದ 8 ಹಾಗೂ ಸಂಜೆ 6 ರಿಂದ 8ಗಂಟೆ ವರೆಗೆ ನಗರದ ಯೋಗಿನಾರೇಯಣ ಸಮುದಾಯ ಭವನದಲ್ಲಿ ಆನಂದ ಅನುಭೂತಿ ಶಿಬಿರ ನಡೆಯಲಿದೆ ಎಂದು ಆಶ್ರಮದ ಶಿಕ್ಷಕ ವಿ. ತ್ಯಾಗರಾಜು ತಿಳಿಸಿದರು. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಶ್ರೀ ರವಿಶಂಕರ ಗುರೂಜಿ ಅವರಿಂದ ಸ್ಥಾಪಿಸಲ್ಪಟ್ಟ ದಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ವಿಶ್ವದ 186 ದೇಶಗಳಲ್ಲಿ ಯಾವುದೇ ಜಾತಿ, ಮತ ಬೇದವಿಲ್ಲದೆ ಯೋಗ, ಪ್ರಾಣಾಯಾಮ, ಧ್ಯಾನ, ಸುದರ್ಶನಕ್ರಿಯಾ ಹಾಗೂ ಶಾಂತಿ ಸಂದೇಶದ ಮೂಲಕ ಒತ್ತಡಮುಕ್ತಫಿ, ಹಿಂಸಾ ಮುಕ್ತ ಸಮಾಜ ಹಾಗೂ ಪ್ರತಿಯೊಬ್ಬರ ಮುಖದಲ್ಲಿ ಮುಗುಳ್ನಗೆ ತರುವುದು ನಮ್ಮ ಧ್ಯೇಯವಾಗಿದೆ ಎಂದು ತಿಳಿಸಿದರು. ಸಂಸ್ಥೆಯ 45ನೇ ವಾರ್ಷಿಕೋತ್ಸವದ ಅಂಗವಾಗಿ ಕರ್ನಾಟಕದ ಪ್ರತಿ ನಗರ ಹಾಗೂ ಹಳ್ಳಿಯಲ್ಲೂ ಈ ಜ್ಞಾನ ತಲುಪಬೇಕೆಂಬ ಉದ್ದೇಶದಿಂದ ಆನಂದ ಅನುಭೂತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಸುದರ್ಶನ ಕ್ರಿಯೆ ಅಭ್ಯಾಸ ಮಾಡುವುದರಿಂದ ಒತ್ತಡ, ಆತಂಕ, ಭಯ, ಖಿನ್ನತೆ, ರಕ್ತದೊತ್ತಡ, ಅಸ್ತಮಾ, ಸಕ್ಕರೆ ಕಾಯಿಲೆ ಇನ್ನೂ ಹಲವಾರು ತೊಂದರೆಗಳು ನಿವಾರಣೆಯಾಗಲಿವೆ ಎಂದು ವಿವರಿಸಿದರು. ಯೋಗ ಶಿಕ್ಷಕರಾದ ಸುಧಾಕರ್, ಪದ್ಮಾ ಶ್ರೀನಿವಾಸ್, ಶ್ರೀಲಕ್ಷ್ಮಿ ಗೋಷ್ಠಿಯಲ್ಲಿದ್ದರು.

ಮಾ.29ಕ್ಕೆ ಕವಿ ಕಾವ್ಯ ಮೇಳ

• **ಮಂಡ್ಯ:** ಕಸ್ತೂರಿ ಸಿರಿಗನ್ನಡ ವೇದಿಕೆ ವತಿಯಿಂದ ಮಾ. 29ರಂದು ನಗರದ ಗಾಂಧಿ ಭವನದಲ್ಲಿ ರಾಜ್ಯಮಟ್ಟದ ಅಖಿಲ ಕರ್ನಾಟಕ ಕವಿ ಕಾವ್ಯ ಮೇಳವನ್ನು ಹಮ್ಮಿಕೊಂಡಿದ್ದು, ಆಸಕ್ತ ಕವಿ-ಕವಯತ್ರಿಯರು ಮಾ. 18ರೊಳಗೆ ತಮ್ಮ ಹೆಸರನ್ನು ಕೆಳಕಂಡ ವಿಳಾಸಕ್ಕೆ ಮತ್ತು ಮೊಬೈಲ್ ನಂಬರ್‌ಗೆ ಕರೆ ಮಾಡಿ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ. ಇದೇ ಸಂದರ್ಭದಲ್ಲಿ ವೇದಿಕೆಯ ವಾರ್ಷಿಕೋತ್ಸವ ಸಮಾರಂಭ ನಡೆಯುವುದರಿಂದ ರಾಜ್ಯದ ವಿವಿಧೆಡೆ ಸಾಧನೆ ಮಾಡುವ ಸಾಧಕರಿಗೆ ಪ್ರಶಸ್ತಿಯನ್ನು ವಿತರಿಸಲಾಗುವುದು ಎಂದು ವೇದಿಕೆ ರಾಜ್ಯಾಧ್ಯಕ್ಷ ಪೋತೇರ ಮಹದೇವು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಪೋತೇರ ಮಹದೇವು, ಹುಲಿವಾನ ಅಂಚೆ, ಕೆರಗೋಡು ಹೋಬಳಿ, ಮಂಡ್ಯ ತಾಲೂಕು ಮತ್ತು ಜಿಲ್ಲೆ ಮೊ : 9739693599 ಸಂಖ್ಯೆಯನ್ನು ಸಂಪರ್ಕಿಸುವಂತೆ ಅವರು ತಿಳಿಸಿದ್ದಾರೆ.

ರೈತರಿಗೆ ಮತ್ತಷ್ಟು ಸಂಕಷ್ಟ

• **ಪಾಂಡವಪುರ:** ಮಹಾರಾಷ್ಟ್ರದಂತೆ ಕರ್ನಾಟಕದಲ್ಲೂ ರೈತ ಬಜೆಟ್ ಮಂಡನೆ ಮಾಡದೇ ರಾಜ್ಯ ಸರ್ಕಾರ ರೈತರ ತುಟಿಗೆ ತುಪ್ಪ ಸವರುವ ಕೆಲಸ ಮಾಡಿದೆ ಎಂದು ಜೆಡಿಎಸ್ ಮುಖಂಡ ಪಿ.ರವೀಂದ್ರ ಕ್ಯಾತನಹಳ್ಳಿ ದೂರಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿ, ಬಜೆಟ್‌ನಲ್ಲಿ ರಾಜ್ಯದ ರೈತರ ಹಿತ ಕಾಪಾಡಬೇಕಾದ ರಾಜ್ಯ ಸರ್ಕಾರ ರೈತರ ತುಟಿಗೆ ಮಾತ್ರ ತುಪ್ಪ ಸವರಿ ರೈತ ಸಂಕುಲವನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿದ್ದಾರೆ ಎಂದು ಕಿಡಿಕಾರಿದ್ದಾರೆ. ರಾಜ್ಯದ ರೈತರು ಹಲವು ಸಂಕಷ್ಟಗಳನ್ನು ಎದುರಿಸಿ ಬೆಳೆಗಳನ್ನು ಬೆಳೆದಿದ್ದರೂ ನಷ್ಟದಲ್ಲಿದ್ದಾರೆ. ಈ ನಡುವೆ ಏರುತ್ತಿರುವ ಕೀಟನಾಶಕ, ಗೊಬ್ಬರ ಬೆಲೆಗಳ ನಡುವೆ ಬೆಳೆಗಳನ್ನು ಉಳಿಸಿಕೊಳ್ಳುವುದೇ ಕಷ್ಟ. ಇಂತಹದ್ದರಲ್ಲಿ ಬೆಳೆ ಉಳಿಸಿಕೊಳ್ಳಬೇಕೆಂಬ ರೈತರ ಮಹದಾಸೆಗೆ ಬಿಸಿಲು, ಏರುತ್ತಿರುವ ತಾಪಮಾನ ಕೊಡಲಿ ಪೆಟ್ಟುಕೊಟ್ಟಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ರೈತ ಸಮುದಾಯವನ್ನು ಉಳಿಸಿಕೊಳ್ಳಬೇಕೆಂಬ ಮಹದಾಸೆಯಿಂದ ಮಹಾರಾಷ್ಟ್ರ ಸರ್ಕಾರ ಆ ರಾಜ್ಯದ ರೈತರ 2 ಲಕ್ಷ ರೂ.ವರೆಗಿನ ಸಾಲವನ್ನು ಮನ್ನಾ ಮಾಡಿ ಬಜೆಟ್‌ನಲ್ಲಿ ಘೋಷಿಸಿದೆ. ಮಹಾರಾಷ್ಟ್ರ ಸರ್ಕಾರಕ್ಕೆ ರೈತರ ಬೆಲೆ ಗೊತ್ತು. ಆದರೆ, ಕರ್ನಾಟಕ ಸರ್ಕಾರ ಮಾತ್ರ ರೈತರ ಸಂಕಷ್ಟಕ್ಕೆ ಮಾತ್ರ ಮರುಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಯೋಜನೆಗಳನ್ನು ಕೊಡದಿದ್ದರೆ ಶೀಘ್ರದಲ್ಲಿ ಬೀದಿಗಿಳಿದು ಹೋರಾಟ ನಡೆಸಬೇಕಾದ ದಿನಗಳು ದೂರವಿಲ್ಲ. ಕೂಡಲೇ ಎಚ್ಚೆತ್ತು ಕೊಂಡು ಶೀಘ್ರ ರಾಜ್ಯದ ರೈತರ 5 ಲಕ್ಷ ರೂ. ವರೆಗಿನ ಸಾಲವನ್ನು ಮನ್ನಾ ಮಾಡಬೇಕು. ಇಲ್ಲವಾದಲ್ಲಿ ಹೋರಾಟ ಅನಿವಾರ್ಯ ಎಂದು ಎಚ್ಚರಿಕೆ ನೀಡಿದ್ದಾರೆ.

ಅಪರಿಚಿತ ಶವ ಪತ್ತೆ

• **ಶ್ರೀರಂಗಪಟ್ಟಣ:** ತಾಲೂಕಿನ ಗಣಂಗೂರು ಗ್ರಾಮದ ಬಳಿ ಮಂಡ್ಯ-ಮೈಸೂರು ಕಡೆಯ ಸರ್ವಿಸ್ ರಸ್ತೆ ಅಪರಿಚಿತ ಗಂಡಸಿನ ಶವ ಪತ್ತೆಯಾಗಿರುವ ಬಗ್ಗೆ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮೃತ ವ್ಯಕ್ತಿ ಸುಮಾರು 35-40 ವರ್ಷ ವಯಸ್ಸಿನವರಾಗದಿದು, 5.3 ಅಡಿ ಎತ್ತರ, ಸಣ್ಣ ಶರೀರ, ಕಪ್ಪುಬಣ್ಣ ಪ್ಯಾಂಟ್, ಹೂ ಚಿತ್ರವಿರುವ ಶರ್ಟ್ ಅನ್ನು ಧರಿಸಿರುತ್ತಾರೆ. ಮೃತ ವಾರಸುದಾರರ ಮಾಹಿತಿ ದೊರೆತಲ್ಲಿ ಮೊ. 9480804875 / 08232224888 ಅನ್ನು ಸಂಪರ್ಕಿಸುವಂತೆ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯ ಸಬ್ ಇನ್ಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮದ್ದೂರು ತಾಲೂಕಿನ ತೊಪ್ಪನಹಳ್ಳಿ ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಎಂ. ಉದಯ ಗುದ್ದಲಿ ಪೂಜೆ ನೆರವೇರಿಸಿದರು.

ಮಹಿಳೆಯರ ಪಾತ್ರ ಅಪಾರ

• **ಪಾಂಡವಪುರ:** ಮಹಿಳೆಯರ ರಕ್ಷಣೆಗಾಗಿ ದೇಶದಲ್ಲಿ ಹಲವಾರು ಕಾನೂನಗಳಿವೆ. ಆದರೆ ಅದನ್ನು ಮಹಿಳೆಯರು ಯಾವುದೇ ಕಾರಣಕ್ಕೂ ದುರುಪಯೋಗಪಡಿಸಿಕೊಳ್ಳದೇ ಸದುಪಯೋಗ ಮಾಡಿಕೊಳ್ಳಬೇಕು ಎಂದು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಆರ್. ಮಹೇಶ್ ಹೇಳಿದರು. ಪಟ್ಟಣದ ಜೆಎಂಎಫ್ ಸಿ ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘದಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ತೋರಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ದೌರ್ಜನ್ಯಗಳ ಜತೆಗೆ ಪುರುಷರಿಗೆ ತೊಂದರೆ ನೀಡುವಂತಹ ಪ್ರಕರಣಗಳೇ ಹೆಚ್ಚಾಗಿ ನ್ಯಾಯಾಲಯಕ್ಕೆ ಬರುತ್ತಿವೆ. ಹೀಗಾಗಿ ಇಂತಹ ಪ್ರಕರಣಕ್ಕೆ ಮಹಿಳೆಯರು ಕಡಿವಾಣ ಹಾಕಬೇಕು ಎಂದು ಸಲಹೆ ನೀಡಿದರು. ಪ್ರಧಾನ ಸಿವಿಲ್ ನ್ಯಾಯಾಧೀಶೆ ಬಿ.ಪಾರ್ವತಮ್ಮ ಮಾತನಾಡಿ, ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಪಾತ್ರ ಅಪಾರವಾಗಿದೆ. ಶಿಕ್ಷಣ, ರಾಜಕೀಯ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡಿದ್ದಾರೆ. ಜತೆಗೆ ಕುಟುಂಬದ ನಿರ್ವಹಣೆಯಲ್ಲೂ ಮುಖ್ಯ ಪಾತ್ರ ನಿರ್ವಹಿಸುತ್ತಿದ್ದಾರೆ. ಆದರೆ ಹೆಣ್ಣು ಹಠಮಾರಿ ಧೋರಣೆ ಕೈಬಿಡಬೇಕು. ಇದೇ ವೇಳೆ ಕನ್ನಿಕ ಶಿಲ್ಪ ನಮೋದಯ ಎಜುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿ ಎಚ್.ಆರ್. ಕನ್ನಿಕ ಹಾಗೂ ನ್ಯಾಯಾಧೀಶೆ ಬಿ.ಪಾರ್ವತಮ್ಮ ಅವರನ್ನು ಮಹಿಳಾ ದಿನಾಚರಣೆ ಪ್ರಯುಕ್ತ ಸನ್ಮಾನಿಸಿ ಗೌರವಿಸಲಾಯಿತು. ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ಎನ್.ಬಾಬು ಮಾತನಾಡಿದರು.



ಪಾಂಡವಪುರ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘದಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಕನ್ನಿಕ ಶಿಲ್ಪ ನಮೋದಯ ಎಜುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿ ಎಚ್.ಆರ್.ಕನ್ನಿಕ ಹಾಗೂ ನ್ಯಾಯಾಧೀಶೆ ಬಿ.ಪಾರ್ವತಮ್ಮ ಅವರನ್ನು ಸನ್ಮಾನಿಸಲಾಯಿತು.

ಗ್ಯಾಸ್ ಸಿಲಿಂಡರ್ ದರ ಏಕಾಏಕಿ ಹೆಚ್ಚಳ: ಕಾರ್ಯಕರ್ತರಿಂದ ಧರಣಿ

ಕಾಂಗ್ರೆಸ್ ಪ್ರತಿಭಟನೆ

• **ಮಂಡ್ಯ:** ಗ್ಯಾಸ್ ಸಿಲಿಂಡರ್ ದರವನ್ನು ಏಕಾಏಕಿ ಹೆಚ್ಚಳ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಮಹಿಳಾ ಕಾಂಗ್ರೆಸ್ ಘಟಕದ ಕಾರ್ಯಕರ್ತರು ಪ್ರತಿಭಟನಾ ಧರಣಿ ನಡೆಸಿದರು.

ನಗರದ ಸರ್ ಎಂ. ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗ ಧರಣಿ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, 'ತೊಲಗಲಿ ತೊಲಗಲಿ ಕೇಂದ್ರದ ಬಿಜೆಪಿ ಸರ್ಕಾರ ತೊಲಗಲಿ' ಎಂದು ಘೋಷಣೆ ಕೂಗಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ ಅವರು ಮಾತನಾಡಿ, ಕೇಂದ್ರದ ನರೇಂದ್ರ ಮೋದಿ ಸರ್ಕಾರವು ಎಲ್ಲ ಕ್ಷೇತ್ರಗಳಲ್ಲೂ ಬೆಲೆಗಳನ್ನು ಹೆಚ್ಚಳ ಮಾಡಿ ಬಡ ಜನತೆಯನ್ನು ಅತ್ಯಂತ ಕಷ್ಟ ಕಾಲದ ಆರ್ಥಿಕ ದುಸ್ಥಿತಿಗೆ ತಳ್ಳಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಕೇವಲ 400 ರೂ. ಇದ್ದ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಏಕಾಏಕಿ 1,100 ರೂ. ಹೆಚ್ಚಿಸಿದ್ದನ್ನು ನೆನಪಿಸಿಕೊಳ್ಳಬಹುದು. ಅದನ್ನು ಪ್ರತಿಭಟಿಸಿ ಕಾಂಗ್ರೆಸ್ ದೇಶದ ಉದ್ದಗಲಕ್ಕೂ ಬೀದಿಗಿಳಿದು ಪ್ರತಿಭಟಿಸಿದರ ಪರಿಣಾಮ ಸಿಲಿಂಡರ್ ಬೆಲೆಯಲ್ಲಿ 200 ರೂ. ಕಡಿಮೆ ಮಾಡುವ ನಾಟಕವಾಡಿತ್ತು. ಆದರೆ, ಈಗ ಮತ್ತೆ ವಿನಾಕಾರಣ ಪ್ರತಿ ಸಿಲಿಂಡರ್ ಬೆಲೆಯಲ್ಲಿ ಒಮ್ಮೆಲೇ 60 ಹೆಚ್ಚಿಸಿ ಬಡಜನತೆಯ ಮೇಲೆ ಅನ್ಯಾಯದ ಆರ್ಥಿಕ ಹೊರೆಯನ್ನು ಹೇರಿದೆ. ಅಲ್ಲದೆ, ವಾಣಿಜ್ಯ ಸಿಲಿಂಡರ್ ಬೆಲೆಯನ್ನು 115 ರೂ. ಹೆಚ್ಚಿಸಿದೆ. ಕೂಡಲೇ ಕೇಂದ್ರ ಸರ್ಕಾರ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಇಳಿಸಬೇಕು ಎಂದು ಆಗ್ರಹಿಸಿದರು.



> ಕೇಂದ್ರ ಸರ್ಕಾರವು ದಿನೇ ದಿನೇ ಗ್ಯಾಸ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಮೇಲೆ ದಬ್ಬಾಳಿಕೆ ಮಾಡುತ್ತಿದೆ. ಬಡವರು ಅಡುಗೆ ಮಾಡದಂತಹ ಸ್ಥಿತಿಯನ್ನು ನಿರ್ಮಿಸಿದ್ದಾರೆ. ಅಚ್ಛೇ ದಿನ್ ತರುತ್ತೇವೆ ಎಂದವರು ಇಂದು ಪ್ರತಿಯೊಬ್ಬರ ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ ಎಂದು ಕಿಡಿಕಾರಿದರು.
> ■ ಬಿ.ಪಿ.ಪ್ರಕಾಶ್ , ಮುಡಾ ಅಧ್ಯಕ್ಷ

ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಎಚ್.ಬಿ. ಶುಭದಾಯಿನಿ ಮಾತನಾಡಿ, ನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆಯಾದರೆ ಬಡವರು ಮತ್ತು ಮಧ್ಯಮ ವರ್ಗದವರು ಜೀವನ ಮಾಡುವುದು ಹೇಗೆ? ತಕ್ಷಣವೇ ಈ ಬೆಲೆ ಏರಿಕೆಯನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ರಾಜ್ಯದ ಮಹಿಳೆಯರು ಮತ್ತು ಜನತೆ ಬರುವ ದಿನಗಳಲ್ಲಿ ಬಿಜೆಪಿಗೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಕಾಂಗ್ರೆಸ್ ಮುಖಂಡರಾದ ಚಂದಗಾಲು ವಿಜಯ್ ಕುಮಾರ್, ಸುಂಡಹಳ್ಳಿ ಮಂಜುನಾಥ್, ಅಜ್ಜಹಳ್ಳಿ ರಾಮಕೃಷ್ಣ, ಚನ್ನಪ್ಪ, ಚಿನಕುರಳಿ ರಮೇಶ್, ಎಲ್. ಕೃಷ್ಣ, ಹನ್ನಿಯಾ ಬಾನು, ಕೃಷ್ಣೇಗೌಡ, ಅಭಿಲಾಷ್, ನಾಗಮಣಿ ಸೇರಿದಂತೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು, ಮಹಿಳಾ ಘಟಕದ ಸದಸ್ಯರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಮೈಲಾರಲಿಂಗೇಶ್ವರ ಜಾತ್ರೆಗೆ ಹರಿದುಬಂದ ಭಕ್ತ ಸಾಗರ



• **ಕೃಷ್ಣರಾಜಪೇಟೆ:** ತಾಲೂಕಿನ ಶ್ರೀ ಏಳು ಕೋಟಿ ಮೈಲಾರಲಿಂಗೇಶ್ವರ ಶ್ರೀಗಂಗೆ ಮಾಳಮ್ಮ ಹಾಗೂ ಕ್ಷೇತ್ರ ಪಾಲಕ ದೂತರಾಯ ದೇವಸ್ಥಾನದ ನಾಲ್ಕನೇ ವರ್ಷದ ಜಾತ್ರಾ ಮಹೋತ್ಸವವು ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನಡೆಯಿತು.

ಮೈಲಾರ ಸುಕ್ಷೇತ್ರದ ಶ್ರೀ ಗುರುಕಪಿಲಮುನಿ ಸಿಂಹಾಸನಾದಿಪತಿ ಶ್ರೀ ವೆಂಕಪ್ಪಯ್ಯ ಒಡೆಯರ್ ಗುರುಗಳು ಹಾಗೂ ಬೇಬಿ ಬೆಟ್ಟದ ಶ್ರೀ ರಾಮ ಯೋಗೇಶ್ವರ ಮಠದ ಶ್ರೀ ಶಿವಬಸವ ಸ್ವಾಮಿಗಳನ್ನು ಬೆಳ್ಳಿ ಸಾರೋಟಿನಲ್ಲಿ ಕುಳ್ಳಿರಿಸಿ ಜಾನಪದ ಕಲಾತಂಡಗಳ ವೈಭವದ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಕರೆತರಲಾಯಿತು.

ಕಂಚಿ ಮೀರಿದ ಸರಪಳಿ ಪವಾಡ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಾಸಕ ಎಚ್.ಟಿ. ಮಂಜು ಮಾತನಾಡಿ, ಹಬ್ಬ ಹರಿದಿನಗಳು ಹಾಗೂ ಜಾತ್ರೆ ಉತ್ಸವಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಮೈಲಾರ ಲಿಂಗೇಶ್ವರ ಸುಕ್ಷೇತ್ರವು ವರ್ಷದಿಂದ ವರ್ಷಕ್ಕೆ ಸಾವಿರಾರು ಭಕ್ತಾದಿಗಳನ್ನು ನಾಡಿನ ವಿವಿಧ ಭಾಗಗಳಿಂದ ಬರಮಾಡಿಕೊಳ್ಳುತ್ತಿದ್ದು 10 ಸಾವಿರಕ್ಕೂ ಹೆಚ್ಚಿನ ಭಕ್ತಾದಿಗಳು ಮೂರು ದಿನಗಳ ಕಾಲ ನಡೆದ ನಾಲ್ಕನೇ ವರ್ಷದ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಅನ್ನದಾಸೋಹ ಪ್ರಸಾದವನ್ನು ಸ್ವೀಕರಿಸಿ ಧನ್ಯತಾ ಭಾವನೆಯನ್ನು ಮೆರೆದಿದ್ದಾರೆ. ಹಬ್ಬದ ಸಂಭ್ರಮದಲ್ಲಿ ಶ್ರೀ ಕ್ಷೇತ್ರಕ್ಕೆ ಆಗಮಿಸುವ ಎಲ್ಲಾ ಜಾತಿ ವರ್ಗಗಳ ಜನರು ಶ್ರೀ ಕ್ಷೇತ್ರದ ಭಕ್ತರಾಗಿ ತಮ್ಮ ಮನದ ಕೋರಿಕೆಗಳನ್ನು ಈಡೇರಿಸುವಂತೆ ಮೈಲಾರಲಿಂಗೇಶ್ವರ ಗಂಗೆ ಮಾಳಮ್ಮ ಹಾಗೂ ಕ್ಷೇತ್ರ ಪಾಲಕನಾದ ದೂತರಾಯ ಸ್ವಾಮಿಯಲ್ಲಿ ನಿವೇದನೆ ಮಾಡಿಕೊಂಡು ಭಕ್ತಿಯ ಪರಾಕಾಷ್ಠೆಯನ್ನು ಪ್ರದರ್ಶಿಸಿದ್ದಾರೆ ಎಂದರು.

ಟಿಎಪಿಸಿಎಂಎಸ್ ನಿರ್ದೇಶಕ ಹೆಚ್.ಟಿ.ಲೋಕೇಶ್, ಹಿರಿಯ ಪತ್ರಕರ್ತ ಕೆ.ಆರ್. ನೀಲಕಂಠ, ಉದ್ಯಮಿ ಜಗದಾಂಭ ಹೊನ್ನಾವರ ಚಂದ್ರಶೇಖರ್, ಡಿ.ಪಿ.ಸ್ವಾಮಿ ಗೌಡ, ಆರ್. ಪಿ.ರೇವಣ್ಣ, ಆನೇಕಲ್ ತಾಲೂಕಿನ ತಹಶೀಲ್ದಾರ್ ನವೀನ್ ಕುಮಾರ್, ದಾನಿಗಳಾದ ಲಕ್ಷ್ಮಣ್, ಗೀತಾ ಗಾರ್ಮೆಂಟ್ಸ್ ಈರಪ್ಪ, ಲಕ್ಷ್ಮಿ ಗಾಣದ ಎಣ್ಣೆಯ ಕೆ.ಆರ್.ಮಹೇಶ್ ಕ್ಯಾಂಟೀನ್ ರಾಮಣ್ಣ, ನಳಿನಾ ದೊರೇಶ್, ಯೋಗೇಶ್ ಗೌಡ ಭಾಗವಹಿಸಿದ್ದರು.

ಶಾಲೆಗಳ ಉಳಿವಿಗೆ ಕ್ರಮ ವಹಿಸಿ



ಮಂಡ್ಯ: ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿ ಶೋಚನೀಯವಾಗಿದ್ದು, ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಶಾಲೆಗಳನ್ನು ಉಳಿಸಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಕನ್ನಡಸಂಘಟನೆಗಳಕಾರ್ಯಕರ್ತರೊಂದಿಗೆ ಜಿಲ್ಲಾಡಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ವಾಟಾಳ್ ನಾಗರಾಜು ಅವರು, ಸರ್ಕಾರ ಹಾಗೂ ಜನಪ್ರತಿನಿಽಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಅವರು, ಕನ್ನಡಿಗರ ತೆರಿಗೆ ಹಣದಲ್ಲಿ ಆಡಳಿತ ನಡೆಸುವ ಸರ್ಕಾರಕ್ಕೆ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಲು ಯೋಗ್ಯತೆ ಇಲ್ಲವೇ? ಕಳೆದ 30 ವರ್ಷಗಳಿಂದ ಕನ್ನಡ ಶಾಲೆಗಳನ್ನು ಹಂತ ಹಂತವಾಗಿ ಕಗ್ಗೊಲೆ ಮಾಡಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದರು. ಕನ್ನಡ ಶಾಲೆಗಳಿಗೆ ಅನುದಾನ ನೀಡಲು ಸರ್ಕಾರದ ಬಳಿ ಹಣವಿಲ್ಲವೇ? 30 ವರ್ಷಗಳಿಂದ ಕನ್ನಡ ಶಾಲೆಗಳನ್ನು ಕತ್ತಲೆಯಲ್ಲೇ ಇಟ್ಟಿದ್ದೀರಿ. ಶಾಲಾ ಕಟ್ಟಡಗಳು ಕುಸಿದು ಬೀಳುತ್ತಿವೆ, ಶಿಕ್ಷಕರ ಕೊರತೆಯಿದೆ. ಕೂಡಲೇ ವಿಶೇಷ ಪ್ಯಾಕೇಜ್ ಮೂಲಕ ಕನ್ನಡ ಮಾಧ್ಯಮ ಶಾಲೆಗಳನ್ನು ಸಬಲೀಕರಣಗೊಳಿಸಬೇಕು ಎಂದು ಒತ್ತಾಯಿಸಿದರು.

ನಮ್ಮ ಈ ಎಚ್ಚರಿಕೆಯನ್ನು ಸರ್ಕಾರ ಹಗುರವಾಗಿ ಪರಿಗಣಿಸಿದರೆ ತಕ್ಕ ಶಾಸ್ತಿ ಕಾಯ್ದಿದೆ. ಮಾ.12ರಂದು ಇಡೀ ರಾಜ್ಯಾದ್ಯಂತ ಕನ್ನಡ ಶಾಲೆಗಳ ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಲಾಗುವುದು. ಅಂದು ಮಂಡ್ಯದಲ್ಲಿ ನಾವು ಹೆದ್ದಾರಿ ತಡೆ ನಡೆಸಲಿದ್ದೇವೆ. ಇಡೀ ಸಾರಿಗೆ ವ್ಯವಸ್ಥೆ ಸ್ಥಗಿತಗೊಳಿಸಿ ಕ್ರಾಂತಿ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕನ್ನಡ ಸೇನೆಯ ಜಿಲ್ಲಾಧ್ಯಕ್ಷ ಮಂಜುನಾಥ್, ಹನಿಯಂಬಾಡಿ ಪಾರ್ಥಸಾರಥಿ, ಗಿರೀಶ್ ಗೌಡ, ಜಗದೀಶ್, ಗಂಗಾಧರ್, ಖಲೀಮ್, ಸೌಭಾಗ್ಯ, ಎಂ.ಎಸ್. ಮಂಜುನಾಥ್, ಪ್ರಸನ್ನ ಹಾಗೂ ಜಿಲ್ಲೆಯ ಕನ್ನಡ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದೊಡ್ಡಮ್ಮತಾಯಿ ಹಬ್ಬದಲ್ಲಿ ತಂಬಿಟ್ಟಿನ ಆರತಿ

• **ಮಂಡ್ಯ:** ತಾಲ್ಲೂಕಿನ ಹೊಳಲು ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀ ದೊಡ್ಡಮ್ಮತಾಯಿ ಹಬ್ಬವು ಬಹಳ ವಿಜೃಂಭಣೆಯಿಂದ ಅಪಾರ ಭಕ್ತರ ಸಮ್ಮುಖದಲ್ಲಿ ಮಂಗಳವಾರ ನೆರವೇರಿತು.

ಗ್ರಾಮದ ಮಕ್ಕಳು, ಮಹಿಳೆ ಎಲ್ಲರೂ ಸೇರಿ ಗ್ರಾಮದ ದೇವಸ್ಥಾನಗಳಾದ ಮುದ್ದಮ್ಮ ದೇವಿ, ಮಾರಮ್ಮ ದೇವಿ, ಶ್ರೀ ದೊಡ್ಡಮ್ಮತಾಯಿ ದೇವಸ್ಥಾನಕ್ಕೆ ತೆರಳಿ ಬಾಯಿ ಬೀಗ ಹಾಕಿಕೊಂಡು ತಮಟೆ ನಗಾರಿಯೊಂದಿಗೆ ತಂಬಿಟ್ಟಿನ ಆರತಿ ಬೆಳಗಿದರು. ತಮ್ಮ ಹರಕೆ ತೀರಿಸಿದರು. ಹಬ್ಬದ ಪ್ರಯುಕ್ತ ಶ್ರೀ ದೊಡ್ಡಮ್ಮ ತಾಯಿಗೆ ವಿಶೇಷ ಹೂವಿನ ಅಲಂಕಾರ ಹಾಗೂ ಮಹಾಮಂಗಳಾರತಿ ನೆರವೇರಿಸಿ ಪ್ರಸಾದ ವಿನಿಯೋಗ ಮಾಡಲಾಯಿತು. ಮಡಿವಾಳ ಮಾಚಿದೇವರ ಸಮುದಾಯದವರು ಬಾಯಿ ಬೀಗ ಧರಿಸಿ ಹರಕೆ ಹೊತ್ತ ಮಹಿಳೆಯರಿಗೆ (ಕಾಲ್ನಡಿಗೆಯಲ್ಲಿ ಬರುವ ಮಹಿಳೆಯರಿಗೆ) ನೆಲಕ್ಕೆ ಮಡಿ ಸೀರೆಯನ್ನು ಹಾಸಿ ಸೇವೆಯನ್ನು ನೆರವೇರಿಸಿಕೊಟ್ಟರು. ರಾಜ್ಯ ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷ ಎಚ್. ಎಲ್ .ಶಿವಣ್ಣ ಅವರು ದೇವಿ ದರ್ಶನ ಮಾಡಿ ನಂತರ ಮಾತನಾಡಿ, ಬಹಳ ಹಿಂದಿನಿಂದಲೂ ಶ್ರೀ ದೊಡ್ಡಮ್ಮತಾಯಿ ಹಬ್ಬವನ್ನು ಗ್ರಾಮದ ಪ್ರತಿಯೊಂದು ಕುಟುಂಬವು ಸೇರಿ ಸಾವಿರಾರು ಜನರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದ್ದೇವೆ ಎಂದು ಹೇಳಿದರು. ಮಾಜಿ ಶಾಸಕ ಎಚ್. ಬಿ.ರಾಮು, ಮುಖಂಡರಾದ ಎಚ್.ಸಿ.ಹರಿಪ್ರಸಾದ್, ಡಾ. ಆಶಾಲತಾ, ಎಚ್. ಎಸ್. ಯೋಗೇಶ್ ಕುಮಾರ್, ಸಚ್ಚಿದಾನಂದ, ಎಚ್. ಎಲ್.ಅಭಿನಂದನ್, ವಿಜಯ್ ಕುಮಾರ್, ಎಚ್. ಎಸ್. ನಂದೀಶ್, ಎಚ್.ಡಿ.ರವಿ, ನಾರಾಯಣ, ಪ್ರದೀಪ್ ಕುಮಾರ್, ಎಚ್.ಎಂ ಕುಮಾರ್, ಶ್ರೀಧರ್, ಮಂಜು, ರಾಮಕೃಷ್ಣ ಇದ್ದರು.



ರಸ್ತೆ ಕಾಮಗಾರಿ ಕಳಪೆ: ಬಿಜೆಪಿ ಪ್ರತಿಭಟನೆ

• **ಪಾಂಡವಪುರ:** ಲೋಕೋಪಯೋಗಿ ಇಲಾಖೆ ವತಿಯಿಂದ ಪಟ್ಟಣದಲ್ಲಿ ನಿರ್ಮಿಸಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಕಳಪೆಯಿಂದ ಕೂಡಿದ್ದು ವಿದ್ಯುತ್ ದೀಪಗಳ ಅಳವಡಿಕೆ ಕಾಮಗಾರಿಯೂ ಕಳಪೆಯಿಂದ ಕೂಡಿದೆ ಎಂದು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಸೆಸ್ಕ್ ಕಚೇರಿ ಮುಂಭಾಗದ ವಿದ್ಯುತ್ ದೀಪಗಳ ಅಳವಡಿಕೆ ಕಾಮಗಾರಿ ಸ್ಥಳದಲ್ಲಿ ಬಿಜೆಪಿ ಮುಖಂಡ ಎಚ್.ಎನ್.ಮಂಜುನಾಥ್ ನೇತೃತ್ವದಲ್ಲಿ ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು, ಪಟ್ಟಣ ವ್ಯಾಪ್ತಿಯಲ್ಲಿ ಇಲಾಖೆ ವತಿಯಿಂದ ನಿರ್ವಹಿಸಿರುವ ಬಹುತೇಕ ರಸ್ತೆ ಕಾಮಗಾರಿಗಳಲ್ಲಿ ಒಂದಿಷ್ಟು ಗುಣಮಟ್ಟವಿಲ್ಲ, ಜತೆಗೆ ಪಟ್ಟಣದ ಐದು ದೀಪ ವೃತ್ತದಿಂದ ಹಾರೋಹಳ್ಳಿ ಕೆಎಚ್‌ಬಿ ಕಾಲನಿವರೆಗೆ ಅಳವಡಿಸಿರುವ ವಿದ್ಯುತ್ ದೀಪಗಳ ಕಾಮಗಾರಿಯು ಕೂಡ ಕಳಪೆಯಾಗಿದೆ. ಇದರಲ್ಲಿ ಅಳವಡಿಸಲಾಗಿರುವ ಕೇಬಲ್ ಭೂಮಿ ಮಟ್ಟದಲ್ಲಿದ್ದು, ಅಗತ್ಯಕ್ಕೆ ತಕ್ಕಂತೆ ಗುಂಡಿ ತೆಗೆದು ಕೇಬಲ್ ಅಳವಡಿಸಿಲ್ಲ. ಇದರಿಂದ ವಿಧ್ಯುತ್ ಅವಘಡಗಳು ಸಂಭವಿಸುವ ಅಪಾಯವಿದೆ. ಈ ಕಳಪೆ ವಿದ್ಯುತ್ ಕೇಬಲ್ ಅಳವಡಿಕೆಯಿಂದ ಅವಘಡ ಸಂಭವಿಸಿದ ವೇಳೆ ಸರ್ಕಾರ ಹೊಣೆ ಹೊರಬೇಕಾಗುತ್ತದೆ. ಕಾಮಗಾರಿ ನಿರ್ವಹಣೆಯಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಸಂಪೂರ್ಣ ನಿರ್ಲ್ಯಕ್ಷತೆ ಎದ್ದು ಕಾಣುತ್ತಿದೆ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದರು.



ಕಳಪೆ ಕಾಮಗಾರಿ ಬಗ್ಗೆ ಪ್ರಶ್ನೆ ಮಾಡಲು ಅಧಿಕಾರಿಗಳಿಗೆ ಕರೆ ಮಾಡಿದರೆ ಅವರು ಕೆಲವು ವಿಚಾರಗಳ ಬಗ್ಗೆ ಸಮರ್ಪಕ ಉತ್ತರ ನೀಡದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಒಬ್ಬರಿಗೊಬ್ಬರೂ ಅಸಮರ್ಪ ಉತ್ತರ ನೀಡುತ್ತಾರೆ ಎಂದು ದೂರಿದರು.

ಒಳ ಮೀಸಲಾತಿಯಿಲ್ಲದೆ ಉದ್ಯೋಗ ಭರ್ತಿ: ಸರ್ಕಾರದ ಮಹಾದ್ರೋಹಕ್ಕೆ ಖಂಡನೆ

ನಾಳೆ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ

• **ಮಂಡ್ಯ:** ಒಳ ಮೀಸಲಾತಿ ಸಮಿತಿ, ಕರ್ನಾಟಕ ಮಾದರ ಮಹಾಸಭಾ ವತಿಯಿಂದ ಮಾ. 12ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಒಳ ಮೀಸಲಾತಿಯಿಲ್ಲದೆ ಉದ್ಯೋಗ ಭರ್ತಿ ಮಾಡುವ ರಾಜ್ಯ ಕಾಂಗ್ರೆಸ್ ಸರ್ಕಾರದ ಮಹಾದ್ರೋಹ ಖಂಡಿಸಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಜಿಲ್ಲಾಧ್ಯಕ್ಷ ಸಿ.ಕೆ. ಪಾಪಯ್ಯ ತಿಳಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಒಳ ಮೀಸಲಾತಿಯನ್ನು ತಪ್ಪಿಸುವ ಹುನ್ನಾರದಿಂದ ತರಾತುರಿಯಲ್ಲಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ ಸಿಆ ಸುಇ-1 ಸೇಹಿಮ 2026ನ್ನು ತಕ್ಷಣ ಹಿಂಪಡೆಯಬೇಕು ಮತ್ತು ನೇಮಕಾತಿಯಲ್ಲಿ ಒಳ ಮೀಸಲಾತಿ ಕಡ್ಡಾಯಗೊಳಿಸಿ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ದಲಿತರ ಜನಸಂಖ್ಯೆ ಶೇ. 18ರಷ್ಟಿದೆ. ಹಾಗಾಗಿಯೇ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್‌ರವರು ಶೇ. 17ಕ್ಕೆ ಪರಿಶಿಷ್ಟ ಜಾತಿಗಳ ಮೀಸಲಾತಿ ಹೆಚ್ಚಿಸಲು ಶಿಫಾರಸ್ಸು ಮಾಡಿದ್ದರು ಮತ್ತು ಅದು ಜಾರಿಯಲ್ಲಿದೆ. ಈ ಸಾಮಾಜಿಕ, ನ್ಯಾಯದ ನೀತಿಯನ್ನು ನ್ಯಾಯಾಂಗೀಯ ಸವಾಲುಗಳಿಂದ ರಕ್ಷಿಸಲು ರಾಜ್ಯದ ಶೇ. 56ರಷ್ಟು ಮೀಸಲಾತಿ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಸರ್ವ ಪಕ್ಷಗಳ ನಿಯೋಗದೊಂದಿಗೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ, ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ನೇರ ನೇಮಕಾತಿ, ಬಡ್ತಿ ನೇಮಕಾತಿ ಮತ್ತು ಮುಂಬಡ್ತಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯಲ್ಲಿ 2001ರ ಹಿಂದಿನ ಬ್ಯಾಕ್‌ಲಾಗ್ ಹುದ್ದೆಗಳಿಗೆ ಮಾತ್ರ ಅನ್ವಯಿಸುತ್ತಿದೆ. ಈ ನಿಯಮವನ್ನು 2001ರ ನಂತರದ ಬ್ಯಾಕ್‌ಲಾಗ್ ಹುದ್ದೆಗಳಿಗೂ ಮುಂದುವರಿಸಬೇಕು ಹಾಗೂ ಒಳ ಮೀಸಲಾತಿ ಜಾರಿಯಾಗಬೇಕು. ಎಸ್‌ಇಪಿ-ಟಿಎಸ್‌ಪಿ ಅನುದಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಒಳ ಮೀಸಲಾತಿ ಸಂಪೂರ್ಣವಾಗಿ ಜಾರಿಯಾಗಬೇಕು ಎಂದು ಆಗ್ರಹಿಸಿದರು.

ನೇಮಕಾತಿಗಳಲ್ಲಿ ವಿಶ್ವವಿದ್ಯಾಲಯಗಳು ಒಂದು ಘಟಕ ಎಂದು ಪರಿಗಣಿಸಬೇಕೆನ್ನುವ ಪ್ರಸ್ತಾವನೆಯನ್ನು ಕೈಬಿಡಬೇಕು. ಅಲೆಮಾರಿ ಸಮುದಾಯಗಳಿಗೆ ಶೇ. 1ರಷ್ಟು ಪ್ರತ್ಯೇಕ ಮೀಸಲಾತಿ ನೀಡಲೇಬೇಕು. ಸಮಾಜ ಕಲ್ಯಾಣವನ್ನು ಸಮರ್ಪಕವಾಗಿ ನಿರ್ವಹಿಸದೇ ಪಕ್ಷಪಾತವಾಗಿ ನಡೆದುಕೊಳ್ಳುತ್ತಿರುವ ಸಚಿವರನ್ನು ಕೂಡಲೇ ಬದಲಾಯಿಸಬೇಕು ಎಂದು ಒತ್ತಾಯಿಸಿ ನಾಳೆ ಪ್ರತಿಭಟನೆ ಹಮ್ಮಿಕೊಂಡಿದ್ದುಫಿ, ರಾಜ್ಯದ್ಯಂತ 1 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸುವರು ಎಂದು ಹೇಳಿದರು.

ಒಳ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಉಪಾಧ್ಯಕ್ಷ ಎನ್.ಆರ್. ಚಂದ್ರಶೇಖರ್, ಮಾದರ ಮಹಾಸಭಾ ಜಿಲ್ಲಾಧ್ಯಕ್ಷ ಬಿ.ಎನ್. ಕಾಂತರಾಜು, ಮುಖಂಡರಾದ ಬಿ. ಕೃಷ್ಣ, ಅಂಬುಜೀ, ಸ್ವಾಮಿ ಇದ್ದರು.

ಮಳವಳ್ಳಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಭೇಟಿ

ಸಾರ್ವಜನಿಕರಿಂದ ಅಹವಾಲು ಸ್ವೀಕಾರ

• **ಮಳವಳ್ಳಿ:** ತಾಲೂಕು ಸಾರ್ವಜನಿಕ ಆಸ್ಪತ್ರೆ, ಪೊಲೀಸ್ ಠಾಣೆ, ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಸೇರಿದಂತೆ ವಿವಿಧ ಸ್ಥಳಗಳಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಭೇಟಿ ನೀಡಿ ಪರಿಶೀಲನೆ ನಡೆಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಪಟ್ಟಣದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಹೆರಿಗೆ ವಾರ್ಡ್‌ಗಳು, ಆಪರೇಷನ್ ಕೊಠಡಿಗಳನ್ನು ಪರಿಶೀಲಿಸುವ ವೇಳೆ ಆಸ್ಪತ್ರೆಗೆ ಬಂದಿದ್ದ ರೋಗಿಗಳ ಆರೋಗ್ಯವನ್ನು ವಿಚಾರಿಸಿದರು. ವೈದ್ಯರಿಗೆ ಹಲವು ಸಲಹೆ ಸೂಚನೆಗಳನ್ನು ನೀಡಿದರು. ಹೆರಿಗೆ ವಾರ್ಡ್‌ಗಳಲ್ಲಿರುವ ಮಕ್ಕಳನ್ನು ಎತ್ತಿ ಮುದ್ದಾಡಿ ತಾಯಿ ಮಗುವಿಗೆ ಶುಭ ಹಾರೈಸಿದರು. ಅಹವಾಲು ಸ್ವೀಕಾರ: ಸಾರ್ವಜನಿಕ ಆಸ್ಪತ್ರೆಯ ಡಿ ಗ್ರೂಪ್ ನೌಕರಿಯೊಬ್ಬರು ತಾಲೂಕಿನ ನೆಲಮಾಕನಹಳ್ಳಿ ಗ್ರಾಮದಲ್ಲಿ ಹಲವರು ವರ್ಷಗಳಿಂದ ಜೀವನ ಮಾಡುತ್ತಿದ್ದು, ತಾವು ವಾಸಿಸುತ್ತಿರುವ ಸ್ಥಳಕ್ಕೆ ಹಕ್ಕು ಪತ್ರ ಕೊಡಿಸಬೇಕೆಂದು ಮನವಿ ಮಾಡಿದರು.

ಸ್ಥಳದಲ್ಲಿಯೇ ದೂರವಾಣಿಯ ಮೂಲಕ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಕ ಅಧಿಕಾರಿ ಶ್ರೀನಿವಾಸ್ ಅವರನ್ನು ಸಂಪರ್ಕಿಸಿ ನಿವೇಶನ ಕೊಡಿಸಲು ಕ್ರಮವಹಿಸಬೇಕೆಂದು ಸೂಚನೆ ನೀಡಿದರು.



ಪಟ್ಟಣದ ಮನಿಸ್ವಿನಿ ಎಂಬ ಯುವತಿಯೊಬ್ಬರು ಆಸ್ಪತ್ರೆಯಲ್ಲಿ ಕೆಲಸ ಕೊಡಿಸುವಂತೆ ಮನವಿ ಮಾಡಿಕೊಂಡರು. ತಾಲ್ಲೂಕು ವೈದ್ಯಾಧಿಕಾರಿ ಡಾ. ವೀರಭದ್ರಪ್ಪ ಅವರಿಗೆ ಆಸ್ಪತ್ರೆಯಲ್ಲಿ ಯುವತಿಗೆ ನೌಕರಿ ಕೊಡಿಸುವಂತೆ ಸೂಚಿಸಿದರು. ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಮಹಿಳೆಯೊಬ್ಬರು ಸಂಪರ್ಕಿಸಿ ಅಪಘಾತದಲ್ಲಿ ತಮ್ಮ ಪತಿ ನಿಧನರಾಗಿದ್ದು, ಯಾವುದೇ ಪರಿಹಾರದ ಹಣ ಸಿಕ್ಕಿಲ್ಲ, ವಕೀಲರು ಕೂಡ ಸರಿಯಾಗಿ ಸ್ಪಂದಿಸುತ್ತಿಲ್ಲ, ನ್ಯಾಯಕೊಡಿಸಬೇಕೆಂದು ಮನವಿ ಮಾಡಿಕೊಂಡರು. ಸ್ಥಳದಲ್ಲಿಯೇ ಇದ್ದ ಸಿಡಿಪಿಓ ಸಿ. ನಂಜಮಣಿ ಅವರಿಗೆ ಇಲಾಖೆ ವತಿಯಿಂದ ವಕೀಲರನ್ನು ನೇಮಿಸಿ ನ್ಯಾಯ ಹೊದಗಿಸಬೇಕೆಂದು ಹೇಳಿದರು. ಆಸ್ಪತ್ರೆ ಸೌಲಭ್ಯಕ್ಕೆ ಪ್ರಸಂಸೆ: ಬಹುತೇಕ ಬಡಜನರು, ಕೂಲಿಕಾರ್ಮಿಕರು ಸರ್ಕಾರಿ ಆಸ್ಪತ್ರೆಗಳನ್ನೇ ಅವಲಂಬಿಸಿದ್ದಾರೆ. ಇಂಥ ವ್ಯವಸ್ಥೆಯಲ್ಲಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ಸೂಕ್ತ ಚಿಕಿತ್ಸೆಯ ಜೊತೆಗೆ ಪಾಲನೆಯೂ ಮುಖ್ಯವಾಗಿದೆ. ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಉತ್ತಮವಾಗಿ ಚಿಕಿತ್ಸೆ ದೊರೆಯುತ್ತದೆ ಎನ್ನುವುದಕ್ಕೆ ಹೊರ ಜಿಲ್ಲೆಗಳಿಂದ ಆಗಮಿಸಿ ಇಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ಸಾಕ್ಷಿಯಾಗಿದೆ. ರೋಗಿಗಳನ್ನು ಸೌಲಭ್ಯದ ಬಗ್ಗೆ ವಿಚಾರಿಸಿದ್ದಾಗ ಉತ್ತಮ ಪ್ರತಿಕ್ರೀಯೆ ವ್ಯಕ್ತವಾಗಿದೆ. ಸ್ವಚ್ಚತೆ, ನಿರ್ವಹಣೆ, ಔಷಧ ಶೇಖರಣೆ ಸೇರಿದಂತೆ ಮೂಲಭೂಲ ಸೌಲಭ್ಯ ಕಲ್ಪಿಸುವಲ್ಲಿ ಆಸ್ಪತ್ರೆ ಆಡಳಿತ ಮಂಡಳಿ ಸೂಕ್ತ ಕ್ರಮ ಕೈಗೊಂಡಿದೆ. ವ್ಯವಸ್ಥೆ ಮತ್ತು ಶಿಸ್ತು ಹಾಗೂ ತಾಯಿ-ಮಗುವಿನ ಬಗ್ಗೆ ಅಲ್ಲಿನ ವೈದ್ಯರು ಮತ್ತು ಸಿಬ್ಬಂದಿಗಳು ವಹಿಸುತ್ತಿರುವ ಕಾಳಜಿಯನ್ನು ಪ್ರಶಂಸೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಸಂಜಯ್,ತಾಲ್ಲೂಕು ವೈದ್ಯಾಧಿಕಾರಿ ಡಾ. ವೀರಭದ್ರಪ್ಪ, ಸಿಡಿಪಿಓ ನಂಜಮಣಿ, ಸರ್ಕಲ್ ಇನ್ಸ್‌ಪೆಕ್ಟರ್ ಬಸವರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಈ ಉಮಾ ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ

ಸಾವಿತ್ರಿಬಾಯಿ ಫುಲೆ ಪ್ರಶಸ್ತಿಗೆ ಶಿಕ್ಷಕಿ ಮಮತಾ ಆಯ್ಕೆ

ಹೊಳೆನರಸೀಪುರ: ಕರ್ನಾಟಕ ವಚನ ಸಾಹಿತ್ಯ ಪರಿಷತ್ತು (ರಿ) ಬೆಂಗಳೂರು ಇವರ ವತಿಯಿಂದ 2026 ನೇ ಸಾಲಿನಲ್ಲಿ ಕೊಡಮಾಡುವ ರಾಜ್ಯ ಮಟ್ಟದ ಸಾವಿತ್ರಿಬಾಯಿಫುಲೆ ಪ್ರಶಸ್ತಿಯನ್ನು ತಾಲ್ಲೂಕಿನ ಆನೇಕನ್ನಂಬಾಡಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿ ಹಾಗೂ ಸಾವಿತ್ರಿಬಾಯಿಫುಲೆ ಮಹಿಳಾ ಶಿಕ್ಷಕಿಯರ ಸಂಘದ ತಾಲ್ಲೂಕು ಅಧ್ಯಕ್ಷೆ, ಮಮತ ಕೆ.ಎಂ.ಅವರು ಆಯ್ಕೆಯಾಗಿದ್ದಾರೆ ಎಂದು ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಎಂ.ವಿ.ತ್ಯಾಗರಾಜ್ ತಿಳಿಸಿದ್ದಾರೆ.



ಮಮತ ಕೆ.ಎಂ.ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ,ಹಿಂದೂಸ್ತಾನಿ ಲಘು ಶಾಸ್ತ್ರೀಯ ಸಂಗೀತ ಹಾಗೂ ಕರ್ನಾಟಕ ಲಘು ಶಾಸ್ತ್ರೀಯ ಸಂಗೀತ ಸ್ಪರ್ಧೆಗಳಲ್ಲಿ ಜಿಲ್ಲೆ,ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ. ಇವರ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಂಘಟನಾತ್ಮಕ ಸಾಧನೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದ್ದು ಇದೇ ಮಾರ್ಚ್ 14 ರಂದು ಬೆಂಗಳೂರಿನ ಪಶುವೈದ್ಯ ಕಾಲೇಜು ಆವರಣದ ಅಲುಮ್ನಿ ಸಭಾಂಗಣದಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಮಹಿಳಾ ರಾಜ್ಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣೆ ಕುರಿತು ಮುಖಂಡರ ಸಭೆ



ಚನ್ನರಾಯಪಟ್ಟಣ: ಹೇಮಾವತಿ ಸಕ್ಕರೆ ಕಾರ್ಖಾನೆಯ ಚುನಾವಣೆ ಪೂರ್ವ ಸಿದ್ಧತೆ ಮತ್ತು ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಕಾಂಗ್ರೆಸ್ ಮುಖಂಡರುಗಳ ಸಭೆ ನಡೆಸಿ ಚರ್ಚಿಸಲಾಯಿತು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮುಖಂಡರ ಸಭೆ ನಡೆಸಿ ಚುನಾವಣೆಯ ಬಗ್ಗೆ ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು. ಈ ಸಂದರ್ಭ ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡರು, ಮಾಜಿ ಎಂಎಲ್ಸಿ ಎಂ.ಎ.ಗೋಪಾಲಸ್ವಾಮಿ, ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಅಣತಿ ಆನಂದ್, ಮಾಜಿ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರಾದ ವಿಜಯಕುಮಾರ್, ಹೇಮಾವತಿ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ಎ.ಬಿ.ನಂಜುಂಡೇಗೌಡ, ಮಾಜಿ ನಿರ್ದೇಶಕರಾದ ಸಾಸಲುಪುರ ಶಿವರಾಮು, ಹಾಲಿ ನಿರ್ದೇಶಕರಾದ ಚಿಕ್ಕಬಿಳ್ತಿ ರವೀಶ್, ಸಂತೇಶಿವರ ರಾಜಣ್ಣ, ಪುರಸಭೆ ಮಾಜಿ ಅಧ್ಯಕ್ಷ ಸಿ.ಟಿ.ಅಶೋಕ್, ಸಾಣೇನಹಳ್ಳಿಮಧು, ಶಂಕರಲಿಂಗೇಗೌಡ ಮತ್ತಿತರಿದ್ದರು.

ಆಸ್ತಿ ವಿಚಾರಕ್ಕೆ ಜಗಳ: ಹಲ್ಲೆಗೆ ಯತ್ನ

ಹಾಸನ: ಜಿಲ್ಲೆಯ ಶಾಂತಿಗ್ರಾಮ ಹೋಬಳಿಯ ದೊಡ್ಡ ಚಾಕನಹಳ್ಳಿ ಗ್ರಾಮದಲ್ಲಿ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಕೌಟುಂಬಿಕ ಕಲಹ ವಿಕೋಪಕ್ಕೆ ತಿರುಗಿ, ಮಾವನೊಬ್ಬ ತನ್ನ ಸ್ವಂತ ಸೊಸೆಯರ ಮೇಲೆಯೇ ಮಚ್ಚಿನಿಂದ ಹಲ್ಲೆ ನಡೆಸಲು ಯತ್ನಿಸಿದ ಆಘಾತಕಾರಿ ಘಟನೆ ನಡೆದಿದೆ. ಗ್ರಾಮದ ನಿವಾಸಿ ಮಾಳಿಗೇಗೌಡ ಎಂಬುವವರೇ ಈ ಕೃತ್ಯಕ್ಕೆ ಮುಂದಾದ ವ್ಯಕ್ತಿ ಎಂದು ಗುರುತಿಸಲಾಗಿದೆ.

ಕಳೆದ ಕೆಲವು ಸಮಯದಿಂದ ಮಾಳಿಗೇಗೌಡರ ಕುಟುಂಬದಲ್ಲಿ ಆಸ್ತಿ ಹಂಚಿಕೆ ವಿಚಾರವಾಗಿ ಮನಸ್ತಾಪ ಉಂಟಾಗಿ, ಮಾತಿನ ಚಕಮಕಿ ನಡೆದಿದ್ದು, ತಾಳ್ಮೆ ಕಳೆದುಕೊಂಡ ಮಾಳಿಗೇಗೌಡರು ಮಚ್ಚನ್ನು ಹಿಡಿದು ತನ್ನ ಸೊಸೆಯರ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದಾರೆ. ಅದೃಷ್ಟವಶಾತ್ ಮಾತಲ್ಲೇ ಅನಾಹುತವನ್ನು ತಪ್ಪಿದೆ, ಮನೆಯ ಹಿರಿಯನೇ ಈ ರೀತಿ ರಕ್ತ ಸಂಬಂಧಿಗಳ ಮೇಲೆ ಮಾರಕಾಸ್ತ್ರ ಹಿಡಿದು ದಾಳಿಗೆ ಮುಂದಾಗಿರುವುದು ಗ್ರಾಮದಲ್ಲಿ ಆತಂಕ ಮೂಡಿಸಿದೆ.

ಮಾ.16ಕ್ಕೆ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಪ್ರತಿಭಟನೆ

ಹಾಸನ: ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಮಾ.16 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ನಿರ್ದೇಶಕ ರವಿಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಉತ್ತರ ಕರ್ನಾಟಕ ಮಡಿವಾಳರ ಸಂಘದ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಲಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಸಮುದಾಯದ ಮುಖಂಡರು ಹಾಗೂ ಸಾವಿರಾರು ಕುಲಬಾಂಧವರು ಸೇರಿ 10 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ. ಜಗದ್ಗುರು ಡಾ. ಶ್ರೀ ಶ್ರೀ ಬಸವ ಮಾಚಿದೇವ ಮಹಾಸ್ವಾಮೀಜಿಗಳು, ಚಿತ್ರದುರ್ಗದ ಶ್ರೀ ಮಾಚಿದೇವ ಮಹಾಸಂಸ್ಥಾನ ಮಠದ ದಿವ್ಯ ಸಾನಿಧ್ಯದಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯ ಶ್ರೀಕ್ಷೇತ್ರ ಕರಿಂಜೆದ ಶ್ರೀ ಶ್ರೀ ಮುಕ್ತಾನಂದ ಸ್ವಾಮೀಜಿಗಳ ಆಶೀರ್ವಾದದೊಂದಿಗೆ ಈ ಹೋರಾಟ ನಡೆಯಲಿದೆ ಎಂದರು.

ರಾಜ್ಯದಲ್ಲಿ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಬೇಡಿಕೆ ಹಲವು ದಶಕಗಳಿಂದ ಕೇಳಿಬರುತ್ತಿದ್ದರೂ ಇದುವರೆಗೆ ಯಾವುದೇ ಸರ್ಕಾರಗಳು ಈ ಕುರಿತು ಗಂಭೀರ ಕ್ರಮ ಕೈಗೊಂಡಿಲ್ಲ ಎಂಬ ಅಸಮಾಧಾನವನ್ನು ವ್ಯಕ್ತಪಡಿಸಿದರು. ಮಡಿವಾಳ ಸಮುದಾಯವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿದ್ದರೂ ಸರಿಯಾದ ಮಾನ್ಯತೆ ದೊರೆಯದೇ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂದು ಆರೋಪಿಸಿದರು. 1921ರಲ್ಲಿ ಮೈಸೂರು ಮಹಾರಾಜರು ನಡೆಸಿದ ದುಂಡುಮೇಜಿನ ಸಭೆಯಲ್ಲಿ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಕುರಿತು ಚರ್ಚೆ ನಡೆದಿದ್ದು, ಆ ಕಾಲದಲ್ಲಿಯೇ ಸಮುದಾಯದ ಹಿಂದುಳಿತವನ್ನು ಗುರುತಿಸಲಾಗಿತ್ತು. ನಂತರದ ವರ್ಷಗಳಲ್ಲೂ ಈ ಬೇಡಿಕೆ ಮುಂದುವರಿದರೂ ಅದು ಈಡೇರಿಲ್ಲ ಎಂಬುದು ಸಮುದಾಯದ ಅಸಮಾಧಾನವಾಗಿದೆ ಎಂದು ಹೇಳಿದರು.



ಚನ್ನರಾಯಪಟ್ಟಣ ತಾಲೂಕು ಬಾಗೂರು ಸರ್ಕಾರಿ ಪ್ರೌಢಶಾಲೆಯಲ್ಲಿ 1994-95ನೇ ಸಾಲಿನ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ನಡೆಯಿತು. ನಿವೃತ್ತ ಶಿಕ್ಷಕರು ವಿದ್ಯಾರ್ಥಿಗಳು ಇದ್ದರು.

ಎನ್‌ಎಸ್‌ಎಸ್ ವಾರ್ಷಿಕ ಶಿಬಿರ

ಕೊಣನೂರು: ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಸೇವಾ ಯೋಜನೆಯು ನಾಯಕತ್ವ ಗುಣವನ್ನು, ಹೊಂದಾಣಿಕೆಯ ಬದುಕನ್ನು ಹಾಗೂ ಹಳ್ಳಿಗಳ ಜೀವನ ವೈವಿಧ್ಯತೆಯನ್ನು ಅರಿಯಲು ಇರುವ ಒಂದು ಸುವರ್ಣ ಅವಕಾಶ. ವಿದ್ಯಾರ್ಥಿ ಜೀವನದಲ್ಲಿ ಕೌಶಲಗಳನ್ನು ಮೈಗೂಡಿಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಿ ಸ್ವಂತ ಕಾಲ ಮೇಲೆ ನಿಲ್ಲಬೇಕು ಎಂದು ಶಾಸಕ ಎ.ಮಂಜು ತಿಳಿಸಿದರು. ಬಿ.ಎಂ.ಶೆಟ್ಟಿ ಸರ್ಕಾರಿ ಪದವಿ ಕಾಲೇಜು ವತಿಯಿಂದ ವೆಂಕಟೇಶಪುರ ಗ್ರಾಮದಲ್ಲಿ 2024-25 ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಹಳ್ಳಿಯ ಜೀವನ ಕಷ್ಟ, ಸಹಿಷ್ಣುತೆ, ತಾಳ್ಮೆ ಹಾಗೂ ಸೌಹಾರ್ದತೆಯನ್ನು ಬೆಸೆಯುತ್ತದೆಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳುತ್ತಾ ಶಿಬಿರಾರ್ಥಿಗಳಿಗೆ ಏಳೂ ದಿನಗಳು ಗ್ರಾಮಸ್ಥರು ಸಹಕಾರ ನೀಡುವಂತೆ ಮನವಿ ಮಾಡಿದರು. ಕಾಲೇಜು ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷ ಎಸ್.ಸಿ. ಚೌಡೇಗೌಡ ಮಾತನಾಡಿ ಗ್ರಾಮದ ಜೀವನವನ್ನು ಒಂದು ವಾರಗಳ ಕಾಲ ಅನುಭವಿಸಿ ರೈತಾಪಿ ಕುಟುಂಬದ ಕಷ್ಟ ಸುಖಗಳನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕೆಂದು ಹೇಳಿದರು. ಇದೇ ಸಂದರ್ಭದಲ್ಲಿ ಸಿಡಿಸಿ ಸದಸ್ಯ ಹೊಯ್ಸಳ ಕೊಣನೂರು ರವರು ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಹಾಗೂ ವೆಂಕಟೇಶಪುರ ಗ್ರಾಮದ ಮುಖಂಡರಾದ ಸ್ವಾಮಿಗೌಡ ರವರು ಟೋಪಿಗಳನ್ನು ವಿತರಿಸಿದರು. ಸುಮಾರು 50 ಶಿಬಿರಾರ್ಥಿಗಳು, ಕಾಲೇಜಿನ ಬೋಧಕ ವರ್ಗ ಹಾಗೂ ಬೋಧಕೇತರ ವರ್ಗದವರು, ಕಾಲೇಜು ಅಭಿವೃದ್ಧಿ ಮಂಡಳಿಯ ಸದಸ್ಯರುಗಳು, ಗ್ರಾಮದ ಮುಖಂಡರುಗಳು ಉಪಸ್ಥಿತರಿದ್ದರು.



ಕೊಣನೂರು ಹೋಬಳಿ ವೆಂಕಟೇಶಪುರ ಗ್ರಾಮದಲ್ಲಿ ಬಿ.ಎಂ. ಶೆಟ್ಟಿ ಸರ್ಕಾರಿ ಪದವಿ ಕಾಲೇಜು ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರವನ್ನು ಶಾಸಕ ಎ.ಮಂಜು ಉದ್ಘಾಟಿಸಿದರು.

ಆರೋಗ್ಯ ಉಚಿತ ತಪಾಸಣೆ | 26 ಜನರಿಂದ ಸ್ವಯಂಪ್ರೇರಿತ ರಕ್ತದಾನ

ಆರೋಗ್ಯವೇ ನಿಜವಾದ ಸಂಪತ್ತು

ಹಾಸನ: ಆರೋಗ್ಯ ಉಚಿತ ತಪಾಸಣಾ ಶಿಬಿರಗಳು ಸಮಾಜದಲ್ಲಿ ಆರೋಗ್ಯ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ವಕೀಲರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಈ ರೀತಿಯ ಶಿಬಿರಗಳನ್ನು ಆಯೋಜಿಸಿರುವುದು ಶ್ಲಾಘನೀಯ ಕಾರ್ಯ ಎಂದು ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಹೇಮಾವತಿ ಅಭಿಪ್ರಾಯಪಟ್ಟರು.



ಜಿಲ್ಲಾ ವಕೀಲರ ಸಂಘ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಹಾಸನಾಂಬ ಲಯನ್ಸ್ ಕ್ಲಬ್ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಬೃಹತ್ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದ ಎಲ್ಲಾ ವರ್ಗಗಳ ಸಹಕಾರದಿಂದ ಇಂತಹಸೇವಾಕಾರ್ಯಕ್ರಮಗಳುನಿರಂತರವಾಗಿ ನಡೆಯಬೇಕು ಎಂದು ತಿಳಿಸಿದರು.

2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹಿದಾಯತ್ ಉಲ್ಲಾ ಶರೀಫ್ ಮಾತನಾಡಿ, ಆರೋಗ್ಯವೇ ನಿಜವಾದ ಸಂಪತ್ತು ಎಂದು ತಿಳಿಸಿದರು. ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಳ್ಳಲು ದಿನನಿತ್ಯ ಕನಿಷ್ಠ 45 ನಿಮಿಷ ನಡೆಯುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

300ಕ್ಕೂ ಹೆಚ್ಚು ಜನರಿಗೆ ಆರೋಗ್ಯ ತಪಾಸಣೆ

ಶಿಬಿರದಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳ ತಪಾಸಣೆ ನಡೆಸಲಾಗಿದ್ದು, ಒಟ್ಟು 300ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಇದೇ ವೇಳೆ ನಡೆದ ರಕ್ತದಾನ ಶಿಬಿರದಲ್ಲಿ 26 ಮಂದಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿ ಮಾನವೀಯ ಸೇವೆಗೆ ಕೈಜೋಡಿಸಿದರು.

ನಂತರ ಮಾತನಾಡಿದ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆಯ ಸಭಾಪತಿ ಹೆಮ್ಮಿಗೆ ಮೋಹನ್ ಅವರು, ಎಲ್ಲರೂ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಮಾನವೀಯ ಸೇವೆಯಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಮಾತನಾಡಿ, ಇಂತಹ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರಗಳು ಸಮಾಜದ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಸಾರ್ವಜನಿಕರು ಹಾಗೂ ವಕೀಲರು ಇಂತಹ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ. ಅನಿಲ್ ಕುಮಾರ್, ಡಾ. ಶೃತಿ, ಶ್ರೀಮತಿ ಜಿ.ಕೆ. ದ್ರಾಕ್ಷಾಯಿಣಿ, ಡಾ. ತೇಜಸ್ವಿ ಹೆಚ್.ಜೆ ಸೇರಿದಂತೆ ಹಲವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಇದೇ ವೇಳೆ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಹಿರಿಯ ಹಾಗೂ ಕಿರಿಯ ನ್ಯಾಯಾಧೀಶರು ಹಾಗೂ ಸಿವಿಲ್ ನ್ಯಾಯಾಧೀಶರುಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳು, ಹಾಸನಾಂಬ ಲಯನ್ಸ್ ಕ್ಲಬ್ ಸದಸ್ಯರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು, ನ್ಯಾಯಾಲಯದ ಸಿಬ್ಬಂದಿ ವರ್ಗದವರು ಹಾಗೂ ಇತರರು ಉಪಸ್ಥಿತರಿದ್ದರು.

ಕೇಸರಿಮಯವಾದ ಅರಸೀಕೆರೆ



ಅರಸೀಕೆರೆ: ಸಾವಿರಾರು ಜನ ಸುಡುವ ಬಿಸಿಲನ್ನು ಲೆಕ್ಕಿಸದೆ ಮಹಾ ಸಂಗಮದ ಹೆಸರಿನಲ್ಲಿ ಸೇರಿದ ಹಿಂದು ಸಮುದಾಯದ ಜೇಂಕಾರದ ಮುಂದೆ ಸೂರ್ಯನ ಪ್ರತಾಪವು ಸಹ ಈಥಾನುಭವ ನೀಡಿತು.

ನಗರ ಸಂಪೂರ್ಣ ಕೇಸರಿಮಯವಾಗಿದ್ದರೆ ಹಿಂದು ಬಾಂಧವರ ಕೈಯಲ್ಲಿ ಮಾತ್ರವಲ್ಲ, ಮನೆ ಮನೆಗಳ ಮೇಲೆ ಅಂಗಡಿ ಮುಂಗಟ್ಟುಗಳ ಮೇಲೆ ಭಗವದ್ವಜ ರಾರಾಜಿಸುವುದರೊಂದಿಗೆ ಸನಾತನ ಸಂಸ್ಕೃತಿಯ ಸಂದೇಶವನ್ನು ಸಾರಿ ಸಾರಿ ಹೇಳುತ್ತಿತ್ತು. ಇದಕ್ಕೆಲ್ಲ ಕಾರಣ ಹಿಂದು ಮಹಾಸಂಗಮ ಆಯೋಜನ ಸಮಿತಿ ನಗರದಲ್ಲಿ ಆಯೋಜಿಸಿದ್ದ ಹಿಂದು ಮಹಾಸಂಗಮ ಭವ್ಯ ಶೋಭಯಾತ್ರೆ ಸಂಭ್ರಮ. ಭಾರತಮಾತೆಯ ಭಾವಚಿತ್ರದ ಸಮೇತ ಗ್ರಾಮ ದೇವತೆ ಕರಿಯಮ್ಮ ಮತ್ತು ಮಲ್ಲಿಗೆಮ್ಮ ದೇವಿ, ಜೇನುಕಲ್ಲು ಸಿದ್ದೇಶ್ವರ ಸ್ವಾಮಿ, ಚೆಲ್ಲಾಪುರದ ಮಲ್ಲಿಕಾರ್ಜುನ ಸ್ವಾಮಿ, ಬಂಡಿಹಳ್ಳಿ ರೇವಣಸಿದ್ದೇಶ್ವರ ಸ್ವಾಮಿ ಸೇರಿದಂತೆ ಕ್ಷೇತ್ರ ದೇವತೆಗಳ ಮೆರವಣಿಗೆ, ನಾನಾ ಮಠಾಧೀಶರ ಮಾರ್ಗದರ್ಶನದಲ್ಲಿ ಜಾನಪದ ಕಲಾ ತಂಡಗಳ ಕಲಾ ಪ್ರದರ್ಶನದೊಂದಿಗೆ ಹಾಸನ ರಸ್ತೆ ಅಯ್ಯಪ್ಪ ಸ್ವಾಮಿ ದೇವಾಲಯದ ಆವರಣದಿಂದ ಹಿಂದೂ ಮಹಾಸಂಗಮ ಭವ್ಯ ಶೋಭಾಯತ್ರೆ ಆರಂಭಗೊಂಡಿತು. ಜಾತಿ ಮತ ಭೇದವಿಲ್ಲದೆ ರಾಜಕೀಯ ಪಕ್ಷಗಳ ಬೇದವಿಲ್ಲದೆ ಹಿಂದು ಮಹಾಸಂಗಮದ ಹೆಸರಿನಲ್ಲಿ ಸೇರಿದ ನಾನಾ ರಾಜಕೀಯ ಪಕ್ಷಗಳ ಮುಖಂಡರು, ವಕೀಲರಸಂಘಸೇರಿದಂತೆವಿವಿಧಸಂಘ-ಸಂಸ್ಥೆಗಳ ಪದಾಧಿಕಾರಿಗಳು ಜಾತಿ ಮತ ಪಂಥಕ್ಕೂ ಮೀರಿದ ಬಂಧುತ್ವವೇ ಹಿಂದುತ್ವ ಎಂಬ ಸಂದೇಶವನ್ನು ಸಾರುವ ಮೂಲಕ ಗಮನ ಸೆಳೆಯುವಲ್ಲಿ ಶೋಭಾಯಾತ್ರೆ ಯಶಸ್ವಿಯಾಯಿತು. ಪೂರ್ಣ ಕುಂಭದೊಂದಿಗೆ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಶೋಭ ಯಾತ್ರೆಯ ರಂಗನ್ನು ಮತ್ತಷ್ಟು ಹೆಚ್ಚಿಸಿದರು. ಶೋಭಾ ಯಾತ್ರೆ ಸಾಗುವ ಮಾರ್ಗದಕ್ಕೂ ಅಲ್ಲಲ್ಲಿ ಸ್ಥಳೀಯ ಸಂಘ ಸಂಸ್ಥೆಗಳು ತಂಪು ಪಾನೀಯಗಳನ್ನ ವಿತರಿಸುವ ಮೂಲಕ ತಮ್ಮ ಸಂತಸವನ್ನು ಹಂಚಿಕೊಂಡರು.

ಮತ್ತೊಂದೆಡೆನಗರದವ್ಯಾಪಾರಸ್ಥರುಸಹಸ್ವಯಂ ಪ್ರೇರಿತರಾಗಿ ತಮ್ಮ ಅಂಗಡಿ ಮುಂಗಟುಗಳನ್ನು ಬಂದು ಮಾಡಿ ಶೋಭಾಯಾತ್ರೆಯಲ್ಲಿ ಪಾಲ್ಗೊಳುವ ಮೂಲಕ ಭಾರತ ಮಾತೆಗೆ ಜೈ ಎಂದಿದ್ದು ಮಾತ್ರವಲ್ಲದೆ, ನಾವೆಲ್ಲ ಹಿಂದು ನಾವೆಲ್ಲ ಒಂದು ಎಂಬ ಸಂದೇಶವನ್ನು ಸಾರಿದ್ದು ಮತ್ತೊಂದು ವಿಶೇಷ ವೆನಿಸಿತು. ಶೋಭಾಯಾತ್ರೆ ಬಳಿಕ ನಾನಾ ಮಠಾಧೀಶರ ದಿವ್ಯ ಸಾನಿಧ್ಯದಲ್ಲಿ ನಗರದ ಶ್ರೀ ಬಸವರಾಜೇಂದ್ರ ಪ್ರೌಢಶಾಲೆ ಆವರಣದಲ್ಲಿ ಹಿಂದು ಮಹಾಸಂಗಮ ಕಾರ್ಯಕ್ರಮ ನಡೆಯಿತು.

ವೀರಭದ್ರೇಶ್ವರ ಸ್ವಾಮಿ ಕೊಂಡೋತ್ಸವ



ಬೇಲೂರು: ಪಟ್ಟಣದ ಜೆಪಿ ನಗರ ದಲ್ಲಿರುವ ಶ್ರೀ ವೀರಭದ್ರೇ ಶ್ವರ ಸ್ವಾಮಿ ದೇವಸ್ಥಾನ ದಲ್ಲಿ ಶ್ರೀ ವೀರಭದ್ರೇಶ್ವರ, ಭದ್ರಕಾಳಿ ಹಾಗೂ ಚೌಡೇಶ್ವರಿ ಅಮ್ಮನವರ 32ನೇ ವರ್ಷದ ಕೊಂಡೋತ್ಸವ ಕಾರ್ಯಕ್ರಮ ಭಕ್ತಿ ಭಾವದಿಂದ ಹಾಗೂ ಸಂಭ್ರಮದ ವಾತಾವರಣದಲ್ಲಿ ನೆರವೇರಿತು.

ಕೊಂಡೋತ್ಸವದ ಅಂಗವಾಗಿ ಬೆಳಗ್ಗಿನ ಜಾವ ವಿವಿಧ ಧಾರ್ಮಿಕ ಕಾರ್ಯ ಕ್ರಮಗಳು ನಡೆದವು. ಗಂಗಾ ಪೂಜೆ, ಆಲಯ ಪ್ರವೇಶ, ಲಕ್ಷ್ಮೀಪೂಜೆ, ಗಣಪತಿ ಹೋಮ ಸೇರಿ ದಂತೆ ಹಲವು ಪೂಜಾ ವಿಧಿಗಳು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು. ನಂತರ ಶಿವಸ್ತುತಿ ಪಠಣ ದೊಂದಿಗೆ ಶ್ರೀ ವೀರಭದ್ರೇ ಶ್ವರ ಸ್ವಾಮಿಗೆ ಪಂಚಾ ಮೃತ ಅಭಿಷೇಕ, ರುದ್ರಾಭಿ ಷೇಕಗಳನ್ನು ನೆರವೇರಿಸಿ ದೇವರ ಕೃಪೆಗೆ ಭಕ್ತರು ಪ್ರಾರ್ಥಿಸಿದರು. ಇದೇ ಸಂದರ್ಭದಲ್ಲಿ ನವಗ್ರಹ ಹೋಮ, ಮೃತ್ಯುಂಜಯ ಹೋಮ, ರುದ್ರ ಹೋಮ ಸೇರಿದಂತೆ ವಿವಿಧ ಹೋಮ, ಹವನ ಗಳನ್ನು ಅರ್ಚಕರು ನೆರವೇರಿಸಿದರು. ಪೂಜಾ ಕಾರ್ಯ ಕ್ರಮಗಳಲ್ಲಿ ಅನೇಕ ಭಕ್ತರು ಭಾಗವಹಿಸಿ ದೇವರ ಆಶೀರ್ವಾದ ಪಡೆದರು. ನಂತರ ವಿಷ್ಣುಸಮುದ್ರದಿಂದ ಶ್ರೀ ವೀರ ಭದ್ರೇಶ್ವರ ಸ್ವಾಮಿ, ಚೌಡೇಶ್ವರಿ ಅಮ್ಮನವರು ಹಾಗೂ ಭದ್ರಕಾಳಿ ಅಮ್ಮನವರ ಉತ್ಸವ ಮೂರ್ತಿಗಳನ್ನು ಭಕ್ತನು ವೀರಗಾಸೆಯೊಂದಿಗೆ ಮೆರವಣಿಗೆಯಾಗಿ ದೇವಸ್ಥಾನಕ್ಕೆ ತರಲಾಯಿತು. ಮೆರವಣಿಗೆಯಲ್ಲಿ ಭಕ್ತರು ಜಯಘೋಷ ಗಳೊಂದಿಗೆ ಭಾಗವಹಿಸಿ ಭಕ್ತಿಭಾವ ವ್ಯಕ್ತಪಡಿಸಿದರು. ದೇವಾಲಯದ ಮುಂಭಾಗದಲ್ಲಿ ವಿಶೇಷವಾಗಿ ಸಿದ್ಧಪಡಿಸಲಾಗಿದ್ದ ಕೊಂಡಕ್ಕೆ ಪೂಜೆ ಸಲ್ಲಿಸಿದ ಪ್ರಧಾನ ಅರ್ಚಕ ದಿನೇಶ್ ಅವರು ಕೊಂಡೋತ್ಸವಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಅನೇಕ ಭಕ್ತರು ಕೊಂಡದ ಸುತ್ತ ಪ್ರದಕ್ಷಿಣೆ ಹಾಕಿ ತಮ್ಮ ಭಕ್ತಿ ಸಮರ್ಪಿಸಿದರು. ದೇವರ ಕೃಪೆ ಲಭಿ ಸಲಿ ಎಂಬ ನಂಬಿಕೆಯಿಂದ ಭಕ್ತರು ಕೊಂಡೋತ್ಸವದಲ್ಲಿ ಭಾಗವಹಿಸಿ ವಿಶೇಷ ಪೂಜೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ದಿವ್ಯ ಸಾನಿದ್ಯವನ್ನು ಕಾರ್ಜು ವಳ್ಳಿ ಹಿರೇಮಠದ ಶ್ರೀ ಸದಾಶಿವ ಶಿವಾಚಾರ್ಯ ಮಹಾಸ್ವಾಮೀಜಿ ಗಳು ಹಾಗು ಮ ಶಿವಮೂರ್ತಿ, ವಿರೂಪಾಕ್ಷ, ಪುರಸಭೆ ಮಾಜಿ ಅಧ್ಯಕ್ಷ ಎ ಆರ್ ಅಶೋಕ್,ಅದ್ದೂರಿ ದಿನೇಶ್,ಆರಾಧ್ಯ ಇದ್ದರು.

ಮಕ್ಕಳಲ್ಲಿ ಮಾನಸಿಕ ಸ್ಥೈರ್ಯ ಕುಗ್ಗುತ್ತಿದೆ: ಭಾರತಿ

ಚನ್ನರಾಯಪಟ್ಟಣ: ದೇಶದಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. 70ರ ಗಡಿ ದಾಟಿದ್ದರೂ, ಸಬಲೀಕರಣ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲದಿರುವುದು ಆತಂಕಕಾರಿ ಎಂದು ನಾಗೇಶ್ ಶಿಕ್ಷಣ ಸಂಸ್ಥೆಯ ಸಿಇಒ ಡಾ. ಭಾರತಿ ನಾಗೇಶ್ ಅಭಿಪ್ರಾಯಪಟ್ಟರು.



ಪಟ್ಟಣದ ಶ್ರೀ ಆದಿಚುಂಚನಗಿರಿ ಪದವಿ ಕಾಲೇಜಿನ ಸಮಾಜಶಾಸ್ತ್ರ ವಿಭಾಗ ಅಂತಾರಾಷ್ಟ್ರೀಯ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಕೇವಲ ಶೇ. 9ರಷ್ಟಿದ್ದ ಮಹಿಳಾ ಸಾಕ್ಷರತೆ ಇಂದು ಶೇ.70ಕ್ಕೆ ಏರಿದೆ. ಸರ್ಕಾರ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದರೂ ಲಕ್ಷಾಂತರ ಹೆಣ್ಣುಮಕ್ಕಳಿಗೆ ಇಂದಿಗೂ ಶಾಲೆಯ ಬಾಗಿಲು ತೆರೆದಿಲ್ಲ. ಮಹಿಳೆಯರ ಮೇಲೆ ದೌರ್ಜನ್ಯ, ಭ್ರೂಣ ಹತ್ಯೆ ಮತ್ತು ಅಪ್ರಾಪ್ತ ಹೆಣ್ಣುಮಕ್ಕಳ ಸಾಗಾಟದಂತಹ ಕೃತ್ಯಗಳು ಅವಿಶ್ರಾಂತವಾಗಿ ನಡೆಯುತ್ತಲೇ ಇವೆ. ಕೆಲಸ ಮಾಡುವ ಸ್ಥಳಗಳಲ್ಲಿ ತಾರತಮ್ಯ ಮತ್ತು ಅಭದ್ರತೆ ಮಹಿಳೆಯನ್ನು ಕಾಡುತ್ತಿದೆ. ಮಧ್ಯರಾತ್ರಿಯಲ್ಲಿ ಮಹಿಳೆ ನಿರ್ಭೀತಿಯಿಂದ ಓಡಾಡಬೇಕೆಂಬ ಗಾಂಧೀಜಿಯವರ ಕನಸು ಇಂದಿಗೂ ನನಸಾಗಿಲ್ಲ ಎಂದು ವಿಷಾದಿಸಿದರು. ಇಂದಿನ ಮಕ್ಕಳಲ್ಲಿ ಮಾನಸಿಕ ಸ್ಥೈರ್ಯ ಕುಗ್ಗುತ್ತಿದೆ. ಜಂಕ್ ಫುಡ್ ಬಳಕೆ ಹಾಗೂ ಸಾಮಾಜಿಕ ಜಾಲತಾಣಗಳ ಅತಿಯಾದ ವ್ಯಾಮೋಹ ಇದಕ್ಕೆ ಕಾರಣವಿರಬಹುದು. ಮುಂದಿನ 20 ವರ್ಷಗಳಲ್ಲಿ ಮಾನವ ಶಕ್ತಿಯ ಬದಲು ರೋಬೋಟ್‌ಗಳ ಬಳಕೆ ಹೆಚ್ಚಾಗುವ ಭೀತಿ ಇದೆ. ಜಾಲತಾಣಗಳಲ್ಲಿ ಅಶ್ಲೀಲತೆ ಮತ್ತು ದೌರ್ಜನ್ಯದ ವಿಚಾರಗಳ ಪ್ರಸಾರಕ್ಕೆ ಸರ್ಕಾರ ಕಡಿವಾಣ ಹಾಕಬೇಕು. ಹೆಣ್ಣುಮಕ್ಕಳು ನೈತಿಕತೆ ಮತ್ತು ವ್ಯಕ್ತಿತ್ವವನ್ನು ಹಾಳುಮಾಡಿಕೊಳ್ಳದೆ ಛಲದಿಂದ ಸಾಧನೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಪೋಕ್ಸೋ ಕಾಯ್ದೆ ಬಗ್ಗೆ ಜಾಗೃತಿ ಮೂಡಿಸಿ

ಹಾಸನ: ಪೋಕ್ಸೋ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಾಗುತ್ತಿದ್ದು, ಅಧಿಕಾರಿಗಳು ಹೆಚ್ಚಿನ ಗಮನ ಹರಿಸಬೇಕು. ಶಾಲೆ, ಕಾಲೇಜುಗಳಲ್ಲಿ ಪೋಕ್ಸೋ ಕಾಯ್ದೆ ಬಗ್ಗೆ ಜಾಗೃತಿ ಮೂಡಿಸುವಂತೆ ಪ್ರಧಾನ ಹಾಗೂ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಹೇಮಾವತಿ ಅಧಿಕಾರಿಗಳಿಗೆ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಮಂಗಳವಾರ ಜಿಲ್ಲಾ ಮಟ್ಟದ ಫೋಕ್ಸೋ ಸಮಿತಿಯ ಸಭೆ ನಡೆಸಿ ಮಾತನಾಡಿದ ಅವರು ಖಾಸಗಿ ಶಾಲೆಗಳಲ್ಲಿ ಹೆಚ್ಚಾಗಿ ಬಾಲ್ಯ ವಿವಾಹ ಮತ್ತು ಪೋಕ್ಸೋ ಪ್ರಕರಣಗಳು ಕಂಡುಬರುತ್ತಿವೆ. ಮಕ್ಕಳು ಪ್ರೌಢ ವ್ಯವಸ್ಥೆ ತಲುಪುವ ಮೊದಲೆ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಜಾಗೃತಿ ಮೂಡಿಸುವ ಕ್ರಮಗಳು ಕೈಗೊಳ್ಳಬೇಕು ಎಂದು ತಿಳಿಸಿದರು.



ಫೋಕ್ಸೋ ಕಾಯಿದೆ ಅಡಿಯಲ್ಲಿ ಬರುವ ಕಾನೂನುಗಳ ಬಗ್ಗೆ, ಸಹಾಯವಾಣಿಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳ ಹೆಚ್ಚಾಗಿ ಆಯೋಜನೆ ಮಾಡಬೇಕು. ಫೋಕ್ಸೋ ಕಾಯಿದೆ ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಮಾನಸಿಕ ಖಿನ್ನತೆ ಒಳಗಾದದಂತೆ ಎಚ್ಚರವಹಿಸಬೇಕು, ಪೊಲೀಸ್ ಅಧಿಕಾರಿಗಳು ಫೋಕ್ಸೋ ಕಾಯಿದೆಯಡಿ ದೂರು ಸಲ್ಲಿಕೆಯಾದರೆ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೂ ರಕ್ಷಣೆಯನ್ನು ನೀಡಬೇಕು ಎಂದರು. ಪೊಲೀಸ್ ಇಲಾಖೆಯ ವತಿಯಿಂದ ಪ್ರತಿ ಜಿಲ್ಲೆಯಲ್ಲಿ ಶಾಲಾ ಮಟ್ಟದಲ್ಲಿ ತೆರೆದ ಮನೆ ಕಾರ್ಯಕ್ರಮದ ಮೂಲಕ ಮಕ್ಕಳ ಹಕ್ಕುಗಳು, ಫೋಕ್ಸೋ ಕಾಯ್ದೆ ಕುರಿತು ಕಾರ್ಯಕ್ರಮಗಳು ನಡೆಸುವಂತೆ ಸೂಚಿಸಿದರು. ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಶಾಲಾ ಕಾಲೇಜುಗಳಲ್ಲಿ 9 ನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಫೋಕ್ಸೋ ಕಾಯ್ದೆ ಕುರಿತು ಅರಿವು ಮೂಡಿಸುವಂತೆ ತಿಳಿಸಿದರು.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಸುರಕ್ಷತೆ ಮತ್ತು ಭದ್ರತೆಗಾಗಿ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು, ಫೋಕ್ಸೋ ಕಾಯ್ದೆಯ ಯು/ಎಸ್ 39 ರಡಿಯಲ್ಲಿ ಸಂತ್ರಸ್ಥ, ಮಗುವಿಗೆ ಕಾನೂನು ಸಹಾಯಕ್ಕಾಗಿ ಅಗತ್ಯವಿದ್ದರೆ ಬೆಂಬಲ ವ್ಯಕ್ತಿಯನ್ನು ನೇಮಿಸಲು ತಿಳಿಸಿದರು.

ಈ ವೇಳೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಜಿ.ಕೆ, ಹಿರಿಯ ಸಿವಿಲ್ ನ್ಯಾಯಾಧೀಶರು ಗಿರೀಗೌಡ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್ ಹಾಗೂ ಮತ್ತಿತರರಿದ್ದರು.

ಗರಿಷ್ಠ 28° | ಕನಿಷ್ಠ 19°
ಹೊಸ ದಿಗಂತ
ಬುಧವಾರ 11 ಮಾರ್ಚ್ 2026
ತುಮಕೂರು



ಮನೆ ಹಸ್ತಾಂತರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಿಪಟೂರು ತಾಲೂಕು ರಂಗಾಪುರ ವಲಯದ ಕೆಂಕೆರೆ ಕಾರ್ಯ ಕ್ಷೇತ್ರದ ಗೌರಮ್ಮರವರಿಗೆ ವಾತ್ಸಲ್ಯ ಮನೆ ರಚನೆ ಮಾಡಿದ್ದು ಮಂಗಳವಾರ ಜಿಲ್ಲಾ ನಿರ್ದೇಶಕ ಸತೀಶ್ ಸುವರ್ಣ ಹಸ್ತಾಂತರಿಸಿದರು.

ಸಾಮಾಜಿಕ ಚಿಂತಕ ಕೈವಾರ ತಾತಯ್ಯ | ೨
ಪರೀಕ್ಷಾ ಮಾರ್ಗಸೂಚಿ ಪಾಲಿಸಿ | ೩
ಮಾ.14ಕ್ಕೆ ಬೃಹತ್ ಲೋಕ ಅದಾಲತ್ | ೪

ಕಿರುಸುದ್ದಿ

ಮಹಿಳಾ ದಿನಾಚರಣೆ ಸಂಭ್ರಮ: ಬಹುಮಾನ ವಿತರಣೆ

ಹುಳಿಯಾರು: ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ರಂಗೋಲಿ ಸ್ಪರ್ಧೆಯಲ್ಲಿ ರೇಷ್ಮಾ (ಪ್ರಥಮ), ವಿದ್ಯಾವತಿ (ದ್ವಿತೀಯ) ಮತ್ತು ಐಶ್ವರ್ಯ (ತೃತೀಯ), ಬಾಟಲ್ ಕಲರ್ ಮ್ಯಾಚಿಂಗ್‌ನಲ್ಲಿ ಮಮತಾ (ಪ್ರಥಮ), ವಿದ್ಯಾವತಿ (ದ್ವಿತೀಯ) ಮತ್ತು ಕವಿತಾ (ತೃತೀಯ), ಬಾಲ್ ಮತ್ತು ಕಪ್ ಸ್ಪರ್ಧೆಯಲ್ಲಿ ಭಾಗ್ಯಮ್ಮ (ಪ್ರಥಮ), ಕಾವ್ಯ (ದ್ವಿತೀಯ) ಮತ್ತು ಮಮತಾ (ತೃತೀಯ), ಬಲೂನ್ ಮತ್ತು ಕಪ್ ಸ್ಪರ್ಧೆಯಲ್ಲಿ ರೇಷ್ಮಾ (ಪ್ರಥಮ), ಪಾರ್ವತಿ (ದ್ವಿತೀಯ) ಮತ್ತು ಕವಿತಾ (ತೃತೀಯ), ಚಾಕಲೇಟ್ ಮತ್ತು ಸ್ಪೂನ್ ಸ್ಪರ್ಧೆಯಲ್ಲಿ ಹರ್ಷಿತಾ (ಪ್ರಥಮ), ಮಮತಾ (ದ್ವಿತೀಯ) ಮತ್ತು ರೇಷ್ಮಾ (ತೃತೀಯ), ಗ್ಲಾಸ್ ಗೇಮ್‌ನಲ್ಲಿ ರಾಜಮ್ಮ (ಪ್ರಥಮ), ಪಾರ್ವತಿ (ದ್ವಿತೀಯ) ಮತ್ತು ಮಮತಾ (ತೃತೀಯ), ಬಾಟಲ್ ಮತ್ತು ರಿಂಗ್‌ನಲ್ಲಿ ರಾಜಕಮಲಾ (ಪ್ರಥಮ), ಸಾಮೂಹಿಕ ಭಜನಾ ಸ್ಪರ್ಧೆಯಲ್ಲಿ ಶ್ರೀರಾಮ ಭಜನಾ ಮಂಡಳಿ (ಪ್ರಥಮ),ಶ್ರೀಕರ ಭಜನಾ ಮಂಡಳಿ (ದ್ವಿತೀಯ) ಮತ್ತು ಗರುಡಾದ್ರಿ ಭಜನಾ ಮಂಡಳಿ (ತೃತೀಯ) ಬಹುಮಾನ ಪಡೆದುಕೊಂಡಿವೆ. ಬಹುಮಾನ ವಿತರಣಾ ಸಮಾರಂಭದಲ್ಲಿ ಹುಳಿಯಾರು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಪ್ರೀತಿ ರಾಘವೇಂದ್ರ, ವಾಸವಿ ಶಾಲೆಯ ಮುಖ್ಯೋಪಾಧ್ಯಾಯಿನಿ ಸುಧಕ್ಕ, ವಿದ್ಯಾ ವಾರಿಧಿ ಶಾಲೆಯ ಸಂಗೀತ ಶಿಕ್ಷಕಿ ವೀಣಾ, ಅಬಾಕಸ್ ಆಯುಷ್ ಅಕಾಡೆಮಿ ಶಿಕ್ಷಕಿ ಲಕ್ಷ್ಮಿ ಮನೋಜ್, ಜಿ.ಹೆಚ್.ಪಿ.ಜಿ.ಎಸ್ ಸಹಶಿಕ್ಷಕಿ ಶಕುಂತಲಕ್ಕ, ಅಶ್ವಿನಿ ಉಮೇಶ್ ಹಾಗೂ ವಿಶ್ವವಿದ್ಯಾಲಯದ ಸಂಚಾಲಕಿ ಬಿ.ಕೆ. ಗೀತಕ್ಕ ಉಪಸ್ಥಿತರಿದ್ದರು.

ನೊಂದವರ ಕಣ್ಣೀರು ಒರೆಸುವ ವಾತ್ಸಲ್ಯ ಮನೆ ಯೋಜನೆ

ತಿಪಟೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಿಪಟೂರು ತಾಲೂಕು ರಂಗಾಪುರ ವಲಯದ ಕೆಂಕೆರೆ ಕಾರ್ಯ ಕ್ಷೇತ್ರದ ಗೌರಮ್ಮರವರಿಗೆ ವಾತ್ಸಲ್ಯ ಮನೆ ರಚನೆ ಮಾಡಿದ್ದು ಮಂಗಳವಾರ ಜಿಲ್ಲಾ ನಿರ್ದೇಶಕ ಸತೀಶ್ ಸುವರ್ಣ ಹಸ್ತಾಂತರಿಸಿದರು. ತಾಲೂಕಿನಲ್ಲಿ 13ನೇ ಮನೆಯನ್ನು ಹಸ್ತಾಂತರಿಸಿದರು, ಸದ್ರಿಕಾರ್ಯಕ್ರಮದಲ್ಲಿ ಗ್ರಾ ಪಂ ಅಧ್ಯಕ್ಷರು ಹರೀಶ್, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷರು ಶಶಿಧರ್, ಪೂಜ್ಯರು ಹಾಗೂ ಅಮ್ಮನವರು ನೊಂದವರ ಕಣ್ಣೀರು ಒರೆಸುವ ಆಧುನಿಕ ಸಮಾಜದ ಮಾತೃಶಕ್ತಿ ಆಗಿದ್ದು, ಸಮಾಜಕ್ಕೆ ಇನ್ನಷ್ಟು ಸೇವೆ ಮಾಡಲು ಭಗವಂತನ ಅನುಗ್ರಹ ಇರಲಿ ಎಂದು ಹಾರೈಸಿದರು. ತಾಲೂಕಿನ ಕ್ಷೇತ್ರಯೋಜನಾಧಿಕಾರಿ ಉದಯ್ ಕೆ, ಜೆವಿಕೆ ಸಮನ್ವಯಾಧಿಕಾರಿ ಪದ್ಮಾವತಿ, ವಲಯ ಮೇಲ್ವಚಾರಕ ವಿನೋದ್, ಸೇವಾಪ್ರತಿನಿಧಿ ಮಹಾಲಕ್ಷ್ಮೀ, ಸಂಘದ ಸದಸ್ಯರು, ಭಾಗವಹಿಸಿದ್ದರು.

ಶಿವ ವಿವಿಧೋದ್ದೇಶ ಸಹಕಾರ ಸಂಘದ ಕಟ್ಟಡ ಉದ್ಘಾಟನೆ

ತಿಪಟೂರು: ನಗರದ ಕೆ.ಆರ್. ಬಡಾವಣೆ, ಗೋವಿನಪುರ ಸರ್ಕಲ್, ಹಾಲ್ಕುರಿಕೆ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಶಿವ ವಿವಿಧೋದ್ದೇಶ ಸಹಕಾರ ಸಂಘ ನಿ., ತಿಪಟೂರು ಇದರ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಮಾರ್ಚ್ 14ರಂದು ಶನಿವಾರ ಮಧ್ಯಾಹ್ನ 3.30 ಗಂಟೆಗೆ ನೂತನ ಕಟ್ಟಡದ ಮುಂಭಾಗದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಆರ್.ಬಿ.ಆನಂದಮೂರ್ತಿ ತಿಳಿಸಿದ್ದಾರೆ. ಪಾಲ್ಕುರಿಕೆ, ಸಿರಿಗೆರೆಯ ತರಳಬಾಳು ಜಗದ್ಗುರು ಬೃಹನ್ಮಠದ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ. ಸಂಘದ ಅಧ್ಯಕ್ಷರಾದ ಆರ್.ಬಿ.ಆನಂದಮೂರ್ತಿ ಹಾಗೂ ಸಾಧು ವೀರಶೈವ ಸಮಾಜದ ಅಧ್ಯಕ್ಷರಾದ ಪಿ.ಬಿ. ನಂಜಪ್ಪ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿರಲಿದ್ದಾರೆ. ಎಂದು ತಿಳಿಸಿದ್ದಾರೆ.

ಕಠಿಣ ಪರಿಶ್ರಮದಿಂದ ಗುರಿ ಮುಟ್ಟಲು ಸಾಧ್ಯ: ಲಕ್ಷ್ಮೀನಾರಾಯಣ್

ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ

ತುಮಕೂರು: ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡಿದರೆ ಮಾತ್ರ ಬದುಕಿನಲ್ಲಿ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದು ತಾಲೂಕು ಪಂಚಾಯ್ತಿ ಕಾರ್ಯ ನಿರ್ವಹಣಾಧಿಕಾರಿ ಲಕ್ಷ್ಮೀನಾರಾಯಣ್ ಹೇಳಿದರು.

ನಗರದ ಡಾ. ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಏರ್ಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆ ಹಾಗೂವೃತ್ತಿ ಮಾರ್ಗದರ್ಶನತರಬೇತಿಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಗುರಿ ಇಟ್ಟುಕೊಂಡು ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಮುಂದಾಗಬೇಕು. ದೃಢವಾದ ನಿರ್ಧಾರದಿಂದ ಯಶಸ್ಸು ಗಳಿಸಲು ಸಾಧ್ಯ. ಸತತ 8 ರಿಂದ 10 ಗಂಟೆಗಳ ಕಾಲ ಓದಲು ಸಮಯವನ್ನು ಮೀಸಲಿಟ್ಟರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದ ಅವರು, ಆಟದ ಜತೆಗೆ ಪಾಠವೂ ಬಹು ಮುಖ್ಯ. ಇದನ್ನು ಯಾರೂ ಕೂಡ ನಿರ್ಲಕ್ಷಿಸಬಾರದು ಎಂದರು.

ಇತ್ತೀಚಿನ ದಿನಗಳಲ್ಲಿ ಎಲ್ಲರೂ ಮೊಬೈಲ್ ಗೀಳಿಗೆ ಮಾರು ಹೋಗಿ ಅಗತ್ಯವಾಗಿ ಬೇಕಾಗಿರುವುದನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ವಿದ್ಯಾರ್ಥಿಗಳು ಬದುಕು ಕಟ್ಟಿಕೊಳ್ಳಲು ಇದು ಸುಸಂದರ್ಭ. ಹತ್ತಾರು ಹುಳಿ ಏಟು ಬಿದ್ದಾಗ ಒಂದು ಕಲ್ಲು ಅದ್ಭುತ ಶಿಲೆಯಾಗುತ್ತದೆ. ಆದ್ದರಿಂದ ಕಠಿಣ ಪರಿಶ್ರಮ, ಅಭ್ಯಾಸದಿಂದ ಮಾತ್ರ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಅವರು ಹೇಳಿದರು. ತಂದೆ-ತಾಯಿ ನಿಮ್ಮ ಮೇಲೆ ಭರವಸೆ ಇಟ್ಟು ವ್ಯಾಸಂಗ ಮಾಡಲು ಹಳ್ಳಿಗಳಿಂದ ನಗರ ಪ್ರದೇಶಗಳಿಗೆ ಕಳುಹಿಸಿರುತ್ತಾರೆ. ನಾವು ಮಾಡಲು ಆಗದ ಸಾಧನೆಯನ್ನು ನಮ್ಮ ಮಕ್ಕಳು ಮಾಡಬೇಕು ಎಂಬ ಆಸೆಯನ್ನು ಹೆತ್ತವರು ಹೊಂದಿರುತ್ತಾರೆ. ನಮ್ಮ ಕಷ್ಟ ನಮಗೆ ಮಾತ್ರ ಸೀಮಿತವಾಗಿರಲಿ. ನಮ್ಮ ಮಕ್ಕಳಿಗೆ ಬೇಡ ಎಂದು ಎಲ್ಲ ರೀತಿಯಲ್ಲೂ ತ್ಯಾಗ ಮಾಡಿ ನಿಮ್ಮನ್ನು ಓದಿಸುತ್ತಾರೆ. ಇದನ್ನು ವಿದ್ಯಾರ್ಥಿಗಳು ಅರ್ಥೈಸಿಕೊಂಡು ನಿಮ್ಮ ತಂದೆ-ತಾಯಿಗಳ ಆಸೆ ಈಡೇರಿಸಲು ಪರಿಶ್ರಮದಿಂದ ಅಧ್ಯಯನ ಮಾಡಬೇಕು ಎಂದು ಅವರು ಸಲಹೆ ಮಾಡಿದರು. ಸ್ಪರ್ಧಾತ್ಮಕ ಪರೀಕ್ಷೆಗೆ ಪೂರ್ವಭಾವಿ ತಯಾರಿ ಮಾಡಿಕೊಳ್ಳಬೇಕು. ಜತೆಗೆ ಮಾರ್ಗದರ್ಶನವನ್ನು ಪಡೆಯಬೇಕು ಎಂದು ಸಲಹೆ ನೀಡಿದರು. ಕಾರ್ಯಾಗಾರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ರಂಗಸ್ವಾಮಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜಿಲ್ಲಾ ಸಂಯೋಜಕರಾದ ಶಶಿಧರ್, ಸಂಪನ್ಮೂಲ ವ್ಯಕ್ತಿಗಳಾದ ನಾಗರಾಜು, ಉದಯ್ ಸಾಗರ್, ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿದ್ಯಾರ್ಥಿಗಳು ಭಾಗವಹಿಸಿದ್ದರು. ನಿಲಯ ಪಾಲಕರಾದ ಅನಂತರಾಜು ಸ್ವಾಗತಿಸಿದರು.



ವಿದ್ಯಾರ್ಥಿಗಳು ದೃಢವಾದ ಸಂಕಲ್ಪ ಮಾಡಿದಾಗ ಮಾತ್ರ ಜೀವನದಲ್ಲಿ ಯಶಸ್ಸು ಸಾಧ್ಯವಾಗುತ್ತದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಷ್ಟೇ ಅಂಕ ಗಳಿಸಿದರೂ ಸಾಲದಾಗುತ್ತಿದೆ. ದಿನೇ ದಿನೇ ಸ್ಪರ್ಧಾತ್ಮ ಜಗತ್ತು ಉದ್ಭವವಾಗುತ್ತಿರುವುದರಿಂದ ಎಷ್ಟು ಪರಿಶ್ರಮ ಪಟ್ಟರೂ ಸಾಲದಾಗುತ್ತಿದೆ.
■ ಲಕ್ಷ್ಮೀನಾರಾಯಣ್, ತಾ.ಪಂ ಸಿಇಒ

ವಿಶಿಷ್ಟಚೇತನರನ್ನು ಶೋಷಿಸುವುದು ಅಪರಾಧ

ತುಮಕೂರು: ವಿಶಿಷ್ಟಚೇತನ ಮತ್ತು ಬುದ್ಧಿಮಾಂದ್ಯ ಮಕ್ಕಳನ್ನು ಮನೆಯಿಂದ ಹೊರಗೆ ಬಾರದಂತೆ ಬಂಧಿಸಿ ಕೂಡಿ ಹಾಕುವುದು ಅಪರಾಧ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ನೂರುನ್ನೀಸಾ ತಿಳಿಸಿದರು.

ನಗರದ ಬಾಲಭವನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತುಮಕೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಜಿಲ್ಲಾಮಕ್ಕಳರಕ್ಷಣಾಘಟಕ,ತುಮಕೂರು, ವಿಶಿಷ್ಟಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ತುಮಕೂರು, ಮೊಬಿಲಿಟಿ ಇಂಡಿ ಯಾ, ತುಮಕೂರು, ವಿಶಿಷ್ಟಚೇತನ ಮಕ್ಕಳೊಂದಿಗೆ ಕಾರ್ಯನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ವಿಶೇಷ ಶಾಲೆಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಶಿಷ್ಟಚೇತನ ಮಕ್ಕಳು ಹಾಗೂ ಆರೈಕೆದಾರರೊಂದಿಗೆ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅನಿಷ್ಠ ಪದ್ದತಿಗಳ ಸಂಕೋಲೆಯಿಂದ ವಿಶಿಷ್ಟಚೇತನ ಮಕ್ಕಳನ್ನು ಕಟ್ಟಿ ಹಾಕುವುದು, ಕೂಡಿ ಹಾಕಬಾರದು. ಇಂತಹ ಪದ್ದತಿಗಳು ಕಂಡು ಬಂದರೆ ಅಂತಹವರಿಗೆ ಕಾನೂನಿನಲ್ಲಿ ದಂಡನೆ ಮತ್ತು ಶಿಕ್ಷೆ ವಿಧಿಸಲು ಅವಕಾಶ ಇದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ.ಕೆ.ಟಿ.ತಿಪ್ಪೇಸ್ವಾಮಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪವಿತ್ರ, ಮೊಬಿಲಿಟಿ ಇಂಡಿಯಾ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ಅಲ್ಬಿನಾ ಶಂಕರ್, ವಿಶಿಷ್ಟಚೇತನ ಮಕ್ಕಳ ಮಕ್ಕಳ ಪೋಷಕರು ಆಯೋಗದಸದಸ್ಯ ಡಾ.ಕೆ.ಟಿ.ತಿಪ್ಪೇಸ್ವಾಮಿ, ವ್ಯವಸ್ಥಾಪಕರಾದ ಆನಂದ್ ಎಸ್.ಎನ್., ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಬಿ.ಎಸ್. ಚಿದಾನಂದಮೂರ್ತಿ ಉಪಸ್ಥಿತರಿದ್ದರು.



ಮಹಿಳೆಯರು ಸಮಾಜದ ಪ್ರೇರಕ ಶಕ್ತಿ: ಡಾ.ಇಂದಿರಾ



ಮಧುಗಿರಿ: ಮಹಿಳೆ ಕೇವಲ ಕುಟುಂಬಕ್ಕೆ ಸೀಮಿತವಾಗಿದೆ ಇಡೀ ಸಮಾಜದ ಪ್ರೇರಕ ಶಕ್ತಿಯಾಗಿದ್ದು, ಹೆಣ್ಣು ಮಕ್ಕಳ ಜೀವನವು ದೇವರು ಕೊಟ್ಟ ಒಂದು ವರವಾಗಿದೆ ಎಂದು ಮಧುಗಿರಿ ಸಾರ್ವಜನಿಕ ಆಸ್ಪತ್ರೆಯ ವೈದ್ಯೆ ಡಾ.ಇಂದಿರಾ ಅಭಿಪ್ರಾಯಪಟ್ಟರು. ಅವರು ಪಟ್ಟಣದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಮಹಿಳೆಯರು ಆರೋಗ್ಯದ ಕಡೆ ಹೆಚ್ಚು ಗಮನಹರಿಸಬೇಕಿದ್ದು, ರಕ್ತಹೀನತೆ, ರಕ್ತಸ್ರಾವದಂತಹ ಪರಿಸ್ಥಿತಿ ಬಾರದಂತೆ ಉತ್ತಮ ಪೌಷ್ಟಿಕಾಂಶಯುಕ್ತ ಆಹಾರ ತೆಗೆದುಕೊಳ್ಳಬೇಕು.ಗ್ರಾಮೀಣ ಪ್ರದೇಶದ ಮಹಿಳೆಯರು ಶುಚಿತ್ವಕ್ಕೆ ಆದ್ಯತೆ ನೀಡುವ ಮೂಲಕ ಶಿಕ್ಷಣ ಪಡೆದು ಸಾಧಕರಾಗಬೇಕೆಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಐಕ್ಯೂಎಸಿ ಸಂಚಾಲಕರಾದ ಪ್ರೊ. ವೇದಲಕ್ಷ್ಮೀ.ಜಿ , ಮಹಿಳಾ ಸಮಾನತೆಯ ಉದ್ದೇಶವನ್ನಿಟ್ಟುಕೊಂಡು ಆರಂಭವಾದ ಚಳವಳಿಯು ಫಲ ನೀಡುತ್ತ ಬಂದಿರುವುದು ಆಶಾದಾಯಕ ಸಂಗತಿಯಾಗಿದ್ದು, ಮಹಿಳೆ ಸ್ವಾವಲಂಬಿಯಾದಾಗ ದೇಶದ ಅಭಿವೃದ್ಧಿ ಸಾಧ್ಯವೆಂದರು.

ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಗೋವಿಂದರಾಯ ಮಾತನಾಡಿ ಮಹಿಳಾ ಸಮಾನತೆಯು ಕೇವಲ ಒಂದು ಸಾಮಾಜಿಕ ಘೋಷಣೆಯಲ್ಲ, ಅದು ಸುಸ್ಥಿರ ಸಮಾಜದ ಭದ್ರಬುನಾದಿ.ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡದೆ ಪುರುಷನಂತೆ ಸಮಾನ ಹಕ್ಕು,ಅವಕಾಶ ಮತ್ತು ಗೌರವ ನೀಡುವುದು ಇಂದಿನ ಅಗತ್ಯವಾಗಿದೆ ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಪ್ರೊ.ಕುಮಾರ್ ಕೆ.ಎಸ್ ಮಹಿಳೆಯರ ಸಾಮಾಜಿಕ,ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿನ ಸಾಧನೆ ಅನನ್ಯವಾಗಿದ್ದು, ಯುವತಿಯರು ಮಹಿಳಾ ಸಾಧಕರ ಯಶೋಗಾಥೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಬಿ, ಪತ್ರಾಂಕಿತ ವ್ಯವಸ್ಥಾಪಕಿ ಚಂದ್ರಕಲಾ, ಕಾಲೇಜಿನ ಪ್ರಾಧ್ಯಾಪಕ ಡಾ.ವಿಜಯಲಕ್ಷ್ಮೀ, ಡಾ.ರಂಜಿತಾ, ಡಾ.ಲತಾ, ಡಾ.ಲೀಲಾವತಿ ಮಾತನಾಡಿದರು. ಡಾ.ಮಂಜುನಾಥ್ ಬುಡಸನಹಳ್ಳಿ, ಡಾ.ನಾಗರಾಜು, ಡಾ.ಸಂಜೀವಮೂರ್ತಿ, ಡಾ.ಶ್ರೀನಿವಾಸಪ್ಪ, ಡಾ.ದುರ್ಗಪ್ಪ, ರಾಮಮೂರ್ತಿ, ನಟರಾಜು, ಪ್ರದೀಪ್, ಮುಜ್ತಬ್ ಪರ್ಹಿನ್, ಸಿದ್ದೇಶ್ವರ ಹಾಜರಿದ್ದರು.

ತಾಲೂಕುಮಟ್ಟದ ಹಸುಗಳ ಅಧಿಕ ಹಾಲು ಕರೆಯುವ ಸ್ಪರ್ಧೆ

ಹುಳಿಯಾರು: ಚಿಕ್ಕನಾಯಕನಹಳ್ಳಿ ತಾಲೂಕಿನ ಹಾಲು ಉತ್ಪಾದಕರಲ್ಲಿ ಸ್ಪರ್ಧಾ ಮನೋಭಾವ ಬೆಳೆಸಲು ಹಾಗೂ ಉತ್ತಮ ತಳಿಯ ಹಸುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ತುಮಕೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ತುಮುಲ್), ಪಶುಪಾಲನಾ ಇಲಾಖೆ ಹಾಗೂ ಯಳನಾಡು ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ತಾಲ್ಲೂಕು ಮಟ್ಟದ ಹಸುಗಳ ಅಧಿಕ ಹಾಲು ಕರೆಯುವ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಯು ಮಾರ್ಚ್ 15 ರ ಸಂಜೆ ಮತ್ತು 16 ರ ಬೆಳಗ್ಗೆ ನಡೆಯಲಿದ್ದು, ವಿಜೇತರಿಗೆ ಮಾರ್ಚ್ 17ರಂದು ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಯಳನಾಡು ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಬಹುಮಾನ ವಿತರಿಸಲಾಗುವುದು.

ವಿಜೇತರಿಗೆ ಪ್ರಥಮ ಬಹುಮಾನವಾಗಿ 30,000 ರೂ. ದ್ವಿತೀಯ ಬಹುಮಾನವಾಗಿ 20,000 ರೂ. ತೃತೀಯ ಬಹುಮಾನವಾಗಿ 10,000 ರೂ. ನೀಡಲಾಗುವುದು. ಚಿಕ್ಕನಾಯಕನಹಳ್ಳಿ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಗೋಪಾಲಕರಿಗೆ ಮಾತ್ರ ಅವಕಾಶ. ದಿನಕ್ಕೆ ಕನಿಷ್ಠ 20 ಲೀಟರ್ ಹಾಲು ಕರೆಯುವ ಸಾಮರ್ಥ್ಯವಿರುವ ಹಸುಗಳನ್ನು ಮಾತ್ರ ಸ್ಪರ್ಧೆಗೆ ತರಬೇಕು ಎಂದರು.

ಹೆಚ್ಚಿನ ವಿವರಗಳಿಗಾಗಿ ಡಾ.ಎಲ್.ಡಿ.ದೀಕ್ಷಿತ್: 9743503701, ಮೋಹನ್ ಕುಮಾರ್ ಬಿ.ಎಸ್: 9380856197, ನಾಗಭೂಷಣ ವೈ.ಎಸ್: 9731089028 ಸಂಪರ್ಕಿಸಿ ಪಡೆಯುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕ್ರೈಸ್ತ ವ್ಯಕ್ತಿ ಶವ ಸಂಸ್ಕಾರಕ್ಕೆ ಅಡ್ಡಿ

ಕುಣಿಗಲ್: ಕ್ರೈಸ್ತ ಸಮುದಾಯದ ವ್ಯಕ್ತಿಯೊಬ್ಬರ ಶವಸಂಸ್ಕಾರ ಮಾಡಲು ವಿವಾದಿತ ಜಮೀನಿನಲ್ಲಿ ತೆರಳುವಾಗ ಮುಸ್ಲಿಂ ವ್ಯಕ್ತಿಯೊಬ್ಬರು ಅಡ್ಡಿಪಡಿಸಿದ್ದರಿಂದ ಪೊಲೀಸರು ಮಧ್ಯ ಪ್ರವೇಶಿಸಿ ಶವಸಂಸ್ಕಾರಕ್ಕೆ ಅವಕಾಶ ಮಾಡಿಕೊಟ್ಟ ಘಟನೆ ಪಟ್ಟಣದಲ್ಲಿ ನಡೆದಿದೆ. ಪಟ್ಟಣದ ಸಿಎಸ್ಐ ಚರ್ಚ್ ವ್ಯಾಪ್ತಿಗೆ ಬರುವ ಮಿಷನ್ ಕಾಂಪೌಂಡ್ ಬಡಾವಣೆ ಜಯಶೀಲ (65) ಸಾವನ್ನಪ್ಪಿದ್ದರು, ಮಂಗಳವಾರ ಶವ ಸಂಸ್ಕಾರ ಮಾಡಲು ಸಿಎಸ್ಐ ಕ್ರೈಸ್ತ ಗ್ರೂಪ್ ದೇವಾಲಯದ ಸ್ಮಶಾನಕ್ಕೆ ಶವ ತೆಗೆದುಕೊಂಡು ಹೋಗುವಾಗ ಮುಸ್ಲಿಂ ಜನಾಂಗಕ್ಕೆ ಸೇರಿದ ಬರ್ಕತ್ ಮತ್ತಿತರರು ವಿವಾದಿತ ಪ್ರದೇಶದಲ್ಲಿ ಶವ ಸಾಗಿಸಲು ಬಿಡುವುದಿಲ್ಲ ಎಂದು ಅಡ್ಡಿಪಡಿಸಿದರು. 2 ಗುಂಪಿನ ನಡುವೆ ಮಾತಿನ ಚಕಮುಖಿ ಉಂಟಾದ ಹಿನ್ನೆಲೆಯಲ್ಲಿ ಸೂಕ್ಷ್ಮತೆ ಅರಿತ ಇನ್ಸ್‌ಪೆಕ್ಟರ್ ಮಾಧ್ಯ ನಾಯಕ್ ಮಧ್ಯ ಪ್ರವೇಶಿಸಿ ಮುಸಲ್ಮಾನ್ ಯುವಕರಿಗೆ ಬುದ್ಧಿ ಹೇಳಿ ಶವ ಸಾಗಿಸಲು ಅವಕಾಶ ಮಾಡಿಕೊಟ್ಟ ಹಿನ್ನೆಲೆಯಲ್ಲಿ ಮುಖಂಡರು ಶವ ಸಂಸ್ಕಾರ ನೆರವೇರಿಸಿಕೊಂಡರು. ಸ್ಮಶಾನಕ್ಕೆ ಹೋಗುವ ಪಕ್ಕದಲ್ಲಿ ಜಮೀನಿದ್ದು ಇದು ಸಿಎಸ್ಐ ಚರ್ಚ್ ಮತ್ತು ಮುಸ್ಲಿಂ ಜನಾಂಗದವರ ಮಧ್ಯೆ ವಿವಾದವಿದ್ದು ಸುಮಾರು ವರ್ಷಗಳಿಂದ ನ್ಯಾಯಾಲಯದ ಪ್ರಕರಣ ನಡೆಯುತ್ತಿದೆ. ಕ್ರೈಸ್ತ ಧರ್ಮದ ಮುಖಂಡರು ಹಾಗೂ ಮುಸ್ಲಿಂ ಮುಖಂಡರು ಪೊಲೀಸರು ಇದ್ದರು.



ಕರಪತ್ರ ಅಂಟಿಸಿ ಮಾರ್ಯಾದೆ ಹರಾಜು: ಆರೋಪ

ಕೊರಟಗೆರೆ: ತುಮಕೂರಿನ ಕೊಡಚಾದ್ರಿ ಚೀಟ್ಸ್ ಪ್ರೈವೇಟ್ ಲಿಮಿಟೆಡ್‌ನ ಗೌತಮ್ ಹಾಗೂ ಈತನ ಅಕ್ಕ ಶಿಲ್ಪಾ ದೌರ್ಜನ್ಯದಿಂದ ಚೀಟಿ ಹಣ ವಸೂಲಿ ಮಾಡಲು ನನ್ನ ಭಾವಚಿತ್ರವಿರುವಕರಪತ್ರಗಳನ್ನು ಕುರಂಕೋಟೆ ಗ್ರಾಮಹಾಗೂತಾಲೂಕಿನಾದ್ಯಂತಗೋಡೆಗಳಿಗೆ ಅಂಟಿಸಿ ಸೋಷಿಯಲ್ ಮೀಡಿಯಾದಲ್ಲಿ ಮಾನ ಮಾರ್ಯಾದೆ ಹರಾಜು ಹಾಕಿ ವೈಯಕ್ತಿಕವಾಗಿ ನನ್ನ ಮತ್ತು ಕುಟುಂಬವನ್ನು ಮಾನಸಿಕವಾಗಿ ಹಿಂಸಿಸಿದ್ದಾರೆ ಎಂದು ನೊಂದ ವ್ಯಕ್ತಿ ಕುರಂಕೋಟೆ ಸಿದ್ದರಾಜು ತಿಳಿಸಿದರು.



» ಚೀಟಿ ಹಣ ವಸೂಲಿಗೆ ತಾಲೂಕಿನಾದ್ಯಂತ ಗೋಡೆಗಳಿಗೆ ಕರಪತ್ರ ಅಂಟಿಸಿದ ಆರೋಪ

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. 2023-24ರಲ್ಲಿ ಕೊಡಚಾದ್ರಿ ಪ್ರೈವೇಟ್ ಲಿಮಿಟೆಡ್‌ನಲ್ಲಿ ಐದು ಲಕ್ಷ ಸಾಲ ಪಡೆದಿದ್ದೇನೆ, ಸಾಲ ಪಡೆಯುವ ವೇಳೆ ನಮ್ಮ ಗ್ರಾಮದ ಗೌತಮ್ ಎಂಬಾತನು ಮ್ಯಾನೇಜರ್ ಆಗಿದ್ದು, 3.5ಲಕ್ಷವರೆಗೆ ವಾಪಸ್ ಲಿಮಿಟೆಡ್‌ಗೆ ಪಾವತಿಸಿದ್ದೇನೆ ಎಂದು ಹೇಳಿದರು. ಬೈಕ್ ಅಪಘಾತವಾದ ಸಂದರ್ಭದಲ್ಲಿ ಗೌತಮ್‌ಗೆ 65 ಸಾವಿರ ನಗದು ಹಣ, ಫೋನ್ ಪೇ ಮೂಲಕ 1ಲಕ್ಷ ಹಣ ಪಾವತಿಸಿದ್ದೇನೆ, ನೀಡಿದ 65 ಸಾವಿರ ನಗದು ಹಣವನ್ನು ಲಿಮಿಟೆಡ್‌ಗೆ ಸಂದಾಯ ಮಾಡಿಲ್ಲ, ಕೊಡಚಾದ್ರಿ ಸಂಸ್ಥೆಯಿಂದ ಸೂರ್ಯಪುತ್ರ ಸಂಸ್ಥೆಯಲ್ಲಿ ಮ್ಯಾನೇಜರ್ ಎಂದು ಹೇಳಿ ಸಾಲ ಕೊಡಿಸುವ ಭರವಸೆ ನೀಡಿದ್ದರಿಂದ 50 ಸಾವಿರ ನೀಡಿದ್ದೇನೆ. ಮೂರು ತಿಂಗಳ ನಂತರ ನಿನ್ನ ಹಣ ಕಂಪನಿಗೆ ಕಟ್ಟಿದ್ದೇನೆ ಎಂದು ಧಮ್ಕಿ ಕೂಡ ಹಾಕಿ ನೀನು ಈ ಹಣದ ಸುದ್ದಿಗೆ ಬಂದರೆ ಗತಿ ಕಾಣಿಸುತ್ತೇನೆಂದು ಜೀವ ಬೆದರಿಕೆ ಕೂಡ ಹಾಕಿದ್ದಾರೆ ಎಂದರು.

ಕೊಟ್ಟಿರುವ ಹಣವನ್ನು ನಮ್ಮ ಕುಟುಂಬದವರು ಕೇಳಿದಾಗ ಹಲ್ಲೆಗೆ ಮುಂದಾಗಿದ್ದಾನೆ, ಮಾ.1ರಂದು ನನ್ನ ಭಾವಚಿತ್ರವನ್ನು ಅಂಟಿಸಿದ್ದು, ಸಂಸ್ಥೆಯವರನ್ನು ಅಂಟಿಸಿದಾಗ ನಾವು ಯಾವುದೇ ಚೀಟಿ ಅಂಟಿಸಿಲ್ಲ ಎಂದು ಹೇಳಿದ್ದು, ರಾಜ್ಯಸುದ್ದಿ ವಾಹಿನಿಯಲ್ಲಿ ವರದಿ ಪ್ರಸಾರವಾದ ಬೆನ್ನಲ್ಲೇ ಗೌತಮ್ ಅಕ್ಕ ಶಿಲ್ಪ ಕುರಂಕೋಟೆ ಸಿದ್ದರಾಜು ದೊಡ್ಡ ಮೋಸಗಾರ, ಅಧಿಕಾರಿಗಳನ್ನು ಮತ್ತು ಜನರನ್ನು ಬೆದರಿಸಿ ಜೀವನ ಮಾಡುತ್ತಿದ್ದಾನೆ, ದೇವಸ್ಥಾನ ಪಂಪು ಮೋಟಾರ್, ಲೆಂತ್ ಕದ್ದಿದ್ದಾನೆ, ಜನಗಳನ್ನು ಹೆದರಿಸಿಕೊಂಡು ಜೀವನ ಮಾಡುವುದೇ ಇವನ ಕೆಲಸ ಎಂದು ಅವಮಾನಿಸಿದ್ದಾರೆ ಎಂದು ಮಾಧ್ಯಮದ ಮೂಲಕ ಅಳಲನ್ನು ತೋಡಿಕೊಂಡಿದ್ದು, ಸಂಬಂಧಪಟ್ಟ ಇಲಾಖೆ ರಕ್ಷಣೆ ನೀಡಿ ನ್ಯಾಯ ಒದಗಿಸುವಂತೆ ಕೋರಿದರು.

ಚೆಣ್ಣರ ಚಿಲಿಪಿಲಿ ಶಾಲಾ ವಾರ್ಷಿಕೋತ್ಸವ | ಸಿಸಿ ರಸ್ತೆಯ ಉದ್ಘಾಟನೆ

ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸಿ

ತಿಪಟೂರು: ತಾಲೂಕಿನ ಕಿಬ್ಬನಹಳ್ಳಿ ಹೋಬಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕರಡಾಳು ಸಂತೆ ಮೈದಾನ ಶಾಲೆಯಲ್ಲಿ ಚಿಣ್ಣರ ಚಿಲಿಪಿಲಿ ಶಾಲಾ ವಾರ್ಷಿಕೋತ್ಸವ ಹಾಗೂ ಸಂಪೂರ್ಣ ದಾನಿಗಳ ಸಹಕಾರದಿಂದ ನಿರ್ಮಿಸಿರುವ ಜ್ಞಾನ ಸೂರ್ಯ ಶಾಲಾ ಕಲಾಮಂದಿರ ಶಾಲಾ ಪ್ರವೇಶ ದ್ವಾರ ಹಾಗೂ ಸಿಸಿ ರಸ್ತೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈ ಎಲ್ಲಾ ಕಾರ್ಯಕ್ರಮಗಳನ್ನು ತಾಲೂಕಿನ ಜನಪ್ರಿಯ ಶಾಸಕ ಕೆ.ಷಡಕ್ಷರಿ ಉದ್ಘಾಟನೆ ಮಾಡಬೇಕಿತ್ತು. ಬಜೆಟ್ ಅಧಿವೇಶನದಲ್ಲಿ ಭಾಗವಹಿಸಿದ್ದ ಕಾರಣ ಸನ್ಮಾನ್ಯರ ಅನುಪಸ್ಥಿತಿಯಲ್ಲಿ ಜ್ಞಾನಸೂರ್ಯ ಶಾಲಾ ಕಲಾಮಂದಿರಕ್ಕೆ ಸಂಪೂರ್ಣ ಕಬ್ಬಿಣ ಹಾಗೂ ಶೀಟ್ ಗಳನ್ನ ಕೊಡುಗೆ ನೀಡಿ ಕಲಾಮಂದಿರ ಸಾಕಾರಗೊಳ್ಳಲು ಸಹಕರಿಸಿದ ಕೆಪಿಸಿಸಿ ಸದಸ್ಯರಾದಂತಹ ಡಾ.ವಿ.ಯೋಗೇಶ್ ಕೆಪಿಸಿಸಿ ಸದಸ್ಯರು ಸದರಿ ಕಾರ್ಯಕ್ರಮಗಳನ್ನು ಉದ್ಘಾಟನೆ ಮಾಡಿದರು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಎಲ್ಲ ಸರ್ಕಾರಿ ಶಾಲೆಗಳು ಈ ರೀತಿ ಎಸ್ಡಿಎಂಸಿ ಗ್ರಾಮಸ್ಥರು ಪೋಷಕರು ಹಾಗೂ ದಾನಿಗಳ ನೆರವನ್ನು ಪಡೆದು ಶಾಲೆಗಳನ್ನು ಸಬಲೀಕರಣಗೊಳಿಸಿದರೆ ಯಾವುದೇ ಸರ್ಕಾರಿ ಶಾಲೆ ಮುಚ್ಚುವ ಹಂತಕ್ಕೆ ಬರುವುದಿಲ್ಲ ಎಂದು ತಿಳಿಸಿದರು. ಹಾಗೂ ಶಾಲೆಯ ಈ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿದರು.

ತಿಪಟೂರು ತಾಲೂಕು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಎಂ.ಎಂ.ಉಮೇಶ್ ಗೌಡ , ಮುಖ್ಯಶಿಕ್ಷಕ ಟಿ.ಕೆ.ಪಟ್ಟಾಭಿರಾಮ , ಶಾಲಾ ಎಸ್ಡಿಎಂಸಿ ಅಧ್ಯಕ್ಷರಾದ ಎನ್.ನರಸಿಂಹಮೂರ್ತಿ ದಾನಿಗಳಾದ ಡಾ.ವಿ.ಯೋಗೇಶ್, ಶಿಕ್ಷಕರ ಸಂಘದ ಸಹ ಕಾರ್ಯದರ್ಶಿ, ಸಿ.ಎಸ್.ನಾಗರಾಜು, ಎಸ್‌ಡಿಎಂಸಿ ಉಪಾಧ್ಯಕ್ಷ ಸ್ವರೂಪ್ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ . ವಿರೂಪಾಕ್ಷ, ಮಾಜಿ ಗ್ರಾಮ ಪಂಚಾಯ್ತಿ ಸದಸ್ಯ ಶಂಕರಯ್ಯ, ಕೆ.ಡಿ. ಚಂದ್ರಶೇಖರ್, ಕುಶಲಕರ್ಮಿ ಕೆಂಪಾಚಾರ್ ಸಿಆರ್‌ಪಿ ಹರೀಶ್ ಮಡೇನೂರ್ ಶಾಲೆಯ ಮುಖ್ಯ ಲೋಕೇಶ್ ಗ್ರಾಮಸ್ಥರು ಪೋಷಕರು ಹಿರಿಯ ವಿದ್ಯಾರ್ಥಿಗಳು ಹಾಗೂ ಎಲ್ಲರೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




ಗ್ರಾಮೀಣರ ಆರೋಗ್ಯಕ್ಕೆ ಆಯುಷ್ಮಾನ್ ಆರೋಗ್ಯ ಕೇಂದ್ರ ಸ್ಥಾಪನೆ

ನಮ್ಮ ಕ್ಷೇತ್ರದಲ್ಲಿ ಆರೋಗ್ಯ, ಶಿಕ್ಷಣಕ್ಕೆ ಒತ್ತು

ಚಿಕ್ಕನಾಯಕನಹಳ್ಳಿ: ಗ್ರಾಮೀಣ ಭಾಗದ ಜನರಿಗಾಗಿ 65 ಲಕ್ಷ ವೆಚ್ಚದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರವನ್ನು ನಿರ್ಮಿಸಲಾಗುವುದು ಇದರಲ್ಲಿ ಜನತೆಗೆ ಗುಣಮಟ್ಟದ ಮೂಲಭೂತ ಸೌಕರ್ಯಗಳೊಂದಿಗೆ ತಪಸಾಣೆ, ಔಷಧ ವಿತರಣೆ ಹಾಗೂ ವಿವಿಧ ಆರೋಗ್ಯ ಸೇವೆಗಳನ್ನು ನೀಡಲಾಗುವುದು ಇದನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವಂತೆ ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ತಾಲೂಕಿನ ಹಂದನಕೆರೆ ಹೋಬಳಿಯ ಚೌಳಕಟ್ಟೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಹರೇನಹಳ್ಳಿ ಗೇಟ್ ಬಳಿ ನೂತನ ಆಯುಷ್ಮಾನ್ ಆರೋಗ್ಯ ಮಂದಿರ ಕಟ್ಟಡ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು ತಾಲೂಕಿನಲ್ಲಿರುವಂತಹ ಮೂರು ಉಪಕೇಂದ್ರಗಳ ಕಟ್ಟಡಕ್ಕೆ ಅನುಮೋದನೆ ದೊರಕಿದ್ದು ಅದರಂತೆ ಚೌಳಕಟ್ಟೆ, ಹಾಗೂ ಗೋಡೆಕೆರೆಯ ಸೋಮನಹಳ್ಳಿಗೆ ಮಂಜೂರಾಗಿದೆ. ಈ ಹಿಂದೆ ಆರೋಗ್ಯ ಇಲಾಖೆಯ ಉಪಕೇಂದ್ರಗಳು ಎಂದು ಕರೆಯುತ್ತಿದ್ದ ಈ ಆಸ್ಪತ್ರೆಗಳನ್ನು ಇನ್ನು ಮುಂದೆ ಆಯುಷ್ಮಾನ್ ಆರೋಗ್ಯ ಮಂದಿರ ಎಂದು ಕರೆಯಲಾಗುವುದು ಎಂದರು.

ನಮ್ಮ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, 65ಲಕ್ಷ ವೆಚ್ಚದಲ್ಲಿ ಇಂದು ಗುದ್ದಲಿ ಪೂಜೆ ನೆರವೇರಿಸಿದ ಚೌಳಕಟ್ಟೆಯ ಈ ಆರೋಗ್ಯ ಮಂದಿರದಲ್ಲಿ ಸಾರ್ವಜನಿಕರಿಗೆ ಅಗತ್ಯವಾದ ಚಿಕಿತ್ಸೆ, ತಪಾಸಣೆ ಔಷದಿ ವಿತರಣೆ ಎಲ್ಲ ಇದ್ದು ಇದನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಿ ನಿಮ್ಮ ಆರೋಗ್ಯದ ಬಗ್ಗೆ ಎಚ್ಚರವಹಿಸಿ ಆರೋಗ್ಯ ಹಾಳಾಗುವ ಮೊದಲು ಅದಕ್ಕೆ ಎಚ್ಚರಿಕೆ ವಹಿಸುವುದು ಸೂಕ್ತ ಆದ್ದರಿಂದ ನಿಮ್ಮ ಮನೆಯ ಗ್ರಾಮದ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ ಎಂದರು. ಪಿಎಲ್‌ಡಿ ಬ್ಯಾಂಕ್‌ನ ನಿರ್ದೇಶಕ ರಾಮಚಂದ್ರಯ್ಯ, ತಾಲೂಕು ವೈದ್ಯಾಧಿಕಾರಿ ಡಾ.ಅಜಯ್, ಹಂದನಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ.ಶರತ್ ಮತ್ತು ಆರೋಗ್ಯ ಇಲಾಖೆಸಿಬ್ಬಂದಿ ಮತ್ತು ಆಶಾಕಾರ್ಯಕರ್ತೆಯರು ಹಾಜರಿದ್ದರು.



ಕಿರುಸುದ್ದಿ

ಫೆ.13ರಂದು ನೇರ ಸಂದರ್ಶನ ಕಾರ್ಯಕ್ರಮ

ರಾಮನಗರ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮಾ.13ರ ಶುಕ್ರವಾರ ಉಚಿತ ನೇರ ಸಂದರ್ಶನ ಕಾರ್ಯಕ್ರಮದಲ್ಲಿ ಇಂದೂಸ್ಲ್ಯಾಂಡ್ ಬ್ಯಾಂಕ್ (ಭಾರತ್ ಫೈನಾನ್ಷಿಯಲ್ ಇನ್ಕ್ಲ್ಯೂಷನ್ ಲಿಮಿಟೆಡ್) ಖಾಸಗಿ ಸಂಸ್ಥೆಯವರು ಭಾಗವಹಿಸುತ್ತಿದ್ದು, ಉದ್ಯೋಗಾಂಕ್ಷಿಗಳನ್ನು ನೇಮಕ ಮಾಡಿಕೊಳ್ಳಲಿರುವುದರಿಂದ ಖಾಸಗಿ ವಲಯದಲ್ಲಿನ ಉದ್ಯೋಗಕ್ಕೆ ಆಸಕ್ತರಿರುವ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ/ರೆಸ್ಯೂಮ್ (ಬಯೋಡೇಟಾ), ಇತ್ಯಾದಿ ದಾಖಲೆಗಳೊಂದಿಗೆ ಮಾ.13ರ ಶುಕ್ರವಾರ ಬೆಳಿಗ್ಗೆ 10.30.ಕ್ಕೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಕೊಠಡಿ ಸಂಖ್ಯೆ.208, ಮೊದಲನೇ ಮಹಡಿ, ಕಂದಾಯ ಭವನ, ಬಿ.ಎಂ. ರಸ್ತೆ, ರಾಮನಗರ. ಇಲ್ಲಿ ನೇರ ಸಂದರ್ಶನ ಕಾರ್ಯಕ್ರಮ ನಡೆಯುತ್ತಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9154308836 ಮತ್ತು 9154849238 ಅನ್ನು ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜಯಮ್ಮ ನಿಧನ

ರಾಮನಗರ: ತಾಲೂಕಿನ ಬೆಜ್ಜರಹಳ್ಳಿ ಕಟ್ಟೆ ಗ್ರಾಮದ ಕೃಷ್ಣಪ್ಪ ಅವರ ಧರ್ಮಪತ್ನಿ ವಿಜಯಮ್ಮ 65 ವರ್ಷ ಅವರು ಮಂಗಳವಾರ ಮುಂಜಾನೆ ವಿಧಿವಶರಾದರು.



ಮೃತ ವಿಜಯಮ್ಮ ಅವರು ಪತಿ ಕೃಷ್ಣಪ್ಪ, ಮಕ್ಕಳಾದ ಕಿರಣ್ ಮತ್ತು ಪತ್ರಕರ್ತ ಕೆ.ಅರುಣ್ ಸೇರಿದಂತೆ ತುಂಬು ಕುಟುಂಬವನ್ನು ಅಗಲಿದ್ದಾರೆ. ಮಾಜಿ ಶಾಸಕ ಎ.ಮಂಜುನಾಥ್, ಕೆಎಂಎಫ್ ಮಾಜಿ ಅಧ್ಯಕ್ಷ ಪಿ.ನಾಗರಾಜು, ನಗರಸಭೆ ಅಧ್ಯಕ್ಷರಾದ ಕೆ.ಶೇಷಾದ್ರಿ, ಮಾಜಿ ಉಪಾಧ್ಯಕ್ಷೆ ಆಯಿಷಾಭಾನುಶಫಿ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅದ್ಯಕ್ಷ ಎ.ಬಿ.ಚೇತನ್ ಕುಮಾರ್ , ಮಾಜಿ ಅಧ್ಯಕ್ಷ ರಾಜಶೇಖರ್, ಜೆಡಿಎಸ್ ತಾಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ ಸೇರಿದಂತೆ ನಗರಸಭಾ ಸದಸ್ಯರು, ಜಿಲ್ಲೆಯ ಪತ್ರಕರ್ತರು, ಸಂಘ ಸಂಸ್ಥೆಗಳ ಮುಖ್ಯಸ್ಥರು, ಸ್ನೇಹಿತರು, ಬಂಧು ಬಳಗದವರು ಮೃತರ ಅಂತಿಮ ದರ್ಶನ ಪಡೆದರು. ಹಿಂದೂ ಸಂಪ್ರದಾಯದಂತೆ ವಿಜಯಮ್ಮ ಅವರ ಅಂತ್ಯಕ್ರಿಯೆ ಮಧ್ಯಾಹ್ನ ನೆರವೇರಿತು.

ಜೂಲಿಯಾನ ರಾಜನ್ ನಿಧನ

ರಾಮನಗರ: ನಗರದ ಹನುಮಂತ ನಗರದ ನಿವಾಸಿ ಜೂಲಿಯಾನ ರಾಜನ್(76) ಈಚೆಗೆ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಒಬ್ಬ ಪುತ್ರರನ್ನು ಅಗಲಿದ್ದಾರೆ. ನಗರದ ಎಪಿಎಂಸಿ ಮುಂಭಾಗದಲ್ಲಿರುವ ಕ್ರಿಸ್ತರ ಸಮಾಧಿ ಸ್ಥಳದಲ್ಲಿ ಅಂತ್ಯಕ್ರಿಯೆ ನಡೆಯಿತು.



ದಲಿತ ಮುಖಂಡರ ಮೆರವಣಿಗೆ, ಪ್ರತಿಭಟನೆ

ಕನಕಪುರ: ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮೀಸಲಾತಿ ವರ್ಗೀಕರಣ ಸಂಬಂಧ ಅವೈಜ್ಞಾನಿಕ ಕೋಸ್ಟರ್ ಬಿಂದು ಪದ್ಧತಿಯಲ್ಲಾಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಒತ್ತಾಯಿಸಿ ಪರಿಶಿಷ್ಟ ಜಾತಿ (ಎಸ್‌ಸಿ) ಸಮುದಾಯದ ದಲಿತ ಮುಖಂಡರು ನಗರದಲ್ಲಿ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿದರು.

ಸೋಮವಾರ ಅಯ್ಯಪ್ಪಸ್ವಾಮಿ ದೇವಾಲಯದ ಬಳಿ ಜಮಾವಣೆಗೊಂಡ ಪರಿಶಿಷ್ಟ ಜಾತಿ ಕಾರ್ಯಕರ್ತ ಮುಖಂಡರು ದಲಿತ ಬಲಗೈ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಘೋಷಣೆಗಳನ್ನು ಕೂಗಿದರು. ಎಂ.ಜಿ ರಸ್ತೆ ಮೂಲಕ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಚನ್ನಬಸಪ್ಪ ವೃತ್ತದಲ್ಲಿ ಪ್ರತಿಭಟಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಾಗಮೋಹನ್ ದಾಸ್ ರವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ತಾಲೂಕು ಗ್ರೇಡ್-2 ತಹಸೀಲ್ದಾರ್ ಮನೋಹರ್ ರವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಧಮ್ಮ ದೀವಿಗೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ್ ಮಾತನಾಡಿ, ರಾಜ್ಯ ಸರ್ಕಾರ ಮೀಸಲಾತಿ ವಿಚಾರದಲ್ಲಿ ಪರಿಶಿಷ್ಟ ಜಾತಿ-ಜನಾಂಗದವರ ಮತ ಪಡೆದು ಆ ಸಮುದಾಯವನ್ನೇ ಇಲ್ಲದಂತೆ ಮಾಡುವ ಹುನ್ನಾರ ನಡೆಸುತ್ತಿದ್ದಾರೆ. ಎಸ್.ಸಿ ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸುವ ಕುರಿತು ಎಚ್.ಎನ್.ನಾಗಮೋಹನ್ ದಾಸ್ ಆಯೋಗದ ವರದಿ ಅವೈಜ್ಞಾನಿಕವಾಗಿದೆ ಎಂದರು. ಸಮತಾ ಸೈನಿಕ ದಳದ ಮುಖಂಡರಾದ ಡಾ.ಜಿ.ಗೋವಿಂದಯ್ಯ, ಕೋಟೆ ಕುಮಾರ್, ದಲಿತ ಮುಖಂಡರಾದ ಭರತ್‌ಕುಮಾರ್, ಕಲ್‌ಬಾಳ್ ಲಕ್ಷ್ಮಣ್, ಬಿಡದಿ ದಿನೇಶ್, ಚನ್ನಪಟ್ಟಣ ಪ್ರದೀಪ್, ಹರಿಹರ ಲಿಂಗರಾಜು, ಸಾತನೂರು ಶಿವಮಾದಯ್ಯ, ಏರಂದ್ಯಾಪನಹಳ್ಳಿ ಸೋಮು, ನವೀನ್ ಕುಮಾರ್, ಪ್ರೇಮ, ಶೋಭ, ಗೌರಮ್ಮ ಇದ್ದರು.



ಕನಕಪುರ ತಾಲೂಕು ಆಡನಕುಪ್ಪೆ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ನೂತನ ರಾಜಗೋಪುರ ಕಳಸ ಸ್ಥಾಪನೆ, ಜೀರ್ಣೋದ್ಧಾರ ಹಾಗೂ ಕುಂಭಾಭಿಷೇಕ ಮಹೋತ್ಸವ ಸಮಾರಂಭ ನಡೆಯಿತು.

ನೂತನ ರಾಜಗೋಪುರ ಕಳಸ ಸ್ಥಾಪನೆ

ಕನಕಪುರ: ಪ್ರಕೃತಿಯ ಮಡಿಲಲ್ಲಿ ಕಂಗೊಳಿಸುವ ಧಾರ್ಮಿಕ ಕ್ಷೇತ್ರವೆಂಬ ಖ್ಯಾತಿಗೆ ಪಾತ್ರವಾಗಿರುವ ಆಡನಕುಪ್ಪೆ ಶ್ರೀ ವೀರಭದ್ರಸ್ವಾಮಿ ದೇವಾಲಯದ ನೂತನ ರಾಜಗೋಪುರದ ಕಳಸ ಸ್ಥಾಪನೆ ಮತ್ತು ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಕುಂಭಾಬಿಷೇಕ ಮಹೋತ್ಸವ ಭಾನುವಾರ ವಿವಿಧ ಧಾರ್ಮಿಕ ಕೈಂಕರ್ಯಗಳ ಸೇವೆಯೊಂದಿಗೆ ವಿಜೃಂಭಣೆಯಿಂದ ನೆರವೇರಿತು. ರಾಜಗೋಪುರದ ಮೇಲೆ ಪ್ರತಿಷ್ಠಾಪನೆ ಮಾಡಿ ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಕುಂಭಾಭಿಷೇಕ ಪವಿತ್ರ ಕಾರ್ಯ ನೆರವೇರಿಸಿದರು. ಧಾರ್ಮಿಕ ಸಮಾರಂಭದಲ್ಲಿ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿಗಳು, ಮರಳೆಗವಿ ಮಠದ ಡಾ.ಮುಮ್ಮಡಿ ಶಿವರುದ್ರ ಸ್ವಾಮೀಜಿ, ಮಹದೇಶ್ವರ ಸ್ವಾಮಿ ಬೆಟ್ಟದ ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಿದರು.

ಕನಕಪುರ ನಗರ, ತಾಲೂಕು ಸೇರಿದಂತೆ ವಿವಿಧ ತಾಲೂಕು, ಜಿಲ್ಲೆಗಳಿಂದ ಸಹಸ್ರಾರು ಭಕ್ತರು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಭಕ್ತಾದಿಗಳಿಗೆ ಅನ್ನಸಂತರ್ಪಣೆ ನೆರವೇರಿಸಲಾಗಿತ್ತು. ಬಿಲ್ವಪತ್ರೆ ಮಠದ ಶ್ರೀ ಶಿವಲಿಂಗಸ್ವಾಮೀಜಿ, ಅನ್ನದಾನೇಶ್ವರನಾಥ ಸ್ವಾಮೀಜಿ, ಮರಳವಾಡಿ ಮೃತ್ಯುಂಜಯ ಸ್ವಾಮೀಜಿ, ಮಾಜಿ ಸಂಸದ ಡಿ.ಕೆ.ಸುರೇಶ್, ವಿಧಾನ ಪರಿಷತ್ ಸದಸ್ಯ ಹೆಚ್.ರವಿ, ದೇವಾಲಯದ ಪ್ರಧಾನ ಅರ್ಚಕ ಬಿ.ಎನ್ .ಪರಮಶಿವಯ್ಯ, ವೀರಭದ್ರಯ್ಯ ಸೇರಿದಂತೆ ಹಲವರು ಭಾಗವಹಿಸಿದ್ದರು.



ಹಾರೋಹಳ್ಳಿ ತಾಲೂಕಿನ ಮರಳವಾಡಿ ಹೋಬಳಿ ಜೆಡಿಎಸ್ ಪಕ್ಷದ ನೂತನ ಅಧ್ಯಕ್ಷರಾಗಿ ತಮ್ಮಯ್ಯ ಉ.ದಾಸಪ್ಪ ಹಾಗೂ ಕಾರ್ಯಾಧ್ಯಕ್ಷರಾಗಿ ಯಲಚವಾಡಿ ಗೋವಿಂದಯ್ಯ ಅವರನ್ನು ನೇಮಕ ಮಾಡಲಾಯಿತು.

ಜಾತಿ ಪಿಡುಗಿನ ವಿರುದ್ಧ ಹೋರಾಡಿದ ಕಾಲಜ್ಞಾನಿ ಕೈವಾರ ತಾತಯ್ಯ

ಸಾಮಾಜಿಕ ಚಿಂತಕ ತಾತಯ್ಯ

ರಾಮನಗರ: ಕಾಲಜ್ಞಾನಿ ಶ್ರೀ ಕೈವಾರ ತಾತಯ್ಯನವರು ಸಮಾಜದಲ್ಲಿದ್ದ ಜಾತಿಪಿಡುಗಿನ ವಿರುದ್ಧ ಹೋರಾಟ ಮಾಡಿ ಅಂಕು-ಡೊಂಕುಗಳನ್ನು ತಿದ್ದುವ ಕೆಲಸ ಮಾಡಿದರು, ಆದ್ದರಿಂದ ಅವರು ಇಂದಿಗೂ ಪ್ರಾತಃ ಸ್ಮರಣೀಯರಾಗಿದ್ದಾರೆ ಎಂದು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಇಲ್ಲಿನ ಶ್ರೀ ಲಕ್ಷ್ಮಿನಾರಾಯಣಸ್ವಾಮಿ ಕಲ್ಯಾಣಮಂಟಪದಲ್ಲಿನಡೆದಕೈವಾರತಾತಯ್ಯನವರ 300ನೇ ಜಯಂತುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಸಾರ ಜೀವನದಲ್ಲಿ ಬಳೆಗಾರ ವೃತ್ತಿಯಲ್ಲಿ ನಿರತರಾಗಿದ್ದ ತಾತಯ್ಯ ಅವರು ಯೋಗಿ ಬಾಳಿನಲ್ಲಿ ಕವಿಯಾಗಿ, ಸಮಾಜಮುಖಿ ಚಿಂತಕರಾಗಿ, ಸಾಮಾಜಿಕ ಪಿಡುಗುಗಳನ್ನು ಪರಿಹರಿಸಿದ ಹರಿಕಾರನಾಗಿ ಕೈವಾರ ನಾರೇಯಣಪ್ಪ ಸಾರ್ಥಕತೆಯನ್ನು ಕಂಡಿದ್ದಾರೆ ಎಂದು ಶ್ಲಾಘಿಸಿದರು.

ಮುಖಂಡ ಸಿಎನ್‌ಆರ್ ವೆಂಕಟೇಶ್ ಮಾತನಾಡಿ ಹುಟ್ಟಿದ ಪ್ರತಿಯೊಬ್ಬರು ಆ ಚಕ್ರದಿಂದ ಹೊರಬಂದು ತಮ್ಮ ಕೈಲಾದ ಒಳ್ಳೆಯ ಕೆಲಸಗಳನ್ನು ಮಾಡಬೇಕೆಂದು ಕೈವಾರ ತಾತಯ್ಯ ಕಾಲಜ್ಞಾನದಲ್ಲಿ ಹೇಳಿದ್ದರು, ಅವರು ಕಾಲಜ್ಞಾನದಲ್ಲಿ ಹೇಳಿದಂತೆ ಜಗತ್ತಿನಲ್ಲಿ ಘಟನೆಗಳು ನಡೆಯುತ್ತಿವೆ ಎಂದು ಅವರ ವಿಚಾರ-ಧಾರೆಗಳನ್ನು ಸ್ಮರಿಸಿದರು.

ಸಮಾಜದ ಹಿರಿಯ ಮಹಿಳೆ ವನಜಮ್ಮ ಮಾತನಾಡಿ ಪ್ರತಿಯೊಬ್ಬರು ಸಹ ಇಂದಿನ ಒತ್ತಡದ ಬದುಕಿನಲ್ಲಿ ಮಾನವೀಯತೆ, ಸಮಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಬೇಕಿದೆ.

ಜಯಂತಿ ಆಚರಣೆ ಜತೆಗೆ ಶರಣರು, ಆದರ್ಶ ಪುರುಷರ ಆದರ್ಶಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಮಾದರಿಯಾಗಿ ಬದುಕಿದಾಗ ಮಾತ್ರ ಜಯಂತಿಗಳಿಗೆ ಅರ್ಥ ಬರುತ್ತದೆ ಎಂದು ಅಭಿಪ್ರಾಯಪಟ್ಟರು.



> ಭಕ್ತಿ, ಭಜನೆ, ಧ್ಯಾನ ಮತ್ತು ಉಪದೇಶಗಳ ಮೂಲಕ ಅಂತರಂಗ ಶುದ್ಧಿಗೆ ಒತ್ತು ಕೊಟ್ಟ ಕೈವಾರ ನಾರೇಯಣ ಅವರು ಸಂಸಾರ ತ್ಯಜಿಸಿ ಸನ್ಯಾಸ ಸ್ವೀಕರಿಸಿ, ಸಮಾಜವನ್ನು ಆಧ್ಯಾತ್ಮಿಕ ಮಾರ್ಗಕ್ಕೆ ಕೊಂಡೊಯ್ಯುವ ಕೆಲಸದಲ್ಲಿ ತೊಡಗಿಸಿಕೊಂಡರು. ನಿಜಕ್ಕೂ ತಾತಯ್ಯ ಅವರ ಜೀವನ ಒಂದು ಅದ್ಭುತ ಪವಾಡ.
> ■ **ಕೆ.ಶೇಷಾದ್ರಿ,** ನಗರಸಭೆ ಅಧ್ಯಕ್ಷ

ಸಮಾಜದ ಮುಖಂಡ ಶಿಲ್ಪಶ್ರೀ ಪುರಸ್ಕೃತ ಎಂ.ಶರಣ್ ಅವರಿಗೆ ಸನ್ಮಾನಿಸಲಾಯಿತು. ಎಸ್ ಎಸ್‌ಎಲ್‌ಸಿ ವಿಭಾಗದಲ್ಲಿ ರುಚಿತಾ, ಭಾವನಾ ಮತ್ತು ಪಿಯುಸಿ ವಿಭಾಗದಲ್ಲಿ ಯಶ್ವಂತ್, ಗಿರಿಜೇಶ್.ಆರ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ನಗರದ ಪ್ರಮುಖ ರಸ್ತೆಗಳಲ್ಲಿ ಪೂರ್ಣ ಕುಂಭ ಜನಪದ ಕಲೆಗಳೊಂದಿಗೆ ಕೈವಾರ ತಾತಯ್ಯ ಅವರ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೆ. ಸತೀಶ್, ನಗರಸಭೆ ಸದಸ್ಯೆ ಮಂಜುಳಾವೆಂಕಟೇಶ್, ಶ್ರೀ ಕೈವಾರ ತಾತಯ್ಯ ಬಲಿಜ ಸಂಘದ ತಾಲೂಕು ಅಧ್ಯಕ್ಷ ಹನುಮಶೆಟ್ಟಿ, ಸಮಾಜದ ಮುಖಂಡರಾದ ಆರ್.ವಿ.ಸುರೇಶ್, ಪದ್ಮನಾಭ, ರಾಮಚಂದ್ರಯ್ಯ, ಮೋಹನ್ ರಾಮ್ ಮನ್ನಾರ್, ಸುಹಾಶ್, ಲಕ್ಷ್ಮಣ್, ಶ್ರೀನಿವಾಸ್, ರಾಮಸ್ವಾಮಿ, ಪುಟ್ಟಣ್ಣ, ಮಂಜು, ನರೇಂದ್ರಬಾಬು, ಸತ್ಯಪ್ಪ, ಸುಧಾರಾಣಿ, ರಮೇಶ್, ಚಂದ್ರಶೇಖರ್, ಹರ್ಷವರ್ಧನ್ ಭಾಗವಹಿಸಿ ದ್ದರು. ಮಾನಸರಾಮು ಸ್ವಾಗತಿಸಿದರು. ಮಹಿಳಾ ಬಲಿಜ ಸಂಘದ ಪದಾಧಿಕಾರಿಗಳು ಪ್ರಾರ್ಥನೆ ಮತ್ತು ಜನಪದ ನೃತ್ಯ ನಡೆಸಿಕೊಟ್ಟರು.

ಚಿಕಿತ್ಸೆ ನೀಡುತ್ತಿಲ್ಲ: ಜಿಲ್ಲಾಸ್ಪತ್ರೆ, ವೈದ್ಯರ ವಿರುದ್ಧ ಪ್ರತಿಭಟನೆ

ರಾಮನಗರ: ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡದೆ ವಂಚಿಸುತ್ತಿರುವ ಡಿಎಸ್, ಆರ್‌ಎಂ, ಜಿಎ ಹಾಗೂ ಡಿಎಚ್‌ಒ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಕೆಲಸಕ್ಕೆ ಹಾಜರಾಗದೆ ಕರ್ತವ್ಯ ಲೋಪವೆಸಗಿರುವ ವೈದ್ಯಾಧಿಕಾರಿ ನಾರಾಯಣಸ್ವಾಮಿ ಅವರನ್ನು ಅಮಾನತು ಮಾಡಬೇಕೆಂದು ಸಮತಾ ಸೈನಿಕ ದಳದ ಮುಖಂಡರು ಹಾಗೂ ಪದಾಧಿಕಾರಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಸ್ಪತ್ರೆ ಆವರಣದಲ್ಲಿ ಜಮಾಯಿಸಿದ ವಿವಿಧ ಸಂಘಟನೆ ಮುಖಂಡರು ಹಾಗೂ ಸಮಾತ ಸೈನಿಕ ದಳದ ಮುಖಂಡರು ಮತ್ತು ಕಾರ್ಯಕರ್ತರು ವೈದ್ಯರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವಲ್ಲಿ ವಿಫಲರಾಗುತ್ತಿರುವ ವೈದ್ಯಾಧಿಕಾರಿಗಳು ಹಾಗೂ ಕರ್ತವ್ಯ ಲೋಪ ಎಸಗಿರುವ ಆರ್‌ಎಂಒ ನಾರಾಯಣಸ್ವಾಮಿ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಸಮತಾ ಸೈನಿಕ ದಳದ ಯುವ ಘಟಕದ ಜಿಲ್ಲಾಧ್ಯಕ್ಷ ಸುರೇಶ್, ನೂತನ ಜಿಲ್ಲಾಸ್ಪತ್ರೆಯಾಗಿ ಮೂರು ವರ್ಷಗಳೇ ಕಳೆದರೂ ಯಾವುದೇ ಬದಲಾವಣೆಯಾಗಿಲ್ಲ, ಅವ್ಯ ವಸ್ಥೆಗಳನ್ನ ಸರಿಪಡಿಸಬೇಕು ಹಾಗೂ ನಿರ್ಲಕ್ಷ್ಯ ತೋರುತ್ತಿರುವ ಡಿಎಸ್, ಆರ್‌ಎಂ, ಜಿಎ ಹಾಗೂ ಡಿಎಚ್‌ಒ ವಿರುದ್ಧ ಶಿಸ್ತು ಕ್ರಮ ಕೂಡಲೇ ತೆಗೆದುಕೊಳ್ಳದಿದ್ದಲ್ಲಿ ಉಗ್ರ ಹೋರಾಟದ ಎಚ್ಚರಿಕೆ ನೀಡಿದರು.

ದಲಿತ ಮುಖಂಡರಾದ ಹರೀಶ್ ಬಾಲು, ಲೋಕೇಶ್, ಪರಮೇಶ್, ಪುನೀತ್, ಕಿರಣ್ ಸಾಗರ್, ವಿನೋದ್, ನಂಜುಂಡಯ್ಯ, ಶಂಕರ್ ಮೌರ್ಯ, ಪ್ರಸಾದ್, ಪದ್ಮಾವತಿ ಇದ್ದರು.




ಯುಗಾದಿಯಂದೇ ರೈತರು ದನಗಳನ್ನು ಜಾತ್ರೆಗೆ ಕರೆತರಲಿ

ಮಾಗಡಿ: ಶ್ರೀರಂಗನಾಥಸ್ವಾಮಿ ದನಗಳ ಜಾತ್ರೆಗೆ ರೈತರು ಕಡ್ಡಾಯವಾಗಿ ಯುಗಾದಿ ಹಬ್ಬದ ದಿನವೇ ಬರಬೇಕು, ಹಬ್ಬಕ್ಕಿಂತ ಮುಂಚಿತವಾಗಿ ಬರಬಾರದು ಎಂದು ಮುಖಂಡ ಜುಟ್ಟನಹಳ್ಳಿ ಜಯರಾಮ್ ರೈತರಲ್ಲಿ ಮನವಿ ಮಾಡಿದರು. ಪಟ್ಟಣದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಗಡಿ ಶ್ರೀರಂಗನಾಥಸ್ವಾಮಿ ದನಗಳ ಜಾತ್ರೆ ಸಂಪ್ರದಾಯದಂತೆ ಉಗಾದಿ ಹಬ್ಬದಿಂದ ಶುರುವಾಗುತ್ತಿತ್ತು, ಇತ್ತೀಚಿನ ವರ್ಷಗಳಲ್ಲಿ ರೈತರು ಯುಗಾದಿ ಹಬ್ಬಕ್ಕಿಂತ ಮೂರು ದಿ ಮುಂಚಿತವಾಗಿ ಜಾತ್ರೆಗೆ ದನಗಳನ್ನು ಕರೆತರುತ್ತಿದ್ದಾರೆ, ಮುಂಚಿತವಾಗಿ ದನಗಳೊಂದಿಗೆ ಬಂದ ರೈತರನ್ನು ವಾಪಸ್ ಕಳುಹಿಸಲಾಗುವುದೆಂದು ಜಯರಾಮ್ ಮಾಹಿತಿ ನೀಡಿದರು.

ಕಾರಣಾಂತರಗಳಿಂದ ಹಲವು ವರ್ಷಗಳಿಂದ ಶ್ರೀರಂಗನಾಥಸ್ವಾಮಿ ದನಗಳ ಜಾತ್ರೆ ಕಮಿಟಿ ನಿಂತುಹೋಗಿತ್ತು, ಇದರ ಬಗ್ಗೆ ಶಾಸಕರ ಗಮನಕ್ಕೆ ತಂದಿದ್ದು, ಈಗ ಕಮಿಟಿಯನ್ನು ರಚಿಸಲಾಗಿದ್ದು, ಹಲ್ಲು ಇದ್ದಲ್ಲ 2/4/6 ಹಲ್ಲುಗಳಿರುವ ಅತ್ಯುತ್ತಮ ರಾಸುಗಳಿಗೆ ಕ್ಯಾಟಗರಿ ಪ್ರಕಾರ ಒಂದೊಂದು ಕ್ಯಾಟಗರಿಗೂ 7.500 ರೂ.ನಂತೆ 3 ಬಹುಮಾನ ಹಾಗೂ 2000 ರೂ. ಸಮಾಧಾನಕರ ಬಹುಮಾನ ನೀಡುತ್ತಿದ್ದು, ಎಂವಿಎಂ ಮರೀಶ್ ಅವರು 5 ಅತ್ಯುತ್ತಮ ರಾಸುಗಳಿಗೆ ಚಾಂಪಿಯನ್ ಎಂದು ಚಿನ್ನದ ಬಹುಮಾನ ನೀಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ರಾಸುಗಳ ಆಯ್ಕೆಯನ್ನು ದೊಡ್ಡಬಳ್ಳಾಪುರ, ದೇವನಹಳ್ಳಿ ಕಡೆಯ ಪಶು ಇಲಾಖೆಯ ಅಧಿಕಾರಿಗಳು ಆಯ್ಕೆ ಮಾಡುತ್ತಾರೆ, ಇದರಲ್ಲಿ ಯಾವುದೇ ದೋಷಾ ಆಗದ ರೀತಿ ನೋಡಿಕೊಳ್ಳಲಾಗುವುದು, ನಾನಾಗಲಿ, ಮರೀಶ್ ಅವರಾಗಲಿ ನಮ್ಮ ರಾಸುಗಳನ್ನು ಪ್ರಶಸ್ತಿ ಆಯ್ಕೆಗೆ ಬಿಡುವುದಿಲ್ಲ ಎಂದು ಜಯರಾಮ್ ಸ್ಪಷ್ಟಪಡಿಸಿದರು. ಈ ಬಾರಿ ದನಗಳ ಜಾತ್ರೆಗೆ ರಾಸುಗಳಿಗೆ ಸುಂಕ ಇರುವುದಿಲ್ಲ, ರಾಸುಗಳನ್ನು ಕರೆತರುವ ವಾಹನಗಳಿಗೆ ಸುಂಕ ಇರುತ್ತದೆ ಎಂದು ಜಯರಾಮ್ ಹೇಳಿದರು.

ರೈತ ಮುಖಂಡ ಮರೀಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಕಾಗಿಮಡು ಹೊನ್ನಪ್ಪ, ಬಾಲಾಜಿಗಗನ್, ಶ್ರೀನಿವಾಸ್, ಅಮ್ಜದ್ ಪಾಷ್, ತಗಚಕುಪ್ಪೆನಾರಾಯಣಪ್ಪ ಇದ್ದರು.



ಗ್ರಾಮೀಣರ ಆರೋಗ್ಯಕ್ಕೆ ಆಯುಷ್ಮಾನ್ ಆರೋಗ್ಯ ಮಂದಿರ

ಹುಳಿಯಾರು: ಗ್ರಾಮೀಣ ಭಾಗದ ಜನರಿಗೆ ಗುಣ ಮಟ್ಟದ ಆರೋಗ್ಯ ಸೇವೆ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ 65 ಲಕ್ಷ ರೂಪಾಯಿ ವೆಚ್ಚದಲ್ಲಿ ನೂತನ 'ಆಯುಷ್ಮಾನ್ ಆರೋಗ್ಯ ಮಂದಿರ'ಗಳನ್ನು ನಿರ್ಮಿಸಲಾಗುತ್ತಿದೆ ಎಂದು ಶಾಸಕ ಸಿ.ಬಿ.ಸುರೇಶ್ ಬಾಬು ತಿಳಿಸಿದರು. ಹುಳಿಯಾರು ಸಮೀಪದ ಚೌಳಕಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರೇನಹಳ್ಳಿ ಗೇಟ್ ಬಳಿ ನೂತನ ಆಯುಷ್ಮಾನ್ ಆರೋಗ್ಯ ಮಂದಿರದ ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಈ ಹಿಂದೆ ಆರೋಗ್ಯ ಇಲಾಖೆಯ 'ಉಪಕೇಂದ್ರ'ಗಳೆಂದು ಕರೆಯಲ್ಪಡುತ್ತಿದ್ದ ಈ ಕೇಂದ್ರಗಳನ್ನು ಇನ್ನು ಮುಂದೆ 'ಆಯುಷ್ಮಾನ್ ಆರೋಗ್ಯ ಮಂದಿರ' ಎಂದು ಮರುನಾಮಕರಣ ಮಾಡಲಾಗಿದೆ. ತಾಲ್ಲೂಕಿನ ಒಟ್ಟು ಮೂರು ಉಪಕೇಂದ್ರಗಳ ಕಟ್ಟಡಕ್ಕೆ ಅನುಮೋದನೆ ದೊರೆತಿದ್ದು, ಸದ್ಯ ಚೌಳಕಟ್ಟೆ ಹಾಗೂ ಗೋಡೆಕೆರೆಯ ಸೋಮನಹಳ್ಳಿಗೆ ಮಂಜೂರಾತಿ ಸಿಕ್ಕಿದೆ. ಈ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಅಗತ್ಯವಾದ ಆರೋಗ್ಯ ತಪಾಸಣೆ, ಉಚಿತ ಔಷಧ ವಿತರಣೆ ಹಾಗೂ ವಿವಿಧ ವೈದ್ಯಕೀಯ ಸೇವೆಗಳು ಲಭ್ಯವಿರಲಿವೆ ಎಂದರು. ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ರಾಮಚಂದ್ರಯ್ಯ, ತಾಲ್ಲೂಕು ವೈದ್ಯಾಧಿಕಾರಿ ಡಾ.ಅಜಯ್, ಹಂದನಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ.ಶರತ್, ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.



ಮೃತರ ಖಾತೆಗೆ ಗೃಹಲಕ್ಷ್ಮಿ ಹಣ ಜಮೆ ತಡೆಯಿರಿ

ಕನಕಪುರ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ ಹಣ ಮೃತರ ಖಾತೆಗೆ ಜಮಾ ಆಗುತ್ತಿರುವುದನ್ನು ತಡೆಗಟ್ಟಲು ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಬೇಕೆಂದು ಗ್ಯಾರೆಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು ತಿಳಿಸಿದರು.

ಮಂಗಳವಾರ ನಗರದ ಅಂಬೇಡ್ಕರ್ ಭವನದಲ್ಲಿ ಜರುಗಿದ ಗೃಹಲಕ್ಷ್ಮಿ ಯೋಜನೆಯ ಪ್ರಗತಿ ಪರಿಶೀಲನೆಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರ ಪಂಚ ಗ್ಯಾರೆಂಟಿ ಯೋಜನೆಗಳಲ್ಲಿ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ, ಯುವನಿಧಿ ಯೋಜನೆಗಳು ಮಹಿಳೆಯರು ಮತ್ತು ಬಡ ಕುಟುಂಬಗಳು ಆರ್ಥಿಕ ಹೊರೆಯನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿವೆ. ಕನಕಪುರ ತಾಲೂಕು ಒಂದರಲ್ಲಿಯೇ 71 ಸಾವಿರ ಜನ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ ಎಂದರು.

ತಾಲೂಕು ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಎನ್.ದಿಲೀಪ್ ಮಾತನಾಡಿ, ಗ್ಯಾರೆಂಟಿ ಯೋಜನೆಯಲ್ಲಿ ಸರ್ಕಾರದ ಹಣ ಪೋಲಾಗುತ್ತಿದೆ. ಈ ಕಾರಣದಿಂದಾಗಿ ಸರ್ಕಾರದ ಸೌಲತ್ತುಗಳು ಇನ್ನು ತಳಮಟ್ಟದ ಜನರಿಗೆ ತಲುಪುವುದಕ್ಕೆ ಸಾಧ್ಯವಾಗುತ್ತಿಲ್ಲ. ಬಡ ಮತ್ತು ಅಶಕ್ತರಾಗಿ ಉಳಿದಿರುವ ಮಹಿಳೆಯರು ಇದ್ದರೆ, ಸತ್ತ ಕುಟುಂಬದ ಹಿರಿಯ ಸದಸ್ಯರೊಬ್ಬರು ಇದರ ಪ್ರಯೋಜನವನ್ನು ಪಡೆಯಬೇಕು.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿ ಮರಣ ಹೊಂದಿದ್ದರೆ, ತಕ್ಷಣ ಇಲಾಖೆಗೆ ಮಾಹಿತಿ ನೀಡಬೇಕು, ಸತ್ತ ಫಲಾನುಭವಿಯ ಹಣವನ್ನು ಮತ್ತೆ ಪಡೆದುಕೊಂಡರೆ ಅದು ಅಪರಾಧವಾಗುತ್ತದೆ. ಆದ್ದರಿಂದ ಅಂಗನವಾಡಿ ಕಾರ್ಯಕರ್ತೆಯರು ಸ್ಥಳೀಯವಾಗಿ ಮಾಹಿತಿ ಪತ್ತೆಹಚ್ಚಿಮೃತರಖಾತೆಗೆಹಣಪಾವತಿಯಾಗದಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ತಮ್ಮಗಳ ಸಹಕಾರ ಅಗತ್ಯವಾಗಿದೆ ಎಂದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ನಾರಾಯಣ್, ಹಾರೋಹಳ್ಳಿ ತಾಲೂಕು ಅಧಿಕಾರಿ ವೇಣುಗೋಪಾಲ್ ಮಾತನಾಡಿ, ಯೋಜನೆಯ ಉದ್ದೇಶವನ್ನು ವಿವರಿಸಿ, ಫಲಾನುಭವಿಗಳ ಪೈಕಿ ಮರಣಹೊಂದಿದವರಮಾಹಿತಿಯನ್ನುಕಾಲಕಾಲಕ್ಕೆ ಪರಿಶೀಲನೆ ನಡೆಸಲಾಗುವುದು ಎಂದರು. ಕನಕಪುರ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅವಿನಾಶ್, ಹಾರೋಹಳ್ಳಿ ತಾಲೂಕು ಇ.ಒ ಅಪೂರ್ವ.ಎ.ಕುಲಕರ್ಣಿ, ಹಾರೋಹಳ್ಳಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಜೆ.ಸಿ.ಬಿ ಅಶೋಕ್, ಜಿಲ್ಲಾ ಉಪಾಧ್ಯಕ್ಷ ಕೆ.ಎಂ. ಮಾದೇಶ್ ಸೇರಿದಂತೆ ಎರಡು ತಾಲೂಕು ಮಟ್ಟದ ಅಧಿಕಾರಿಗಳು, ಎರಡು ತಾಲೂಕಿನ ಅಂಗನವಾಡಿ ಕಾರ್ಯಕರ್ತೆಯರು ಸಭೆಯಲ್ಲಿ ಭಾಗವಹಿಸಿದ್ದರು.

ಮಹಿಳೆಯರೇ ಅಭಿನಯಿಸಿದ ಸಂಪೂರ್ಣ ರಾಮಾಯಣ ನಾಟಕಕ್ಕೆ ಮೆಚ್ಚುಗೆ

ಕಲಾಭಿಮಾನಿಗಳ ಕಣ್ತುಂಬಿದ ಪೌರಾಣಿಕ ನಾಟಕ

ಚನ್ನಪಟ್ಟಣ: ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಸಂಪೂರ್ಣ ಮಹಿಳೆಯರೇ ಅಭಿನಯಿಸಿದ 'ಸಂಪೂರ್ಣ ರಾಮಾಯಣ' ಪೌರಾಣಿಕ ನಾಟಕ ಪ್ರದರ್ಶನ ಭಾನುವಾರ ಸಂಜೆ ನಗರದ ಕೊಲ್ಲಾಪುರದಮ್ಮನ ದೇವಸ್ಥಾನ ಆವರಣದಲ್ಲಿರುವ ಡಾ. ರಾಜ್‌ಕುಮಾರ್ ಬಯಲು ರಂಗಮಂದಿರದಲ್ಲಿ ಅದ್ದೂರಿಯಾಗಿ ನಡೆಯಿತು. ಮಹಿಳೆಯರ ಪ್ರತಿಭೆ, ತ್ಯಾಗ ಹಾಗೂ ಕಲೆ ಪ್ರೀತಿಯನ್ನು ಒಂದೇ ವೇದಿಕೆಯಲ್ಲಿ ಮೂಡಿಸಿದ ಈ ನಾಟಕ ಪ್ರದರ್ಶನ ಸಾವಿರಾರು ಕಲಾಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಯಿತು.

ಶ್ರೀ ಅರವಿಂದವಲ್ಲಿ ಸಾಂಸ್ಕೃತಿಕ ಕಲಾ ಟ್ರಸ್ಟ್ ಹಾಗೂ ಭಾವಿಪ ಕಣ್ವ ಶಾಖೆ ವತಿಯಿಂದ ಪ್ರಾಯೋಜಕರ ಸಹಕಾರದೊಂದಿಗೆ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ತಾಲೂಕಿನ ಗೃಹಿಣಿಯರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರು ರಾಮಾಯಣದ ಪ್ರಮುಖ ಪಾತ್ರಗಳನ್ನು ಮನೋಜ್ಞವಾಗಿ ನಿರ್ವಹಿಸಿದರು. ನಾಟಕದ ಭಾವಪೂರ್ಣ ಸಂಭಾಷಣೆ, ವೇಷಭೂಷಣ ಮತ್ತುಅಭಿನಯ ಪ್ರೇಕ್ಷಕರನ್ನು ಪೌರಾಣಿಕ ಲೋಕಕ್ಕೆ ಕರೆದೊಯ್ದವು. ಇದಕ್ಕೂ ಮೊದಲು ಭಾವಿಪ ನೇತೃತ್ವದಲ್ಲಿ ಮಹಿಳೆಯರು ಕುರುಕ್ಷೇತ್ರ ಮತ್ತುದಕ್ಷಯಜ್ಞ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ್ದರು. ಇದೀಗ ಮೂರನೇ ಬಾರಿ ಸಂಪೂರ್ಣ ಮಹಿಳೆಯರೇ ಸೇರಿ ಸಂಪೂರ್ಣರಾಮಾಯಣ ನಾಟಕ ಪ್ರದರ್ಶಿಸುವ ಮೂಲಕ ರಂಗಭೂಮಿಯಲ್ಲಿ ತಮ್ಮ ಪ್ರತಿಭೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದರು.



ಪ್ರಾಸ್ತಾವಿಕವಾಗಿ ಮಾತನಾಡಿದ ಭಾವಿಪ ಪ್ರಾಂತ್ಯ ಉಪಾಧ್ಯಕ್ಷ ವಸಂತಕುಮಾರ್, ಇಂದಿನ ಕಾಲದಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸುತ್ತಿದ್ದಾರೆ. ಚನ್ನಪಟ್ಟಣದಲ್ಲಿ ಮೂರನೇ ಬಾರಿ ಸಂಪೂರ್ಣ ಮಹಿಳೆಯರೇ ಪೌರಾಣಿಕ ನಾಟಕವನ್ನು ಅಭ್ಯಾಸಿಸಿ ಯಶಸ್ವಿಯಾಗಿ ಪ್ರದರ್ಶಿಸಿರುವುದು ಹೆಮ್ಮೆಪಡುವ ಸಂಗತಿ. ಈ ಕಾರ್ಯಕ್ಕೆ ವೇದಿಕೆ ಕಲ್ಪಿಸಿ ಪ್ರೋತ್ಸಾಹ ನೀಡಿದ ಎಲ್ಲರಿಗೂ ಅಭಿನಂದನೆಗಳು ಎಂದು ಹೇಳಿದರು.

ಕೃತಿ ಬಿಡುಗಡೆ: ಕಾರ್ಯಕ್ರಮದ ವೇಳೆ ಕವಯತ್ರಿ ಎಂ.ಎಸ್. ಆಶಾಲತಾ ಅವರ 'ಮನದ ಸಿರಿ' ಕೃತಿಯನ್ನು ಗಣ್ಯರು ಬಿಡುಗಡೆಗೊಳಿಸಿದರು. ಕೃತಿಯಕುರಿತುಉಪನ್ಯಾಸಕ ಹೊಸದೊಡ್ಡಿ ರಮೇಶ್ ಮಾತನಾಡಿ, ಕವಯತ್ರಿಯ ಸಾಹಿತ್ಯಸಾಧನೆ ಹಾಗೂ ಕೃತಿಯ ವೈಶಿಷ್ಟ್ಯಗಳ ಬಗ್ಗೆ ವಿವರಿಸಿದರು.

ಭಾವಿಪ ಅಧ್ಯಕ್ಷ ಡಿ. ಪುಟ್ಟಸ್ವಾಮಿ, ಟ್ರಸ್ಟ್ ಅಧ್ಯಕ್ಷೆ ಜಯಲಕ್ಷ್ಮಿ ನಂಜಪ್ಪ, ಹಿರಿಯರಂಗಭೂಮಿಕಲಾವಿದ ಸಿ. ಗೋಪಾಲ್, ವೈದ್ಯೆಯರಾದಡಾ. ಪದ್ಮಾವತಿ ಶಿವಪ್ಪ, ಡಾ. ರಾಜಶ್ರಿ, ಕಸ್ತೂರಿ ಕರ್ನಾಟಕಜನಪರ ವೇದಿಕೆ ರಾಜ್ಯಾಧ್ಯಕ್ಷರಮೇಶ್‌ಗೌಡ, ಅಭ್ಯುದಯ ಮಹಿಳಾ ಬ್ಯಾಂಕ್ ಅಧ್ಯಕ್ಷೆ ಗೀತಾಂಜಲಿ ಅಭಿಲಾಷಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಮನೆಯ ನಾಲ್ಕು ಗೋಡೆಗೆ ಮಹಿಳೆ ಸೀಮಿತವಲ್ಲ

ಕನಕಪುರ: ಮಹಿಳೆ ಕೇವಲ ಮನೆ ನಾಲ್ಕು ಗೋಡೆಗಳಿಗೆ ಸೀಮಿತವಾಗಿಲ್ಲ. ವಿಜ್ಞಾನ, ಬಾಹ್ಯಾಕಾಶ ಸಂಶೋಧನೆ, ರಕ್ಷಣೆ, ವೈದ್ಯಕೀಯ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾಗಿ ಸಾಧನೆ ಮಾಡುತ್ತಿದ್ದಾರೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶೆ ರಾಧ.ಎಸ್ ತಿಳಿಸಿದರು.

ಮಂಗಳವಾರ ತಾಲೂಕು ಕಾನೂನು ಸೇವೆಗಳ ಸಮಿತಿ, ತಾಲೂಕು ಪಂಚಾಯಿತಿ ಹಾಗೂ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಮತ್ತು ವಕೀಲರ ಸಂಘದ ವತಿಯಿಂದ ನಗರದ ಅಂಬೇಡ್ಕರ್ ಭವನದಲ್ಲಿ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಪ್ರತಿವರ್ಷ ಮಾರ್ಚ್ 8 ರಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಇದು ಮಹಿಳೆಯರು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಗೌರವಿಸುವ ಹಾಗೂ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣದ ಬಗ್ಗೆ ಜಾಗೃತಿ ಮೂಡಿಸಿದೆ. 20ನೇ ಶತಮಾನದ ಆರಂಭದಲ್ಲಿ ಕಾರ್ಮಿಕ ಚಳುವಳಿಗಳ ಮೂಲಕ ಆರಂಭವಾದ ಇಂದು ಮಹಿಳೆಯರ ಹಕ್ಕುಗಳಿಗಾಗಿ ಧ್ವನಿ ಎತ್ತುವ ದಿನವಾಗಿದೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಸಂಜಯ್, ಸಂಪನ್ಮೂಲ ವ್ಯಕ್ತಿಯಾಗಿ ವಕೀಲ ಕೆ.ಎನ್.ಮಂಜುನಾಥ್ ಭಾರತದಲ್ಲಿ ಮಹಿಳೆಯರಿಗೆ ಸಮಾನತೆ, ಘನತೆ ಮತ್ತು ಸುರಕ್ಷತೆಗಾಗಿ ಸಂವಿಧಾನಾತ್ಮಕ ಮತ್ತು ಕಾನೂನುಬದ್ಧ ಹಕ್ಕುಗಳಿವೆ. ಇವುಗಳಲ್ಲಿ ಮುಖ್ಯವಾಗಿ ಆಸ್ತಿ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನ, ಶಿಕ್ಷಣದ ಹಕ್ಕು, ದೈಹಿಕ ಸಮಗ್ರತೆ ಮತ್ತು ಲೈಂಗಿಕ ದೌರ್ಜನ್ಯದ ವಿರುದ್ಧ ರಕ್ಷಣೆ ಸೇರಿವೆ ಎಂದು ಉಪನ್ಯಾಸ ನೀಡಿದರು. ಕಾರ್ಯನಿರ್ವಾಹಣಾಧಿಕಾರಿ ಸಿ.ಅವಿನಾಶ್, ನಾರಾಯಣ ಇದ್ದರು.

ಕಿರುಸುದ್ದಿ

ಸಮುದಾಯ ಭವನಕ್ಕೆ ಶಂಕುಸ್ಥಾಪನೆ



ಬಂಗಾರಪೇಟೆ: ತಾಲೂಕಿನ ಚಿಕ್ಕಕಳವಂಚಿ ಗ್ರಾಮದಲ್ಲಿ ನೂತನ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಭೂಮಿಪೂಜೆನೆರವೇರಿಸಿದರು.

ಧಾರ್ಮಿಕ ಕ್ಷೇತ್ರವಾಗಿರುವ ಚಿಕ್ಕಕಳವಂಚಿಯಲ್ಲಿ ದ್ರೌಪದಿ ದೇವಿ ಸಮೇತ ಧರ್ಮರಾಯ ಸ್ವಾಮಿ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ, ಈ ವೇಳೆ ದೂರದ ಊರಿಂದ ಬರುವ ಭಕ್ತರ ಅನುಕೂಲಕ್ಕಾಗಿ ಸುಸಜ್ಜಿತ ಸಮುದಾಯ ಭವನದ ಅಗತ್ಯವಿತ್ತು. ಹಾಗಾಗಿ ಸಾರ್ವಜನಿಕರ ಬೇಡಿಕೆಯಂತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು. ಈ ಸಮುದಾಯ ಭವನ ಕೇವಲ ಜಾತ್ರೆಗೆ ಮಾತ್ರವಲ್ಲದೆ, ಮದುವೆ, ಉಪನಯನ ಹಾಗೂ ಸಮಾಜದ ವಿವಿಧ ಸಭೆ-ಸಮಾರಂಭಗಳಿಗೆ ಕಡಿಮೆ ವೆಚ್ಚದಲ್ಲಿ ಸ್ಥಳಾವಕಾಶ ಸಿಗಲಿದೆ, ನಿಗದಿತ ಸಮಯದೊಳಗೆ ಗುಣಮಟ್ಟದ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗುವುದು ಎಂದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ವಿ.ನಾಗರಾಜ್, ಮುನೀರಪ್ಪ, ಆದಿ ನಾರಾಯಣ ಕುಟ್ಟಿ, ಪ್ರಭಾಕರ್ ರೆಡ್ಡಿ, ಜಯಣ್ಣ, ಲಕ್ಷ್ಮಿ ನಾರಾಯಣ ಪ್ರಸಾದ್, ವಿ.ಶಂಕರ್, ಹಂಸಾನಂದ ವರದರಾಜ, ಶಿವಕುಮಾರ್, ವೆಂಕಟೇಶ್, ರಾಮಪ್ಪ, ಚಲಪತಿ, ವೆಂಕಟಮುನಿಯಪ್ಪ, ಬಾಲಕೃಷ್ಣ ಉಪಸ್ಥಿತರಿದ್ದರು.

ಜಿಲ್ಲಾ ಪತ್ರಕರ್ತರ ಸಂಘಕ್ಕೆ ಆಯ್ಕೆ, ಅಭಿನಂದನೆ

ಕೋಲಾರ: ಇತ್ತೀಚೆಗೆ ನಡೆದ ಬೆಂಗಳೂರು ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಜಿಲ್ಲಾ ಸಮಿತಿಗೆ ಆಯ್ಕೆಯಾದ ಪದಾಧಿಕಾರಿಗಳಿಗೆ ಬೆಂಗಳೂರಿನ ಕಾರ್ಪೋರೇಷನ್ ಸಮೀಪದ ಬಿಬಿಎಂಪಿಯ (ಗ್ರೇಟರ್ ಬೆಂಗಳೂರು) ಕೇಂದ್ರ ಕಚೇರಿಯ ಆವರಣದಲ್ಲಿರುವ ವಿವೇಕಾನಂದ ಸಭಾಂಗಣದಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಕೋಲಾರ ನಗರದ ಕಠಾರಿಪಾಳ್ಯ ನಿವಾಸಿಯಾದ ಪತ್ರಕರ್ತ ಡಿ.ಎಲ್. ಹರೀಶ್ ಅವರು ಬೆಂಗಳೂರು ನಗರ ಜಿಲ್ಲೆಯ ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ಚುನಾವಣೆಯಲ್ಲಿ ಆಯ್ಕೆಯಾಗಿದ್ದರು. ನೂತನ ಜಿಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯ ಡಿ. ಎಲ್. ಹರೀಶ್ ಅವರನ್ನು ಕೋಲಾರ ಜಿಲ್ಲಾ ಪತ್ರಕರ್ತರ ಪರವಾಗಿ ಬೆಂಗಳೂರಿನ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ದುನಿಯಾ ಮುನಿಯಪ್ಪ ಹಾಗೂ ದುನಿಯಾಪತ್ರಿಕೆ ಉಪಸಂಪಾದಕರಾದ ಸಿ. ನಾರಾಯಣಸ್ವಾಮಿ ಡಿ.ಎಲ್. ಹರೀಶ್ ಅವರನ್ನು ಸನ್ಮಾನಿಸಿ, ಅಭಿನಂದಿಸಿದರು. ಡಿ.ಎಲ್.ಹರೀಶ್ ಅವರ ಧರ್ಮಪತ್ನಿ ವೀಣಾ ಸೇರಿದಂತೆ ಸ್ನೇಹಿತರು, ಪತ್ರಿಕಾ ಮಿತ್ರರು ಉಪಸ್ಥಿತರಿದ್ದರು.

ಗೂಡ್ಸ್ ರೈಲಿಗೆ ಸಿಲುಕಿ ವೃದ್ಧೆ ಸಾವು

ಬಂಗಾರಪೇಟೆ: ಬಂಗಾರಪೇಟೆ ಚೆನ್ನೈ ಮಾರ್ಗದಲ್ಲಿ ಹೋಗುತ್ತಿದ್ದ ಗೂಡ್ಸ್ ರೈಲುಗಾಡಿಗೆ ಅಪರಿಚಿತ ವೃದ್ಧ ಮಹಿಳೆ ಸಿಕ್ಕಿ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ತಾಲೂಕಿನ ಕಾಮಸಮುದ್ರ ರೈಲ್ವೆ ನಿಲ್ದಾಣದ ಬಳಿ ಸಂಭವಿಸಿದೆ. ಸೋಮವಾರ ರಾತ್ರಿ 8 ಗಂಟೆಯ ಸಮಯದಲ್ಲಿ ಬಂಗಾರಪೇಟೆ ಕಡೆಯಿಂದ ಚೆನ್ನೈಗೆ ಹೋಗುತ್ತಿದ್ದ ಗೂಡ್ಸ್ ರೈಲುಗಾಡಿಗೆ ಸುಮಾರು 70-75 ವಯಸ್ಸಿನ ವೃದ್ಧ ಮಹಿಳೆಯು ಸಿಲುಕಿದ್ದಾರೆ, ವೇಗವಾಗಿ ಹೋಗುತ್ತಿದ್ದ ಗೂಡ್ಸ್ ರೈಲು ಗಾಡಿಗೆ ಸಿಕ್ಕಾಕೊಂಡು ತಲೆಗೆ ಗಂಭೀರವಾದ ಗಾಯವಾಗಿರುವುದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ, ಮೃತ ಪಟ್ಟವರ ಬಗ್ಗೆ ವಿವರಗಳು ತಿಳಿದು ಬಂದಿಲ್ಲ, ಸ್ಥಳಕ್ಕೆ ಬಂಗಾರಪೇಟೆ ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕ ಅಂಜನಾಮೂರ್ತಿ ಹಾಗೂ ಸಿಬ್ಬಂದಿ ಬೇಟೆ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ, ಮಹಿಳೆಯ ವಾರಸುದಾರರು ಇದ್ದಲ್ಲಿ ಪಟ್ಟಣದ ರೈಲ್ವೆ ಪೋಲೀಸ್ ಠಾಣೆಗೆ ಸಂಪರ್ಕಿಸಲು ಕೋರಿದ್ದಾರೆ, ದೂರವಾಣಿ ಸಂಖ್ಯೆ: 08153 255304, 9480802120.

ವಿಷ ಸೇವಿಸಿ ವ್ಯಕ್ತಿ ಆತ್ಮಹತ್ಯೆ

ಶ್ರೀನಿವಾಸಪುರ: ಶನಿವಾರ ಕೆಲಸದ ನಿಮಿತ್ತ ಯಲ್ದೂರು ಕಚೇರಿಗೆ ಬಂದಿರುವ ರಘು ಪುನಃ ಮನೆಗೆ ಹೋಗಿಲ್ಲವೆಂದು ಕುಟುಂಬದವರು ತಿಳಿಸಿದ್ದು, ಅಂದಿನಿಂದ ರಘು ರವರಿಗಾಗಿ ಕುಟುಂಬದವರು ಹುಡುಕಾಟ ನಡೆಸುತ್ತಿದ್ದರು ಆದರೆ ಆತ್ಮಹತ್ಯೆಗೆ ಶರಣಾಗಿದ್ದು, ಮೃತದೇಹ ಪತ್ತೆಯಾಗಿದೆ.

ತಾಲೂಕಿನ ಯಲ್ದೂರು ಹಾಗೂ ರೋಣುರು ಹೋಬಳಿಯ ಕೃಷಿಕೇಂದ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ರಘು (45)ಯಲ್ದೂರು ಬಳಿಯ ಮಾವಿನ ತೋಟದಲ್ಲಿ ಬಳಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಮವಾರ ಬೆಳಕಿಗೆ ಬಂದಿದೆ.



ಮಾಲೂರು ನಗರಸಭೆಯಲ್ಲಿ ಭೂ ಪರಿವರ್ತನೆಯಾಗದ ಕೃಷಿ ಭೂಮಿಗೆ ಇ-ಖಾತೆಗಳನ್ನು ಮಾಡಿ ಭ್ರಷ್ಟಚಾರವೆಸಗಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಮನವಿ ಸಲ್ಲಿಸಲಾಯಿತು.

ಇ-ಖಾತೆ ಭ್ರಷ್ಟಾಚಾರ ತನಿಖೆಯಾಗಲಿ

ಮಾಲೂರು: ನಗರಸಭೆಯಲ್ಲಿ ಭೂ ಪರಿವರ್ತನೆಯಾಗದ ಕೃಷಿ ಭೂಮಿಗೆ ಇ-ಖಾತೆಗಳನ್ನು ಮಾಡಿ ಭ್ರಷ್ಟಚಾರವೆಸಗಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ಟಿ.ಎ.ನಾರಾಯಣಗೌಡ ಬಣದ ತಾಲೂಕು ಅಧ್ಯಕ್ಷ ಎಂ.ಎಸ್.ಶ್ರೀನಿವಾಸ್ ಪೌರಾಯುಕ್ತ ಮಹಾದೇವ್‌ಗೆ ಮನವಿ ಸಲ್ಲಿಸಿದರು. ನಗರಸಭೆ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿ ಮಾತನಾಡಿ ಕರವೇ ತಾಲೂಕು ಅಧ್ಯಕ್ಷ ಎಂ.ಎಸ್.ಶ್ರೀನಿವಾಸ್ ಮಾಲೂರು ನಗರದ ಸರ್ವೆ 213, 216ರ ನಂಬರ್‌ಗಳಲ್ಲಿ ಯಾವುದೇ ಭೂ ಪರಿವರ್ತನೆ ಆಗಿರುವುದಿಲ್ಲ ಹಾಗೂ ಮಾಲೂರು ಯೋಜನಾ ಪ್ರಾಧಿಕಾರದಿಂದ ನಕ್ಷೆ ಅನುಮೋದನೆಯನ್ನು ಪಡೆದಿರುವುದಿಲ್ಲ. ನಗರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಅಧಿಕಾರಿ ಚಂದ್ರು.ಎಂ, ಕಂದಾಯ ನಿರೀಕ್ಷಕ ಅನಿಲ್.ಬಿ.ವಿ, ವಿಷಯ ನಿರ್ವಾಹಕರ ಮಂಜುನಾಥ್, ಡಾಟಾ ಎಂಟ್ರಿ ಆಪರೇಟರ್ ಶ್ರೀನಾಥ್, ನೋಡಲ್ ಅಧಿಕಾರಿ ನಾಗರಾಜ್, ಇವರೆಲ್ಲರೂ ಸೇರಿ ಅಕ್ರಮ ವ್ಯಸಗಿ ಕರ್ತವ್ಯಲೋಪ ಎಸಗಿರುತ್ತಾರೆ ಎಂದರು. ಕರವೇ ಉಪಾಧ್ಯಕ್ಷ ರಾಮನಾಥಪುರ ನಾರಾಯಣಸ್ವಾಮಿ, ಕರವೇ ಯುವ ಘಟಕ ಸಂತೋಷ್, ನಗರಾಧ್ಯಕ್ಷ ಸಿ.ಎನ್.ನವೀನ್, ಖಜಾಂಚಿ ಚೇತನ್, ರಾಮಕ್ಕ, ಅಮರನಾರಾಯಣ, ಲವ, ಆಟೋ ಅಮೀರ್, ವಿಜಿ, ಕೆ.ಕೆ.ಮಂಜು, ಕೃಷ್ಣಮೂರ್ತಿ, ಶಿವ, ವಾಸಿಮ್, ರವೀಂದ್ರ, ಸುಬ್ರಹ್ಮಣಿ, ಶಂಕರ್ ಇದ್ದರು.



ಕೋಲಾರ ನಗರದ ಕಠಾರಿಪಾಳ್ಯ ನಿವಾಸಿಯಾದ ಪತ್ರಕರ್ತ ಡಿ.ಎಲ್. ಹರೀಶ್ ಅವರು ಬೆಂಗಳೂರು ನಗರ ಜಿಲ್ಲೆಯ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಚುನಾವಣೆಯಲ್ಲಿ ಆಯ್ಕೆಯಾಗಿದ್ದು, ಅವರನ್ನು ದುನಿಯ ಮುನಿಯಪ್ಪ ಅಭಿನಂದಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷಾ 65 ಕೇಂದ್ರಗಳ ಮುಖ್ಯ ಅಧೀಕ್ಷಕರ ಸಭೆಗೆ ಚಾಲನೆ

ಮಾರ್ಗಸೂಚಿ ಪಾಲಿಸಿ

ಕೋಲಾರ: ಜಿಲ್ಲಾದ್ಯಂತ ಮಾ.18 ರಿಂದ ಆರಂಭಗೊಳ್ಳುತ್ತಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಉಸ್ತುವಾರಿ ವಹಿಸಿಕೊಂಡಿರುವ ಮುಖ್ಯ ಅಧೀಕ್ಷಕರು, ಪ್ರಶ್ನೆಪತ್ರಿಕೆ ಪಾಲಕರು, ಮಾರ್ಗಾಧಿಕಾರಿಗಳು ಜವಾಬ್ದಾರಿಯಿಂದ ಕರ್ತವ್ಯನಿರ್ವಹಿಸಿ, ಪರೀಕ್ಷಾ ಪಾವಿತ್ರ್ಯತೆಗೆ ಧಕ್ಕೆಯಾಗದಂತೆ ಮತ್ತು ಗೊಂದಲಗಳಿಗೆ ಅವಕಾಶ ನೀಡದೇ ಸುಗಮ ಪರೀಕ್ಷೆ ನಡೆಸಿಕೊಡಿ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಅಲ್ಮಾಸ್ ಫರ್ವೀನ್ ತಾಜ್ ಕರೆ ನೀಡಿದರು.

ಮಂಗಳವಾರ ನಗರದ ಸ್ಕೌಟ್ಸ್ ಭವನದಲ್ಲಿ ನಡೆದ ಜಿಲ್ಲೆಯ ಎಲ್ಲಾ 65 ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಮಾರ್ಗಾಧಿಕಾರಿಗಳು, ಪ್ರಶ್ನೆಪತ್ರಿಕೆ ಪಾಲಕರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಸಿಸಿ ಕ್ಯಾಮರಾ ಸುಸ್ಥಿತಿಯಲ್ಲಿರಲಿ, ವೆಬ್ ಕಾಸ್ಟಿಂಗ್ ಇರುವುದರಿಂದ ಗಮನಹರಿಸಿ ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷಾ ಕಾರ್ಯದಲ್ಲಿ ಯಾವುದೇ ಅಚಾತುರ್ಯಗಳು ನಡೆಯದಂತೆ ಎಚ್ಚರವಹಿಸಬೇಕಾದ ಹೊಣೆ ಮುಖ್ಯ ಅಧೀಕ್ಷಕರದ್ದಾಗಿದೆ, ಜಿಲ್ಲೆಯ ಬಗ್ಗೆ ರಾಜ್ಯದ ಮಟ್ಟದಲ್ಲಿ ಒಳ್ಳೆಯ ಹೆಸರಿದೆ, ಜಿಲ್ಲೆಯ ಘನತೆಗೆ ಕುತ್ತು ತಾರದಿರಿ ಎಂದು ಕೋರಿ, ಪರೀಕ್ಷಾ ಸಿಬ್ಬಂದಿ ಕಡ್ಡಾಯವಾಗಿ ಗುರುತಿನ ಚೀಟಿ ಧರಿಸಿರಿ, ಕೇಂದ್ರಕ್ಕೆ ಅನಧಿಕೃತ ವ್ಯಕ್ತಿಗಳ ಪ್ರವೇಶಕ್ಕೆ ಅವಕಾಶ ನೀಡದಿರಿ, ಮುಖ್ಯ ಅಧೀಕ್ಷರು ಹೊರತುಪಡಿಸಿ ಉಳಿದ ಸಿಬ್ಬಂದಿ ಮೊಬೈಲ್ ತರಬಾರದು, ನೀವು ಕೇಂದ್ರಕ್ಕೆ ನಿಗಧಿತ ಸಮಯಕ್ಕೆ ಹಾಜರಿದ್ದು, ಮಾರ್ಗಾಧಿಕಾರಿಗಳಿಂದ ಪ್ರಶ್ನೆಪತ್ರಿಕೆ ಸ್ವೀಕರಿಸಿ ಎಂದರು.

ಸೌಲಭ್ಯಗಳ ಕುರಿತು ಗಮನಿಸಿ: ಪ್ರತಿ ಪರೀಕ್ಷಾ ಕೇಂದ್ರದಲ್ಲೂ ಮಕ್ಕಳಿಗೆ ತೊಂದರೆಯಾಗದಂತೆ ಕ್ರಮವಹಿಸಿ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ಗಾಳಿ ಬೆಳಕು ಸಮರ್ಪಕವಾಗಿರುವ ಕುರಿತು ಕೇಂದ್ರಗಳಿಗೆ ಮೊದಲೇ ಭೇಟಿ ನೀಡಿ ಗಮನಿಸಿಕೊಳ್ಳಿ, ಏನಾದರೂ ಸಮಸ್ಯೆ ಇದ್ದರೆ ಮುಖ್ಯ ಅಧೀಕ್ಷಕರಿ ಗಾಗಿ ಮಾಡಿರುವ ವಾಟ್ಸಪ್ ಗ್ರೂಪ್‌ನಲ್ಲಿ ಮಾಹಿತಿ ಹಾಕಿ ಕೂಡಲೇ ಸ್ಪಂದಿಸುವುದಾಗಿ ತಿಳಿಸಿದರು.



ಸಿಸಿ ಕ್ಯಾಮರಾ ದೃಢಪಡಿಸಿಕೊಳ್ಳಿ

ಶಿಕ್ಷಣಾಧಿಕಾರಿ ಡಾ.ವೀಣಾ ಮಾತನಾಡಿ, ಪ್ರತಿ ಪರೀಕ್ಷಾ ಕೇಂದ್ರದಲ್ಲೂ ಸಿಸಿ ಕ್ಯಾಮರಾ ಕಡ್ಡಾಯವಾಗಿದೆ, ಕೇಂದ್ರದ ಪ್ರವೇಶದ್ವಾರ, ಕಾರಿಡಾರ್ ಹಾಗೂ ಪ್ರಶ್ನೆಪತ್ರಿಕೆ ಬಂಡಲ್ ತೆಗೆಯುವ ಮತ್ತು ಉತ್ತರ ಪತ್ರಿಕೆ ಬಂಡಲ್ ಮಾಡುವ ಮುಖ್ಯ ಅಧೀಕ್ಷಕರ ಕಚೇರಿ, ಕೊಠಡಿಗಳಲ್ಲಿ ಸಿಸಿ ಕ್ಯಾಮರಾ ಇರುವ ಹಾಗೂ ಸುಸ್ಥಿತಿಯಲ್ಲಿರುವ ಕುರಿತು ದೃಢಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಪ್ರತಿ ಕೊಠಡಿಯಲ್ಲೂ ಉತ್ತಮ ಬೆಳಕು, ವಿದ್ಯುತ್ ಬಲ್ಬ್‌ಗಳ ಅಳವಡಿಕೆಯಾಗಿದೆಯೇ ಗಮನಿಸಿ,, ಯಾವೊಬ್ಬ ವಿದ್ಯಾರ್ಥಿಯೂ ನೆಲದ ಮೇಲೆ ಕುಳಿತು ಪರೀಕ್ಷೆ ಬರೆಯುವಂತಿಲ್ಲ, ಅಗತ್ಯ ಪ್ರಮಾಣದಲ್ಲಿ ಡೆಸ್ಕ್ ಇರಲೇಬೇಕು ಮತ್ತು ಸುಸ್ಥಿತಿಯಲ್ಲಿರಬೇಕು. ಇಂದೇ ಕೇಂದ್ರಗಳಿಗೆ ಭೇಟಿ ನೀಡಿ ಗಮನಹರಿಸಿ, ಮಕ್ಕಳು ಪರೀಕ್ಷೆ ಬರೆಯಲು ಅಡ್ಡಿಪಡಿಸುವ ಯಾವುದೇ ಕೆಲಸ ಬೇಡ ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಮಧುಮಾಲತಿ ಪಡುವಣೆ, ಕ್ಷೇತ್ರಶಿಕ್ಷಣಾಧಿಕಾರಿಗಳಾದ ಮಧುಮಾಲತಿ ಪಡುವಣೆ, ಕೆಜಿಎಫ್‌ನ ಮಂಜುನಾಥ್, ಮುಳಬಾಗಿಲಿನ ರಾಮಚಂದ್ರ, ವಿಷಯ ಪರಿವೀಕ್ಷಕ ಸಮೀವುಲ್ಲಾ, ತಾಲೂಕು ಪರೀಕ್ಷಾ ನೋಡಲ್ ಅಧಿಕಾರಿಗಳಾದ ರಾಧಾ, ಲಕ್ಷ್ಮೀಕಾಂತ್, ಸೋಮಶೇಖರ್, ಮಮತಾ, ವೆಂಕಟಸ್ವಾಮಿ, ಲಕ್ಷ್ಮೀನಾರಾಯಣ, ಮುಖ್ಯ ಅಧೀಕ್ಷಕರಾದ ಗಾಯತ್ರಿ, ಶಶಿವಧನ, ತಾಹೇರಾನುಸ್ರತ್, ವೇಣುಗೋಪಾಲ್, ರಮೇಶ್ ಗೌಡ ಹಾಜರಿದ್ದರು.

ಕಾಲಜ್ಞಾನಿ ಕೈವಾರ ತಾತಯ್ಯ ತತ್ವಾದರ್ಶ ಅಳವಡಿಸಿಕೊಳ್ಳಿ

ಕೋಲಾರ: ಕೋಲಾರ-ಬಂಗಾರಪೇಟೆ ರಸ್ತೆಯ ಹಂಚಾಳ ಗೇಟ್‌ನಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಸಮೂಹ ವಿದ್ಯಾ ಸಂಸ್ಥೆಗಳಿರುವ ಸಿದ್ದಾರ್ಥನಗರದಲ್ಲಿ ಏರ್ಪಡಿಸಿದ್ದ ಸದ್ಗುರು ಶ್ರೀ ಯೋಗಿನಾರೇಯಣ ಯತೀಂದ್ರರ 300ನೇ ಜಯಂತಿ ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷ ಡಾ.ಎಂ.ಚಂದ್ರಶೇಖರ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಅವರು ಮಾತನಾಡಿ, ತಾತಯ್ಯನವರು ತಾಳೆಗರಿಯಲ್ಲಿ ರಚಿಸಿದ ಕಾಲಜ್ಞಾನವನ್ನು ಮೊಟ್ಟಮೊದಲಿಗೆಮುದ್ರಣವಾಗಿ ಪುಸ್ತಕರೂಪದಲ್ಲಿ ಹೊರತರುವಲ್ಲಿ ಮಾಲೂರು ಸೊಣ್ಣಪ್ಪನವರು (ಸ್ವರೂಪಾನಂದ ಸ್ವಾಮಿಗಳು) ರವರಪಾತ್ರ ಬಹುದೊಡ್ಡದುಎಂದರು. ಗುರುಗಳು ಶಿಷ್ಯರ ಸಂಬಂಧಯಾವ ಪಥದಲ್ಲಿರಬೇಕು. ಗಂಡ ಹೆಂಡತಿ ಸಂಬಂಧ ಹೇಗಿರಬೇಕು, ಜಾತಿಯಲ್ಲಿ ಸ್ತ್ರೀ-ಪುರುಷ ಎರಡೆಂಬುದು ಬೇರೆ ಜಾತಿಗಳಿಲ್ಲ ಎಂದು ತಾತಯ್ಯನವರ ಕಾಲಜ್ಞಾನ ಪದ್ಯಗಳ ಸಾರಾಂಶ ಸವಿಸ್ತಾರವಾಗಿ ತಿಳಿಸಿದರು.

ತಾತಯ್ಯನವರು ಬಳೆಗಳನ್ನು ತೊಡಿಸುವ ಕಾಯಕವನ್ನು ಮಾಡುತ್ತಿದ್ದರು. ಈ ಸಮಯದಲ್ಲಿಯೂ ಪರಮಾತ್ಮನ ಸ್ಮರಣೆಯನ್ನು ಮಾಡುತ್ತಿದ್ದರು. ಜನಸಾಮಾನ್ಯರಿಗೆ ಆಧ್ಯಾತ್ಮಿಕ ಸನ್ಮಾರ್ಗತೋರಿದ ಇವರು 110 ವರ್ಷಗಳ ಕಾಲ ಬಾಳಿ ಜೀವಂತಸಮಾಧಿಯಾದರು. ತಾತಯ್ಯನವರ ಕೆಲವು ವಚನಗಳನ್ನು ವಾಚಿಸುವುದರ ಮೂಲಕ ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ಮುಖ್ಯ ಆಡಳಿತಾಧಿಕಾರಿ ಡಾ:ಎಂ.ವಿ.ವಿಜಯಕುಮಾರ್ ತಾತಯ್ಯನವರ ವಿಚಾರಗಳನ್ನು ಹಂಚಿಕೊಂಡರು. ಶಾಲಾಭಿವೃದ್ಧಿ ಸಮಿತಯ ಎಲ್ಲಾ ಪದಾಧಿಕಾರಿಗಳು, ಎಸ್. ಲಕ್ಷ್ಮಿನಾರಾಯಣರೆಡ್ಡಿ ಆಡಳಿತಾಧಿಕಾರಿಗಳು, ಪ್ರಾಂಶುಪಾಲರುಗಳು, ಮುಖ್ಯೋಪಾಧ್ಯಾಯರುಗಳು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿಕ್ಷಕರಾದ ವಿ.ಸ್ವರ್ಣಲತ ಸ್ವಾಗತಿಸಿ ನಿರೂಪಿಸಿದರು .ಟಿ.ಎಂ.ಕಮಲ ವಂದಿಸಿದರು.



ಎನ್‌ಟಿಜಿಎಂ ಸರ್ಕಾರಿ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಗುದ್ದಲಿಪೂಜೆ

ಬಂಗಾರಪೇಟೆ: ಪಟ್ಟಣದ ಅಯ್ಯಪ್ಪ ಸ್ವಾಮಿ ದೇವಾಲಯದ ಮುಂಭಾಗದಲ್ಲಿರುವ ಎನ್‌ಟಿಜಿಎಂ ಸರ್ಕಾರಿ ಶಾಲೆಯ ಕಟ್ಟಡವನ್ನು ಟಾಟಾ ಕಂಪನಿಯ ಸಹಭಾಗಿತ್ವದಲ್ಲಿ 3.50 ಕೋಟಿರೂಗಳ ವೆಚ್ಚದಲ್ಲಿ ಶಾಲೆಯನ್ನು ಇನ್ನು ಎಂಟು ತಿಂಗಳ ಒಳಗಾಗಿ ಲೋಕಾರ್ಪಣೆ ಮಾಡಲಾಗುವುದು ಎಂದು ಶಾಸಕ ಎಸ್.ಎನ್.ನಾರಾಯಣಸ್ವಾಮಿ ಹೇಳಿದರು.

ಪಟ್ಟಣದ ಎನ್‌ಟಿಜಿಎಂ ಸರ್ಕಾರಿ ಶಾಲೆಯ ನೂತನ ಕಟ್ಟಡಗಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಈ ಹಿಂದೆ ಎಸ್‌ವಿಆರ್ ಸುಬ್ರಮಣಿ ರವರು ಈ ಸ್ಥಳವನ್ನು ದಾನವಾಗಿ ಸರ್ಕಾರಿ ಶಾಲೆ ನಿರ್ಮಾಣಕ್ಕೆ ನೀಡಿದ್ದರು, ಕೋಟ್ಯಂತರರೂಗಳ ಬೆಲೆಬಾಳುವ ಸ್ಥಳವನ್ನು ಬಡ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಮೀಸಲಿಟ್ಟ ಎಸ್‌ವಿಆರ್ ಮಣಿ ರವರ ಸೇವೆ ಶ್ಲಾಘನೀಯ ಅವರ ಕುಟುಂಬಕ್ಕೆ ಒಳ್ಳೆಯದಾಗಲಿ ಎಂದು ಹಾರೈಸಿದರು.

ನಮ್ಮ ಕನಸು ಆಶಯ ಶಾಲಾ ಕಟ್ಟಡ ನಿರ್ಮಾಣ ಮಾಡುವುದಾಗಿದ್ದು, ಟಾಟಾ ಕಂಪನಿಯ ಸಹಕಾರದಿಂದ 3.50 ಕೋಟಿ ರೂಗಳ ವೆಚ್ಚದಲ್ಲಿ ಶಾಲಾ ಕೊಠಡಿಗಳನ್ನು, ಮಾದರಿಶಾಲೆಯನ್ನು, ನಿರ್ಮಾಣ ಮಾಡಲಾಗುವುದು, ಈ ಹಿಂದೆ ಸರ್ಕಾರಿ ಜಾಗದಲ್ಲಿ ಸರ್ಕಾರಿ ಹಣದಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿತ್ತು ಆದರೆ ಈಗ ಟಾಟಾ ಕಂಪನಿ ಅವರು ಶಿಕ್ಷಣಕ್ಕೆ ಒತ್ತು ನೀಡಿದ್ದು ಕಂಪನಿಯ ಸಿಎಸ್‌ಆರ್ ಹಣದಲ್ಲಿ 2.50 ಕೋಟಿ ರೂಗಳನ್ನು ನೀಡುತ್ತಿದ್ದು, ಉಳಿದ ಒಂದು ಕೋಟಿ ರೂಗಳನ್ನು ಸರ್ಕಾರದ ವತಿಯಿಂದ ಒಟ್ಟು 3.50 ಕೋಟಿ ರೂಗಳ ವೆಚ್ಚದಲ್ಲಿ ಸುಸಜ್ಜಿತ ಶಾಲಾ ಕಟ್ಟಡಗಳು, ಶೌಚಾಲಯಗಳು, ಪೀಠೋಪಕರಣಗಳು, ಸಿಸಿ ಕ್ಯಾಮೆರಾ ಸೇರಿದಂತೆ ಮಾದರಿ ಶಾಲೆಯನ್ನು ನಿರ್ಮಾಣ ಮಾಡಲಾಗುವುದೆಂದು ತಿಳಿಸಿದರು.

ಹಳೆಯ ಕಟ್ಟಡ ಶಿಥಿಲವಾಗಿ ಕುಸಿದು ಬಿದ್ದ ಪರಿಣಾಮ ಅದನ್ನು ತೆರವುಗೊಳಿಸಿ ನೂತನ ಕಟ್ಟಡವನ್ನು ನಿರ್ಮಾಣ ಮಾಡಲು ಇಂದು ಕಾಲ ಕೂಡಿಬಂದಿದೆ, ಎಂಟು ತಿಂಗಳ ಒಳಗಾಗಿ ಕಟ್ಟಡ ನಿರ್ಮಾಣವಾಗಲಿದೆ, ಲೋಕಾರ್ಪಣೆ ಮಾಡಲಾಗುವುದು, ಟಾಟಾ ಕಂಪನಿಯವರಿಗೆ ಅಭಿನಂದನೆ ಸಲ್ಲಿಸಿದರು.



ಮುಖ್ಯರಸ್ತೆಯಲ್ಲಿ ಹರಿಯುತ್ತಿದೆ ಕೊಳಚೆ ನೀರು: ದೂರು

ಮಾಲೂರು: ನಗರದ ರಾಜೀವ್ ನಗರದಿಂದ ಮಾಲೂರುಗೆ ಹೋಗುವ ಮುಖ್ಯರಸ್ತೆಯಲ್ಲಿ ತುಂಬಿ ಹರಿಯುತ್ತಿರುವ ಚರಂಡಿ ಕೊಳಚೆ ನೀರು ಸಾರ್ವಜನಿಕರ ಓಡಾಟಕ್ಕೆ ತುಂಬ ತೊಂದರೆಯಾಗಿದೆ. ನಗರಸಭೆಯಲ್ಲಿ ಹಿಂದುಳಿದ ನಗರಗಳನ್ನು ಹಿಂದೆ ಬಿಟ್ಟು ಸ್ವಚ್ಚತೆಯ ಕಾರ್ಯವೈಖರಿ ಮರೀಚಿಕೆಯಾಗಿದೆ. ಕೇವಲ ಮುಂದುವರೆದ ವಾರ್ಡ್‌ಗಳು ತಾಲೂಕು ಕಚೇರಿ ಸುತ್ತಮುತ್ತ ಹಾಗೂ ಬಸ್ ನಿಲ್ದಾಣದ ಅಕ್ಕ ಪಕ್ಕದ ರಸ್ತೆಗಳಿಗೆ ಮಾತ್ರ ಸೀಮಿತವಾಗಿದೆ.

ಮಾಲೂರು ನಗರವು ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು ಜನಸಂಖ್ಯೆಯು ಹೆಚ್ಚಾಗುತ್ತಿದೆ. ಸರ್ಕಾರ ಆರೋಗ್ಯ, ನೈರ್ಮಲ್ಯ ಮೂಲ ಭೂತ ಸೌಕರ್ಯಗಳ ಅಭಿವೃದ್ಧಿಗೆ ಕೋಟ್ಯಂತರ ರೂಪಾಯಿಗಳ ಅನುದಾನ ಕೊಡುತಿದ್ದರು. ಅಧಿಕಾರಿಗಳು ಸರಿಯಾಗಿ ಸದ್ಬಳಕೆ ಮಾಡುತಿಲ್ಲ ಎಂದು ನಗರ ವಾಸಿಗಳ ಮಾತಾಗಿದೆ. ನಗರ ಸಭೆಯಲ್ಲಿ ಹಿಂದುಳಿದ ನಗರಗಳಾದ ಸಮತಾನಗರ, ಇಂದ್ರನಗರ,



ಹನುಮಂತನಗರ, ರಾಜೀವ್ ನಗರಗಳ ವಾಸಿಗಳ ಪರಿಸ್ಥಿತಿ ಹೇಳಲು ತೀರದ ಚರಂಡಿಗಳು ತುಂಬಿ ತ್ಯಾಜ್ಯ ನೀರು ನಿಂತು ಸೊಳ್ಳೆ, ಜಿರಳೆಗಳ ಉತ್ಪತ್ತಿಯಾಗಿ ಅವುಗಳ ಕಾಟ ತಾಳಲಾಗದೆ ಆಗಿದೆ. ಕೆಲವು ಕಡೆ ಕೊಳಚೆ ನೀರು ರಸ್ತೆಯಲ್ಲಿ ಹರಿಯುತಿದೆ. ಇತ್ತೀಚೆಗೆ ಚರಂಡಿಗಳ ಸ್ವಚ್ಛತೆ ಮಾಡುವ ನಗರ ಸಭೆ ಸಿಬ್ಬಂದಿಯೇ ಕಾಣುತಿಲ್ಲ.

ಯಾರದು ಮಂತ್ರಿಗಳು, ಎಂಎಲ್‌ಎ ಬರ್ತಾರೆ ಅಂದ್ರೆ ಮುಖ್ಯರಸ್ತೆಯನ್ನು ಮಾತ್ರ ಶೃಂಗಾರ ಮಾಡುತ್ತಾರೆ. ಊರಿಗೆ ಮಾತ್ರ ಗಬ್ಬು ನಾತ ಬೀರುತ್ತಿದೆ.

ಹನುಮಂತ ನಗರ ಮತ್ತು ರಾಜೀವ್ ನಗರಗಳ ಒಳಗೆ ಚರಂಡಿಗಳು ಕ್ಲಿನಿಂಗ್ ಮಾಡಿ ಸುಮಾರು ದಿನಗಳೇ ಕಳೆದಿದೆ. ಕೆಲವು ಕಡೆ ಚರಂಡಿಗಳಲ್ಲಿ ಕಸ ಕಡ್ಡಿ, ಮಣ್ಣು ತುಂಬಿ ಮುಚ್ಚಿಹೋಗಿದೆ. ಮಾಲೂರು-ಲಿಂಗಾಪುರ ಮುಖ್ಯ ರಸ್ತೆ ರಾಜೀವ್ ನಗರದವರಿಗೆ ಕೆಲವು ಕಡೆ ನೀರಿನ ಪೈಪು ಡ್ಯಾಮೇಜ್‌ಆಗಿ ನೀರು ಪೋಲಾಗುತ್ತಿದೆ.

ಚರಂಡಿಗಳಲ್ಲಿ ಕೊಳಚೆ ನೀರು ನಿಂತು ರಸ್ತೆಯಲ್ಲಿ ಹರಿದು ಜನರು, ವಾಹನಗಳು ಓಡಾಡಲು ತುಂಬ ಅನಾನುಕೂಲವಾಗಿದೆ. ಚುನಾವಯಿತ ಸದಸ್ಯರ ಅವಧಿ ಮುಗಿದು ಅಧಿಕಾರ ಇಲ್ಲದ ಕಾರಣ ಸಂಬಂಧ ಪಟ್ಟ ಅಧಿಕಾರಿಗಳು ನಗರ ಸಭೆ ನೂತನ ಪೌರಾಯುಕ್ತರಾದ ಮಹದೇವ್, ಎಲ್ಲಾ ವಾರ್ಡಗಳಿಗೆ ಭೇಟಿ ನೀಡಿ ನಗರದಎಲ್ಲಾ ವಾರ್ಡ್‌ಗಳ ಒಳಗೆ ಹೋಗಿ ಸ್ವಚ್ಚತೆ ನೀರು ಹಾಗೂ ಮೂಲಭೂತ ಸೌಕರ್ಯಗಳು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಸಮಸ್ಯೆ ಪರಿಶೀಲನೆ ಮಾಡಿ ಬಗೆಹರಿಸಬೇಕಿದೆ.

ಕಾರಮನಹಳ್ಳಿ ಡೇರಿಯಲ್ಲಿ ಹಾಲು ಕದ್ದು ಸಿಕ್ಕಿಬಿದ್ದ ಸಿಬ್ಬಂದಿ

ಬಂಗಾರಪೇಟೆ: ತಾಲೂಕಿನ ಕಾರಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಅಕ್ರಮಗಳು ನಡೆದಿವೆ ಇಲ್ಲಿನ ಸಿಬ್ಬಂದಿ ಹಾಲನ್ನು ಕದ್ದಿದ್ದಾರೆ ಎಂದು ಆರೋಪಿಸಿದ್ದು, ಆರೋಪದ ಹಿನ್ನೆಲೆ ಕೋಮುಲ್ ಒಕ್ಕೂಟದ ಉಪ ವ್ಯವಸ್ಥಾಪಕ ಹಾಗೂ ವಿಸ್ತೀರ್ಣ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಪರಿಶೀಲನೆ ವೇಳೆ ಎರಡು ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದಿದ್ದು ಇದು ತಾರಕ್ಕೇರಿ ಕೈ ಕೈ ಮಿಲಾಯಿಸುವ ಹಂತಕ್ಕೂ ತಲುಪಿತ್ತು ಆಗ ಗ್ರಾಮದ ಹಿರಿಯರು, ಒಕ್ಕೂಟದ ಅಧಿಕಾರಿಗಳು ಹಾಗೂ ಸಂಘದ ಅಧ್ಯಕ್ಷರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ಸೋಮವಾರ ರಾತ್ರಿ ಇಲ್ಲಿನ ಸಿಬ್ಬಂದಿ ಸುಮಾರು ಎಂಟು ಲೀಟರ್ ಹಾಲನ್ನು ತಮ್ಮ ಮನೆಗೆ ಕದ್ದೊಯ್ಯುತ್ತಿದ್ದು ಮತ್ತೆ ಮರುದಿನ ಬೆಳಗ್ಗೆ ಅದೇ ಹಾಲನ್ನು ಅವರ ಹೆಸರಿಗೆ ಹಾಕಿಕೊಳ್ಳುತ್ತಿದ್ದಾರೆ. ಇದರಿಂದ ಉತ್ಪಾದಕರಿಗೆ ನಷ್ಟವಾಗುತ್ತಿದೆ. ಒಕ್ಕೂಟದ ಉಪ ವ್ಯವಸ್ಥಾಪಕ ಡಾ.ಲೋಕೇಶ್ ಬಂಗಾರಪೇಟೆ ಉಪ ವ್ಯವಸ್ಥಾಪಕ ಡಾ.ಗಿರೀಶ್ ಗೌಡ, ವಿಸ್ತೀರ್ಣ ಅಧಿಕಾರಿ ಭಾನುಪ್ರಕಾಶ್, ಕಿರಣ್, ಗ್ರಾಮಸ್ಥರ ಸಮಸ್ಯೆಯನ್ನು ಆಲಿಸಿ ಬಗೆಹರಿಸುವುದಾಗಿ ಎಂದು ಗ್ರಾಮಸ್ಥರಿಗೆ ಭರವಸೆ ನೀಡಿದರು.

ಕೆಜಿಎಫ್ ಉರಿಗಾಂ ರೈಲ್ವೆ ನಿಲ್ದಾಣದಲ್ಲಿ ಸೌಕರ್ಯಗಳ ಕೊರತೆ

ಪ್ರಯಾಣಿಕರಿಗೆ ಶೌಚಾಲಯ, ಕುಡಿವ ನೀರಿಲ್ಲ

ಕೆಜಿಎಫ್: ಕೋಲಾರ ಚಿನ್ನದ ಗಣಿ ಪ್ರದೇಶದ ಉರಿಗಾಂ ರೈಲ್ವೆ ನಿಲ್ದಾಣವು ಬ್ರಿಟಿಷರ ಕಾಲದಲ್ಲಿ, ಸುಮಾರು 1900ರಿಂದ 1910ರ ಅವಧಿಯಲ್ಲಿ ಸ್ಥಾಪಿತ ವಾದ ಐತಿಹಾಸಿಕ ರೈಲ್ವೆ ನಿಲ್ದಾಣವಾಗಿದೆ. ಚಿನ್ನದ ಗಣಿ ಪ್ರದೇಶದಿಂದ ಚಿನ್ನವನ್ನು ಸಾಗಿಸಲು ಈ ನಿಲ್ದಾಣವನ್ನು ಪ್ರಮುಖ ಕೇಂದ್ರ ವಾಗಿ ಬಳಸಲಾಗುತ್ತಿತ್ತು. 1881-1981ರ ಶತಮಾನೋತ್ಸವ ಕೃತಿಗಳ ಪ್ರಕಾರ ಈ ನಿಲ್ದಾಣವು 19ನೇ ಶತಮಾನದ ಕೊನೆಯ ಭಾಗದಲ್ಲಿ ಅಥವಾ 20ನೇ ಶತಮಾನದ ಆರಂಭದಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಕೆಜಿಎಫ್ ಇತಿಹಾಸದ ಒಂದು ಪ್ರಮುಖ ಭಾಗವಾಗಿದೆ.

ಆದರೆ ಇಷ್ಟು ಐತಿಹಾಸಿಕ ಹಿನ್ನೆಲೆಯುಳ್ಳ ಈ ರೈಲ್ವೆ ನಿಲ್ದಾಣದಲ್ಲಿ ಇಂದಿಗೂ ಮೂಲಭೂತ ಸೌಕರ್ಯಗಳ ಕೊರತೆ ತೀವ್ರವಾಗಿ ಕಾಡುತ್ತಿದೆ. ಹಲವು ವರ್ಷಗಳ ಕಾಲ ಈ ನಿಲ್ದಾಣ ದಲ್ಲಿ ಪ್ರಯಾಣಿಕರಿಗೆ ಶೌಚಾಲಯದ ವ್ಯವಸ್ಥೆಯೇ ಇರಲಿಲ್ಲ ಎನ್ನುವುದು ಸ್ಥಳೀಯರ ಆರೋಪವಾಗಿದೆ.

2019ರಲ್ಲಿ ಕೋಲಾರ ಲೋಕಸಭಾ ಕ್ಷೇತ್ರದ



ಸಂಸದರಾದ ಎಸ್. ಮುನಿಸ್ವಾಮಿ ಅವರು ಅಧಿಕಾರಕ್ಕೆ ಬಂದ ನಂತರ ಉರಿಗಾಂ ರೈಲ್ವೆ ನಿಲ್ದಾಣದ ನವೀಕರಣ ಕಾರ್ಯ ಕೈಗೊಳ್ಳಲಾಯಿತು. ಪುರುಷರಿಗಾಗಿ ಹೊಸ ಶೌಚಾಲಯವನ್ನು ನಿರ್ಮಿಸಲಾಯಿತು. ಆದರೆ ನಿರ್ಮಿಸಲಾದ ಶೌಚಾಲಯಕ್ಕೆ ಯಾವಾಗಲೂ ಬೀಗ ಹಾಕಿರಲಾಗಿದ್ದು ಪ್ರಯಾಣಿಕರಿಗೆ ಉಪಯೋಗವಾಗದ ಸ್ಥಿತಿ ಉಂಟಾಗಿದೆ.

ಇನ್ನು ನಿಲ್ದಾಣದ ಸಾಮಾನ್ಯ ಪ್ರತೀಕ್ಷಾಲಯದಲ್ಲಿ ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆ ಇದ್ದರೂ, ಪ್ರತೀಕ್ಷಾಲಯದ ಬಾಗಿಲಿಗೂ ಸದಾ ಬೀಗ ಹಾಕಿರುವ ಕಾರಣ ಮಹಿಳಾ ಪ್ರಯಾಣಿಕರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ಇದರಿಂದ ಮಹಿಳೆಯರು ಮತ್ತು ಹಿರಿಯ ನಾಗರಿಕರಿಗೆ ತೀವ್ರ ಸಂಕಷ್ಟ ಉಂಟಾಗಿದೆ.

ರೈಲ್ವೆ ನಿಲ್ದಾಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲದಿರುವುದು ಮತ್ತೊಂದು ಸಮಸ್ಯೆಯಾಗಿದೆ. ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳಿಲ್ಲದೆ ಪ್ರಯಾಣಿಕರು ತೀವ್ರ ಅಸೌಕರ್ಯ ಅನುಭವಿಸುತ್ತಿದ್ದು, ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳು ಈ ಸಮಸ್ಯೆಯನ್ನು ಶೀಘ್ರದಲ್ಲೇ ಪರಿಹರಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸ್ಥಳೀಯರು ಹಾಗೂ ಪ್ರಯಾಣಿಕರು ಉರಿಗಾಂ ರೈಲ್ವೆ ನಿಲ್ದಾಣದಲ್ಲಿ ಶೌಚಾಲಯಗಳನ್ನು ತೆರೆಯುವಂತೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಮತ್ತು ಪ್ರತೀಕ್ಷಾಲಯವನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸುವಂತೆ ರೈಲ್ವೆ ಇಲಾಖೆ ಹಾಗೂ ಜನಪ್ರತಿನಿಧಿಗಳು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಶ್ರೀಪ್ರಸನ್ನ ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಾಲಯದ ಬ್ರಹ್ಮೋತ್ಸವ

ಕೆಜಿಎಫ್ ಚಿನ್ನದ ರಥೋತ್ಸವ ಸಂಪನ್ನ

ಕೆಜಿಎಫ್: ವಿಧಾನಸಭಾ ಕ್ಷೇತ್ರದಲ್ಲಿರುವ ಹಲವು ಸರ್ಕಾರಿ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಮಾಜಿ ನಗರಸಭೆ ಅಧ್ಯಕ್ಷ ವಳ್ಳಲ್ ಮುನಿಸ್ವಾಮಿ ಆರೋಪಿಸಿದರು. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಸಂಪೂರ್ಣ ದಾಖಲೆಗಳು ನನ್ನ ಬಳಿ ಇದ್ದು, ಮುಂದಿನ ದಿನಗಳಲ್ಲಿ ಅವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುತ್ತೇನೆ ಎಂದು ಅವರು ಹೇಳಿದರು.

ನಗರದ ಶ್ರೀ ಪ್ರಸನ್ನ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಾಲಯದ ಜಾತ್ರಾ ಮಹೋತ್ಸವದ ಕಡೆಯ ದಿನ ನಡೆದ ಚಿನ್ನದ ರಥ ಉತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ರಸಮಂಜರಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಕೆಜಿಎಫ್ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು ಒಂದೂವರೆ ಲಕ್ಷ ದಲಿತ ಮತದಾರರು ಇದ್ದು, ಎಲ್ಲರೂ ಒಂದಾಗ ಬೇಕಾದ ಸಮಯ ಈಗ ಬಂದಿದೆ ಎಂದು ಹೇಳಿದರು.

ಕ್ಷೇತ್ರದಲ್ಲಿ ಹಲವು ಅಕ್ರಮಗಳು ನಡೆದಿದ್ದು, ಅವುಗಳ ಬಗ್ಗೆ ನನ್ನ ಬಳಿ ದಾಖಲೆಗಳಿವೆ. ನಾನು ನೀಡುವ ದಾಖಲೆಗಳು ತಪ್ಪು ಎಂದು ತಮಗೆ ಕಂಡುಬಂದರೆ, ಒಂದೂವರೆ ಲಕ್ಷ ಜನರು ಧರಿಸುವ ಪಾದರಕ್ಷೆಗಳಿಂದ



ಹೊಡೆಸಿಕೊಳ್ಳಲು ಸಹ ಸಿದ್ದನಿದ್ದೇನೆ ಎಂದು ವಳ್ಳಲ್ ಮುನಿಸ್ವಾಮಿ ಸವಾಲು ಹಾಕಿದರು.

ಕಳೆದ 17 ವರ್ಷಗಳಿಂದ ಮಾಜಿ ಶಾಸಕ ವೈ.ಸಂಪಂಗಿ ಅವರ ನೇತೃತ್ವದಲ್ಲಿ ಚಿನ್ನದ ಪಲ್ಲಕ್ಕಿ ಉತ್ಸವ ಅತಿ ವಿಜೃಂಭಣೆಯಿಂದ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಬರಲಿದೆ. ಸರ್ಕಾರ ಪ್ರಕಟಿಸುವ ಕರಪತ್ರದಲ್ಲಿ ಚಿನ್ನದ ರಥದ ಉತ್ಸವವೂ ಸ್ಥಾನ ಪಡೆಯಲಿದೆ ಎಂದು ಅವರು ಹೇಳಿದರು.

ಮಾಜಿ ಶಾಸಕ ವೈ. ಸಂಪಂಗಿ ಮಾತನಾಡಿ, ದೇವರ ಕಾರ್ಯಕ್ರಮದಲ್ಲಿ ರಾಜಕೀಯ ಮಾತನಾಡುವುದು ಸರಿಯಲ್ಲ. ಆದರೆ ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ನಡೆಯುತ್ತಿರುವ ಅಕ್ರಮ ಮತ್ತು ಅನಾಚಾರಗಳನ್ನು ಜನರ ಮುಂದೆ ಇಡುತ್ತೇನೆ. ಆಗ ಜನರೇ ತೀರ್ಪು ನೀಡಲಿದ್ದಾರೆ ಎಂದು ಹೇಳಿದರು.

11.45ಕ್ಕೆ ಉತ್ಸವ ಆರಂಭ: ಮಲ್ಲಿಗೆ ಹೂಗಳಿಂದ ಅಲಂಕರಿಸಲಾದ ಎರಡು ಪಲ್ಲಕ್ಕಿಗಳನ್ನು ರಾತ್ರಿ 11.45ಕ್ಕೆ ಮಾಜಿ ಶಾಸಕ ವೈ. ಸಂಪಂಗಿ ಹಾಗೂ ಮಾಜಿ ನಗರಸಭೆ ಅಧ್ಯಕ್ಷ ವಳ್ಳಲ್ ಮುನಿಸ್ವಾಮಿ ಪೂಜೆ ನೆರವೇರಿಸಿ ಉತ್ಸವಕ್ಕೆ ಚಾಲನೆ ನೀಡಿದರು. ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಅಶ್ವಿನಿ ಸಂಪಂಗಿ, ಟಿಎಪಿಎಂಎಸ್ ಅಧ್ಯಕ್ಷ ಪ್ರವೀಣ್ ಕುಮಾರ್, ನಗರ ಬಿಜೆಪಿ ಅಧ್ಯಕ್ಷ ಸುರೇಶ್ ಕುಮಾರ್, ಬಾಬಿ ಸುರೇಶ್, ರವಿಕುಮಾರ್, ಜೈ ಕುಮಾರ್, ಎಂ.ಎಸ್. ನಾಗೇಂದ್ರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಿರುಸುದ್ದಿ

ಶಾಸಕರಿಗೆ ಮನವಿ ಸಲ್ಲಿಕೆ

• **ಶಿಡ್ಲಘಟ್ಟ:** ಪರಿಶಿಷ್ಟ ಜಾತಿ ಒಳ ಮೀಸಲು ಜಾರಿಗೆ ಸಂಬಂಧಿಸಿದಂತೆ 56, 342 ಖಾಲಿ ಹುದ್ದೆಗಳ ಬರ್ತಿ ಮಾಡುವಾಗ ಶೇ.15 ರೊಳಗೆ ಒಳಮಿಸಲು ಅನ್ವಯಿಸಿ ನೇಮಕ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹಾಕಬೇಕೆಂದು ತಾಲೂಕು ಮಾದಿಗ ಸಮುದಾಯಗಳ ಮುಖಂಡರುಗಳು ಶಾಸಕ ಬಿ.ಎನ್.ರವಿಕುಮಾರ್‌ಗೆ ಮನವಿ ಪತ್ರ ಸಲ್ಲಿಸಿದರು. ತಾಲೂಕಿನ ಮೇಲೂರಿನ ಶಾಸಕರ ಗೃಹ ಕಚೇರಿಯಲ್ಲಿ ಶಾಸಕ ಬಿ.ಎನ್.ರವಿಕುಮಾರ್ ಅವರನ್ನು ಭೇಟಿ ಮಾಡಿದ್ದ ಮಾದಿಗ ಸಮುದಾಯಗಳ ಮುಖಂಡರು, ಸುಪ್ರೀಂ ಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರ ಕಾಯ್ದೆ ರೂಪಿಸಿ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದುಕೊಂಡು ರಾಜ್ಯಪಾಲರಿಂದ ಅಂಕಿತ ಪಡೆದು ಅಧಿಕೃತವಾಗಿ ಒಳಮಿಸಲಾತಿಯನ್ನು ಜಾರಿಗೊಳಿಸಿರುವುದು ಮಾದಿಗ ಸಮುದಾಯದ 35 ವರ್ಷಗಳ ಹೋರಾಟಕ್ಕೆ ದೊರೆತ ಐತಿಹಾಸಿಕ ಜಯವಾಗಿದೆ ಎಂದು ತಿಳಿಸಿದರು. ಸಂವಿಧಾನದ ವಿಧಿ 15 (4) ಹಾಗೂ 16 (4) ಗಳಿಗೆ ಅನುಗುಣವಾಗಿ ಉದ್ಯೋಗ ನೇಮಕ ಗೊಳಿಸಬೇಕು. ಮಾದಿಗ ಸಮುದಾಯದ ಮುಖಂಡರಿಂದ ಮನವಿ ಸ್ವೀಕರಿಸಿದ ಶಾಸಕ ಬಿ.ಎನ್. ರವಿಕುಮಾರ್ ಅವರು ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿ, ಸಿಎಂ ಸಿದ್ದರಾಮಯ್ಯ ಅವರ ಗಮನಕ್ಕೆ ತರಲಾಗುವುದು, ಒಳ ಮೀಸಲು ಲಿ ನಡೆಯಲ್ಲಿ ಉದ್ಯೋಗಗಳಿಗೆ ನೇಮಕ ಮಾಡಲು ಸರ್ಕಾರವನ್ನು ಒತ್ತಾಯಿಸಿದ ವಾಗಿ ಭರವಸೆ ನೀಡಿದರು. ಸಮುದಾಯದ ಹಿರಿಯ ಮುಖಂಡರು, ಕಿರಿಯ ಮುಖಂಡರು ಅನೇಕರು ಭಾಗವಹಿಸಿದ್ದರು.

ದೇವಾಲಯದ ನಿರ್ಮಾಣಕ್ಕೆ ಪುಟ್ಟು ಅಂಜನಪ್ಪ ದೇಣಿಗೆ



• **ಶಿಡ್ಲಘಟ್ಟ:** ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಪುಟ್ಟು ಆಂಜಿನಪ್ಪ ಸೋಮವಾರದಂದು ಕೊತ್ತನೂರು ಗ್ರಾಮಕ್ಕೆ ಭೇಟಿ ನೀಡಿ ದೇವಾಲಯದ ಕಟ್ಟಡದ ನಿರ್ಮಾಣಕ್ಕೆ 2 ಲಕ್ಷ ರೂ. ಹಣವನ್ನು ನಂತರ ಪುಟ್ಟು ಅಂಜನಪ್ಪನವರು ಮಾತನಾಡುತ್ತಾ, ಭಗವಂತನ ಆಶೀರ್ವಾದ ಇದ್ದರೆ ಗ್ರಾಮವು ಹಾಗೂ ಗ್ರಾಮ ಪಂಚಾಯಿತಿ ತಾಲೂಕು ಹಾಗೂ ಸಮಸ್ತ ಜನತೆ ಸುಖ ಸಂತೋಷದಿಂದ ಇರಬಹುದು. ಆದುದರಿಂದ ಆ ಭಗವಂತನಲ್ಲಿ ಸಮಸ್ತ ಜನತೆಗೆ ಕಾಪಾಡ ಬೇಕೆಂದು ಬೇಡಿಕೊಳ್ಳುತ್ತೇನೆ ಎಂದು ತಿಳಿಸಿದರು.ಕೊತ್ತೂನೂರು ಗ್ರಾಮಸ್ಥರು ಮತ್ತು ಕಾಂಗ್ರೆಸ್ ಮುಖಂಡರು ಭಾಗಿಯಾದರು. ಮತ್ತು ಮುಖಂಡರು ಸುಬ್ಬರೆಡ್ಡಿ ಮಾದಪ್ಪ ನಿರಂಜನ್ ಸ್ವಾಮಿ ವರದರಾಜು ದೇವರಾಜು ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಅನೇಕ ಕಾಂಗ್ರೆಸ್ ಹಾಗೂ ಕಾರ್ಯಕರ್ತರು ಮತ್ತು ಆಂಜನಪ್ಪ ಅಭಿಮಾನಿಗಳು ಭಾಗವಹಿಸಿದ್ದರು.

ಆರಾಧನಾ ಮಹೋತ್ಸವ



• **ಶಿಡ್ಲಘಟ್ಟ:** ನಗರದ ಕಾಳಿಕಾಂಬ ಕಮ್ಮಟೇಶ್ವರ ಸಮುದಾಯ ಭವನದಲ್ಲಿ ಶ್ರೀ ಪುರಂದರದಾಸರು, ಶ್ರೀ ಸದ್ಗುರು ತ್ಯಾಗರಾಜಸ್ವಾಮಿ, ಶ್ರೀ ಕನಕದಾಸರು, ಶ್ರೀ ಯೋಗಿ ನಾರಾಯಣ ಇತಿಂದ, ಶ್ರೀ ವಾಗ್ಯಕಾರರು ಆರಾಧನಾ ಮಹೋತ್ಸವ ನಡೆಸಲಾಯಿತು. ಶ್ರೀ ಕೈವಾರ ಯತಿಂದರಾ ಮಠ ಮಾರುತಿ ಸಂಗೀತ ಅಕಾಡೆಮಿ, ಕಾಳಿಕಾಂಬ ಕೊಮ್ಮಟೇಶ್ವರ ಸಮಿತಿ ಆಶ್ರಯದಲ್ಲಿ ನಡೆದ ಆರಾಧನೆ ಮಹೋತ್ಸವಕ್ಕೆ ಶ್ರೀ ಕಾಳಿಕಾಂಬ ಕಮ್ಮಟೇಶ್ವರ ಸ್ವಾಮಿ ಗೆಲುವು ವಿಶೇಷ ಹೂವಿನ ಅಲಂಕಾರ ಮಾಡಿ ಪಂಚಾಮೃತ ಅಭಿಷೇಕ ವಜ್ರಂಗಿ ಅಲಂಕಾರ, ಸಾಂಪ್ರದಾಯ ಪ್ರಕಾರವಾಗಿ ಮಾವಿನ ತೋರಣಗಳನ್ನು ಕಟ್ಟಿ, ಮಹಾ ಮಂಗಳಾರತಿ ತೀರ್ಥ ಪ್ರಸಾದ ವನ್ನು ವಿನಿಯೋಗಿಸಲಾಯಿತು. ನಾದಸ್ವರ ವಿದ್ವಾನ್ ದೊಡ್ಡದಾಸೇನ್ಹಳ್ಳಿ ಮುನಿ ನಾರಾಯಣಪ್ಪ ಅವರಿಂದ ನಾದಸ್ವರ ಕಚೇರಿ ನಡೆಯಿತು. ಸಂಗೀತ ವಿದ್ವಾನ್ ಮಂಜುಳಾ ಜಗದೀಶ್ ವಿದ್ಯುನ್ ಶಾಂತ ಕೃಷ್ಣಮೂರ್ತಿ ಸವಿತಾ ಸುಬ್ರಮಣಿ ಹೇಮ ಬಾಲಾಜಿ, ನಳಿನಾಕ್ಷಿ ಯತೀಶ್ ರೇಖಾ ವೀರಭದ್ರ ಚಾರಿ, ವಿದ್ವಾಲ್ ಉಷಾ ನಾರಾಯಣ ಮೂರ್ತಿ, ಪಾರ್ವತಮ್ಮ ಬಸವರಾಜ್, ಭಾರತಿ ಬ್ರಹ್ಮಚಾರಿ, ವಿದ್ವಾನ್ ಶಾಂತಲಾ ಹಾರ್ಸ್, ಕುಮಾರಿ ಸ್ಪಂದನ, ಗೀತಾಯಗ್ಗಡೆ, ಮುನಿ ಬೈರಪ್ಪ, ನಾರಾಯಣಸ್ವಾಮಿ, ಮುನಿಯಪ್ಪ ಸಂಗೀತ ಕಚೇರಿ ನಡೆಸಿಕೊಟ್ಟರು. ವಿದ್ವಾನ್ ಆರ್ ಜಗದೀಶ್ ಕುಮಾರ್, ವಿದ್ವಾನ್ ಜಿ ಎಸ್ ಶಾಮ ಸುಂದರ್, ವಿದ್ವಾನ್ ಗಾಯಿತ್ರಿ, ವಿಜಯ ಕುಮಾರ್, ಶ್ರೀವಾತ್ ಜೆ ನವೀನ್ ಕುಮಾರ್, ರವಿ, ತೇಜಸ್, ಲಕ್ಷ್ಮೀನಾರಾಯಣ, ಮೋಹನ್ ಕುಮಾರ್, ವಿನಯ್ ಕುಮಾರ್, ನಿತ್ಯಾನಂದ, ವಿ ರುದ್ರ ಚಾರಿ, ಅಶ್ವಥ್ ನಾರಾಯಣ್ ಚಾರಿ, ಕಾರ್ತಿಕ್, ಚರಣ್ ತೇಜಸ್, ಮುಂತಾದವರ ತಂಡಗಳು ಮೃದಂಗ ನಟಿಸಿದ್ದರು.



ಚಿಂತಾಮಣಿಯ ಪುರಾತನ ದೇವಾಲಯಗಳಲ್ಲಿ ಒಂದಾದ ಹಾಗೂ ಮಾಡಿಕೆರೆ ಶ್ರೀ ಲಕ್ಷ್ಮಿನರಸಿಂಹಸ್ವಾಮಿ ಬ್ರಹ್ಮರಥೋತ್ಸವವು ಸಾವಿರಾರು ಜನರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ನಡೆಯಿತು.

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮರಥೋತ್ಸವ

• **ಚಿಂತಾಮಣಿ:** ಪುರಾತನ ದೇವಾಲಯಗಳಲ್ಲಿ ಒಂದಾದ ಹಾಗೂ ಮಾಡಿಕೆರೆ ಶ್ರೀ ಲಕ್ಷ್ಮಿನರಸಿಂಹಸ್ವಾಮಿ ಬ್ರಹ್ಮರಥೋತ್ಸವವು ಸಾವಿರಾರು ಜನರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ನಡೆಯಿತು.

ತಾಲೂಕಿನ ಮಾಡಿಕೆರೆ ಕ್ರಾಸ್‌ನಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವರಿಗೆ ಅರ್ಚಕರು ಎಸ್‌ಎಲ್‌ಇಎಸ್ ವಿದ್ಯಾಸಂಸ್ಥೆಯ ಡಾ.ಎನ್.ಆರ್.ವಿಕ್ರಮ್, ಸಿಇಒ ಬಿ.ಎನ್.ಪ್ರಿಯಾಂಕ ವಿಕ್ರಮ್‌ರ ಸಮ್ಮುಖದಲ್ಲಿ ವಿವಿಧ ಹೋಮ ಹವನಾದಿಗಳನ್ನು ನಡೆಸಿದರು. ಎಸ್‌ಎಲ್‌ವಿಎಸ್ ವಿದ್ಯಾಸಂಸ್ಥೆಯ ಸಂಸ್ಥಾಪಕ ನರಸಿಂಹರೆಡ್ಡಿ ಮಾತನಾಡಿ ಮಾಡಿಕೇರಿ ಕ್ರಾಸ್‌ನಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಬ್ರಹ್ಮರಥೋತ್ಸವಕ್ಕೆ ಹಲವು ವರ್ಷಗಳಿಂದ ಪೂಜೆ ಪುನಸ್ಕಾರಗಳನ್ನು ಮಾಡಿಕೊಂಡು ಬಂದಿದ್ದು, ಪ್ರತಿವರ್ಷದಂತೆ ಈ ವರ್ಷವೂ ರಥಕ್ಕೆ ವಿಶೇಷ ಪೂಜೆ ಹಾಗೂ ಹೋಮ ಹವನಾದಿಗಳನ್ನು ನಡೆಸಿ ಸಮಸ್ತ ಜನತೆಗೆ ಸುಖಶಾಂತಿ ನೆಮ್ಮದಿ ಹಾಗೂ ಉತ್ತಮ ಮಳೆ-ಬೆಳೆಯಾಗಿ ವಿಶ್ವ ಸಮೃದ್ಧಿಯಾಗಲೆಂದು ದೇವರಲ್ಲಿ ಪ್ರಾರ್ಥಿಸಿರುವುದಾಗಿ ತಿಳಿಸಿ ಸಾವಿರಾರು ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ಮಾಡಿಸಿ ಸಂಪ್ರದಾಯವಾಗಿ ಬ್ರಹ್ಮರಥೋತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆಯೆಂದರು. ಎಸ್‌ಎಲ್‌ಇಎಸ್ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಸಿ.ಎನ್.ನರಸಿಂಹರೆಡ್ಡಿ, ಕಾರ್ಯದರ್ಶಿ ಆರ್.ಜಗದೀಶ್ವರಿ, ಖಜಾಂಚಿ ಡಾ.ಎನ್.ಆರ್.ವಿಕ್ರಮ್, ಸಿಇಒ ಬಿ.ಎನ್.ಪ್ರಿಯಾಂಕವಿಕ್ರಮ್, ಮಾಡಿಕೆರೆ ಗ್ರಾಮಸ್ಥರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಭಕ್ತಿಭಾವದಿಂದ ಭಾಗವಹಿಸಿದ್ದರು.



ಪರಿಶಿಷ್ಟ ಜಾತಿ ಒಳಮೀಸಲು ಜಾರಿಗೆ ಸಂಬಂಧಿಸಿದಂತೆ ಸರ್ಕಾರದ ಮೇಲೆ ಒತ್ತಡ ಹಾಕಬೇಕೆಂದು ತಾಲೂಕು ಮಾದಿಗ ಸಮುದಾಯಗಳ ಮುಖಂಡರುಗಳು ಶಿಡ್ಲಘಟ್ಟ ಶಾಸಕ ಬಿ.ಎಂ.ರವಿಕುಮಾರ್‌ಗೆ ಮನವಿ ಪತ್ರ ಸಲ್ಲಿಸಿದರು.

ಮಾ.14ಕ್ಕೆ ಬೃಹತ್ ಲೋಕ ಅದಾಲತ್: ನ್ಯಾ.ಟಿ.ಪಿ.ರಾಮಲಿಂಗೇಗೌಡ ಕರೆ

ಅದಾಲತ್ ಬಳಸಿಕೊಳ್ಳಿ

• **ಚಿಕ್ಕಬಳ್ಳಾಪುರ:** 2026ನೇಸಾಲಿನಮೊದಲಬೃಹತ್ ಲೋಕ್‌ಅದಾಲತ್‌ಕಾರ್ಯಕ್ರಮವನ್ನುಮಾ.14ರಂದು ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ಹಮ್ಮಿಕೊಂಡಿದ್ದು ಜಿಲ್ಲೆಯ ಸಾರ್ವಜನಿಕರು ಅದಾಲತಿನಲ್ಲಿ ಭಾಗವಹಿಸಿ ತಮ್ಮ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳುವ ಮೂಲಕ ಸದುಪಯೋಗಪಡಿಸಿಕೊಳ್ಳಲು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಟಿ.ಪಿ. ರಾಮಲಿಂಗೇಗೌಡ ತಿಳಿಸಿದರು.

ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಮಂಗಳ ವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಆಯೋಜಿಸಿದ್ದ ರಾಷ್ಟ್ರೀಯ ಲೋಕ ಅದಾಲತ್ ಕುರಿತ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಒಟ್ಟಾರೆ ಮಾರ್ಚ್ 14ರ ಅದಾಲತ್‌ನಲ್ಲಿ 12ಸಾವಿರ ಕ್ಕೂ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥ ಪಡಿಸುವ ಗುರಿ ಇದ್ದು, ಜಿಲ್ಲೆಯ ನಾಗರೀಕರ ಸೇವೆಯನ್ನು ಪ್ರಕರಣಗಳ ತ್ವರಿತ ಇತ್ಯರ್ಥ ಮಾಡುವ ಮೂಲಕ ಮಾಡಲಾಗುವುದು. ಜಿಲ್ಲೆಯಲ್ಲಿ ಎಲ್ಲಿಯಾದರೂ, ಯಾವುದೇ ರೀತಿಯ ಸಮಸ್ಯೆಗಳು ಕಂಡುಬಂದಲ್ಲಿ ಮಾಧ್ಯಮಗಳ ಪ್ರತಿನಿಧಿಗಳು ಬೆಳಕಿಗೆ ತನ್ನಿ, ಆಗ ಸಕ್ಷಮ ಪ್ರಾಧಿಕಾರಗಳು ಹಾಗೂ ಅಧಿಕಾರಿಗಳು ಪರಿಹರಿಸುವ ಪ್ರಯತ್ನ ಮಾಡಲಿದ್ದಾರೆ ಈ ಕುರಿತು ಸೂಚನೆಗಳನ್ನು ಸಹ ಈಗಾಗಲೇ ಜಿಲ್ಲಾಡಳಿತಕ್ಕೆ ನೀಡಲಾಗಿದೆ. ಒಂದು ವೇಳೆ ಸಕ್ಷಮ ಪ್ರಾಧಿಕಾರಗಳು ಸಾರ್ವಜನಿಕರ ಕುಂದು ಕೊರತೆಗಳನ್ನು, ಅಹವಾಲುಗಳಿಗೆ ಸ್ಪಂದಿಸದೆ ಇದ್ದರೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವನ್ನು ಸಂಪರ್ಕಿಸಿ ಮಾಹಿತಿ ನೀಡಲು ಮಾಧ್ಯಮ ಪ್ರತಿನಿಧಿಗಳಲ್ಲಿ ನ್ಯಾಯಾಧೀಶರು ಮನವಿ ಮಾಡಿದರು.

ನೇರವಾಗಿ ಸಕ್ಷಮ ಪ್ರಾಧಿಕಾರಗಳನ್ನು ಸಂಪರ್ಕಿಸಿ



> ಜಿಲ್ಲೆಯ ನ್ಯಾಯಾಲಯಗಳಲ್ಲಿ 49,000ಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ. ಇವುಗಳ ಪೈಕಿ ಈಗಾಗಲೇ ಲೋಕಾ ಅದಲತ್‌ಗೆ ಈ ಬಾರಿ ತೆಗೆದುಕೊಳ್ಳಲು 12,222 ಪ್ರಕರಣಗಳನ್ನು ಗುರುತಿಸಲಾಗಿದೆ. ಮಾರ್ಚ್ 13ನೇ ತಾರೀಕಿನವರೆಗೆ ಇನ್ನೂ ಹೆಚ್ಚಿನ ಪ್ರಕರಣಗಳು ಅದಾಲತ್‌ಗೆ ಬರುವ ನಿರೀಕ್ಷೆ ಇದೆ.
> ■ ಟಿ.ಪಿ.ರಾಮಲಿಂಗೇಗೌಡ, ಪ್ರಾಧಿಕಾರದ ಅಧ್ಯಕ್ಷ

ಯಾವುದೇ ಸಾರ್ವಜನಿಕರು ಯಾವುದೇ ರೀತಿಯ ಕುಂದು ಕೊರತೆಗಳನ್ನು, ಅಹವಾಲುಗಳನ್ನು, ಸಮಸ್ಯೆಗಳನ್ನು ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರಗಳನ್ನು ಹಾಗೂ ಆ ಪ್ರಾಧಿಕಾರಗಳ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳುವ ಪ್ರಯತ್ನವನ್ನು ಮೊದಲಿಗೆ ಮಾಡಬೇಕು ಅಲ್ಲಿ ಪರಿಹಾರ ಅಥವಾ ವಿಲೇವಾರಿ ಆಗದೇ ಇದ್ದಪಕ್ಷದಲ್ಲಿ ಜಿಲ್ಲೆಯ ನ್ಯಾಯಾಲಯಗಳಲ್ಲಿನ ಮಧ್ಯಸ್ಥಿಕೆ ಕೇಂದ್ರಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಕಾನೂನು ಸೇವಾ ಸಮಿತಿಗಳನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳಲು ಪ್ರಯತ್ನಿಸಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ನಿರಂತರವಾಗಿ ರಾಜಿ ಪಂಚಾಯಿತಿ ಮೂಲಕ ವ್ಯಾಜ್ಯ ಪೂರ್ವ ಮತ್ತು ನ್ಯಾಯಾಲಯಗಳಲ್ಲಿ ಬಾಕಿ ಇರುವ ರಾಜಿಯಾಗಬಲ್ಲ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತಾ ಬರಲಾಗುತ್ತಿದೆ, ಈ ಬಾರಿಯ ಮಾರ್ಚ್ 14ರ ಅದಾಲತ್ನಲ್ಲಿ ಜಿಲ್ಲಾ ನ್ಯಾಯಾಲಯವೂ ಸೇರಿದಂತೆ ಜಿಲ್ಲೆಯ ತಾಲ್ಲೂಕು ಹಂತದ ನ್ಯಾಯಾಲಯಗಳಲ್ಲಿ ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಪ್ರಕರಣಗಳು, ವಿಚ್ಛೇಧನವನ್ನು ಹೊರತುಪಡಿಸಿ ವೈವಾಹಿಕ ಕುಟುಂಬ ನ್ಯಾಯಾಲಯದ ಪ್ರಕರಣಗಳನ್ನು ಇತ್ಯರ್ಥಗೊಳಿಸಬಹುದು. ಮಾರ್ಚ್ 14 ರ ಅದಾಲತ್ ನಲ್ಲಿ ಪಾಲ್ಗೊಳ್ಳಲು ಇಚ್ಚಿಸುವ ಸಾರ್ವಜನಿಕರು ಮುಂಚಿತವಾಗಿ ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕುಗಳ ಕಾನೂನು ಸೇವಾ ಸಮಿತಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು. ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಿಲ್ಪ ಉಪಸ್ಥಿತರಿದ್ದರು.

ಒಂದೂವರೆ ತಿಂಗಳಲ್ಲಿ ಎಲ್ಲ ಇ-ಸ್ವತ್ತು ಮಾಡಿ: ಜಿಲ್ಲಾಧಿಕಾರಿ

• **ಗೌರಿಬಿದನೂರು:** ನಗರಸಭೆವ್ಯಾಪ್ತಿಯಲ್ಲಿ21 ಸಾವಿರಕ್ಕೂ ಹೆಚ್ಚು ಆಸ್ತಿಗಳಿದ್ದು, ಹತ್ತು ಸಾವಿರಕ್ಕೂ ಹೆಚ್ಚು ಆಸ್ತಿಗಳು ಇ-ಸ್ವತ್ತುಗಳಾಗಬೇಕಿರುವುದು ಬಾಕಿಯಿದ್ದು, ಅಭಿಯಾನ ನಡೆಸಿ ಒಂದೂವರೆ ತಿಂಗಳಲ್ಲಿ ಎಲ್ಲವನ್ನೂ ಇ-ಸ್ವತ್ತು ಮಾಡಬೇಕು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ನಗರಸಭೆ ಅಧಿಕಾರಿಗಳಿಗೆ ಸೂಚಿಸಿರು.

ನಗರಸಭೆಯಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದರು, ಇದಕ್ಕೆ ಅಧಿಕಾರಿಗಳು ವಿಶೇಷ ಆಸಕ್ತಿ ವಹಿಸಬೇಕು. ಜನಸಾಮಾನ್ಯರು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ತಮ್ಮ ಆಸ್ತಿಗಳನ್ನ ಈ ಸ್ವತ್ತನ್ನಾಗಿ ಮಾರ್ಪಾಡು ಮಾಡಿ ಕೊಳ್ಳಬೇಕು ಎಂದು ಮನವಿ ಮಾಡಿದರು.

ವರ್ಷದಲ್ಲಿ ಚರಂಡಿ ಸ್ವಚ್ಛತೆ: ಗೌರಿಬಿನೂರು ನಗರ ವ್ಯಾಪ್ತಿಯಲ್ಲಿ 134 ಕಿ.ಮೀ ಚರಂಡಿ ವ್ಯವಸ್ಥೆಯಿದ್ದು, ಆ ಚರಂಡಿಗಳನ್ನು ಒಂದು ವರ್ಷದಲ್ಲಿ ಯಾವ ರೀತಿ ಸ್ವಚ್ಛತೆ ಮಾಡಿಕೊಳ್ಳಬೇಕು. ಮುಖ್ಯ ರಸ್ತೆಗಳು, ಕಚ್ಚಾ ರಸ್ತೆಗಳು, ಡಬಲ್ ರಸ್ತೆಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯವನ್ನು ನಿಖರವಾದ ಮಾಹಿತಿಯೊಂದಿಗೆ ನಿರ್ದಿಷ್ಟ ಸಮಯ ನಿಗದಿಪಡಿಸಿಕೊಂಡು ಅಭಿವೃದ್ಧಿಪಡಿಸಬೇಕು ಎಂದು ಸೂಚಿಸಿದ ಜಿಲ್ಲಾಧಿಕಾರಿ, ರಾಜ ಕಾಲುವೆಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಬೇಕು ಎಂದರು.

> ಜಿಲ್ಲೆಯಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಈ ಸ್ವತ್ತು ಖಾತೆ ಅಭಿಯಾನ ನಡೆಸಬೇಕು. ಎ ಮತ್ತು ಬಿ ಖಾತೆಗಳ ಪ್ರಕ್ರಿಯೆ ಸರಳೀಕರಣಗೊಳಿಸಬೇಕು. ಕನಿಷ್ಠ ದಾಖಲೆಗಳನ್ನು ಪಡೆಯುವ ಮೂಲಕ ಅಭಿಯಾನ ಮಾಡಿ ಮುಂದಿನ ನಾಲ್ಕು ತಿಂಗಳ ಒಳಗಡೆ ಎಲ್ಲವನ್ನು ಪೂರ್ಣಗೊಳಿಸಬೇಕು.
> ■ ಜಿ.ಪ್ರಭು, ಜಿಲ್ಲಾಧಿಕಾರಿ

ಸಭೆ ಬಳಿಕ ಜಿಲ್ಲಾಧಿಕಾರಿ, ತಾಲೂಕು ಕಚೇರಿ, ಮಕ್ಕಳ ಆಸ್ಪತ್ರೆ ಮತ್ತು ನಗರದ ಬಿ.ಎಚ್ ರಸ್ತೆ ಕಾಮಗಾರಿ, ಒತ್ತುವರಿ ಜಾಗಗಳ ಪರಿಶೀಲನೆ ನಡೆಸಿದರು. ಜಿಲ್ಲಾಧಿಕಾರಿಗೆ ಜನರು ತಮ್ಮ ಅಹವಾಲು ಅರ್ಜಿಗಳನ್ನು ಸಲ್ಲಿಸಿದರು. ತಹಸೀಲ್ದಾರ್ ಅರವಿಂದ್, ಪೌರಾಯುಕ್ತ ರಮೇಶ್, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.



ಸೋಲಾರ್ ಪ್ಲಾಂಟ್ ಕೇಬಲ್ ಕಳವು: ಇಬ್ಬರ ಬಂಧನ

• **ಚಿಂತಾಮಣಿ:** ಪಿಎಂ ಕುಸುಮ್-ಸಿ ಮತ್ತು ಸೋಲಾರ್ ಪ್ಲಾಂಟ್ ಕಾಮಗಾರಿಗೆ ಅಳವಡಿಸುವ ಕೇಬಲ್ ಕಳವು ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಟ್ಲಹಳ್ಳಿ ಪೊಲೀಸರು ಆರು ಮಂದಿ ಖದೀಮರ ಪೈಕಿ ಇಬ್ಬರನ್ನು ಬಂಧಿಸಿದ್ದು 3.70 ಲಕ್ಷ ರೂ. ಹಾಗೂ ಬೊಲೆರೋ ವಾಹನ ವಶಪಡಿಸಿಕೊಂಡಿದ್ದಾರೆ.

ಆರೋಪಿಗಳನ್ನು ತಮಿಳುನಾಡಿನ ಕೃಷ್ಣಾಗಿರಿ ಜಿಲ್ಲೆಯ ಮುಸ್ತುಪಲ್ಲಿ ನಿವಾಸಿ ರಾಧಾಕೃಷ್ಣ (47), ಹೊಸೂರು ತಾಲೂಕಿನ ಚೂಡಪುರಂನ ವಿಒಸಿ ನಗರದ ವಾಸಿ ಚಾಲಕ ಜನಾರ್ದನ್ (32) ಬಂಧಿತರೆಂದು ತಿಳಿದುಬಂದಿದೆ. ಪರಾರಿಯಾಗಿರುವವರ ಪೈಕಿ ಹೊಸೂರು ತಾಲ್ಲೂಕಿನ ಚೂಡಪುರಂ ವಿಒಸಿ ನಗರದ ನಿವಾಸಿ ಶಿವ ಕುಮಾರ್ (23) ಎಂದು ತಿಳಿದು ಬಂದಿದ್ದು, ತಲೆ ಮರೆಸಿ ಕೊಂಡಿರುವವರಿಗಾಗಿ ಪೊಲೀಸರು ಬಲೆ ಬಿಸಿದ್ದಾರೆ. ಕೆಂಚಾರ್ಲಹಳ್ಳಿ ಪೊಲೀಸ್ ಇನ್ಸ್ಪೆಕ್ಟರ್ ನಾರಾಯಣಸ್ವಾಮಿ, ಬಟ್ಲಹಳ್ಳಿ ಠಾಣೆ ಪಿಎಸ್‌ಐ ಶಿವಕುಮಾರ್, ಸಿಬ್ಬಂದಿ ವಿಶ್ವನಾಥ, ವೆಂಕಟೇಶ್, ಪ್ರವೀಣ್ ಕುಮಾರ್, ಸರ್ವೇಶ್, ನವೀನ್ ಚಿಕ್ಕಬಳ್ಳಾಪುರದ ಮುನಿಕೃಷ್ಣ, ರವೀಂದ್ರ ಕುಮಾರ್ ಕಾರ್ಯಾಚರಣೆಯಲ್ಲಿ ಭಾಗಿವಹಿಸಿದ್ದರು.

ತಾಲೂಕಿನ ನಲ್ಲಗುಟ್ಟಹಳ್ಳಿ ಬಳಿ 25 ಎಕರೆ ಪ್ರದೇಶದಲ್ಲಿ ಬೆಂಗಳೂರು ಅಮೃತ ಕನ್ಸ್ಟ್ರಕ್ಷನ್ ಪ್ರೈವೆಟ್ ಲಿಮಿಟೆಡ್‌ನಿಂದ ಪಿ.ಎಂ. ಕುಸುಮ್-ಸಿ ಸೋಲಾರ್ ಸ್ಕಿಮ್‌ನಲ್ಲಿ ಸೋಲಾರ್ ಪ್ಲಾಂಟ್ ಕಾಮಗಾರಿ ಮಾಡುತ್ತಿದ್ದು, ಕಾಮಗಾರಿಗೆ ಸಂಬಂಧಿಸಿದಂತೆ ಫೆ.9 ರಂದು ಮಧ್ಯಾಹ್ನ 7 ಕೇಬಲ್ ಡ್ರಮ್ ಸರಬರಾಜು ಆಗಿದ್ದು, ಈ ಪೈಕಿ ಸುಮಾರು 505 ಮೀಟರ್ ಉದ್ದವಿರುವ 1ಕೇಬಲ್ ಡ್ರಮ್ ಅನ್ನು ಫೆ.16ರ ಮಧ್ಯರಾತ್ರಿ ಕಳವು ಮಾಡಲಾಗಿತ್ತೆಂಬ ಬಗ್ಗೆ ಪ್ರಾಜೆಕ್ಟ್ ಮ್ಯಾನೇಜರ್ ನೀಡಿದ ದೂರಿನ ಮೇಲೆ ಬಟ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿಯಶಸ್ವಿಯಾಗಿದ್ದು ಇನ್ನುಳಿದಪರಾರಿಯಲ್ಲಿರುವ ಖದೀಮರನ್ನು ಬಂಧಿಸಬೇಕಾಗಿದೆ.



ಖಾದ್ರಿ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ

• **ಚಿಂತಾಮಣಿ:** ತಾಲೂಕಿನ ಕೋಟಗಲ್ ಗ್ರಾಪಂ ವ್ಯಾಪ್ತಿಯಲ್ಲಿರುವ ಸಿಂಗರೇಪಲ್ಲಿ ಮಜರಾ ಕೋಟಿಗಲ್‌ನಲ್ಲಿ ನಡೆದ ಖಾದ್ರಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದ ಬ್ರಹ್ಮ ರಥೋತ್ಸವಕ್ಕೆ ಸಹಸ್ರಾರು ಭಕ್ತರು ಸಮ್ಮುಖದಲ್ಲಿ ನಡೆಯಿತು.

ಉನ್ನತ ಶಿಕ್ಷಣ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ.ಸುಧಾಕರ್ ಭಾಗವಹಿಸಿ ದೇವರ ದರ್ಶನ ಪಡೆದು ತೇರು ಎಳೆಯುವ ಮೂಲಕ ಈ ಭಾಗದ ಸಮಸ್ತ ಜನತೆಗೆ ಹಾಗೂ ಇಡೀ ವಿಶ್ವಕ್ಕೆ ಶಾಂತಿ, ನೆಮ್ಮದಿ, ಸೌಹಾರ್ದತೆ, ಸಾಮರಸ್ಯವನ್ನು ಭಗವಂತನು ಕರುಣಿಸಲೆಂದು ಹಾಗೂ ಉತ್ತಮ ಮಳೆ-ಬೆಳೆಯಾಗಿ ಸಮೃದ್ಧ ಬೆಳೆಯಾಗಿ ಇಳೆ ತಂಪೆರೆಲೆಂದು ಹಾಗೂ ದೇವರು ಜನತೆ ಇಷ್ಟಾರ್ಥಗಳನ್ನು ಈಡೇರಿಸುವಂತೆ ಪ್ರಾರ್ಥಿಸಿರುವುದಾಗಿ ತಿಳಿಸಿದರು.

ಹೊಸದಾಗಿ ದೇವಾಲಯವನ್ನು ಕಟ್ಟಲು ಈಗಾಗಲೇ ನೀಲಿ ನಕ್ಷೆ ತಯಾರಾಗುತ್ತಿದ್ದು, ಮೂಲಭೂತ ಸೌಲಭ್ಯ ಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ಮುಂದಾಗುತ್ತಿದ್ದೇವೆ ಎಂದು ತಿಳಿಸಿದ ಅವರು, ಈ ಭಾಗದ ಎಲ್ಲಾ ನಾಗರಿಕರು ಹಾಗೂ ನರಸಿಂಹ ಸ್ವಾಮಿಯ ಭಕ್ತರು ಸಹಕರಿಸಬೇಕೆಂದು ಮನವಿ ಮಾಡಿದರು. ಹಲವು ದಿನಗಳಿಂದ ಜಾತ್ರೆ ನಡೆಯುತ್ತಿದ್ದು, ದನಗಳ ಜಾತ್ರೆ, ಕೋಟಗಲ್ ನಲ್ಲಿ 7ದಿನ ನಡೆಯುವ ವಿಶೇಷ ಜಾತ್ರೆಯಾಗಿದ್ದು, ರಾಸುಗಳು ಮಾರಾಟ ಬಲು ಜೋರು ಹಾಗೂ ಉತ್ತಮ ರಾಸುಗಳಿಗೆ ಪ್ರಶಸ್ತಿಯನ್ನು ನೀಡುವಂತಹ ಕಾರ್ಯಗಳನ್ನು ನಡೆಸಿಕೊಂಡು ಬಂದಿದು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಮಹಿಮಾನ್ವಿತ ಶಕ್ತಿ ತಾಣವಾಗಿದೆಯೆಂದರು. ವಿವಿಧೆಡೆಯಿಂದ ಬಂದ ಭಕ್ತಾದಿಗಳು ಅನ್ನಸಂತರ್ಪಣೆ, ಪಾನಕ, ಹೆಸರುಬೇಳೆ, ಹುರುಳಿ ನೆರೆದಿದ್ದ ಜನರಿಗೆ ವಿತರಣೆ ಮಾಡಿದರು. ಧರ್ಮದರ್ಶಿ ಮುನಿರೆಡ್ಡಿ, ಮುಖಂಡರಾದ ಶ್ರೀನಿವಾಸ ರೆಡ್ಡಿ, ಜಗತನಹಳ್ಳಿ ನಾಗರಾಜ್, ಈರುಳ್ಳಿ ನಾಗರಾಜ್, ಕ್ರಷರ್ ಶ್ರೀನಿವಾಸ್ ಹಾಜರಿದ್ದರು.



ಚಿಂತಾಮಣಿ ತಾಲೂಕಿನ ಕೋಟಗಲ್ ಗ್ರಾಪಂ ವ್ಯಾಪ್ತಿಯಲ್ಲಿರುವ ಸಿಂಗರೇಪಲ್ಲಿ ಮಜರಾ ಕೋಟಿಗಲ್‌ನಲ್ಲಿ ನಡೆದ ಖಾದ್ರಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದ ಬ್ರಹ್ಮ ರಥೋತ್ಸವಕ್ಕೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ಬೈಕಿಗೆ ಕಾರು ಡಿಕ್ಕಿ: ಮೂವರಿಗೆ ಗಾಯ

• **ಚಿಂತಾಮಣಿ:** ಮುಂದೆ ಹೋಗುತ್ತಿದ್ದ ಬೈಕ್‌ಗೆ ಕಾರು ಡಿಕ್ಕಿ ಹೊಡೆದು ಪರಿಣಾಮ ಬೈಕ್‌ನಲ್ಲಿದ್ದ ಇಬ್ಬರು ಸವಾರರು ಮತ್ತು ಕಾರಿನಲ್ಲಿದ್ದ ಚಾಲಕ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರು ಘಟನೆ ಚಿಂತಾಮಣಿ ಮದನಪಲ್ಲಿ ರಸ್ತೆಯ ಚೀಮನಹಳ್ಳಿ ಬಳಿ ನಡೆದಿದೆ. ಬೈಕ್ ಸವಾರರು ನಗರದ ಸೊಣ್ಣಶೆಟ್ಟಹಳ್ಳಿ ನಿವಾಸಿಗಳಾದ ಚೆನ್ನಕೇಶವರೆಡ್ಡಿ ಮತ್ತು ನಾಗರಾಜ್, ಕಾರಿನ ಚಾಲಕ ಬೆಂಗಳೂರಿನ ಕೆ.ಆರ್.ಪುರಂ ಬಾಬು ಎಂದು ಗುರುತಿಸಲಾಗಿದ್ದು, ನಾಗರಾಜ್ ಮತ್ತು ಚೆನ್ನಕೇಶವರೆಡ್ಡಿ ಚೀಮನಹಳ್ಳಿಯಲ್ಲಿ ಕಾರ್ಯಕ್ರಮಕ್ಕಾಗಿ ತೆರಳಿ ಮತ್ತೆ ಚಿಂತಾಮಣಿಗೆ ವಾಪಸ್ಸಾಗುತ್ತಿದ್ದ ವೇಳೆಯಲ್ಲಿ ಬೆಂಗಳೂರಿನ ಕೆ.ಆರ್.ಪುರಂ ನಿವಾಸಿ ಬಾಬು ಕಾರಿನ ಚಾಲಕ ಆಂಧ್ರದ ಮದನಪಲ್ಲಿಯಿಂದ ಬೆಂಗಳೂರಿಗೆ ಹಿಂತಿರುಗುತ್ತಿದ್ದ ವೇಳೆ ಕಾರು ಚಾಲಕನ ನಿಯಂತ್ರಣ ತಪ್ಪಿ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರರಿಗೆ, ಕಾರುಚಾಲಕನಿಗೆ ಗಾಯಗಳಾಗಿವೆ.

ಡಿಕ್ಕಿಯ ರಭಸಕ್ಕೆ ಬೈಕ್ ಸವಾರರು ರಸ್ತೆಯ ಪಕ್ಕದಿಂದ ಬಿದ್ದು ತೀವ್ರವಾಗಿ ಗಾಯಗೊಂಡರೆ, ಕಾರು ಬೈಕ್‌ಗೆ ಡಿಕ್ಕಿ ಹೊಡೆದು ರಸ್ತೆಯ ಪಕ್ಕದ ಜಮೀನಿಗೆ ಅಳವಡಿಸಿದ್ದ ಕಲ್ಲಿನ ಕೂಚಗಳಿಗೆ ಹೋಗಿ ಡಿಕ್ಕಿ ಹೊಡೆದ ಪರಿಣಾಮ ಕಾರಿನ ಚಾಲಕನಿಗೆ ತಲೆಗೆ ಏಟು ಬಿದ್ದಿದೆ. ಸ್ಥಳಕ್ಕೆ ಬಂದ ಪೊಲೀಸರು ಆಂಬುಲೆನ್ಸ್‌ಗಳು ಕರೆ ಮಾಡಿದ್ದಾರೆ. ಗಂಭಿರವಾಗಿ ಗಾಯಗೊಂಡಿದ್ದ ಚೆನ್ನಕೇಶವರೆಡ್ಡಿಗೆ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರಕ್ಕೆ ಕಳುಹಿಸಿಕೊಡಲಾಗಿದ್ದು ನಾಗರಾಜ್ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಯುಪಿಎಸ್ಸಿಯಲ್ಲಿ 741ನೇ ರ‍್ಯಾಂಕ್

• **ಟೇಕಲ್:** ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹುಟ್ಟಿದ ಮಾಲೂರು ತಾಲ್ಲೂಕಿನಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ ತಂದೆ-ತಾಯಿಯ ಸನ್ನಡತೆಯಲ್ಲಿ ಅವರು ಹೇಳಿಕೊಟ್ಟ ದಾರಿಯನ್ನು ಅವರು ಅನುಭವಿಸಿದ ಕಷ್ಟ ನಷ್ಟಗಳನ್ನು ತನ್ನ ಒಡಳಾಲದಲ್ಲಿ ಇಟ್ಟುಕೊಂಡು ವಿದ್ಯೆಯಲ್ಲೇ ಏನಾದರೂ ಸಾಧಿಸಬೇಕೆಂಬುದು ಛಲ ಬಿಡದ ಮಾಲೂರು ತಾಲ್ಲೂಕಿನ ಹೆಮ್ಮೆ ಪುತ್ರ ಹಾಗೂ ಟೇಕಲ್‌ನ ಕೊಂಡಶೆಟ್ಟಹಳ್ಳಿ ಗ್ರಾಮದ ಸನಾವುಲ್ಲಾಖಾನ್, ಮೊಸಿನಾಬೇಗಂ ದಂಪತಿಗಳ ಜೇಷ್ಠ ಪುತ್ರ ತೌಸಿಫ್ ಉಲ್ಲಾ ಈ ಭಾರಿಯ ಕೇಂದ್ರಿಯ ಲೋಕಸೇವಾ ಆಯೋಗ ಪರೀಕ್ಷೆಯಲ್ಲಿ 741 ನೇ ರ‍್ಯಾಂಕ್ ಪಡೆದು ತಾಲ್ಲೂಕಿಗೆ ಹಾಗೂ ಕೋಲಾರ ಜಿಲ್ಲೆಗೆ ತನ್ನದೇ ಆದಾ ಕೀರ್ತಿ ತಂದು ಸಾಧನೆಗೈದಿದ್ದಾನೆ.

ಪ್ರಾಧ್ಯಾಪಕರಲ್ಲಿ ಗುಂಪುಗಾರಿಕೆ, ನಕಾರಾತ್ಮಕ ಚಿಂತನೆ ಬೇಡ: ಯಲುವಹಳ್ಳಿ ಸೊಣ್ಣೇಗೌಡ

ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಸಜ್ಜುಗೊಳಿಸಿ

• **ಚಿಕ್ಕಬಳ್ಳಾಪುರ:** ರಾಜ್ಯದ ಸರಕಾರಿ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ವರ್ಗವು ಗುಂಪುಗಾರಿಕೆಗೆ ಆಸ್ಪದ ನೀಡಬಾರದು. ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕಜಗತ್ತಿಗೆಪೂರಕವಾಗಿಸಜ್ಜುಗೊಳಿಸಬೇಕೇ ವಿನಃ ಅವರಲ್ಲಿ ನಕಾರಾತ್ಮ ಚಿಂತನೆ ಬೆಳೆಸಬಾರದು ಎಂದು ಕಸಾಪ ತಾಲೂಕು ಅಧ್ಯಕ್ಷ ಯಲುವಹಳ್ಳಿ ಸೊಣ್ಣೇಗೌಡ ಸಲಹೆ ನೀಡಿದರು.

ನಗರದ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಕ್ರೀಡಾ ಎನ್‌ಎಸ್‌ಎಸ್, ಎನ್‌ಸಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಓದಿನ ಸಂದರ್ಭದಲ್ಲಿ ಮನುಷ್ಯ ಜಾತಿ ತಾನೊಂದೇವಲಂ ಎಂಬುದನ್ನು ಗ್ರಹಿಸಬೇಕು. ಎಐ ತಂತ್ರಜ್ಞಾನದ ಈ ಕಾಲದಲ್ಲಿ ಅಧ್ಯಯನಕ್ಕೆ ಅಗಣಿತ ಅವಕಾಶಗಳಿವೆ. ಇದನ್ನು ಬಳಸಿಕೊಂಡು ಸಮಾಜ ಮತ್ತು ಸಂಸ್ಥೆಗಳನ್ನು ಕಟ್ಟುವ ಕೆಲಸ ಮಾಡೋಣ. ಕೆಟ್ಟ ಮನಸ್ಥಿತಿ ತೊರೆಯೋಣ ಎಂದರು. ಸರಕಾರಿ ಕಾಲೇಜುಗಳ ಬಲವರ್ಧನೆಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಭರಪೂರ ಅನುದಾನ ನೀಡುತ್ತಿವೆ. ಖಾಸಗಿ ಕಾಲೇಜುಗಳಿಗೆ ಮೀರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿವೆ.ಸರಕಾರಿ ಕಾಲೇಜುಗಳಲ್ಲಿ ದೊರೆಯುವ ಉನ್ನತ ಶಿಕ್ಷಣ ಪಡೆಯಲು ಬರುವವರೆಲ್ಲರೂ ಕೃಷಿ ಕೂಲಿ ಕಾರ್ಮಿಕರ,ದೀನ ದಲಿತ ಸಮುದಾಯದ ವಿದ್ಯಾ ರ್ಥಿಗಳೇ ಆಗಿದ್ದಾರೆ. ಅವರಿಗೆ ಶಿಕ್ಷಣ ಬಿಟ್ಟು ಬೇರೆ ಅವಕಾಶಗಳು ಇರುವುದಿಲ್ಲ.ಇದನ್ನು ಮನಗಂಡು ಇಲ್ಲಿನ ಬೋಧಕ ವರ್ಗ ಪ್ರಾಮಾಣಿಕತೆಯಿಂದ ಗುಣಮಟ್ಟದ ಬೋಧನೆಗೆ ಮುಂದಾಗಬೇಕು.ಆಮೂಲಕ ಶಕ್ತಿಶಾಲಿ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು. ಪಿಎಚ್.ಡಿ ಪೂರೈಸಿದ ಕಾಲೇಜಿನ ಅಧ್ಯಾಪಕರಿಗೆ, ಕೆಸೆಟ್ ಉತ್ತೀರ್ಣರಾದ ಅಧ್ಯಾಪಕರಿಗೆ, ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಗೌರವಿಸಲಾಯಿತು. ಪ್ರಾಂಶುಪಾಲೆ ಡಾ.ವಸುಂಧರ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ವೆಂಕಟೇಶ್, ಗ್ರಂಥಪಾಲಕ ಲಿಂಗಯ್ಯ, ದೈಹಿಕ ಶಿಕ್ಷಣ ನಿರ್ದೇಶಕ ಶ್ರೀಹರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೃಷ್ಣಪ್ಪ, ವಾಣಿಜ್ಯ ಶಾಸ್ತ್ರ ವಿಭಾಗದ ಸುರೇಶ್‌ಬಾಬು,ಮುತಹರ್ ಉನ್ನೀಸಾ ಇದ್ದರು.



ಒಳಮೀಸಲಾತಿ ವರ್ಗೀಕರಣ ಅಪ್ರಾಯೋಗಿಕವಾಗಿ ಜಾರಿಗೊಳಿಸಬಾರದು

ಹಳೆ ಮೀಸಲಾತಿ ನಿಯಮ ಮುಂದುವರಿಸಿ: ಆಗ್ರಹ

• **ಬಾಗೇಪಲ್ಲಿ:** ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವರ್ಗೀಕರಣವನ್ನು ಅಪ್ರಾಯೋಗಿಕವಾಗಿ ಜಾರಿಗೊಳಿಸಬಾರದು. ಹಳೆ ಮೀಸಲಾತಿ ನಿಯಮ ಶೇ. 50ರ ಅನ್ವಯನೇಮಕಾತಿಮತ್ತುಶೈಕ್ಷಣಿಕಪ್ರವೇಶಪ್ರಕ್ರಿಯೆ ರಾಜ್ಯ ಸರ್ಕಾರ ಮುಂದುವರಿಸಬೇಕು ಎಂದು ಆಗ್ರಹಿಸಿ ಲಂಬಾಣಿ (ಗೋರ್ ಬಂಜಾರ್)ಅಭಿವೃದ್ಧಿ ಸಂಘದ ಮುಖಂಡರು ಬಾಗೇಪಲ್ಲಿ ಪಟ್ಟಣದ ಪತ್ರಕರ್ತರ ಪತ್ರಿಕಾಗೋಷ್ಠಿ ನಡೆಸಿದರು.

ತಾಲೂಕು ಪಂಚಾಯ್ತಿ ಮಾಜಿ ಸದಸ್ಯ ಶ್ರೀರಾಮ ನಾಯಕ್ ಮಾತನಾಡಿ ಒಳಮೀಸಲಾತಿ ಹೆಸರಿನಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು. ಇತ್ತೀಚೆಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯ, ಆರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಆರೋಗ್ಯ ಇಲಾಖೆಯಲ್ಲಿ ನಡೆದ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿಗಳ 'ಬಿ' ಮತ್ತು 'ಸಿ' ಪ್ರವರ್ಗಗಳಿಗೆ ಶೂನ್ಯ ಹುದ್ದೆಗಳನ್ನು ಹಂಚಿಕೆ ಮಾಡಲಾಗಿದೆ. ಇದರಿಂದ ಛಲವಾದಿ, ಬಂಜಾರ, ಭೋವಿ, ಕೊರಮ, ಕೊರಚ ಹಾಗೂ ಅಲೆಮಾರಿ ಸೇರಿದಂತೆ ಸೂಕ್ಷ್ಮ ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ಈ ಬಗ್ಗೆ ಸಮುದಾಯಗಳ ಮುಖಂಡರು ಸರ್ಕಾರದ ಗಮನ ಸೆಳೆದ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿಗಳ ವರ್ಗೀಕರಣವನ್ನು ಕೈಬಿಟ್ಟು ಹಿಂದಿನ ನಿಯಮದಂತೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗುವುದು ಎಂದು ರಾಜ್ಯ ಸರ್ಕಾರ ಘೋಷಿಸಿರುವುದು ಸ್ವಾಗತಾರ್ಹ ಎಂದು ತಿಳಿಸಿದರು. ತ್ವರಿತವಾಗಿ ಹಿಂದಿನ ನಿಯಮದಂತೆ ನೇಮಕಾತಿ ಹಾಗೂ ಶಿಕ್ಷಣ ಪ್ರವೇಶ ಪ್ರಕ್ರಿಯೆಗಳನ್ನು ಆರಂಭಿಸಬೇಕು ಎಂದು ಒತ್ತಾಯಿಸಿದರು. ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳ ಆದೇಶವನ್ನು ಸಂವಿ ಧಾನದ 9ನೇ ಅನುಸೂಚಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದರು. ಒಳಮೀಸಲಾತಿ ಜಾರಿಗೆ ಮುನ್ನ ಸಂಬಂಧಿತ ಸಮು ದಾಯಗಳ ಮುಖಂಡರೊಂದಿಗೆ ಸಮಾಲೋಚನೆ ನಡೆಸಬೇಕು. ಏಕಪಕ್ಷೀಯವಾಗಿ ವರ್ಗೀಕರಣ ನಿರ್ಧಾರ ಕೈಗೊಳ್ಳಬಾರದು ಎಂದು ಹೇಳಿದರು.

ಬಾಂಬೆ ನಾರಾಯಣ ನಾಯಕ್ ಮಂಜುನಾಥ ನಾಯಕ ವಕೀಲರು ಬಾಲ ನಾಯಕ್ ವಕೀಲರು ನಾಗಯ್ಯನಾಯಕ್ಕು ಶ್ರೀರಾಮ ನಾಯಕ್, ಶ್ರೀನಿವಾಸ್ ನಾಯಕರು ನಾರಾಯಣ ನಾಯಕ್ ನಾಗಭೂಷಣ್ ನಾಯಕ ಮಂಜು ಕಬಾಬ್ ರಮೇಶ್ ನಾಯಕ್ ರಾಮಾಂಜನಾಯಕ್, ನರಸಿಂಹ ನಾಯಕ್, ಬಾಬು ನಾಯಕ್ ಉಪಸ್ಥಿತರಿದ್ದರು.

